ಸೋಮವಾರ, ಆಗಸ್ಟ್ 16, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ವಾತಂತ್ರ್ಯ ಸಂಭ್ರಮ
ಬೆಂಗಳೂರಿನ ವಿಧಾನಸೌಧದ ಮುಂಭಾಗ ಭಾನುವಾರ 75ನೇ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಪುಟ್ಟ ಬಾಲಕಿಯೊಬ್ಬಳು ತ್ರಿವರ್ಣ ಧ್ವಜ ಪ್ರದರ್ಶಿಸಿ ಸಂಭ್ರಮಿಸಿದಳು

ಸೋಮವಾರ, ಆಗಸ್ಟ್ 16, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 228 | ಪುಟ 18
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಎಸ್ಸೆಸ್ಸೆಲ್ಸಿ ನಂತರ ಪಿಯುಸಿ ಹೊರತಾಗಿಯೂ ಸಾಕಷ್ಟು ವೃತ್ತಿಪರ ಕೋರ್ಸ್‌ಗಳಿವೆ. ಇಂಥ ಕೋರ್ಸ್‌ಗಳನ್ನು ಸೇರಿಕೊಂಡರೆ ಆಸಕ್ತಿ ಕ್ಷೇತ್ರಗಳಲ್ಲಿಯೇ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

ಆಳ-ಅಗಲ ಅಫ್ಘಾನಿಸ್ತಾನ ಪತನ

‘ವಿಜ್ಞಾನ ವಿಭಾಗಕ್ಕೆ ಸೇರಲಿ ಭೂಗೋಳ’ 4
ಕೋವಿಡ್: 29.29 ಲಕ್ಷಕ್ಕೆ ಏರಿಕೆ 4
ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ವಿಷಾದ
‘ಸಂಸತ್ ಕಲಾಪ: ಗುಣಮಟ್ಟ ಕೊರತೆ’ 6

75ನೇ ಸ್ವಾತಂತ್ರ್ಯ ದಿನ: ಮುಂದಿನ 25 ವರ್ಷಗಳ ನೀಲ ನಕ್ಷೆ ಬಿಚ್ಚಿಟ್ಟ ಪ್ರಧಾನಿ

‘ಅಮೃತ’ದತ್ತ ಭಾರತದ ಚಿತ್ತ

ನವದೆಹಲಿ (ಪಿಟಿಐ): ‘ಎಲ್ಲರ ಜತೆಗೆ ಎಲ್ಲರ ಏಳ್ಗೆ’ ಎಂಬ ಘೋಷಣೆಗೆ ಪ್ರಧಾನಿ ನರೇಂದ್ರ ಮೋದಿ ಅವರು 75ನೇ ಸ್ವಾತಂತ್ರ್ಯೋತ್ಸವದ ದಿನದಂದು ‘ಎಲ್ಲರ ಪ್ರಯತ್ನ’ ಎಂಬುದನ್ನು ಹೊಸದಾಗಿ ಸೇರಿಸಿದ್ದಾರೆ. ಸ್ವಾತಂತ್ರ್ಯ ದಿನದಂದು ಕೆಂಪುಕೋಟೆಯಿಂದ ಮಾಡಿದ ಭಾಷಣದ ಉದ್ದಕ್ಕೂ ಹಲವು ಹೊಸ, ಆಕರ್ಷಕ ಘೋಷಣೆಗಳು ಇದ್ದವು.

ಯುವ ಜನರ ಬಗ್ಗೆ ಅವರ ಒಲವು ಭಾಷಣದ ಉದ್ದಕ್ಕೂ ವ್ಯಕ್ತವಾಯಿತು. ಇದು ‘ಏನನ್ನಾದರೂ ಮಾಡಬಲ್ಲೆವು, ಎಲ್ಲ ಗುರಿಗಳನ್ನು ಸಾಧಿಸಬಲ್ಲೆವು’ ಎಂಬ ತಲೆಮಾರಾಗಿದೆ ಎಂದು ಮೋದಿ ಕೊಂಡಾಡಿದರು.

90 ನಿಮಿಷಗಳ ತಮ್ಮ ಭಾಷಣದಲ್ಲಿ ಅವರು, ಸ್ವಾತಂತ್ರ್ಯದ ಶತಮಾನೋತ್ಸವದ ಸಂದರ್ಭದಲ್ಲಿ ದೇಶವು (ನಯಾ ಭಾರತ್) ಹೇಗಿರಬೇಕು ಎಂಬುದರ ನೀಲನಕ್ಷೆಯನ್ನು ದೇಶದ ಜನರ ಮುಂದೆ ಬಿಚ್ಚಿಟ್ಟರು.

ಮುಂದಿನ 25 ವರ್ಷಗಳನ್ನು ‘ಅಮೃತ ಕಾಲ’ ಎಂದು ಅವರು ಬಣ್ಣಿಸಿದ್ದಾರೆ. ಈ ಅವಧಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಅತ್ಯುತ್ತಮವಾದುದೇ ಆಗಬೇಕು, ಇದಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕು ಮತ್ತು ಈ ಗುರಿಗಳನ್ನು ಸಾಧಿಸಲು ದೇಶವು ಇನ್ನಷ್ಟು ಕಾಲ ಕಾಯಲಾಗದು ಎಂದು ಅವರು ಹೇಳಿದ್ದಾರೆ.

‘ಇದುವೇ ಆ ಕ್ಷಣ, ಇದು ಸರಿಯಾದ ಕ್ಷಣ ಮತ್ತು ಇದು ಭಾರತಕ್ಕೆ ಅತ್ಯಂತ ಮೌಲಿಕವಾದ ಕ್ಷಣ’ ಎಂದು ಕವಿತೆಯೊಂದನ್ನು ಉಲ್ಲೇಖಿಸುತ್ತಾ ತಮ್ಮ ಭಾಷಣದ ಕೊನೆಯಲ್ಲಿ ಅವರು ಹೇಳಿದರು.



ಕೆಂಪುಕೋಟೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಷಣ ಮಾಡಿದರು –ಪಿಟಿಐ ಚಿತ್ರ

ಮುಂದಿನ 25 ವರ್ಷಗಳ ನೀಲನಕ್ಷೆಯು ಕಾರ್ಯರೂಪಕ್ಕೆ ಬರಲು ದೇಶವು ಬದಲಾಗಬೇಕಿದೆ ಮತ್ತು ಅದಕ್ಕೆ ಅನುಗುಣವಾಗಿ ಜನರೂ ಬದಲಾಗಬೇಕಿದೆ. ‘ಎಲ್ಲರ ಪ್ರಯತ್ನ’ ಅನಿವಾರ್ಯವಾಗಿದೆ. ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮುಂದಿನ 25 ವರ್ಷಗಳ ಗುರಿಯನ್ನು ನಿಗದಿ ಮಾಡಿಕೊಳ್ಳಬೇಕಿದೆ ಎಂದು ಅವರು ಪ್ರತಿಪಾದಿಸಿದರು.

ಪರಿಶ್ರಮ ಮತ್ತು ಪರಾಕ್ರಮದ ಗರಿಷ್ಠ ಮಟ್ಟವನ್ನು ಮುಟ್ಟುವುದರಿಂದ ಇವೆಲ್ಲವೂ ಸಾಧ್ಯ ಎಂಬ ಭರವಸೆಯನ್ನು ಬಿತ್ತಲು ಮೋದಿ ಯತ್ನಿಸಿದ್ದಾರೆ.

5ನೇ ಪುಟ ನೋಡಿ

‘ಟೊಳ್ಳು ವಾಕ್ಚಾತುರ್ಯ’

ಪ್ರಧಾನಿ ನರೇಂದ್ರ ಮೋದಿಯವರ ಸ್ವಾತಂತ್ರ್ಯ ದಿನದ ಭಾಷಣವನ್ನು ‘ವಾಕ್ಚಾತುರ್ಯ ಮತ್ತು ಖಾಲಿ ಘೋಷಣೆ’ಗಳಿಂದ ಕೂಡಿದೆ ಎಂದಿರುವ ಪ್ರತಿಪಕ್ಷಗಳು, ಎಂಟು ವರ್ಷಗಳಿಂದ ಅದೇ ಭಾಷಣ ಮಾಡುತ್ತಿದ್ದಾರೆ ಎಂದು ಟೀಕಿಸಿವೆ. ಘೋಷಿಸಲಾಗಿರುವ ಅಂಶಗಳು ಜಾರಿಗೆ ತರುವಂತಹವುಗಳಲ್ಲ ಎಂದು ಅಭಿಪ್ರಾಯಪಟ್ಟಿವೆ. 6

₹100 ಲಕ್ಷ ಕೋಟಿಯ ‘ಗತಿಶಕ್ತಿ’ ಯೋಜನೆ

ಉದ್ಯೋಗ ಅವಕಾಶಗಳನ್ನು, ಕೈಗಾರಿಕೆಗಳ ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದ ಸಮಗ್ರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ‘ಗತಿಶಕ್ತಿ’ಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಪ್ರಕಟಿಸಿದರು. ಈ ಮಹತ್ವಾಕಾಂಕ್ಷಿ ಯೋಜನೆಯ ಅಡಿಯಲ್ಲಿ ₹ 100 ಲಕ್ಷ ಕೋಟಿ ವೆಚ್ಚ ಮಾಡುವ ಗುರಿ ಇರುವುದಾಗಿ ತಿಳಿಸಿದರು.

5ನೇ ಪುಟ ನೋಡಿ

ತಾಲಿಬಾನ್ ಬಿಗಿಹಿಡಿತ; ಘನಿ ಪಲಾಯನ

ಕಾಬೂಲ್ (ಪಿಟಿಐ/ಎಎಫ್‌ಪಿ/ಎಪಿ): ಅಫ್ಘಾನಿಸ್ತಾನ ಈಗ ತಾಲಿಬಾನ್ ಬಂಡುಕೋರರ ಬಿಗಿ ಹಿಡಿತದಲ್ಲಿದೆ. ಅವರು ರಾಜಧಾನಿ ಕಾಬೂಲ್ ಪ್ರವೇಶಿಸುತ್ತಿದ್ದಂತೆಯೇ, ಅಧ್ಯಕ್ಷ ಅಶ್ರಫ್ ಘನಿ ಅವರು ದೇಶದಿಂದ ಪಲಾಯನ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 6

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸಿ.ಎಂ ಬಸವರಾಜ ಬೊಮ್ಮಾಯಿ ಘೋಷಣೆ

ಅಮೃತ ಮಹೋತ್ಸವಕ್ಕೆ 14 ‘ಅಮೃತ’ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ನೆನಪಿಗಾಗಿ 14 ಹೊಸ ಯೋಜನೆಗಳನ್ನು ಜಾರಿಗೊಳಿಸುವುದಾಗಿ ಘೋಷಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೆಲವು ಕಾರ್ಯಕ್ರಮಗಳಿಗೆ ಒಟ್ಟು ₹ 644.5 ಕೋಟಿ ಅನುದಾನವನ್ನೂ ಪ್ರಕಟಿಸಿದರು.

ನಗರದ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಭಾನುವಾರ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ

ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು

ಮಾತನಾಡಿದ ಅವರು, ‘ದೇಶಕ್ಕೆ ಸ್ವಾತಂತ್ರ್ಯ ದೊರಕಿ 75 ವರ್ಷಗಳಾಗುತ್ತಿವೆ. ಸ್ವತಂತ್ರರಾಗಿ ಅಮೃತ ಮಹೋತ್ಸವ ಆಚರಿಸುತ್ತಿರುವ ಸಂಭ್ರಮ ಒಂದು ದಿನಕ್ಕಿದ್ದರೆ ಸಾಲದು. ಎರಡು ವರ್ಷಗಳ ಕಾಲ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಲಾಗುವುದು. ಅದೇ ನೆನಪಿನಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಹೊಸ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗುವುದು’ ಎಂದರು.

ರಾಜ್ಯದ ಆಯ್ದ 750 ಗ್ರಾಮ ಪಂಚಾಯಿತಿಗಳನ್ನು ‘ಅಮೃತ ಗ್ರಾಮ ಪಂಚಾಯಿತಿ’ ಎಂದು ಗುರುತಿಸಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು. ಪ್ರತಿ ಮನೆಗೆ ಕುಡಿಯುವ ನೀರು, ಘನ ತ್ಯಾಜ್ಯದ ಶೇ 100 ರಷ್ಟು ವಿಂಗಡಣೆ ಮತ್ತು ವಿಲೇವಾರಿ, ತ್ಯಾಜ್ಯ ನೀರಿನ ವೈಜ್ಞಾನಿಕ ವಿಸರ್ಜನೆ, ಸೌರ ವಿದ್ಯುತ್ ಘಟಕಗಳ ಅಳವಡಿಕೆ, ಡಿಜಿಟಲ್ ಗ್ರಂಥಾಲಯಗಳುಳ್ಳ ಶಾಲೆಗಳನ್ನು ಸ್ಥಾಪಿಸಲಾಗುವುದು ಎಂದು ಘೋಷಿಸಿದರು.

ಆಯ್ದ 750 ಗ್ರಾಮ ಪಂಚಾಯಿತಿಗಳಲ್ಲಿ ‘ಅಮೃತ ಗ್ರಾಮೀಣ ವಸತಿ ಯೋಜನೆ’ ಅನುಷ್ಠಾನಗೊಳಿಸಲಾಗುವುದು. ಅಲ್ಲಿ ವಸತಿ ರಹಿತ ಮತ್ತು ಆಶ್ರಯ ರಹಿತರನ್ನು ಗುರುತಿಸಿ ಎಲ್ಲರಿಗೂ ವಸತಿ ಕಲ್ಪಿಸಲಾಗುವುದು ಎಂದರು.

5ನೇ ಪುಟ ನೋಡಿ

ಚಿತ್ರಾವಳಿ

ನಗರದಲ್ಲಿ ಮುಖ್ಯಮಂತ್ರಿ ಕಚೇರಿ ಕೃಷ್ಣಾದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಮೊಮ್ಮಗ ಚಂದ್ರಕುಮಾರ್ ಬೋಸ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭಾನುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ಅವರ ಹೋರಾಟ, ತ್ಯಾಗವನ್ನು ಮುಖ್ಯಮಂತ್ರಿಯವರು ಮೆಲುಕು ಹಾಕಿದರು.

ಆದರ್ಶ ಸುಗಮ ಸಂಗೀತ ಅಕಾಡೆಮಿ ಏರ್ಪಡಿಸಿದ್ದ ಅಮೃತ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಕಲಾವಿದರು ಗೀತಗಾಯನ ಪ್ರಸ್ತುತ ಪಡಿಸಿದರು. ಸಾಮಾಜಿಕ ಕಾರ್ಯಕರ್ತರಾದ ಶಾಂತಾ ರಾಮಸ್ವಾಮಿ, ಅಕಾಡೆಮಿ ಅಧ್ಯಕ್ಷ, ಗಾಯಕ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಇದ್ದರು.

ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಹಾಗೂ ಲಯನ್ ಬೆಳಕು ಸಂಸ್ಥೆಯ ಆಶ್ರಯದಲ್ಲಿ ಟಾಟಾನಗರದಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಸಂಘದ ಜಂಟಿ ಕಾರ್ಯದರ್ಶಿ ವಿರೂಪಾಕ್ಷ ಹಾಗೂ ಪದಾಧಿಕಾರಿಗಳು ಇದ್ದರು.

ಡಿಜಿಟಲ್ ಗ್ರಂಥಾಲಯ: ಕೋಟಿ ದಾಟಿದ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯದಲ್ಲಿ ಈವರೆಗೆ ನೋಂದಣಿಯಾದವರ ಸಂಖ್ಯೆ 1 ಕೋಟಿ ಗಡಿ ದಾಟಿದೆ.

ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರ ಅನ್ವಯ ರಾಜ್ಯದಲ್ಲಿ ಸಮಗ್ರವಾಗಿ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಲಾಗಿದೆ. 2020ರ ಫೆಬ್ರುವರಿಯಲ್ಲಿ ಡಿಜಿಟಲ್ ಗ್ರಂಥಾಲಯ ಸೌಲಭ್ಯವನ್ನು ಇಲಾಖೆ ಪ್ರಾರಂಭಿಸಿತ್ತು. ಕೋವಿಡ್ ಕಾಣಿಸಿಕೊಂಡ ಬಳಿಕ ಗ್ರಂಥಗಳ ಡಿಜಿಟಲೀಕರಣಕ್ಕೆ ಆದ್ಯತೆ ನೀಡಲಾಗಿತ್ತು. ಇದರಿಂದಾಗಿ ಹೆಸರು ನೋಂದಣಿ ಹಾಗೂ ಓದುಗರ ಸಂಖ್ಯೆ ಹೆಚ್ಚಳವಾಗತೊಡಗಿದೆ.

ರಾಜ್ಯದಾದ್ಯಂತ 26 ನಗರ ಕೇಂದ್ರ ಗ್ರಂಥಾಲಯಗಳು, 30 ಜಿಲ್ಲಾ ಕೇಂದ್ರ ಗ್ರಂಥಾಲಯಗಳು ಹಾಗೂ 216 ತಾಲ್ಲೂಕು ಗ್ರಂಥಾಲಯಗಳು ಸೇರಿದಂತೆ ಒಟ್ಟು 272 ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪ್ರಥಮ ಹಂತದ ಡಿಜಿಟಲ್ ಗ್ರಂಥಾಲಯ ಸೌಲಭ್ಯವನ್ನು ಒದಗಿಸಲಾಗಿದೆ.



18.75 ಲಕ್ಷ ಇ-ವಿಷಯಗಳನ್ನು ಡಿಜಿಟಲ್ ಗ್ರಂಥಾಲಯಕ್ಕೆ ವಿಷಯವಾರು ಅಳವಡಿಕೆ ಮಾಡಲಾಗಿದೆ. ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ, ತಮಿಳು ಮತ್ತು ತೆಲುಗು ಭಾಷೆಯ ವಿಷಯಗಳನ್ನು ಅಳವಡಿಸಲಾಗಿದೆ. ರಾಜ್ಯ ಮತ್ತು ಸಿಬಿಎಸ್‌ಸಿ ಪಠ್ಯವನ್ನೂ ಡಿಜಿಟಲ್ ರೂಪದಲ್ಲಿ ಒದಗಿಸಲಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಕಾರಿಯಾಗುವ ವಿಷಯಗಳೂ ಡಿಜಿಟಲ್ ಗ್ರಂಥಾಲಯದ ಪೋರ್ಟಲ್‌ನಲ್ಲಿ ಸಿಗುತ್ತಿವೆ. ರಾಜ್ಯದ ವಿವಿಧ ಜಿಲ್ಲೆಗಳ ಸರ್ಕಾರಿ ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ 10 ಲಕ್ಷ ವಿದ್ಯಾರ್ಥಿಗಳಿಗೆ ವೆಬ್‌ಸೈಟ್ ಮತ್ತು ಮೊಬೈಲ್ ಆ್ಯಪ್ ನೆರವಿನಿಂದ ಕಲಿಕಾ ವಿಷಯಗಳನ್ನು ಒದಗಿಸಲಾಗುತ್ತಿದೆ ಎಂದು ಇಲಾಖೆ ತಿಳಿಸಿದೆ.

5.57 ಲಕ್ಷ ವಿಡಿಯೊ: ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯದಡಿ ಕಲಬುರ್ಗಿಯಲ್ಲಿ 16.68 ಲಕ್ಷ ಮಂದಿ ನೋಂದಣಿಯಾಗಿದ್ದು, ಅಧಿಕ ಮಂದಿ ನೋಂದಣಿಗೊಂಡ ಜಿಲ್ಲೆಗಳಲ್ಲಿ ಮೊದಲ ಸ್ಥಾನದಲ್ಲಿದೆ. ದಕ್ಷಿಣ ಕನ್ನಡದಲ್ಲಿ 16.61 ಲಕ್ಷ, ಬೆಂಗಳೂರು ನಗರದಲ್ಲಿ 16.15 ಲಕ್ಷ ಹಾಗೂ ಹಾಸನದಲ್ಲಿ 10.38 ಲಕ್ಷ ಮಂದಿ ನೋಂದಣಿಯಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10 ಲಕ್ಷಕ್ಕಿಂತ ಕಡಿಮೆಯಿದೆ.

ಒಟ್ಟು 4.13 ಲಕ್ಷ ಇ-ಪುಸ್ತಕ ಹಾಗೂ ನಿಯತಕಾಲಿಕೆಗಳನ್ನು ಓದುಗರಿಗೆ ಒದಗಿಸಲಾಗಿದೆ. ಕಥೆ, ನಾಟಕಗಳು, ರೂಪಕಗಳು ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳು, ದಿನ ಪತ್ರಿಕೆಗಳು ಹಾಗೂ ವಿಡಿಯೊ ಲಿಂಕ್‌ಗಳನ್ನು ಡಿಜಿಟಲ್ ಗ್ರಂಥಾಲಯ ಜಾಲತಾಣದಲ್ಲಿ ಅಳವಡಿಸಲಾಗಿದೆ. 5.57 ಲಕ್ಷ ವಿಡಿಯೊಗಳಿವೆ ಎಂದು ಇಲಾಖೆ ಪ್ರಕಟಣೆಯಲ್ಲಿ ಹೇಳಿದೆ.

ಇಲಾಖೆ ಅಭಿವೃದ್ಧಿಪಡಿಸಿರುವ 'ಇ-ಸಾರ್ವಜನಿಕ ಗ್ರಂಥಾಲಯ' ಮೊಬೈಲ್ ಆ್ಯಪ್ ಹಾಗೂ ಜಾಲತಾಣ www.karnatakadigitalpubliclibrary.org ಮೂಲಕ ನೋಂದಣಿ ಮಾಡಿಕೊಂಡು ಪುಸ್ತಕಗಳನ್ನು ಓದಬಹುದಾಗಿದೆ.

ಜಯರಾಮ್, ಸುಂದರ್ ರಾಜ್‌ಗೆ ಪ್ರಶಸ್ತಿ

ಜಯರಾಮ್



ಸುಂದರ್ ರಾಜ್

ಬೆಂಗಳೂರು: ಸುಂದರ ಪ್ರಕಾಶನ ನೀಡುವ 'ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ'ಗೆ ಹಿರಿಯ ನಟರಾದ ಬಿ.ಆರ್. ಜಯರಾಮ್ ಹಾಗೂ ಎಂ.ಕೆ. ಸುಂದರ್ ರಾಜ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ ಸಮಿತಿಯು ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೋಮವಾರ (ಆ.16) ಸಂಜೆ 6ಕ್ಕೆ ನಗರದ ಎನ್.ಆರ್.ಕಾಲೊನಿಯಲ್ಲಿರುವ ಸಿ. ಅಶ್ವತ್ಥ್ ಕಲಾಭವನದಲ್ಲಿ ಹಮ್ಮಿಕೊಂಡಿದೆ. ಕವಿ ಎಚ್.ಎಸ್. ವೆಂಕಟೇಶ್ ಮೂರ್ತಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. 2019ರಲ್ಲಿ ಮೊದಲ ಪ್ರಶಸ್ತಿಯನ್ನು ಸಾಹಿತಿ ಸುಬ್ರಾಯ ಚೊಕ್ಕಾಡಿ ಅವರಿಗೆ ನೀಡಲಾಗಿತ್ತು ಎಂದು ಪ್ರಕಟಣೆ ತಿಳಿಸಿದೆ.

'ಭ್ರಷ್ಟ ರಾಜಕಾರಣಿಗಳು ತೊಲಗಿದರಷ್ಟೇ ಸ್ವಾತಂತ್ರ್ಯ'

ಪ್ರಜಾವಾಣಿ ವಾರ್ತೆ

ಪೃಥ್ವಿ ರೆಡ್ಡಿ

ಬೆಂಗಳೂರು: 'ಭ್ರಷ್ಟ ರಾಜಕಾರಣಿಗಳು ತೊಲಗಬೇಕು. ಭ್ರಷ್ಟ ವ್ಯವಸ್ಥೆ ದೂರವಾಗಬೇಕು. ಆಗ ನಿಜವಾದ ಸ್ವಾತಂತ್ರ್ಯ ದೊರೆತಂತಾಗುತ್ತದೆ' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ತಿಳಿಸಿದರು.

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ, ಬೆಳ್ಳಂದೂರು ವಾರ್ಡ್ ಹಾಗೂ ತಾವರೆಕೆರೆ ವ್ಯಾಪ್ತಿಯಲ್ಲಿ ನೂತನವಾಗಿ ಆರಂಭಿಸಲಾಗಿರುವ ಪಕ್ಷದ ಕಚೇರಿಗಳನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ದೇಶದ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು. ಪ್ರತಿಯೊಬ್ಬ ನಾಗರಿಕನಿಗೂ ಉತ್ತಮ ಆರೋಗ್ಯ ಸೇವೆ ಲಭ್ಯವಾಗಬೇಕು. ಎಲ್ಲರೂ ಗೌರವಯುತ ಬದುಕು ಸಾಗಿಸುವಂತಾದಾಗ ಮಾತ್ರ ಸ್ವಾತಂತ್ರ್ಯ ಸಿಕ್ಕಿದ್ದು ಸಾರ್ಥಕವಾಗುತ್ತದೆ' ಎಂದರು.

ಪಕ್ಷದ ಮುಖಂಡ ಎಚ್.ಡಿ.ಬಸವರಾಜು, 'ದೇಶದಲ್ಲಿ 3 ರಿಂದ 22 ವರ್ಷ ವಯಸ್ಸಿನವರು 50 ಕೋಟಿ ಜನರಿದ್ದಾರೆ. ಅವರಲ್ಲಿ ಶೇ 30 ಮಕ್ಕಳು ಶಿಕ್ಷಣದಿಂದ ವಿಮುಖರಾಗಿದ್ದಾರೆ. ಕೇಂದ್ರ ಶಿಕ್ಷಣ ಸಚಿವರೇ ಇದನ್ನು ಒಪ್ಪಿಕೊಂಡಿದ್ದಾರೆ. ಮಕ್ಕಳನ್ನು ಶಿಕ್ಷಣದತ್ತ ಆಕರ್ಷಿಸಲು ಸರ್ಕಾರ ಯೋಜನೆ ರೂಪಿಸಬೇಕಾದ ಅಗತ್ಯವಿದೆ' ಎಂದರು.

ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ, 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಡಳಿತ ವೈಖರಿ, ಪಕ್ಷದ ಜನಪರ ಸಿದ್ಧಾಂತ ಹಾಗೂ ಕಾರ್ಯಕರ್ತರ ಶ್ರಮದಿಂದಾಗಿ ರಾಜ್ಯದಲ್ಲಿ ಪಕ್ಷ ಬೆಳೆಯುತ್ತಿದೆ. ನೂತನ ಕಚೇರಿಗಳು ಪಕ್ಷ ಹಾಗೂ ಕಾರ್ಯಕರ್ತರ ನಡುವಣ ಸೇತುವೆಯಂತೆ ಕಾರ್ಯನಿರ್ವಹಿಸಬೇಕು' ಎಂದು ತಿಳಿಸಿದರು.

ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ರಾಜ್ಯ ಸಹ ಸಂಚಾಲಕಿ ಶಾಂತಲಾ ದಾಮ್ಲೆ, ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಡಾ. ಕೇಶವ್ ಕುಮಾರ್, ಯಶವಂತಪುರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಡಾ. ಸತೀಶ್ ಕುಮಾರ್, ಉಪಾಧ್ಯಕ್ಷ ಶಶಿಧರ್ ಸಿ. ಆರಾಧ್ಯ, ಮಹದೇವಪುರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಅಶೋಕ್ ಮೃತ್ಯುಂಜಯ ಇದ್ದರು.

'ಇಸ್ಲಾಮಿಕ್ ಎಮಿರೇಟ್ಸ್ ಆಫ್ ಅಫ್ಗನಿಸ್ತಾನ' ಘೋಷಣೆ ಶೀಘ್ರ'

ಕಾಬೂಲ್ (ಎಪಿ): ಅಫ್ಗಾನಿಸ್ತಾನಕ್ಕೆ 'ಇಸ್ಲಾಮಿಕ್ ಎಮಿರೇಟ್ಸ್ ಆಫ್ ಅಫ್ಗಾನಿಸ್ತಾನ' ಎಂದು ಮರು ನಾಮಕರಣ ಮಾಡಿ ಅಧ್ಯಕ್ಷರ ಅರಮನೆಯಿಂದಲೇ ಶೀಘ್ರ ಘೋಷಿಸುವುದಾಗಿ ತಾಲಿಬಾನ್ ಬಂಡುಕೋರರು ಭಾನುವಾರ ಹೇಳಿದ್ದಾರೆ.

ಅಧ್ಯಕ್ಷ ಅಶ್ರಫ್ ಘನಿ ಅವರು ದೇಶದಿಂದ ಪಲಾಯನ ಮಾಡಿದ ನಂತರ, ಅಧ್ಯಕ್ಷರ ಅರಮನೆಯನ್ನು ವಶಪಡಿಸಿಕೊಂಡ ಬೆನ್ನಲ್ಲೇ ಬಂಡುಕೋರರಿಂದ ಈ ಹೇಳಿಕೆ ಹೊರಬಿದ್ದಿದೆ.

ಅಮೆರಿಕದ ರಾಯಭಾರ ಕಚೇರಿಯ ಸಿಬ್ಬಂದಿಯನ್ನು ಭಾನುವಾರ ಹೆಲಿಕಾಪ್ಟರ್‌ಗಳ ಮೂಲಕ ತೆರವುಗೊಳಿಸಲಾಯಿತು. ಇತರ ದೇಶಗಳು ಕೂಡ ತಮ್ಮ ಪ್ರಜೆಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿವೆ.

ಸುದ್ದಿ 2 ನಿಮಿಷ

ನೆಹರೂ ಟೀಕಿಸುವ ಯೋಗ್ಯತೆ ಇದೆಯೆ: ಮಹದೇವಪ್ಪ ಪ್ರಶ್ನೆ

ಬೆಂಗಳೂರು: 'ಆಗರ್ಭ ಶ್ರೀಮಂತರಾಗಿದ್ದರೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ ಜೈಲುವಾಸ ಅನುಭವಿಸಿದ್ದ ಜವಾಹರ ಲಾಲ್ ನೆಹರೂ, ನಂತರದ ದಿನಗಳಲ್ಲಿ ನವ ಭಾರತದ ನಿರ್ಮಾಣಕ್ಕೆ ಮುನ್ನುಡಿ ಬರೆದಿದ್ದರು. ಅವರನ್ನು ಟೀಕಿಸುವ ಯೋಗ್ಯತೆ ಕೋಮುವಾದಿಗಳಾಗಿರುವ ಬಿಜೆಪಿ ನಾಯಕರಿಗೆ ಇದೆಯೆ' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್. ಮಹದೇವಪ್ಪ ಪ್ರಶ್ನಿಸಿದ್ದಾರೆ.

'ನೆಹರೂ ಅವರ ದೂರದೃಷ್ಟಿಯ ಫಲವಾಗಿಯೇ ದೇಶ ಅಭಿವೃದ್ಧಿ ಪಥದಲ್ಲಿ ಸಾಗಿತು. ನೆಹರೂ ಅವರು ಸ್ವಾತಂತ್ರ್ಯ ಹೋರಾಟ ನಡೆಸುತ್ತಿದ್ದಾಗ ಇಂದಿನ ಕೂಗುಮಾರಿಗಳಾಗಿರುವ ಮನುವಾದಿಗಳ ಗುಂಪಿನವರು ಬ್ರಿಟಿಷರ ಸೇವಕರಾಗಿದ್ದರು. ನೆಹರೂ ಅವರ ಹೋರಾಟದ ಜೀವನವನ್ನು ಮರೆತು ಮಾತನಾಡುವವರಿಗೆ ಎಂದಿಗೂ ಕ್ಷಮೆ ಇಲ್ಲ' ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೆಹರೂ ಅವರ ಕೊಡುಗೆಗಳನ್ನು ಸ್ಮರಿಸಿದ್ದಾರೆ. ಆದರೆ, ಅವರದ್ದೇ ಪಕ್ಷದ ಕೋಮುವ್ಯಾಧಿ ಹುಳುವೊಂದು ಮೂರನೇ ದರ್ಜೆಯ ಪ್ರಚಾರಕ್ಕಾಗಿ ನೆಹರೂ ಅವರನ್ನು ಟೀಕಿಸುವ ತಂತ್ರದ ಮೊರೆ ಹೋಗಿರುವುದು ಅವರ ಮೂರ್ಖತನದ ಪರಮಾವಧಿ. ಮತ್ತೊಮ್ಮೆ ಹುಟ್ಟಿ ಬಂದು ಅಸಮಾನತೆಯ ಸಂಕಷ್ಟ ಮತ್ತು ಜಾತಿ ಕಾರಣದ ನೋವುಗಳನ್ನು ಅನುಭವಿಸಿದರೆ ಮಾತ್ರ ಇವರಿಗೆ ನೆಹರೂ ಕುರಿತು ಮಾತನಾಡುವ ಅರ್ಹತೆ ದೊರೆಯುತ್ತದೆ' ಎಂದಿದ್ದಾರೆ.

'ಇಂಡಿಯನ್ ಆಯಿಲ್'ನಿಂದ ಮೇಧಾ ವಿದ್ಯಾರ್ಥಿವೇತನ

ಬೆಂಗಳೂರು: ಇಂಡಿಯನ್ ಆಯಿಲ್ ಸಂಸ್ಥೆಯು 'ಮೇಧಾ ವಿದ್ಯಾರ್ಥಿವೇತನ ಯೋಜನೆ'ಯಡಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದಿರುವ ರಾಜ್ಯದ 75 ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ಹಸ್ತಾಂತರಿಸಿದೆ.

75ನೇ ಸ್ವಾತಂತ್ರ್ಯ ದಿನದ ಅಂಗವಾಗಿ 30 ರಾಜ್ಯಗಳಿಂದ ತಲಾ 75 ಪ್ರತಿಭಾವಂತ ವಿದ್ಯಾರ್ಥಿನಿಯರನ್ನು ವಿದ್ಯಾರ್ಥಿವೇತನಕ್ಕೆ ಆಯ್ಕೆ ಮಾಡಲಾಗಿದೆ. ಈ ಯೋಜನೆಯಡಿ ಒಟ್ಟು ₹2.25 ಕೋಟಿ ಮೊತ್ತದಲ್ಲಿ 2,259 ವಿದ್ಯಾರ್ಥಿನಿಯರು ಪ್ರಯೋಜನ ಪಡೆಯಲಿದ್ದಾರೆ.

'ಪ್ರತಿ ವಿದ್ಯಾರ್ಥಿನಿ ₹10 ಸಾವಿರ ವಿದ್ಯಾರ್ಥಿವೇತನ ಮತ್ತು ಪ್ರಮಾಣಪತ್ರ ಪಡೆಯಲಿದ್ದಾರೆ. ಇದರಿಂದ ಅವರ ಉನ್ನತ ವ್ಯಾಸಂಗಕ್ಕೆ ಅನುಕೂಲವಾಗಲಿದೆ. ಪ್ರತಿ ರಾಜ್ಯದ ಶಿಕ್ಷಣ ಮಂಡಳಿ ಶಿಫಾರಸಿನ ಮೇರೆಗೆ ಅತಿ ಹೆಚ್ಚು ಅಂಕ ಪಡೆದವರನ್ನು ಆಯ್ಕೆ ಮಾಡಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಇಂಡಿಯನ್ ಆಯಿಲ್ ಸಂಸ್ಥೆಯ ಮುಖ್ಯಸ್ಥ ಶ್ರೀಕಾಂತ್ ಮಾಧವ್ ವೈದ್ಯ,'ಯುವಜನಾಂಗದ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಸಂಸ್ಥೆ ಈ ಯೋಜನೆ ರೂಪಿಸಿದೆ. ವಿದ್ಯಾರ್ಥಿವೇತನದ ಮೂಲಕ ಹೆಣ್ಣುಮಕ್ಕಳು ತಮ್ಮ ಶೈಕ್ಷಣಿಕ ಗುರಿ ಮತ್ತು ಉಜ್ವಲ ಭವಿಷ್ಯ ರೂಪಿಸಿಕೊಳ್ಳಲಿದ್ದಾರೆ. ವಿದ್ಯಾವಂತ ಹೆಣ್ಣುಮಕ್ಕಳು ಸಧೃಡ ಸಮಾಜ ನಿರ್ಮಿಸುತ್ತಾರೆ ಎನ್ನುವುದು ನಮ್ಮ ನಂಬಿಕೆ' ಎಂದರು.

ಅಲ್ಪಸಂಖ್ಯಾತ ಸಮುದಾಯದ ಮುಖಂಡರನ್ನು ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಬಿಜೆಪಿಗೆ ಬರಮಾಡಿಕೊಂಡರು

ಬಿಜೆಪಿ ಸೇರಿದ ಮುಸ್ಲಿಂ ಮುಖಂಡರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಅಲ್ಪಸಂಖ್ಯಾತ ಸಮುದಾಯದ ಹಲವು ಮುಖಂಡರು ಭಾನುವಾರ ಬಿಜೆಪಿ ಸೇರಿದರು. ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

'ಬಿಜೆಪಿಯು ಅಲ್ಪಸಂಖ್ಯಾತರ ವಿರೋಧಿ ಎಂದು ವಿರೋಧ ಪಕ್ಷಗಳು ಬೊಬ್ಬೆ ಹೊಡೆಯುತ್ತಿವೆ. ಈಗ ಅಲ್ಪಸಂಖ್ಯಾತ ಸಮುದಾಯದ, ಅದರಲ್ಲಿಯೂ ಮುಖ್ಯವಾಗಿ ನೂರಾರು ಮುಸ್ಲಿಮರು ಪಕ್ಷ ಸೇರಿದ್ದಾರೆ. ಇದು ಪ್ರತಿಪಕ್ಷಗಳಿಗೆ ಸ್ಪಷ್ಟ ಸಂದೇಶ ಸಾರಲಿದೆ' ಎಂದು ಸಚಿವರು ಹೇಳಿದರು.

'ಬಿಜೆಪಿ ರಾಷ್ಟ್ರೀಯ ಪಕ್ಷ. ಸಹಬಾಳ್ವೆ, ಸೌಹಾರ್ದವನ್ನು ನಂಬಿರುವ ಪಕ್ಷ. ವಿನಾಕಾರಣ ಪಕ್ಷದ ವಿರುದ್ಧ ಕಾಂಗ್ರೆಸ್ ಮತ್ತು ಜೆಡಿಎಸ್ ಹುಯಿಲೆಬ್ಬಿಸುತ್ತಿವೆ' ಎಂದರು.

'ರಾಜ್ಯದಲ್ಲಿ ಮತ್ತೊಮ್ಮೆ ಪಕ್ಷ ಅಧಿಕಾರಕ್ಕೆ ಬರಲು ಇವರೆಲ್ಲರೂ ಶ್ರಮಿಸಲಿದ್ದಾರೆ' ಎಂದೂ ಅಶ್ವತ್ಥನಾರಾಯಣ ಹೇಳಿದರು.

ನಗರದ ರಾಜಮಹಲ್ ಎಕ್ಸ್‌ಟೆನ್ಷನ್‌ನ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಆರ್. ಗೀತಾಂಜಲಿ, ಆರ್. ವೇಣುಕುಮಾರ್ ಹಾಗೂ ಶಕೀಲ್ ಅಹಮದ್ ಮತ್ತವರ ಬೆಂಬಲಿಗರು ಬಿಜೆಪಿಗೆ ಸೇರ್ಪಡೆಯಾದರು. ಬಿಜೆಪಿ ಮುಖಂಡ ಕೇಶವಮೂರ್ತಿ ಮತ್ತಿತರರು ಇದ್ದರು.

ಬನ್ನೇರುಘಟ್ಟದಲ್ಲಿ 'ಆಜಾದಿ ಕಾ ಅಮೃತ ಮಹೋತ್ಸವ್'

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 'ಆಜಾದಿ ಕಾ ಅಮೃತ ಮಹೋತ್ಸವ್' ಕಾರ್ಯಕ್ರಮದ ಅಂಗವಾಗಿ ವನ್ಯಜೀವಿಗಳ ಸಂರಕ್ಷಣೆಗಾಗಿ ಶ್ರಮಿಸಿದ 13 ಮಂದಿ ಸಿಬ್ಬಂದಿಯನ್ನು ಪುರಸ್ಕರಿಸುವ ಮೂಲಕ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ತಿಳಿಸಿದರು.

ಅವರು ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಉದ್ಯಾನದಲ್ಲಿ ನೈರ್ಮಲ್ಯದಲ್ಲಿ ತೊಡಗಿಸಿಕೊಂಡಿರುವ ಸಿಬ್ಬಂದಿ, ಕೋವಿಡ್‌ನಿಂದ ಚೇತರಿಸಿಕೊಂಡವರು. ವನ್ಯಜೀವಿಗಳ ಕಾರ್ಯಾಚರಣೆ ಮತ್ತು ಪ್ರಾಣಿಗಳ ನಿರ್ವಹಣೆಯಲ್ಲಿ ತೊಡಗಿಕೊಂಡಿರುವ ಸಿಬ್ಬಂದಿಯನ್ನು ಪುರಸ್ಕರಿಸಲಾಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆತ್ಮ ನಿರ್ಭರ ಭಾರತ ಎಂಬ ಘೋಷಣೆಯಡಿಯಲ್ಲಿ ಸ್ಥಳೀಯ ಪ್ರತಿಭೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಉತ್ತಮ ಕಾರ್ಯ ಮತ್ತು ಕೌಶಲ ಮೆರೆದ ಸಿಬ್ಬಂದಿ ಗೌರವಿಸಲಾಗಿದೆ ಎಂದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869
ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ.ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106. ದೂರವಾಣಿ: +91-80-41436000
ಫ್ಯಾಕ್ಸ್: +91-80-41436005 ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

30ನೇ ಜೂನ್ 2021ರ ಮೊದಲನೆಯ ತ್ರೈಮಾಸಿಕ ಅವಧಿಗೆ ಕೊನೆಗೊಂಡ ಅಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಜೂನ್ 2021 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಜೂನ್ 2020 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2021 (ಪರಿಶೋಧಿತ)
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	1,761.29	1,923.14	8,232.21
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ವಿಶೇಷ ವಸ್ತುಗಳು)	(71.49)	21.24	194.29
3	ನಿವ್ವಳ ಲಾಭ/ (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು/ ವಿಶೇಷ ವಸ್ತುಗಳ ನಂತರ)	(518.00)	21.24	194.29
4	ನಿವ್ವಳ ಲಾಭ/ (ನಷ್ಟ) ಅವಧಿಗೆ ತೆರಿಗೆಯ ನಂತರ, (ವಿನಾಯಿತಿ ಪಡೆದ ಮತ್ತು/ ವಿಶೇಷ ವಸ್ತುಗಳ ನಂತರ)	(485.04)	(9.23)	120.39
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(485.58)	(13.09)	113.77
6	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)	128.85	128.85	128.85
7	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ			2,101.99
8	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ			
	ಎ) ಮೂಲಭೂತ:	(26.59)	1.51	13.31
	ಬಿ) ಡೈಲ್ಯೂಟೆಡ್:	(26.59)	1.51	13.30

ಟಿಪ್ಪಣಿಗಳು :

1. 30ನೇ ಜೂನ್ 2021ರ ಮೊದಲನೆಯ ತ್ರೈಮಾಸಿಕ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಅಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ:

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಜೂನ್ 2021 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಜೂನ್ 2020 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2021 (ಪರಿಶೋಧಿತ)
ನಿವ್ವಳ ಮಾರಾಟ / ನಿರ್ವಹಣೆಯಿಂದ ಬಂದ ವರಮಾನ	614.00	1,061.00	4,283.87
ಲಾಭ / (ನಷ್ಟ) ತೆರಿಗೆಯ ಮುಂಚೆ	(109.56)	73.38	331.25
ಲಾಭ / (ನಷ್ಟ) ತೆರಿಗೆಯ ನಂತರ	(81.99)	54.73	240.81

2. ಈ ಮೇಲಿನ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 13ನೇ ಆಗಸ್ಟ್, 2021 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 14ನೇ ಆಗಸ್ಟ್, 2021 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಈ ಮೇಲಿನವು ತ್ರೈಮಾಸಿಕಕ್ಕೆ ಕೊನೆಗೊಂಡ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಸಮಗ್ರ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿದ್ದು, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾಗಿದೆ. ತ್ರೈಮಾಸಿಕಕ್ಕೆ ಕೊನೆಗೊಂಡ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ನ ಪರವಾಗಿ
ಸಹಿ/–
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 14, 2021

PUBLIC NOTICE

Our client, Smt. Kamini R. Ramnani, W/o. N. Ramesh is the absolute owner of immovable property bearing Survey No. 32 measuring 4 Acres 28 Guntas and Survey No. 33 measuring 2 acres 11 Guntas described in the Schedule hereunder and hereinafter referred to as the 'Schedule Property'. We hereby bring to the notice of the general public that our client has acquired right, title and interest with respect to the Schedule Property under 8 (eight) separate sale deeds registered as under:

Sl. No	Document Number	Date of Registration
1.	BNG (U) - YLNK/5177/2002-2003	06.09.2002
2.	BNG (U) - YLNK/5178/2002-2003	07.09.2002
3.	BNG (U) - YLNK/5180/2002-2003	06.09.2002
4.	BNG (U) - YLNK/5181/2002-2003	07.09.2002
5.	BNG (U) - YLNK/5183/2002-2003	07.09.2002
6.	BNG (U) - YLNK/5187/2002-2003	07.09.2002
7.	BNG (U) - YLNK/5191/2002-2003	07.09.2002
8.	BNG (U) - YLNK/5195/2002-2003	07.09.2002

The above documents are registered in the office of the Sub-Registrar, Yelahanka (Bangalore North Taluk).

When such being the status of the Schedule Property, one Sri. Mohsin Shariff filed a suit bearing O.S. No. 606/2008 for relief of specific performance with respect to the Schedule Property contending that he had entered into a sale agreement with Lalithamma, Gayathridevi, Rajeshwari and Santhkumar vide agreement dt: 8/10/1995 and the said executants failed to perform their part of the contract due to which the suit was filed. Sri.Mohin Shariff further obtained a decree by the way of filing a compromise petition. Thereafter, an execution proceeding bearing number EX.P.No. 13/14 was filed and a sale deed in favour of Sri. Mohsin Sheriff was registered by the court through a court commissioner vide registered sale deed dt: 29/01/2015 in respect of the Schedule Property.

On the basis of the above said Judgment and Decree and the subsequent sale deed, Sri. Mohsin Shariff is claiming ownership over the Schedule Property. Our client in O.S. 163/2015 pending before the Devanahalli Court has challenged the same. Further, we also bring it to the notice of the general public that there are multiple suits pending in relation to the Schedule Property bearing numbers OS 163/2015, O.S.646/2018 and OS 502/2007 on the files of the Senior Civil Judge, Devanahalli for various reliefs.

We hereby CAUTION / WARN the general public not to deal with the Schedule Property or any part or portion thereof in relation to the Schedule Property. Despite the above, if anyone enters into any transaction in relation to the Schedule Property, the same shall be subject to *lis pendens* and our Client will defend/prosecute the same vigorously.

SCHEDULE

Item No. 1 : All that piece and parcel of immovable property bearing Survey No. 32 measuring 4 acres 28 guntas situated at Sonnappanahalli Village, Jala Hobli, Bangalore North Taluk (Now Yelahanka Taluk) Bangalore and bounded on its.

East by	Property bearing Sy. No. 57
West by	Property bearing Sy. No. 33
North by	Remaining extent in Sy. No. 32
South by	Property bearing Sy. No. 166/1

Item No. 2 : All that piece and parcel of immovable property bearing Survey No. 33 measuring 2 acres 11 guntas situated at Sonnappanahalli Village, Jala Hobli, Bangalore North Taluk (Now Yelahanka Taluk) Bangalore and bounded on its.

East by	Property bearing Sy. No. 32
West by	Property bearing Sy. No. 33
North by	Remaining extent in Sy. No. 32
South by	Property bearing Sy. No. 166/1

JSM LAW PARTNERS
JOSEPH ANTHONY, Advocate
No.407, Level Four, 9/1, Commercial House
Cunningham Road, Bangalore-560052.

ನಗರದಲ್ಲಿ ಇಂದು

'ಪಾಲಿಕೆಯ ವೈದ್ಯರು ನಿಮ್ಮ ಮನೆ ಬಾಗಿಲಿಗೆ' ಅಭಿಯಾನಕ್ಕೆ ಚಾಲನೆ: ಕಂದಾಯ ಸಚಿವ ಆರ್.ಅಶೋಕ, ಸ್ಥಳ- ಪಾಲಿಕೆ ಕೇಂದ್ರ ಕಚೇರಿ ಆವರಣ, ಬೆಳಿಗ್ಗೆ 11

ನಾವೀನ್ಯತೆ ಮತ್ತು ಅಭಿವೃದ್ಧಿ ಕೇಂದ್ರದ ಶಂಕುಸ್ಥಾಪನೆ: ಅತಿಥಿಗಳು–ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಜ್ಞಾನಿ ಸಿ.ಎನ್.ಆರ್.ರಾವ್, ಜಿ.ಯು.ಕುಲಕರ್ಣಿ, ಸ್ಥಳ–ಜವಾಹರ್‌ಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ (ಜೆಎನ್‌ಸಿಎಎಸ್‌ಆರ್), ಜಕ್ಕೂರು, ಬೆ. 11.50



ವೆಂಕಯ್ಯ ನಾಯ್ಡು

ಆನ್‌ಲೈನ್ ಶೈಕ್ಷಣಿಕ ಆ್ಯಪ್ ಬಿಡುಗಡೆ ಕಾರ್ಯಕ್ರಮ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಭಾಗವಹಿಸುವವರು–ನಟ ರಾಜ್‌ಕುಮಾರ್ ಕುಟುಂಬಸ್ಥರು, ಆಯೋಜನೆ–ಡಾ.ರಾಜ್‌ಕುಮಾರ್ ಅಕಾಡೆಮಿ, ಸ್ಥಳ–ಶೆರಟನ್ ಗ್ರ್ಯಾಂಡ್ ಹೋಟೆಲ್, ರಾಜಕುಮಾರ್ ರಸ್ತೆ, ರಾಜಾಜಿನಗರ, ಸಂಜೆ 5.30

ಗೌರಿಸುಂದರ್ ವಾರ್ಷಿಕ ಪ್ರಶಸ್ತಿ ಪ್ರದಾನ: ಕವಿ ಎಚ್.ಎಸ್.ವೆಂಕಟೇಶಮೂರ್ತಿ, ಅಧ್ಯಕ್ಷತೆ–ಟಿ.ಎಸ್.ನಾಗಾಭರಣ, ಪುರಸ್ಕೃತರು–ಬಿ.ಆರ್.ಜಯರಾಂ, ಹಿರಿಯ ನಟ ಎಂ.ಕೆ.ಸುಂದರ್ ರಾಜ್, ಆಯೋಜನೆ–ಗೌರಿಸುಂದರ್ ವಾರ್ಷಿಕ ಪ್ರಶಸ್ತಿ ಸಮಿತಿ, ಸ್ಥಳ–ಸಿ.ಅಶ್ವತ್ಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 6



ಡಾ. ಎಚ್.ಎಸ್. ವೆಂಕಟೇಶ ಮೂರ್ತಿ

ಇಂಡಿಯನ್ ಐಡಲ್: ಪವನ್‌ದೀಪ್‌ಗೆ ಮೊದಲ ಸ್ಥಾನ

ಮುಂಬೈ: ಜನಪ್ರಿಯ ರಿಯಾಲಿಟಿ ಶೋ 'ಇಂಡಿಯನ್ ಐಡಲ್'ನ 12ನೇ ಆವೃತ್ತಿಯ ವಿಜೇತರಾಗಿ ಉತ್ತರಾಖಂಡದ ಪವನ್‌ದೀಪ್ ರಾಜನ್ ಹೊರಹೊಮ್ಮಿದ್ದಾರೆ. ಅರುಣಿತಾ ಕಾಂಜಿಲಾಲ್ ಹಾಗೂ ಸಾಯಲಿ ಕಾಂಬ್ಳೆ ಅವರು ಎರಡನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕದ ನಿಹಾಲ್ ತಾವ್ರೊ ಅವರು 5ನೇ ಸ್ಥಾನ ಪಡೆದಿದ್ದಾರೆ. ಡ್ಯಾನಿಷ್ ಮೊಹ್ಮದ್, ಷಣ್ಮುಖಪ್ರಿಯಾ ಅವರು ಕ್ರಮವಾಗಿ 4 ಹಾಗೂ 6ನೇ ಸ್ಥಾನ ಪಡೆದಿದ್ದಾರೆ ಎಂದು ಇವೇ ಮೂಲಗಳು ಹೇಳಿವೆ.

ವಾಕ್–ಶ್ರವಣ ಶಿಬಿರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರಿನಗರದ ಎಸ್.ಜಿ.ಎಸ್.ವಾಗ್ದೇವಿ ಸಂಸ್ಥೆಯ ವತಿಯಿಂದ ಸ್ವಾತಂತ್ರ್ಯ ದಿನದ ಅಂಗವಾಗಿ ವಾಕ್ ಮತ್ತು ಶ್ರವಣ ಶಿಬಿರಕ್ಕೆ ಭಾನುವಾರ ಚಾಲನೆ ನೀಡಲಾಯಿತು.

ವೈದ್ಯ ಕೃಷ್ಣಮೂರ್ತಿ ಅವರು ಧ್ವಜಾರೋಹಣ ನೆರವೇರಿಸಿ, ಶಿಬಿರ ಉದ್ಘಾಟಿಸಿದರು.

ಆ. 31ರವರೆಗೆ ಹಿರಿಯ ನಾಗರಿಕರಿಗೆ ಶ್ರವಣ ಸಾಮರ್ಥ್ಯ ತಪಾಸಣೆ ಹಾಗೂ ಶ್ರವಣೋಪಕರಣಗಳಿಂದ ಪರೀಕ್ಷೆಗಳು ಉಚಿತವಾಗಿ ನಡೆಯಲಿವೆ. ಭಾನುವಾರ 32 ಮಂದಿಗೆ ತಪಾಸಣೆ ನಡೆಸಲಾಯಿತು.

ಕೋವಿಡ್ ಮೊದಲ ಲಸಿಕೆ ಪಡೆದವರಿಗೆ ಶೇ 5ರಷ್ಟು ಹಾಗೂ ಎರಡನೇ ಲಸಿಕೆ ಪಡೆದವರಿಗೆ ಶೇ 10ರಷ್ಟು ರಿಯಾಯಿತಿ ಇರಲಿದೆ. ಸಂಸ್ಥೆಯಿಂದಲೇ ಶ್ರವಣೋಪಕರಣ ಖರೀದಿಸಿದರೆ, ಉಚಿತ ತಪಾಸಣೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬಾಗಲಕೋಟೆ: ಗಮನ ಸೆಳೆದ ಮಾಜಿ ಸೈನಿಕರು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವ ಉಮೇಶ ಕತ್ತಿ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು. ಈ ವೇಳೆ ನಡೆದ ಪಥಸಂಚಲನದಲ್ಲಿ ಪಾಲ್ಗೊಂಡಿದ್ದ ಜಿಲ್ಲೆಯ ಮಾಜಿ ಸೈನಿಕರ ತಂಡ ಗಮನ ಸೆಳೆಯಿತು.

ಮಾಜಿ ಯೋಧರ ತಂಡವೊಂದು ಸ್ವಾತಂತ್ರ್ಯೋತ್ಸವದ ಪಥ ಸಂಚಲನದಲ್ಲಿ ಹೆಜ್ಜೆ ಹಾಕಿದ್ದು ಇದೇ ಮೊದಲ ಬಾರಿ ಎನ್ನಲಾಗಿದೆ.

ಕ್ಯಾಪ್ಟನ್ ಅರ್ಜುನ್ ಕೋರಿ ನೇತೃತ್ವದಲ್ಲಿ 22 ಮಂದಿ ಮಾಜಿ ಸೈನಿಕರು ಸ್ವಯಂ ಪ್ರೇರಿತರಾಗಿ ಪಥ ಸಂಚಲನದಲ್ಲಿ ಹೆಜ್ಜೆ ಹಾಕಿ ಸ್ವಾತಂತ್ರೋತ್ಸವದ ಅಮೃತ ಮಹೋತ್ಸವ ಸಂಭ್ರಮ ಸ್ಮರಣೀಯವಾಗಿಸಿದರು.

ಈ ತಂಡದಲ್ಲಿ ಆರು ಮಂದಿ 60 ವರ್ಷ ಮೀರಿದ ಮಾಜಿ ಸೈನಿಕರು ಇದ್ದರೆ, ಐದು ವರ್ಷಗಳ ಹಿಂದೆ ಸೇನೆಯಿಂದ ನಿವೃತ್ತಿ ಹೊಂದಿದವರೂ ಇದ್ದರು.

'ನಾವೂ ಪಥ ಸಂಚಲನದಲ್ಲಿ ಪಾಲ್ಗೊಳ್ಳುತ್ತೇವೆ ಎಂದು ಮಾಜಿ ಸೈನಿಕರು ಕೋರಿದಾಗ ಜಿಲ್ಲಾಡಳಿತದೊಂದಿಗೆ ಮಾತನಾಡಿ ಅನುಮತಿ ಕೊಡಿಸಿದೆ. ಸಮವಸ್ತ್ರ ಸೇರಿದಂತೆ ಪಥಸಂಚಲನಕ್ಕೆ ಅಗತ್ಯವಿರುವ ಎಲ್ಲ ಪರಿಕರ ಅವರೇ ಖರೀದಿಸಿದ್ದಾರೆ. ಕಳೆದ ಐದು ದಿನಗಳಿಂದ ಪಥ ಸಂಚಲನದ ಅಭ್ಯಾಸ (ರಿಹರ್ಸಲ್) ಮಾಡಿದ್ದರು' ಎಂದು ಸೈನಿಕ ಕಲ್ಯಾಣ ಮಂಡಳಿ ಬಾಗಲಕೋಟೆ ಜಿಲ್ಲೆ ಉಪನಿರ್ದೇಶಕ ಶಿವರಾಜ ಪಾಟೀಲ ತಿಳಿಸಿದರು.

ಸಮಾರಂಭದ ಪಥಸಂಚಲನದಲ್ಲಿ ಮಾಜಿ ಯೋಧರ ತಂಡ ಪಾಲ್ಗೊಂಡಿತ್ತು

ಬೈಕ್‌ಗೆ ಜಿಂಕೆ ಡಿಕ್ಕಿ: ಸವಾರ ಸಾವು

ಕೊಡಿಗೇನಹಳ್ಳಿ: ಬೈಕ್‌ಗೆ ಜಿಂಕೆ ಅಡ್ಡ ಬಂದ ಕಾರಣ ಸವಾರ ಮೃತಪಟ್ಟಿರುವ ಘಟನೆ ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ನಡೆದಿದೆ.

ಬ್ಯಾಲ್ಯ ಗ್ರಾಮದ ಗಿರಿಯಪ್ಪ (62) ಬೈಕ್‌ನಲ್ಲಿ ಕೋಡಗದಾಲ ಗ್ರಾಮಕ್ಕೆ ತೆರಳುತ್ತಿರುವಾಗ ಸಿಂಗರಗೊಂಡನಹಳ್ಳಿ ಬಳಿ ಜಿಂಕೆ ಅಡ್ಡ ಬಂದು ಡಿಕ್ಕಿ ಹೊಡೆದಿದೆ. ಗಿರಿಯಪ್ಪ ಅವರ ತಲೆಗೆ ತೀವ್ರ ಪೆಟ್ಟಾಗಿತ್ತು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಪೊಲೀಸರು ಹಾಗೂ ಅರಣ್ಯಾಧಿಕಾರಿ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಕಲಘಟಗಿ ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಭಾನುವಾರ ಆಯೋಜಿಸಿದ್ದ ಮೆರವಣಿಗೆಯಲ್ಲಿ ಸಹಸ್ರಾರು ಜನರು ಪಾಲ್ಗೊಂಡಿದ್ದರು

ಕೋವಿಡ್ ನಿಯಮ ಉಲ್ಲಂಘನೆ– ಪ್ರಕರಣ ದಾಖಲು

ಕಾಂಗ್ರೆಸ್‌ನಿಂದ 2 ಕಿ.ಮೀ ತ್ರಿವರ್ಣ ಧ್ವಜ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಕಲಘಟಗಿ (ಧಾರವಾಡ ಜಿಲ್ಲೆ): ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ನಿಮಿತ್ತ ಪಟ್ಟಣದಲ್ಲಿ ಮಾಜಿ ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಭಾನುವಾರ ನಡೆದ ತ್ರಿವರ್ಣ ಧ್ವಜ ಮೆರವಣಿಗೆಯಲ್ಲಿ ಸಾವಿರಾರು ಜನರು ಅಂತರ ಮರೆತು ಪಾಲ್ಗೊಂಡಿದ್ದರು.

ಸುಮಾರು ಎರಡು ಕಿ.ಮೀ ಉದ್ದಕ್ಕೆ ಸಾಗಿದ ಈ ಮೆರವಣಿಗೆಯು ಕಲಘಟಗಿ ಹೊರವಲದ ತಡಸ ಕ್ರಾಸ್ ದಿಂದ ಪಟ್ಟಣದ ತಹಶೀಲ್ದಾರ್ ಕಚೇರಿಯವರೆಗೆ ನಡೆಯಿತು.

ಮೆರವಣಿಗೆ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಕೋವಿಡ್ ನಿಯಮ ಉಲ್ಲಂಘನೆ ಅನ್ವಯ 14 ಜನ ಕಾಂಗ್ರೆಸ್ ಮುಖಂಡರ ಮೇಲೆ ಸಿಪಿಐ ಪ್ರಭು ಸೂರಿನ್, ಕಲಘಟಗಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

> **ಜನರು ಅಭಿಮಾನದಿಂದ, ಅವರಾಗಿಯೇ ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದಾರೆ. ನಾವು ಅವರನ್ನು ಕರೆಸಿದ್ದಲ್ಲ**
> **ಸಂತೋಷ ಲಾಡ್** ಮಾಜಿ ಸಚಿವ

ಕೋವಿಡ್ ಹಾವಳಿ ಇದ್ದರೂ ಅದನ್ನು ಲೆಕ್ಕಿಸದೆ ಕಲಘಟಗಿ ಹಾಗೂ ಅಳ್ನಾವರ ಭಾಗದಿಂದ 10 ಸಾವಿರಕ್ಕೂ ಹೆಚ್ಚು ಜನರು ಮೆರವಣಿಗೆಯಲ್ಲಿ ಸೇರಿದ್ದರು. ಮಾಸ್ಕ್, ಅಂತರ ಕಾಪಾಡಿಕೊಳ್ಳದ ಈ ಮೆರವಣಿಗೆ ಹಾಗೂ ಈ ಬಗ್ಗೆ ತಾಲ್ಲೂಕು ಆಡಳಿತದ ನಿರ್ಲಕ್ಷ್ಯದ ವಿರುದ್ಧ ಜನಸಾಮಾನ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯೋತ್ಸವದ ದಿನ ತ್ರಿವರ್ಣ ಧ್ವಜದ ಮೆರವಣಿಗೆಯು ಪಟ್ಟಣದಲ್ಲಿ ನಡೆಯಲಿದೆ ಎಂದು ಕಾಂಗ್ರೆಸ್ ಪಕ್ಷದಿಂದ ಹಲವು ದಿನಗಳ ಮುಂಚಿತವಾಗಿಯೇ ಎಲ್ಲೆಡೆ ಪ್ರಚಾರ ಮಾಡಲಾಗಿತ್ತಾದರೂ ಈ ಬಗ್ಗೆ ತಾಲ್ಲೂಕು ಆಡಳಿತ ಗಮನ ಹರಿಸದೆ ನಿರ್ಲಕ್ಷ್ಯ ಮಾಡಿದೆ ಎಂಬ ಆರೋಪ ಕೇಳಿಬಂದಿದೆ.

'ಈ ಮೆರವಣಿಗೆಗೆ ತಾಲ್ಲೂಕು ಆಡಳಿತ ಅನುಮತಿ ನೀಡಿರಲಿಲ್ಲ, ಮೆರವಣಿಗೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಲಿದ್ದೇವೆ' ಎಂದು ತಹಶೀಲ್ದಾರ್ ಯಲ್ಲಪ್ಪ ಗೊಣ್ಣೆಣ್ಣವರ ತಿಳಿಸಿದ್ದಾರೆ.

'ಮುಹೂರ್ತ ನೋಡಿ ಖಾತೆ ವಹಿಸಿಕೊಳ್ಳುವೆ'

ಹೊಸಪೇಟೆ (ವಿಜಯನಗರ): 'ಮುಹೂರ್ತ ನೋಡಿ ಖಾತೆ ಸ್ವೀಕರಿಸುತ್ತೇನೆ. ದೇವರ ಮುಹೂರ್ತ, ನನ್ನ ನಕ್ಷತ್ರ ನೋಡಿಕೊಂಡು ಖಾತೆ ವಹಿಸಿಕೊಳ್ಳುತ್ತೇನೆ' ಎಂದು ಸಚಿವ ಆನಂದ್ ಸಿಂಗ್ ತಿಳಿಸಿದರು.

ಆನಂದ್ ಸಿಂಗ್

ಸುದ್ದಿಗಾರರ ಪ್ರಶ್ನೆಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿ ದಿಟ್ಟ, ಸಮರ್ಥ ಅಧಿಕಾರಿಗಳಿದ್ದಾರೆ. ಅಲ್ಲಿಯವರೆಗೆ ಅವರು ಖಾತೆ ನೋಡುತ್ತಾರೆ. ನಾನು ಅಧಿಕಾರ ವಹಿಸಿಕೊಳ್ಳದಿದ್ದರೆ ಅಭಿವೃದ್ಧಿ ಕುಂಠಿತವಾಗುವುದಿಲ್ಲ. ಜನಪ್ರತಿನಿಧಿಗಳ ಮೇಲೆ ವ್ಯವಸ್ಥೆ ನಡೀತಾ ಇಲ್ಲ. ಶಾಸಕಾಂಗ, ಕಾರ್ಯಾಂಗ ಬಂಡಿ ಇದ್ದಂತೆ' ಎಂದು ಹೇಳಿದರು.

'ಸಚಿವ ಬಿ. ಶ್ರೀರಾಮುಲು ಅವರು ನನಗೆ ಫೋನ್ ಮಾಡಿದ್ದು ನಿಜ. ಆದರೆ, ಅವರ ಇಲಾಖೆ ಕುರಿತ ಸಭೆಗೆ ಆಹ್ವಾನಿಸಿದರೆ ಹೊರತು ಖಾತೆ ಬಗ್ಗೆ ಏನೂ ಮಾತನಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ತಾಲ್ಲೂಕಿನ ಹಂಪಿ–ಕಮಲಾಪುರ ಸಮೀಪದ 50 ಎಕರೆಯಲ್ಲಿ ಫಿಲ್ಮ್ ಸಿಟಿ, ನಗರದಲ್ಲಿ ₹100 ಕೋಟಿಯಲ್ಲಿ ವಿವಿಧ ಆಟೋಟಗಳಿಗೆ ಒಳ ಮತ್ತು ಹೊರ ಕ್ರೀಡಾಂಗಣ ನಿರ್ಮಿಸಲಾಗುವುದು. ವಿಜಯನಗರ ಜಿಲ್ಲೆಯಲ್ಲಿ ಕಚೇರಿಗಳ ನಿರ್ಮಾಣ, ಅಧಿಕಾರಿಗಳ ನೇಮಕ ಪ್ರಕ್ರಿಯೆ ನಡೆದಿದೆ. ಆರ್ಥಿಕ ಇಲಾಖೆಯಿಂದ ಈಗಾಗಲೇ ಜಿಲ್ಲೆಗೆ ₹50 ಕೋಟಿ ಬಿಡುಗಡೆಯಾಗಿದೆ. ಖಾತೆ ಗೊಂದಲದ ಬಗ್ಗೆ ಇನ್ನೇನೂ ಹೇಳಲಾರೆ' ಎಂದು ಹೇಳಿ ನಿರ್ಗಮಿಸಿದರು.

ಆನಂದ್ ಸಿಂಗ್ ಅವರಿಗೆ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಖಾತೆ ಹಂಚಿಕೆ ಮಾಡಲಾಗಿದೆ. ಆದರೆ, ಇದುವರೆಗೆ ಅವರು ಖಾತೆ ವಹಿಸಿಕೊಂಡಿಲ್ಲ.

ಜೀವಂತವಾಗಿದ್ದರೆ ಇದೇ ಅವಧಿಗೆ ಸಿ.ಎಂ: ಕತ್ತಿ

ಬಾಗಲಕೋಟೆ: 'ತಮ್ಮ (ಮಾಧ್ಯಮದವರ) ಆಶಯ ಈಡೇರಿದರೆ ಮುಂದಿನ ಕೆಲವೇ ದಿನಗಳಲ್ಲಿ ನಾನು ಮುಖ್ಯಮಂತ್ರಿ ಆಗಬಹುದು' ಎಂದು ಅರಣ್ಯ, ಆಹಾರ, ನಾಗರಿಕ ಪೂರೈಕೆ ಹಾಗೂ ಗ್ರಾಹಕರ ವ್ಯವಹಾರಗಳ ಸಚಿವ ಉಮೇಶ ಕತ್ತಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದ ಅವರು, 'ಜೀವಂತವಾಗಿದ್ದರೆ ಇದೇ ಅವಧಿ, ಸತ್ತರೆ ಮುಂದಿನ ಅವಧಿಗೆ ಸಿ.ಎಂ ಆಗಬಹುದು' ಎಂದು ಚಟಾಕಿ ಹಾರಿಸಿದರು.

'ಬೆಳಗಾವಿ ಜಿಲ್ಲೆಯ ಉಸ್ತುವಾರಿ ಆಗುವ ಆಸೆ ಇದೆ. ಆಯಾ ಜಿಲ್ಲೆಯವರೇ ಉಸ್ತುವಾರಿ ಆಗಬಾರದು ಎಂಬುದು ಪಕ್ಷದ ನಿರ್ಧಾರವಾಗಿದೆ. ಆದರೆ, ಜಿಲ್ಲಾ ಉಸ್ತುವಾರಿ ಸಚಿವರು ಆಯಾ ಜಿಲ್ಲೆಯವರೇ ಆದಲ್ಲಿ ಒಳ್ಳೆಯದು. ಅಭಿವೃದ್ಧಿಗೆ ಅನುಕೂಲ' ಎಂದು ಹೇಳಿದರು.

'ಹೊಟ್ಟೆಪಾಡಿಗಾಗಿ ರಾಜಕೀಯಕ್ಕೆ ಬಂದಿಲ್ಲ'

ಪ್ರಜಾವಾಣಿ ವಾರ್ತೆ

ಗುಬ್ಬಿ: 'ನಾನು ಹೊಟ್ಟೆಪಾಡಿಗಾಗಿ ರಾಜಕೀಯಕ್ಕೆ ಬಂದಿಲ್ಲ. ಜನಸೇವೆಯ ಉದ್ದೇಶದಿಂದ ರಾಜಕೀಯದಲ್ಲಿದ್ದೇನೆ. ರಾಜಕೀಯಕ್ಕೆ ಬರುವ ಮೊದಲೂ ಆದಾಯ ತೆರಿಗೆ ಪಾವತಿಸುತ್ತಿದ್ದೆ' ಎಂದು ಶಾಸಕ ಎಸ್.ಆರ್ ಶ್ರೀನಿವಾಸ್ ಹೇಳಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಶಿಷ್ಟರ ಭೂಮಿ ಕಬಳಿಸಿದ ಸಂಸದ ಬಸವರಾಜು ಹಾಗೂ ಅವರ ಹಿಂಬಾಲಕ ಕುಂದರನಹಳ್ಳಿ ರಮೇಶ್ ರಾಜಕಾರಣವನ್ನೇ ಉದ್ಯೋಗ ಮಾಡಿಕೊಂಡು ಹೊಟ್ಟೆಪಾಡು ನಡೆಸುವ ಭೂಗಳ್ಳರು ಎಂದು ಆರೋಪಿಸಿದರು.

'ಎಚ್‌ಎಎಲ್ ಮತ್ತು ಎಳನೀರು ಕಾರ್ಖಾನೆ ಹೆಸರಿನಲ್ಲಿ ಪರಿಶಿಷ್ಟರ ಭೂಮಿ ಕಬಳಿಸಿದ್ದಾರೆ. ಡೆವಲಪ್‌ಮೆಂಟ್ ರೆವ್ಯುಲ್ಯುಷೇನ್ ಫೋರಂ ಹೆಸರಿನಲ್ಲಿ ಲೂಟಿ ಮಾಡಿದ್ದಾರೆ. ಇಂತಹವರ ಹೇಳಿಕೆಗೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸಂಸದರು ನಂದಿಹಳ್ಳಿಯಲ್ಲಿ ಚರ್ಚಿಸಿದ ವಿಚಾರವೇ ಬೇರೆ, ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ದಾಖಲೆಯೇ ಬೇರೆ. ಕೆಆರ್‌ಎಸ್ ಮಾದರಿ ಡ್ಯಾಂ ನಿರ್ಮಿಸಿ ಭೂಮಿ ಬಿಟ್ಟುಕೊಟ್ಟ ರೈತರಿಗೆ ಎಕರೆಗೆ ₹1 ಕೋಟಿ ಪರಿಹಾರ ನೀಡುವ ಬಗ್ಗೆ ಅವರು ಮಾತನಾಡುತ್ತಿದ್ದಾಗ ನಾನು ಆಕ್ಷೇಪಿಸಿ, ರೈತರಿಗೆ ಆ ಮಟ್ಟದ ಪರಿಹಾರ ದಕ್ಕದು ಎಂದು ಗೌರವಯುತವಾಗಿ ಹೇಳಿದ್ದೆ. ಆದರೆ ನನ್ನ ಮೇಲೆ ಹರಿಹಾಯ್ದ ಸಂಸದರು ಏಕವಚನ ಪ್ರಯೋಗಿಸಿದ್ದರು. ಜಟಾಪಟಿಗೆ ಯಾರು ಕಾರಣ ಎನ್ನುವುದು ಎಲ್ಲರಿಗೂ ತಿಳಿದಿದೆ' ಎಂದು ಸ್ಪಷ್ಟಪಡಿಸಿದರು.

'ಸ್ವಜಾತಿಯ ವಿರೋಧಿ ಎಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಸಂಸದರು, ಲಿಂಗಾಯತರ ಮನೆಗಳ ಮೇಲೆಯೇ ಕಲ್ಲು ಎಸೆದು ಗುಂಪು ರಾಜಕಾರಣ ಮಾಡುತ್ತಿದ್ದಾರೆ. ನಾನು ಶಾಸಕನಾದ ಬಳಿಕ ಗುಂಪು ಮತ್ತು ದ್ವೇಷ ರಾಜಕಾರಣಕ್ಕೆ ಆಸ್ಪದ ನೀಡಿಲ್ಲ' ಎಂದು ಹೇಳಿದರು.

'ಇಲ್ಲಸಲ್ಲದ ಯೋಜನೆ ಹೆಸರು ಹೇಳಿ ಚುನಾವಣೆ ನಡೆಸುವ ಸಂಸದರ ಮಾತು ಕೇಳಿ ಭೂಮಿ ಕಳೆದುಕೊಂಡ ಬಡ ರೈತರು ಕೋಟಿ ರೂಪಾಯಿ ಪರಿಹಾರಕ್ಕೆ ನನ್ನ ಮನೆ ಬಳಿ ಬರುತ್ತಾರೆ. ಈ ಬಗೆಯ ಸುಳ್ಳು ಭರವಸೆ ವಿಚಾರಕ್ಕೆ ವಿರೋಧ ಮಾಡಿದ್ದೆ. ರೈತರಿಗೆ ಸಲ್ಲದ ಆಸೆ ತೋರಿಸುವುದು ತರವಲ್ಲ. ಮಂಕುಬೂದಿ ಎರಚುವ ಕಾಯಕ ಅವರಿಗೆ ಕರಗತವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಕಾರ್ಯಕರ್ತೆಯರಿಂದ ಕಪ್ಪುಬಟ್ಟೆ ಪ್ರದರ್ಶನ

ಸಚಿವೆ ಶಶಿಕಲಾ ಜೊಲ್ಲೆಗೆ ಘೇರಾವ್

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಆವರಣದಲ್ಲಿ ಜಿಲ್ಲಾಡಳಿತ ಭಾನುವಾರ ಏರ್ಪಡಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ವೇದಿಕೆಗೆ ಆಗಮಿಸುತ್ತಿದ್ದ ವೇಳೆ ಕಾಂಗ್ರೆಸ್ ಕಾರ್ಯಕರ್ತೆಯರು, ವಿವಿಧ ಮಹಿಳಾ ಸಂಘಟನೆಗಳ ಪದಾಧಿಕಾರಿಗಳು ಘೇರಾವ್ ಹಾಕಿದರು.

'ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಸಚಿವೆ ಧ್ವಜಾರೋಹಣ ನೆರವೇರಿಸುವುದು ಬೇಡ', 'ಸಚಿವೆ ಜೊಲ್ಲೆಗೆ ಧಿಕ್ಕಾರ' ಎಂಬ ಘೋಷಣೆಗಳನ್ನು ಕೂಗಿ, ಕಪ್ಪುಬಟ್ಟೆ ಪ್ರದರ್ಶಿಸಿದರು. ತಕ್ಷಣ ಪೊಲೀಸರು ಪ್ರತಿಭಟನಕಾರರನ್ನು ತಡೆದು, ವಶಕ್ಕೆ ಪಡೆದರು.

ಯಾವುದೇ ತಪ್ಪು ಮಾಡಿಲ್ಲ: 'ನಾನು ಯಾವುದೇ ತಪ್ಪು ಮಾಡಿಲ್ಲ. ನನ್ನ ಏಳಿಗೆಯನ್ನು ಸಹಿಸದ ಶತ್ರುಗಳು ಮತ್ತು ಹಿತಶತ್ರುಗಳು ದುರುದ್ದೇಶದಿಂದ ಷಡ್ಯಂತ್ರ ರೂಪಿಸಿದ್ದಾರೆ. ಆದರೆ, ನಾನು ಈ ಷಡ್ಯಂತ್ರಕ್ಕೆ ಬಲಿಯಾಗಿಲ್ಲ. ಯಾವುದೇ ತನಿಖೆಗೂ ಸಿದ್ಧ' ಎಂದು ಸಚಿವೆ ಶಶಿಕಲಾ ಜೊಲ್ಲೆ ವೇದಿಕೆ ಕಾರ್ಯಕ್ರಮದಲ್ಲಿ ಹೇಳಿದರು.

ಅಕ್ಕಮಹಾದೇವಿ ಅವರ 'ಬೆಟ್ಟದ ಮೇಲೊಂದು ಮನೆಯ ಮಾಡಿ' ವಚನವನ್ನು ವಾಚಿಸಿ, 'ಸಾರ್ವಜನಿಕ ಜೀವನದಲ್ಲಿ ಸ್ತುತಿ, ನಿಂದನೆ ಸಹಜ. ಶಾಂತವಾಗಿ, ಧೈರ್ಯದಿಂದ ಎದುರಿಸುತ್ತೇನೆ' ಎಂದರು.

ವಿಜಯಪುರ ಜಿಲ್ಲಾಡಳಿತ ಭಾನುವಾರ ಏರ್ಪಡಿಸಿದ್ದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ವೇದಿಕೆಗೆ ಆಗಮಿಸಿದ ಸಚಿವೆ ಶಶಿಕಲಾ ಜೊಲ್ಲೆಗೆ ಘೇರಾವ್ ಹಾಕಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತೆಯರನ್ನು ಪೊಲೀಸರು ತಡೆದು, ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ

> **ರಾಜಕೀಯದಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿಯೇ ಬೇರೆಯಾಗಿರುವ ಈ ಸಂದರ್ಭದಲ್ಲಿ ಸ್ವಸಾಮರ್ಥ್ಯದಿಂದ ಮೇಲೆ ಬಂದಿದ್ದೇನೆ. ತಪ್ಪೇ ಮಾಡದಿರುವಾಗ ಅಂಜುವುದಿಲ್ಲ**
> **ಶಶಿಕಲಾ ಜೊಲ್ಲೆ,** ಮುಜರಾಯಿ ಸಚಿವೆ

CONNECT

EDUCATION SUCCESS

ಕ್ಲಾಸಿಫೈಡ್ಸ್

Classroom Desks
Officetech ISO 9001-2015 BIFMA Certified Company
Scholar Series
Convent Series
Primary Series
College Series
Z-Line Series
Academy Series
STRONG DESIGN GUARANTEES LIFETIME INVESTMENT
OTS OFFICETECH SYSTEMS PVT. LTD.
No. 6/8, Commanders Place, Near Richmond Circle, Raja Ram Mohan Roy Road, Bangalore - 560025.
Mob: 98450 48194, 98450 48053
(080) 2222 9111, 2212 1500, 2222 8080, 98457 57501
otsofficetech@gmail.com | officetech@vsnl.net
ISO 9001-2015 Certified & BIFMA Certified Branded Company
Karnataka | Kerala | Tamilnadu | Andhra Pradesh | Telangana | Goa | Maharashtra

MAX MULLER PUBLIC SCHOOL
BEML Layout, Basaveshwaranagar, Bengaluru-560 079. Ph. 080-23233455
SSLC TOPPERS 2021

DIMPLE K.B. 97.72%	KEERTHI S. 97.60%	NAVYA B.M. 97.28%	MONISHA V. 97.12%	JATIN TAK 96.96%	MANU R. 96.32%
HAMSAPRIYA K. NAIK 96.16%	HARSHA G. GOWDA 95.84%	BHAVANA H.N. 95.84%	KUSUMANJALI G. 95.68%	KUSUMA V. 95.52%	RAJATH U. JADHAV 95.36%
KOTRESH R. 95.20%	M. PRASANNA 95.20%	CHINMAYI J. 95.04%	PRATHIBHA M. 94.88%	KIRAN ANSAR 94.24%	DARSHAN J.R. 93.92%

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

EDUCATIONAL

Admission

ONE SITTING: B.Tech/ Diploma/ MBA/MCA/M.Sc/ M.Com/BBA/BCA/B.Sc/B.Com /LL.B/D.Pharm/ B.Pharm/ B.Ed. Recognised Govt. Genuine students need contact.Asha Institute, Bangalore. Ph:9448460103/ 7093438248

General

RENTAL PROPERTIES

Accommodation Available

Commercial

4500 SQFT ONE SINGLE FLOOR NEAR LALBAGH WEST GATE FACING R. V. MAIN ROAD WITH 6000 SQFT PARKING SPACE. ALSO 1500 SQFT OFFICE SPACE AT FIRST FLOOR CONTACT OWNER 9740854716

JOB OPPORTUNITIES

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/7676760399

WANTED
Neuron Systems is a Leading Healthcare Service Provider having 14 Shops in Karnataka and Telangana.
Looking for the positions
Female Graduates Kannada, English fluency, Excellent Communication skills
Female Customer Care 3 Nos, 2 yr exp
Female Counsellor 3 Nos, 2 yr exp
Vacancies at Jayanagar Indiranagar, Kammanahalli Marathahalli.
Accounts Executive Male / Female -3 Nos B.Com Graduate, Retail GST Tally exp must. 2 yr Exp All Positions CTC up to 25K
Data Entry Operator Tally - 02 Nos, 1 yr exp 14-16K CTC Vacancies at Indiranagar
Office Boy - 2 Nos Sal 12,000-14,000 K Vacancy at Vijayanagar
Walk-In Interview
Date: 16,17,18,19 August
Time - 11am to 3 pm
No 13, 8th Cross, 13th Main, Indiranagar, HAL II Stage, Bangalore - 560008
Land mark : Opp Road to New Horizon School 100 ft Road
Contact: 9606956502
e-mail: nagaraj@ranna.in

LORD SRI KRISHNA INTERNATIONAL EDUCATION TRUST (R)
SRI KRISHNA GROUP OF INSTITUTIONS
ITI Layout, (Near Vidyapeeta) BSK III stage, Bengaluru 560085
ADMISSIONS OPEN 2021-22
PUC
Science: PCMB / PCME / PCMCs
Commerce: SEBA / GEBA / EBACs/ MSBA
DEGREE
B.Com (Day & Evening)
BBA & BCA
PG PROGRAMS
M. Com & MBA
PU Programs are affiliated to PUE Board with 'A' Grade
UG & PG Programs are Permanently affiliated to Bengaluru City University (BCU)
LOOK UP AIM HIGH
PUC 2020-21 TOPPERS
100% RESULTS
RAGHAVI. D Science 95%
HARPITHA PRAKASH Science 94%
VANDANA C Science 93%
SHREYA GUPTA Science 93%
PRIYA T.S Commerce 95%
DIVYA B.G Commerce 93%
For Admissions Contact: 080 26796020 (Office)
PUC - 9986126134, 9731298744
Degree - 9945330589, 9844784320
PG - 9663890999
PUC - www.skpuc.edu.in
Degree - www.skdc.edu.in

NIIT
ICICI Bank
BECOME A BANKING PROFESSIONAL AT ICICI BANK
With a PG Diploma in Sales and Relationship Banking
Eligibility:
19-25 years of age with min. 50% in X, XII and Graduation.
Call Now: 1800 200 7261

Security & Detectives

WANTED experienced Field Officers, Marketing Executives, Telecallers for security agency at jayanagar contact 9482362244, 9483814848

PUBLIC NOTICE

NATIONAL LAW SCHOOL OF INDIA UNIVERSITY (NLSIU)
Nagarabhavi, Bengaluru - 560072
Phone: 080-23213160 / 23160532 / 33 / 35
TENDER NOTIFICATION
Sealed item wise tenders are invited in the prescribed form from Reputed Contractors for Classroom Interior Works at New Academic Block, NLSIU Campus, Bangalore.
For details please visit University website www.nls.ac.in.
REGISTRAR

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

PERSONAL

Change of Name

I, DHANASHEKARA, Residing at #141, Vibha, 5th cross, Chokkasandra, T.Dasarahalli post, Bangalore-57 have changed my name as DHANASHEKAR. M., vide affidavit dated 13/8/2021 before Notary V.Anjanappa, Bangalore

For Online Classified Booking
Name Change / Education / Property / Job / Services and many more contact
9880856233 | 9886213331
dhclassifieds.com

EDUCATION SPECIAL
DH Classifieds
PV Classifieds
We are coming out with special offer for Admission Notice, Education Success Congratulation Ads
For details contact:
Jerry: 9731810277 Vishal: 9845114560
Tanveer: 9886213331
E-mail: dhclassifieds@deccanherald.co.in
DH Classifieds

HEALTH SPECIAL

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
Before
After
ಲೈಂಗಿಕ ರೋಗಗಳು
ಉದ್ರೇಕದ ಸಮಸ್ಯೆ
ಲೈಂಗಿಕ ನಿರಾಸಕ್ತಿ
ನಿದ್ರಾ ಸ್ಖಲನ
ಶೀಘ್ರ ಸ್ಖಲನ
ಲಿಂಗ ಚಿಕ್ಕದಾಗುವುದು
ನರ ದೌರ್ಬಲ್ಯ
ಅವಧಿಗೆ ಮೊದಲೇ ಸ್ಖಲನ
ಆತಂಕ, ದೌರ್ಬಲ್ಯ
ಕಡಿಮೆ ವೀರ್ಯಾಣು
ಮುಷ್ಠಿ ಮೈಥುನದ ಅಡ್ಡಪರಿಣಾಮ
100% NO SIDE EFFECTS
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ನವದೆಹಲಿಯಲ್ಲಿ ರಾಯಣ್ಣ ಪ್ರತಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರ ರಾಜಧಾನಿ ನವದೆಹಲಿಯ ಪ್ರಮುಖ ಸ್ಥಳವೊಂದರಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ನಿರ್ಮಿಸಬೇಕೆಂಬುದು ಎಲ್ಲರ ಅಭಿಲಾಷೆ. ಇದಕ್ಕಾಗಿ ಶಕ್ತಿ ಮೀರಿ ಪ್ರಯತ್ನಿಸುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಭರವಸೆ ನೀಡಿದರು.

ಸಂಗೊಳ್ಳಿ ರಾಯಣ್ಣ ಅವರ 224ನೇ ಜಯಂತ್ಯುತ್ಸವದ ಅಂಗವಾಗಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ ಹಾಗೂ ಬಿಬಿಎಂಪಿ ವತಿಯಿಂದ ನಗರದ ಕೆ.ಎಸ್.ಆರ್. ರೈಲು ನಿಲ್ದಾಣದ ಬಳಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

'ನವದೆಹಲಿಗೆ ಭೇಟಿ ನೀಡಿದಾಗ ರಾಯಣ್ಣ ಪುತ್ಥಳಿ ನಿರ್ಮಿಸುವ ಬಗ್ಗೆ ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ. ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ರಾಯಣ್ಣ ಹೆಸರಿಡುವ ಕುರಿತು ಕೇಂದ್ರ ವಿಮಾನಯಾನ ಸಚಿವರನ್ನು ಭೇಟಿಯಾಗಿ ಪ್ರಸ್ತಾವನೆ ಸಲ್ಲಿಸುತ್ತೇನೆ' ಎಂದರು.

'ಸಂಗೊಳ್ಳಿ ಹಾಗೂ ನಂದಗಡದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಸಂಗೊಳ್ಳಿಯ ಸೈನಿಕ ಶಾಲೆ ಹಾಗೂ ನಂದಗಡದ ಸಂಪೂರ್ಣ ಅಭಿವೃದ್ಧಿಗೆ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ₹80 ಕೋಟಿ ಅನುದಾನ ಘೋಷಿಸಿದ್ದು, ಇದರ ಬಾಕಿ ಮೊತ್ತವನ್ನು ಬಿಡುಗಡೆಗೊಳಿಸಲಾಗಿದೆ. ಈ ಶಾಲೆಯಲ್ಲಿ ತರಬೇತಿ ಪಡೆದವರು ದೇಶ ಕಾಯುವ ಕೆಲಸಕ್ಕೆ ನಿಯೋಜನೆಗೊಳ್ಳಲಿದ್ದು ಸಂಗೊಳ್ಳಿ ರಾಯಣ್ಣ ಹೆಸರನ್ನು ಅಮರಗೊಳಿಸಲಿದ್ದಾರೆ' ಎಂದು ತಿಳಿಸಿದರು.

'ರಾಯಣ್ಣನವರ ಜನ್ಮದಿನ ಹಾಗೂ ಹುತಾತ್ಮರಾದ ದಿನಗಳಂದು ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸುವಂತೆ ಆದೇಶಿಸಲಾಗಿದೆ' ಎಂದು ಹೇಳಿದರು.

'ನಾನು ಪ್ರತಿನಿಧಿಸುವ ಶಿಗ್ಗಾಂವಿ ಕ್ಷೇತ್ರದ ಬಾಡದಲ್ಲಿ ಕನಕದಾಸರು ಜನಿಸಿದ್ದಾರೆ. ಹೀಗಾಗಿ ಆ ಸ್ಥಳವನ್ನು ಅಭಿವೃದ್ಧಿಪಡಿಸಿ ಕನಕದಾಸರ ವಿಚಾರಧಾರೆಗಳನ್ನು ಎಳೆಯರಿಗೂ ತಿಳಿಸುವ ಕೆಲಸ ಮಾಡಿದ್ದೇವೆ. ಎಲ್ಲರೂ ಆ ಸ್ಥಳಕ್ಕೆ ಒಮ್ಮೆ ಭೇಟಿ ನೀಡಬೇಕು' ಎಂದು ತಿಳಿಸಿದರು.

ಸಂಗೊಳ್ಳಿ ರಾಯಣ್ಣ ಜನ್ಮದಿನಾಚರಣೆಯನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ನಡೆಸುವಂತೆ ಆದೇಶ ಹೊರಡಿಸಿದ್ದಕ್ಕೆ ಬೊಮ್ಮಾಯಿ ಅವರಿಗೆ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ ಸಮುದಾಯದ ಪರವಾಗಿ ಅಭಿನಂದನೆ ಸಲ್ಲಿಸಿದರು.

ಸಚಿವ ಆರ್.ಅಶೋಕ, ಗಾಂಧಿನಗರ ಶಾಸಕ ದಿನೇಶ್ ಗುಂಡೂರಾವ್, ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಇದ್ದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿಯವರು ಪುಷ್ಪಾರ್ಚನೆ ಮಾಡಿದರುಪ್ರಜಾವಾಣಿ ಚಿತ್ರ

ಕೃಷಿ ಸಚಿವ ಬಿ.ಸಿ.ಪಾಟೀಲ ತಿರುಗೇಟು

ಸಿದ್ದರಾಮಯ್ಯ ಯಾವಾಗ ಭವಿಷ್ಯ ನುಡಿಯೋದು ಕಲಿತರು?

ಪ್ರಜಾವಾಣಿ ವಾರ್ತೆ

ಹಾವೇರಿ: 'ಸಿದ್ದರಾಮಯ್ಯ ಅವರಿಗೆ ಜ್ಯೋತಿಷದಲ್ಲಿ ನಂಬಿಕೆಯಿಲ್ಲ. ಆದರೆ, ಹೆಚ್ಚು ದಿನ ಬಿಜೆಪಿ ಸರ್ಕಾರ ಇರಲ್ಲ ಎಂದು ಹೇಳುವ ಅವರು, ಯಾವಾಗ ಭವಿಷ್ಯ ನುಡಿಯೋದು ಕಲಿತ್ರು?' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ಸಿದ್ದರಾಮಯ್ಯನವರ ಹೇಳಿಕೆಗೆ ತಿರುಗೇಟು ನೀಡಿದರು.

ಬಿ.ಸಿ.ಪಾಟೀಲ

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 'ಸಿದ್ದರಾಮಯ್ಯ ಅವರು ಕನಸು ಕಾಣುತ್ತಿದ್ದಾರೆ. ನಾವು 118 ಮಂದಿ ಒಗ್ಗಟ್ಟಾಗಿ ಇರುವವರೆಗೆ ಬಿಜೆಪಿ ಸರ್ಕಾರವನ್ನು ಅಲುಗಾಡಿಲು ಯಾರಿಂದಲೂ ಸಾಧ್ಯವಿಲ್ಲ. ಬಸವರಾಜ ಬೊಮ್ಮಾಯಿ ಅವರು ಪೂರ್ಣಾವಧಿ ಮುಖ್ಯಮಂತ್ರಿಯಾಗಿರುತ್ತಾರೆ. 2023ಕ್ಕೆ ಮತ್ತೆ ನಾವೇ ಅಧಿಕಾರಕ್ಕೆ ಬರುತ್ತೇವೆ' ಎಂದರು.

ಅಟಲ್ ಬಿಹಾರಿ ವಾಜಪೇಯಿ ಮತ್ತು ಜವಾಹರಲಾಲ್ ನೆಹರೂ ಅವರು ಪ್ರಧಾನಿಗಳಾಗಿ ಈ ದೇಶಕ್ಕೆ ಕೊಡುಗೆ ಕೊಟ್ಟಿದ್ದಾರೆ. ಅವರ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ. ಪಕ್ಷಾತೀತವಾಗಿ ಅವರನ್ನು ಗೌರವಿಸಬೇಕು ಎಂದು ಹೇಳುವ ಮೂಲಕ ತಮ್ಮದೇ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮತ್ತು ಕಾಂಗ್ರೆಸ್‌ನ ಪ್ರಿಯಾಂಕ ಖರ್ಗೆ ಇಬ್ಬರ ಹೇಳಿಕೆಯನ್ನೂ ಖಂಡಿಸಿದರು.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಉದ್ಯಮಿಗಳ ಸಭೆಯಲ್ಲಿ ಸಿಎಂ ಅವರ ಪುತ್ರ ಪಾಲ್ಗೊಂಡಿದ್ದರ ಕುರಿತ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಬೊಮ್ಮಾಯಿ ಪುತ್ರ ಭರತ್ ಮೂಲತಃ ಉದ್ಯಮಿ. ಹೀಗಾಗಿ ಉದ್ಯಮಿಗಳ ಸಭೆಯಲ್ಲಿ ಅವರು ಪಾಲ್ಗೊಂಡಿದ್ದಾರೆ. ಇದರಲ್ಲಿ ಯಾವ ತಪ್ಪೂ ಇಲ್ಲ'ಎಂದು ಸಮರ್ಥಿಸಿಕೊಂಡರು.

'ಸಿದ್ದರಾಮಯ್ಯ ಕಾಲಜ್ಞಾನಿಯೇ'

ಚಿಕ್ಕಮಗಳೂರು: 'ಸರ್ಕಾರ ಬಹಳ ದಿನ ಉಳಿಯಲ್ಲ ಎಂದು ಭವಿಷ್ಯ ಹೇಳಲು ಸಿದ್ದರಾಮಯ್ಯ ಅವರೇನು ಕಾಲಜ್ಞಾನಿಯೇ? ಅವರು ಹೇಳಿದ್ದಕ್ಕೆ ತದ್ವಿರುದ್ಧವಾಗಿ ಎಲ್ಲ ನಡೆಯುತ್ತೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ವ್ಯಂಗ್ಯವಾಡಿದರು.

ಸಿ.ಟಿ.ರವಿ

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೋದಿ ಅವರು ಪ್ರಧಾನಿಯಾಗಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದರು, ಮೋದಿ ಎರಡು ಬಾರಿ ಪ್ರಧಾನಿಯಾಗಲಿಲ್ಲವೇ' ಎಂದು ಪ್ರಶ್ನಿಸಿದರು.

'ಬಾಯಿಯಲ್ಲಿ ಮಚ್ಚೆ ಇದ್ದವರು ಹೇಳಿದ್ದು ನಡೆಯುತ್ತೆ ಎಂದು ಹೇಳಲಾಗುತ್ತದೆ. ಸಿದ್ದರಾಮಯ್ಯ ಬಾಯಿಯಲ್ಲಿ ಇರುವುದು ಉಲ್ಟಾ ಮಚ್ಚೆ ಹಾಗಾಗಿ, ಹೀಗೆ ಆಗುತ್ತೆ' ಎಂದು ಲೇವಡಿ ಮಾಡಿದರು.

ಕೃಷ್ಣಮಠದ ರಾಜಾಂಗಣದಲ್ಲಿ ಭಾನುವಾರ ಉಡುಪಿಯ ತನುಶ್ರೀ ಪಿತ್ರೋಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧನೆ ಮಾಡಿದಳು.

ಯೋಗಾಸನ: ತನುಶ್ರೀ ವಿಶ್ವದಾಖಲೆ

ಉಡುಪಿ: 43 ನಿಮಿಷ 18 ಸೆಕೆಂಡ್‌ಗಳಲ್ಲಿ 245 ಯೋಗಾಸನ ಭಂಗಿಗಳನ್ನು ಪ್ರದರ್ಶಿಸುವ ಮೂಲಕ ಉಡುಪಿಯ 13 ವರ್ಷದ ಬಾಲಕಿ ತನುಶ್ರೀ ಪಿತ್ರೋಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಮಾಡಿದರು.

ಕೃಷ್ಣಮಠದ ರಾಜಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತನುಶ್ರೀ ಪಿತ್ರೋಡಿ ಈ ಸಾಧನೆ ಮಾಡಿದ್ದಾಳೆ. 'ಮೋಸ್ಟ್ ಯೋಗ ಪೋಸಸ್ ಪರ್ಫಾರ್ಮಡ್ ಇನ್ ಎ ರಿಲೇ' ವಿಭಾಗದಲ್ಲಿ ಒಂದು ಗಂಟೆಯೊಳಗೆ ಕನಿಷ್ಠ 200 ಆಸನಗಳನ್ನು ಪ್ರದರ್ಶಿಸಬೇಕು ಎಂಬ ಗುರಿಯನ್ನು ಸಂಸ್ಥೆ ನೀಡಿತ್ತು. ಕಠಿಣ ಸವಾಲು ಸ್ವೀಕರಿಸಿದ ತನುಶ್ರೀ ನಿಗದಿತ ಅವಧಿಗೂ ಮುನ್ನವೇ ಗುರಿಮುಟ್ಟಿ ದಾಖಲೆ ನಿರ್ಮಿಸಿದರು.

ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯ ಮುಖ್ಯಸ್ಥ ವೈಷ್ಣವ್ ಮನೀಷ್ ಮಾತನಾಡಿ, 'ಅತ್ಯಂತ ಕಠಿಣ ಯೋಗಾಸನದ ಭಂಗಿಗಳನ್ನು ಲೀಲಾಜಾಲವಾಗಿ ಪ್ರದರ್ಶನ ಮಾಡಿರುವ ತನುಶ್ರೀ ಪಿತ್ರೋಡಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆದಿದ್ದಾಳೆ. ಆಕೆಯ ಸಾಧನೆ 100 ವಿಶ್ವದಾಖಲೆಗಳಿಗೆ ಸಮ' ಎಂದು ಬಣ್ಣಿಸಿದರು.

ಕಡಿಮೆ ಅವಧಿಯಲ್ಲಿ ಹೆಚ್ಚು ಯೋಗಾಸನಗಳನ್ನು ಮಾಡಿ ತನುಶ್ರೀ ನಿರ್ಮಿಸಿರುವ ದಾಖಲೆಯನ್ನು ಸುಲಭವಾಗಿ ಮುರಿಯಲು ಸಾಧ್ಯವಿಲ್ಲ. ಸದ್ಯ ಸಂಸ್ಥೆಯ ಕಡೆಯಿಂದ ತಾತ್ಕಾಲಿಕ ಪ್ರಮಾಣಪತ್ರ ವಿತರಿಸಲಾಗುತ್ತಿದ್ದು, ಶೀಘ್ರವೇ ಮೂಲ ಪ್ರಮಾಣಪತ್ರ ನೀಡಲಾಗುವುದು ಎಂದರು.

ರಾಜ್ಯ ಕೋವಿಡ್ ಅಂಕಿ–ಅಂಶ

29,29,464 ▲	ಒಟ್ಟು ಸೋಂಕಿತರು (29,28,033 ನಿನ್ನೆಯ ವಿವರ)
22,497 ▼	ಸಕ್ರಿಯ ಪ್ರಕರಣಗಳು
28,69,962 ▲	ಗುಣಮುಖರಾದವರು
36,979 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,431	▼
ಗುಣಮುಖ	1,611	▼
ಸಾವು	21	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,32,902 ಒಟ್ಟು ಸೋಂಕಿತರು ▲

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,166 ▼	12,08,798 ▲	15,937 ▲

ಭಾನುವಾರದ ಏರಿಕೆ

ಹೊಸ ಪ್ರಕರಣ	305 ▼
ಗುಣಮುಖ	336 ▼
ಸಾವು	3 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.78 ಕೋಟಿ ▲	3.22 ಕೋಟಿ ▲
ಸಕ್ರಿಯ ಪ್ರಕರಣ	1.71 ಕೋಟಿ ▲	3.78 ಲಕ್ಷ ▼
ಗುಣಮುಖ	18.63 ಕೋಟಿ ▲	3.13 ಕೋಟಿ
ಸಾವು	43.72 ಲಕ್ಷ ▲	4.31 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.67 ಲಕ್ಷ ▼	14,568 ▼
ಗುಣಮುಖ	4.43 ಲಕ್ಷ ▼	15,351 ▼
ಸಾವು	8,716 ▼	317 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರೆಜಿಲ್	ಇರಾನ್
71,135 ▼	31,142	29,700

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಸ್ಪೇನ್	ಬ್ರಿಟನ್
66.53 ▲	7.22 ▲	13.13 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.35 ಲಕ್ಷ ▲
ತಮಿಳುನಾಡು	34,519 ▲
ದೆಹಲಿ	25,069

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	63.92 ▲
ಕೇರಳ	36.71
ತಮಿಳುನಾಡು	25.88 ▲

ಖಾಸಗಿ ಆಸ್ಪತ್ರೆಗಳಲ್ಲಿ ಜನನ ಪ್ರಮಾಣಪತ್ರ ಲಭ್ಯ

ಮೈಸೂರು: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಜನನಕ್ಕೆ ಸಂಬಂಧಿಸಿದ ಪ್ರಮಾಣಪತ್ರ ಇನ್ನು ಆಯಾ ಆಸ್ಪತ್ರೆಗಳಲ್ಲೇ ಲಭಿಸಲಿದೆ.

ಆ.15 ರಿಂದ ಜಾರಿಗೆ ಬಂದಿರುವ ಪಾಲಿಕೆಯ ಈ ವಿನೂತನ ಕಾರ್ಯಕ್ರಮಕ್ಕೆ ಸಚಿವ ಎಸ್.ಟಿ.ಸೋಮಶೇಖರ್ ಭಾನುವಾರ ಚಾಲನೆ ನೀಡಿದರು. ಇಲ್ಲಿನ ಕಾಮಾಕ್ಷಿ ಆಸ್ಪತ್ರೆ ಹಾಗೂ ಅಪೋಲೊ ಬಿಜಿಎಸ್ ಆಸ್ಪತ್ರೆಗಳಲ್ಲಿ ಮಕ್ಕಳ ಜನನ ಪ್ರಮಾಣ ಪತ್ರವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು.

ತಾಯಿ–ಮಗು ಆಸ್ಪತ್ರೆಯಿಂದ ಮನೆಗೆ ಮರಳುವಾಗ ನೀಡುವ ಬಿಡುಗಡೆ ವರದಿಯ ಜತೆಗೆ ಎಲ್ಲಾ ಆಸ್ಪತ್ರೆಗಳು ಜನನ ಪ್ರಮಾಣಪತ್ರವನ್ನೂ ಉಚಿತವಾಗಿ ನೀಡಬೇಕು. ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಾಗುವ ಸಂದರ್ಭದಲ್ಲಿ ಕುಟುಂಬದ ಪಡಿತರ ಚೀಟಿ ಮತ್ತು ಪೋಷಕರ ಆಧಾರ್ ಸಂಖ್ಯೆಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಚಿತ್ರಾವಳಿ

ಸಂಗೊಳ್ಳಿ ರಾಯಣ್ಣ ಜಯಂತ್ಯುತ್ಸವದ ಅಂಗವಾಗಿ ಬಿಬಿಎಂಪಿ ವತಿಯಿಂದ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣದ ಬಳಿ ಭಾನುವಾರ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಜಾನಪದ ಕಲಾ ತಂಡದವರ ಪ್ರದರ್ಶನ ಗಮನ ಸೆಳೆಯಿತು

ಕಲಾವಿದರೊಬ್ಬರು ಸಂಗೊಳ್ಳಿ ರಾಯಣ್ಣನ ಪ್ರತಿಮೆಗಳಿಗೆ ಅಂತಿಮ ಸ್ಪರ್ಶ ನೀಡುತ್ತಿದ್ದ ದೃಶ್ಯ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಭಾನುವಾರ ಕಂಡುಬಂದಿತು
– ಪ್ರಜಾವಾಣಿ ಚಿತ್ರಗಳು



ಸ್ವಾತಂತ್ರ್ಯೋತ್ಸವದ ಅಂಗವಾಗಿ ಕಲಾವಿದ ಪರಮೇಶ್ ಜೋಳದ ಅವರು ವಿಧಾನಸೌಧದ ಎದುರು ಭಾನುವಾರು 'ಅಜ್ಞಾತ ವೀರರು' ಶೀರ್ಷಿಕೆಯಡಿ ಏಕವ್ಯಕ್ತಿ ಪ್ರದರ್ಶನ ನೀಡಿ, ಸ್ವಾತಂತ್ರ್ಯ ಪಡೆಯಲು ಹೋರಾಡಿದ ನಾಯಕರ ಸಾಧನೆಯನ್ನು ಪರಿಚಯಿಸಿದರು. ಸಾರ್ವಜನಿಕರಿಗೆ ಗುಲಾಬಿ ಹೂವು ನೀಡಿದರು, ಚಾಲಕರೊಬ್ಬರು ತಮ್ಮ ಆಟೊಗೆ ಕಟ್ಟಿಕೊಂಡಿದ್ದ ರಾಷ್ಟ್ರಧ್ವಜ ಎಲ್ಲರ ಗಮನ ಸೆಳೆಯಿತು (ಮಧ್ಯದ ಚಿತ್ರ), 'ಷೀ ಫಾರ್ ಸೊಸೈಟಿ' ಸಂಘಟನೆಯ ಸದಸ್ಯರು ಕಚ್ಚೆ ಸೀರೆ ತೊಟ್ಟು ಬೈಕ್ ಓಡಿಸುವ ಮೂಲಕ ಗಮನ ಸೆಳೆದರು

ಸುದ್ದಿ 2 ನಿಮಿಷ

ಸ್ವಾತಂತ್ರ್ಯ ದಿನಾಚರಣೆ: ವಿಶಿಷ್ಟ ಸ್ಪರ್ಧೆ

ಕೆ.ಆರ್.ಪುರ: ಸ್ವಾತಂತ್ರ್ಯ ದಿನದ ಅಂಗವಾಗಿ ಕಯಾಕಿಂಗ್ ಮತ್ತು ಕ್ಯಾನೋಯಿಂಗ್ ಅಸೋಸಿಯೇಷನ್ ವತಿಯಿಂದ ಮೇಡಹಳ್ಳಿಯ ಎಲೆಮಲ್ಲಪ್ಪ ಶೆಟ್ಟಿ ಕೆರೆಯಲ್ಲಿ ದೋಣಿ ಓಡಿಸುವ ಸ್ಪರ್ಧೆಯನ್ನು ಭಾನುವಾರ ಆಯೋಜಿಸಲಾಗಿತ್ತು.

ಸ್ಪರ್ಧೆಗೆ ಬಿಜೆಪಿ ಮುಖಂಡ ಬಿ.ಎನ್.ಜಯಪ್ರಕಾಶ್ ಚಾಲನೆ ನೀಡಿದರು.

ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಿಂದ ಕ್ಯಾನೋಯಿಂಗ್, ಕಯಾಕಿಂಗ್, ರೋಯಿಂಗ್ ಪಟುಗಳು ಪಾಲ್ಗೊಂಡಿದ್ದರು. ಸ್ಪರ್ಧೆಯ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು.

ಕ್ಯಾಪ್ಟನ್ ದಿಲೀಪ್ ಕುಮಾರ್, ದೇವಯ್ಯ, ಅನಂತರಾಜು, ರಾಮರತ್ನಮ್ಮ, ಪ್ರಶಾಂತ್ ಕೋರೆ, ಅಯ್ಯಪ್ಪ ಹಾಗೂ ಇತರರು ಇದ್ದರು.

ಚನ್ನಪಟ್ಟಣ: ಎರಡು ಕಡೆ ಅರ್ಧಕ್ಕೆ ಹಾರಾಡಿದ ರಾಷ್ಟ್ರಧ್ವಜ

ಚನ್ನಪಟ್ಟಣ: ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ನಡೆದ ಧ್ವಜಾರೋಹಣ ಸಂದರ್ಭದಲ್ಲಿ ಭಾನುವಾರ ಪಟ್ಟಣದ ಎರಡು ಕಡೆ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಿದ ಪ್ರಸಂಗ ಜರುಗಿದೆ.

ಪಟ್ಟಣದ ತಾಲ್ಲೂಕು ಕಚೇರಿ ಕಟ್ಟಡ ಹಾಗೂ ತಾಲ್ಲೂಕು ಪಂಚಾಯಿತಿ ಕಟ್ಟಡಗಳ ಮೇಲೆ ಬೆಳಿಗ್ಗೆ ಹಾರಿಸಿದ ರಾಷ್ಟ್ರಧ್ವಜ ಸ್ವಲ್ಪ ಸಮಯದಲ್ಲೇ ಕಂಬದಿಂದ ಅರ್ಧಕ್ಕೆ ಜಾರಿದ್ದು, ಮಧ್ಯಾಹ್ನದವರೆಗೂ ಹಾಗೆಯೆ ಅರ್ಧದಲ್ಲೆ ಹಾರಾಡಿವೆ.

ಒಂದು ಗಂಟೆಗೂ ಹೆಚ್ಚು ಸಮಯ ಸರಿಯಾಗಿ ಹಾರಾಡಿದ ರಾಷ್ಟ್ರಧ್ವಜ ನಂತರ ಅರ್ಧಕ್ಕೆ ಜಾರಿದೆ. ಇದು ಯಾರ ಗಮನಕ್ಕೂ ಬಂದಿರಲಿಲ್ಲ. ಸಾರ್ವಜನಿಕರೊಬ್ಬರು ಇದನ್ನು ಗಮನಿಸಿ, ತಾಲ್ಲೂಕು ಕಚೇರಿ ಸಿಬ್ಬಂದಿಯೊಬ್ಬರಿಗೆ ದೂರವಾಣಿ ಕರೆ ಮಾಡಿ ಅವರ ಗಮನಕ್ಕೆ ತಂದಿದ್ದಾರೆ. ಅನಂತರ ಸ್ಥಳಕ್ಕೆ ಬಂದ ಕಚೇರಿ ಸಿಬ್ಬಂದಿಗಳು ಧ್ವಜವನ್ನು ಸರಿಯಾದ ಕ್ರಮದಲ್ಲಿ ಹಾರುವಂತೆ ಕಟ್ಟಿದ್ದಾರೆ.

'ಇಂದು ಗಾಳಿ ಬಿರುಸಿನಿಂದ ಬೀಸುತ್ತಿದ್ದ ಕಾರಣ ಎರಡೂ ಕಟ್ಟಡಗಳಲ್ಲಿಯೂ ಇಂತಹ ಒಂದು ಪ್ರಮಾದ ನಡೆದುಹೋಗಿದೆ. ಇದು ಆಕಸ್ಮಿಕವಾಗಿ ನಡೆದ ಘಟನೆ. ಇದರ ಹಿಂದೆ ಯಾವುದೇ ಉದ್ದೇಶ ಇಲ್ಲ. ಇದಕ್ಕಾಗಿ ಕ್ಷಮೆ ಯಾಚಿಸುತ್ತೇವೆ' ಎಂದು ತಹಶೀಲ್ದಾರ್ ನಾಗೇಶ್ ತಿಳಿಸಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ • ಮುಗಿಲೆತ್ತರಕ್ಕೆ ಹಾರಿದ ರಾಷ್ಟ್ರಧ್ವಜಗಳು • ಕೊರೊನಾ ಸೇನಾನಿಗಳಿಗೆ ಸನ್ಮಾನ

ನಗರದಲ್ಲಿ ಸರಳ–ಸಡಗರದ ಸ್ವಾತಂತ್ರ್ಯೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 75ನೇ ಸ್ವಾತಂತ್ರ್ಯದಿನವನ್ನು 'ಸ್ವಾತಂತ್ರ್ಯದ ಅಮೃತ ಮಹೋತ್ಸವ'ದ ಹೆಸರಿನಲ್ಲಿ ನಗರದಲ್ಲಿ ಭಾನುವಾರ ಸರಳವಾಗಿ ಆಚರಿಸಲಾಯಿತು. ಅದ್ಧೂರಿ ಕಾರ್ಯಕ್ರಮಗಳಿಗೆ ಕೋವಿಡ್ ಕಾರಣಕ್ಕಾಗಿ ಕಡಿವಾಣ ಹಾಕಲಾಗಿತ್ತು. ಆದರೆ ಮುಗಿಲೆತ್ತರಕ್ಕೆ ಹಾರಿದ ರಾಷ್ಟ್ರಧ್ವಜಗಳು ಜನರ ದೇಶಪ್ರೇಮದ ಉತ್ಕಟತೆಯನ್ನು ಪರಿಪರಿಯಾಗಿ ಸಾರಿದವು.

ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಲ್ಲದೆಯೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಶಿಕ್ಷಕರು–ಸಿಬ್ಬಂದಿ ವರ್ಗದವರು ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಧ್ವಜಾರೋಹಣ ಮಾಡಿ, ರಾಷ್ಟ್ರಗೀತೆ ಹಾಡುವ ಮೂಲಕ ಸರಳವಾಗಿ ಕಾರ್ಯಕ್ರಮ ಆಚರಿಸಿದರು.

ಹಲವರು ಆಟೊ-ಬೈಕ್‌ಗಳಲ್ಲಿ ತ್ರಿವರ್ಣ ಧ್ವಜಗಳನ್ನು ಕಟ್ಟಿಕೊಂಡು ಸಂಚರಿಸುತ್ತಿದ್ದುದು ಗಮನ ಸೆಳೆಯಿತು. ಜೀಪುಗಳು, ಕಾರುಗಳ ಮೇಲೂ ರಾಷ್ಟ್ರ ಧ್ವಜಗಳು ಹಾರಾಡಿದವು. ಕೆಲವರಂತೂ ಸೈಕಲ್ ಅನ್ನೇ ತ್ರಿವರ್ಣ ಧ್ವಜದ ಮಾದರಿಯಲ್ಲಿ ಅಲಂಕರಿಸಿ ಅದಕ್ಕೊಂದು ಧ್ವಜ ಸಿಕ್ಕಿಸಿಕೊಂಡು ನಗರದ ರಸ್ತೆಗಳಲ್ಲಿ ಸಂಚರಿಸುವ ಮೂಲಕ ವಿಭಿನ್ನವಾಗಿ ಸ್ವಾತಂತ್ರ್ಯೋತ್ಸವ ಆಚರಿಸಿದರು.

ಬಿಬಿಎಂಪಿಯಿಂದ ಆಚರಣೆ: ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿದರು.

ಕೋವಿಡ್ ಸಂಕಷ್ಟ ಕಾಲದಲ್ಲಿ ವಿವಿಧ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಿದ ವೈದ್ಯರು ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳನ್ನು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸನ್ಮಾನಿಸಲಾಯಿತು. ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, ಮನೋಜ್ ಜೈನ್, ಬಸವರಾಜ್, ಡಿ.ರಂದೀಪ್, ದಯಾನಂದ್, ರೆಡ್ಡಿ ಶಂಕರ ಬಾಬು, ರವೀಂದ್ರ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಬಿಎಂಪಿ ವತಿಯಿಂದ ಆಚರಿಸಲಾದ ಸ್ವಾತಂತ್ರ್ಯೋತ್ಸವದಲ್ಲಿ ಗೌರವ್ ಗುಪ್ತ ಹಾಗೂ ರಾಕೇಶ್ ಸಿಂಗ್ ಅವರು ಮಹಾತ್ಮಾ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ವಿಶ್ವವಿದ್ಯಾಲಯಗಳಲ್ಲಿ ಸಂಭ್ರಮ: ನಗರದ ವಿಶ್ವವಿದ್ಯಾಲಯಗಳಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಮಹಾತ್ಮ ಗಾಂಧಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ, 'ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಾವಿದ್ದೇವೆ. ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಮಹನೀಯರನ್ನು ಆದರ್ಶವಾಗಿಟ್ಟುಕೊಂಡು ಯುವ ಪೀಳಿಗೆಯು ಉನ್ನತ ಸಾಧನೆ ಮಾಡಬೇಕು' ಎಂದರು.

ಅಮೃತ ಮಹೋತ್ಸವದ ಅಂಗವಾಗಿ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಕೋಶ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಿಸಲಾಯಿತು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಸ್ವಾತಂತ್ರ್ಯೋತ್ಸವ ಕುರಿತು ವಿಶೇಷ ಉಪನ್ಯಾಸವನ್ನು ಆನ್‌ಲೈನ್‌ನಲ್ಲಿ ಆಯೋಜಿಸಿತ್ತು. 200 ಕಾಲೇಜಿನಿಂದ ಸುಮಾರು 800ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪ್ರಾಚಾರ್ಯರು ಭಾಗವಹಿಸಿದರು.

ಸೇನೆಯ ನಿವೃತ್ತ ಅಧಿಕಾರಿ ಮೇಜರ್ ಜನರಲ್ ಅರ್ಜುನ್ ಮುತ್ತಣ್ಣ, ವಿಶ್ವವಿದ್ಯಾಲಯದ ಕುಲಪತಿ ಡಾ. ಕುಮುದಾ, ಕುಲಸಚಿವರಾದ ಡಾ. ವೆಂಕಟೇಶ ಮೂರ್ತಿ, ಡಾ. ಜನಾರ್ದನಂ, ವಿತ್ತಾಧಿಕಾರಿ ವಸಂತ್ ಕುಮಾರ್ ಹಾಗೂ ಸಾಂಸ್ಕೃತಿಕ ಸಂಯೋಜಕರಾದ ಡಾ. ಪವಿತ್ರ ಉಪಸ್ಥಿತರಿದ್ದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿಯೂ ಸ್ವಾತಂತ್ರ್ಯೋತ್ಸವ ಅಂಗವಾಗಿ ವಿವಿಧ ಕಾರ್ಯಕ್ರಮಗಳು ನಡೆದವು.

ರಕ್ತದಾನ ಶಿಬಿರ: ಬೆಂಗಳೂರು ಸಗಟು ಬಟ್ಟೆ ವ್ಯಾಪಾರಿಗಳ ಸಂಘದಿಂದ ಅರ್ಥಪೂರ್ಣವಾಗಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಸಂಘ ಮತ್ತು ಸುಮನ್ ಚಾರಿಟಬಲ್ ಟ್ರಸ್ಟ್‌ಗಳ ವತಿಯಿಂದ ರಕ್ತದಾನ ಶಿಬಿರ ಆಯೋಜಿಸಿ, ಸುಮಾರು 55 ಯುನಿಟ್ ರಕ್ತ ಸಂಗ್ರಹಿಸಲಾಯಿತು. ರೋಟರಿ, ರೆಡ್‌ಕ್ರಾಸ್ ಹಾಗೂ ಜಯನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದೊಂದಿಗೆ ಈ ಶಿಬಿರ ನಡೆಯಿತು. ಸೈಕಲ್ ಜಾಥಾವನ್ನೂ ಏರ್ಪಡಿಸಲಾಯಿತು. ಸಂಘದ ಅಧ್ಯಕ್ಷ ಪ್ರಕಾಶ್ , ಕಾರ್ಯದರ್ಶಿ ಯೋಗೀಶ್ ಸೇಠ್ ಹಾಗೂ ಇತರರು ಭಾಗವಹಿಸಿದರು.

ಕಚ್ಚೆ ಸೀರೆಯಲ್ಲಿ ಮಿಂಚಿದ ಮಹಿಳಾ ಬೈಕರ್‌ಗಳು

ಸ್ವಾತಂತ್ರ್ಯೋತ್ಸವ ಅಂಗವಾಗಿ 'ಷೀ ಫಾರ್ ಸೊಸೈಟಿ' ಸಂಘಟನೆಯು ಹೆಬ್ಬಾಳದಲ್ಲಿ 75 ಮಹಿಳಾ ಬೈಕರ್‌ಗಳಿಗೆ ಫ್ಯಾಷನ್ ಷೋ ಏರ್ಪಡಿಸಿತ್ತು. ಸಾಂಪ್ರದಾಯಿಕ ಕಚ್ಚೆ ಸೀರೆ ಧರಿಸಿ, 100 ಅಡಿ ವೇದಿಕೆಯ ಮೇಲೆ ಬೈಕ್ ಓಡಿಸಿದ ಮಹಿಳೆಯರು ಗಮನ ಸೆಳೆದರು.

ಕೋಲಾರ ಜಿಲ್ಲೆಯ ಮಾಜಿ ಸೈನಿಕರ 75 ಕುಟುಂಬಗಳ ಹೆಣ್ಣು ಮಕ್ಕಳು 300 ಅಡಿ ಉದ್ದದ ತ್ರಿವರ್ಣ ಧ್ವಜ ಹಿಡಿದು ವೇದಿಕೆಯ ಮೇಲೆ ಪಥ ಸಂಚಲನ ಮಾಡಿದರು. ಈ ಕುಟುಂಬಗಳಿಗೆ ಸಂಘಟನೆಯ ವತಿಯಿಂದ ಸೌರದೀಪಗಳನ್ನು ವಿತರಿಸಿ ಸನ್ಮಾನಿಸಲಾಯಿತು.

ಮೈಸೂರು ಸಾಬೂನು ಕಾರ್ಖಾನೆ ಬಳಿ ಬೈಕ್ ರ‍್ಯಾಲಿಗೆ ಕೆಎಸ್‌ಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಹಸಿರು ನಿಶಾನೆ ತೋರಿದರು. ಅಲ್ಲಿಂದ ನಾನಾ ಭಾಗಗಳಲ್ಲಿ ಸಂಚರಿಸಿದ ರ‍್ಯಾಲಿಯು ಹೆಬ್ಬಾಳ ಬಳಿ ಕೊನೆಗೊಂಡಿತು. ಸಂಘಟನೆಯ ಅಧ್ಯಕ್ಷರಾದ ಹರ್ಷಿಣಿ ವೆಂಕಟೇಶ್ ಉಪಸ್ಥಿತರಿದ್ದರು.

'ರಾಯಣ್ಣ ಸ್ವಾತಂತ್ರ್ಯ ಸಂಗ್ರಾಮದ ಬೆಂಕಿ ಚೆಂಡು'

ಸ್ವಾತಂತ್ರ್ಯೋತ್ಸವದ ದಿನದಂದೇ ಜನಿಸಿದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಜನ್ಮದಿನವನ್ನೂ ನಗರದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ನಗರದಲ್ಲಿರುವ ರಾಯಣ್ಣನ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಾಯಿತು.

ಮಲ್ಲೇಶ್ವರದ ಸುಬ್ರಹ್ಮಣ್ಯನಗರದಲ್ಲಿನ ಸಂಗೊಳ್ಳಿ ರಾಯಣ್ಣ ಪಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ರಾಯಣ್ಣ ಸ್ವಾತಂತ್ರ್ಯ ಸಂಗ್ರಾಮದ ಬೆಂಕಿ ಚೆಂಡು. ಕೇವಲ 34 ವರ್ಷಗಳಷ್ಟೇ ಬದುಕಿದ ಈ ಮಹಾನ್ ಚೇತನ ನಮಗೆಲ್ಲರಿಗೂ ದಿವ್ಯಸ್ಫೂರ್ತಿ. ಬ್ರಿಟಿಷರಿಗೆ ಅವರು ಸಿಂಹಸ್ವಪ್ನರಾಗಿದ್ದರು' ಎಂದರು.

ಸಾಮಾಜಿಕ ಮಾಧ್ಯಮಗಳಲ್ಲಿ ಸ್ವಾತಂತ್ರ್ಯದ ಸಡಗರ

ಸ್ವಾತಂತ್ರ್ಯೋತ್ಸವದ ಶುಭಾಶಯ ವಿನಿಮಯ, ಅಭಿಪ್ರಾಯ ಹಂಚಿಕೆಗೆ ಸಾಮಾಜಿಕ ಜಾಲತಾಣ ವೇದಿಕೆಯಾಯಿತು. ಹಲವು ಚಿತ್ರಗಳು, ಸಂದೇಶಗಳು, ಸ್ವಾತಂತ್ರ್ಯ ಹೋರಾಟಗಾರರ ಸಾಧನೆ ಬಿಂಬಿಸುವ ಪೋಸ್ಟ್‌ಗಳನ್ನು ನೆಟ್ಟಿಗರು ಹಂಚಿಕೊಂಡರು.

ಶಾಲಾ-ಕಾಲೇಜುಗಳು ಇನ್ನೂ ತೆರೆಯದ ಕಾರಣ, ಶಾಲಾ ಆವರಣದಲ್ಲಿ ಮಕ್ಕಳ ಚಿಲಿಪಿಲಿ ಇರಲಿಲ್ಲ. ಪುಟಾಣಿಗಳು ಮನೆಯಲ್ಲಿಯೇ ಹಾಡು, ನೃತ್ಯ, ಭಾಷಣದಂತಹ ಚಟುವಟಿಕೆಯಲ್ಲಿ ಪಾಲ್ಗೊಂಡು ಅದನ್ನು ಆನ್‌ಲೈನ್ ವೇದಿಕೆಗಳಲ್ಲಿ ಹಂಚಿಕೊಳ್ಳುವ ಮೂಲಕ ಸಂಭ್ರಮಿಸಿದರು. ಮಹಾತ್ಮಾ ಗಾಂಧೀಜಿ, ಜವಾಹರಲಾಲ್ ನೆಹರು, ಸುಭಾಷ್‌ಚಂದ್ರ ಬೋಸ್‌ರಂತಹ ರಾಷ್ಟ್ರನಾಯಕರ ಸಂದೇಶಗಳನ್ನು ವಿದ್ಯಾರ್ಥಿಗಳು ಸಾರಿದರು.

ಸಂಗೊಳ್ಳಿ ರಾಯಣ್ಣನ ಭಾವಚಿತ್ರಕ್ಕೆ ಡಾ.ಸಿ.ಎನ್.ಅಶ್ವತ್ಥನಾರಾಯಣ ಪುಷ್ಪನಮನ ಸಲ್ಲಿಸಿದರು

ರಥ ಸಂಚಾರಕ್ಕೆ ಎಸ್‌ಡಿಪಿಐ ತಡೆ: ಆಕ್ಷೇಪ

ಪುತ್ತೂರು: ಕಬಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಭಾನುವಾರ 'ಸ್ವಾತಂತ್ರ್ಯ ಸ್ವರಾಜ್' ರಥಯಾತ್ರೆ ಆರಂಭಿಸುವ ವೇಳೆ ಎಸ್‌ಡಿಪಿಐ ಕಾರ್ಯಕರ್ತರು ತಡೆಯೊಡ್ಡಿ, ಪಂಚಾಯಿತಿ ವಿರುದ್ಧ ಧಿಕ್ಕಾರ ಕೂಗಿದರು. ಈ ಘಟನೆಯಿಂದ ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಪೊಲೀಸರು ಎಸ್‌ಡಿಪಿಐ ಕಾರ್ಯಕರ್ತರನ್ನು ಚದುರಿಸುವ ಮೂಲಕ ವಾತಾವರಣ ತಿಳಿಗೊಳಿಸಿದರು.

ಗ್ರಾಮ ಪಂಚಾಯಿತಿ ವತಿಯಿಂದ ಗ್ರಾಮದಲ್ಲಿ ಸಂಚರಿಸಲು ಸಿದ್ಧಪಡಿಸಿದ್ದ ಸ್ವಾತಂತ್ರ್ಯ ರಥಕ್ಕೆ ಅಧ್ಯಕ್ಷ ವಿನಯಕುಮಾರ್ ಕಲ್ಲೇಗ ಚಾಲನೆ ನೀಡಿ, ಜೈಕಾರ ಹಾಕಿದರು. ಅಲ್ಲಿದ್ದ ಎಸ್‌ಡಿಪಿಐ ಕಾರ್ಯಕರ್ತರು ಸ್ವಾತಂತ್ರ್ಯ ರಥದಲ್ಲಿ ವೀರ ಸಾವರ್ಕರ್ ಭಾವಚಿತ್ರ ಇಟ್ಟಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ಪಂಚಾಯಿತಿ ವಿರುದ್ಧ ಧಿಕ್ಕಾರ ಕೂಗಿದರು. ಟಿಪ್ಪು ಭಾವಚಿತ್ರ ಇಡುವಂತೆ ಒತ್ತಾಯಿಸಿದರು. ಈ ವೇಳೆ ಅಲ್ಲಿದ್ದವರ ನಡುವೆ ಪರಸ್ಪರ ವಾಗ್ವಾದ-ತಳ್ಳಾಟ ನಡೆಯಿತು. ಬಳಿಕ ಪೊಲೀಸ್ ಬಂದೋಬಸ್ತಿನಲ್ಲಿ ರಥಯಾತ್ರೆ ನಡೆಯಿತು.

ಘಟನೆಗೆ ಸಂಬಂಧಿಸಿ ಕಬಕ ಗ್ರಾಮ ಪಂಚಾಯಿತಿ ವತಿಯಿಂದ ನೀಡಿದ ದೂರನ್ನು ಆಧರಿಸಿ ಪುತ್ತೂರು ನಗರ ಠಾಣೆ ಪೊಲೀಸರು ಮೂವರನ್ನು ವಶಕ್ಕೆ ಪಡೆದಿದ್ದಾರೆ.

ಸನ್ಮಾನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಅಂಕ ಪಡೆದಿರುವ ಚಿಕ್ಕಲ್ಲಸಂದ್ರ ವಾರ್ಡ್‌ನ ಚೌಡೇಶ್ವರಿ ವಿದ್ಯಾಸಂಸ್ಥೆಯ ವಿದ್ಯಾರ್ಥಿ ಸುಜಯ್ ಅವರನ್ನು ಭಾನುವಾರ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಬಿ.ಎಸ್.ವೆಂಕಟಸ್ವಾಮಿ ನಾಯ್ಡು ಅವರು ಸನ್ಮಾನಿಸಿದರು. ಶಾಲಾ ಸಿಬ್ಬಂದಿ ಹಾಗೂ ಸ್ಥಳೀಯರು ಮುಖಂಡರು ಇದ್ದಾರೆ.

75 ಕೆರೆಗಳ ಸಮಗ್ರ ಅಭಿವೃದ್ಧಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾನ

ರಾಜಧಾನಿಗೆ 'ಅಮೃತ ಮಹೋತ್ಸವ ನಗರೋತ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಮೂಲಸೌಕರ್ಯ ಅಭಿವೃದ್ಧಿಗಾಗಿ 'ಅಮೃತ ಮಹೋತ್ಸವ ನಗರೋತ್ಥಾನ' ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಭಾನುವಾರ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿಯವರ ನಗರೋತ್ಥಾನ ಯೋಜನೆಯ ಅಡಿಯಲ್ಲಿ ₹ 8,343.87 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಡಿ ನಗರದ ರಸ್ತೆ, ಮಳೆ ನೀರು ಚರಂಡಿ ಮತ್ತಿತರ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುತ್ತಿದೆ. 'ಅಮೃತ ಮಹೋತ್ಸವ ನಗರೋತ್ಥಾನ' ಯೋಜನೆಯಡಿ ಮೂರನೇ ಹಂತದ ಕಾಮಗಾರಿ ಕೈಗೊಳ್ಳಲಾಗುವುದು' ಎಂದು ಪ್ರಕಟಿಸಿದರು.

'ನಗರದಲ್ಲಿ ಉತ್ಪತ್ತಿಯಾಗುವ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕ ಬಿಡದಿಯಲ್ಲಿ ನಿರ್ಮಾಣವಾಗುತ್ತಿದೆ. ಇದರಿಂದ ಕಸ ವಿಲೇವಾರಿ ಸಮಸ್ಯೆಗೆ ಪರಿಹಾರ ದೊರಕುವ ವಿಶ್ವಾಸವಿದೆ. ನಮ್ಮ ಮೆಟ್ರೊ ಯೋಜನೆ ಹಾಗೂ ಉಪನಗರ ರೈಲು ಯೋಜನೆಗಳ ಅನುಷ್ಠಾನವನ್ನು ಚುರುಕುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ತಿಳಿಸಿದರು.

ಮತ್ತೆರಡು ಯೋಜನೆ: ಸ್ವಾತಂತ್ರ್ಯದ ಅಮೃತ ಮಹೋತ್ಸವದ ನೆನಪಿಗಾಗಿ ಬೆಂಗಳೂರು ನಗರದ 75 ಕೊಳೆಗೇರಿಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುವುದು. ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಅನುದಾನವನ್ನು ಒದಗಿಸಲಾಗುವುದು ಎಂದು ಬೊಮ್ಮಾಯಿ ಪ್ರಕಟಿಸಿದರು.

ನಗರದ ವ್ಯಾಪ್ತಿಯಲ್ಲಿ ಹಲವು ಕೆರೆಗಳಿವೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ 75 ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆ ಜಾರಿಗೊಳಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ಧ್ವಜಾರೋಹಣದ ಬಳಿಕ ತೆರೆದ ಜೀಪಿನಲ್ಲಿ ಸಾಗಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿವಿಧ ತುಕಡಿಗಳಿಂದ ಗೌರವ ವಂದನೆ ಸ್ವೀಕರಿಸಿದರು
– ಪ್ರಜಾವಾಣಿ ಚಿತ್ರ

ಭಾಷಣಕ್ಕೆ ಸೀಮಿತವಾದ ಕಾರ್ಯಕ್ರಮ

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಧ್ವಜಾರೋಹಣ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಭಾಷಣಕ್ಕಷ್ಟೆ ಸೀಮಿತವಾಗಿತ್ತು. ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲದ ಕಾರಣ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ ಕಳೆಗುಂದಿತ್ತು.

ಹಿಂದೆ ಬಹುತೇಕ ವರ್ಷಗಳಲ್ಲಿ ಇಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳಲ್ಲಿ ಪೊಲೀಸ್, ಸಶಸ್ತ್ರ ಪಡೆಗಳು, ಎನ್‌ಸಿಸಿ ಸೇರಿದಂತೆ ವಿವಿಧ ಘಟಕಗಳ ಪಥಸಂಚಲನ ಸಮಾರಂಭದ ಮೆರುಗನ್ನು ಹೆಚ್ಚಿಸುತ್ತಿತ್ತು. ಆಕರ್ಷಕವಾದ ಸಾಂಸ್ಕೃತಿಕ ಕಾರ್ಯಕ್ರಮಗಳೂ ಇರುತ್ತಿದ್ದವು. ಅವುಗಳನ್ನು ನೋಡಲೆಂದೇ ವಿವಿಧ ಕಡೆಗಳಿಂದ ಜನರು ಬರುತ್ತಿದ್ದರು. ಆದರೆ, ಕೋವಿಡ್ ಕಾರಣದಿಂದ ಈ ಬಾರಿ ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ ಕೈಬಿಡಲಾಗಿತ್ತು.

ಧ್ವಜಾರೋಹಣ ನೆರವೇರಿಸಿದ ಬಳಿಕ ತೆರೆದ ಜೀಪಿನಲ್ಲಿ ಸಾಗಿದ ಮುಖ್ಯಮಂತ್ರಿಯವರು ಗೌರವ ವಂದನೆ ಸ್ವೀಕರಿಸಿ, ಮರಳಿದರು. ಮುಖ್ಯಮಂತ್ರಿಯವರ ಭಾಷಣದ ಬಳಿಕ ಪಥ ಸಂಚಲನ ಇಲ್ಲದೆಯೇ ಕವಾಯತು ವಿಸರ್ಜಿಸಲಾಯಿತು.

ಈ ಬಾರಿ ಕಾರ್ಯಕ್ರಮಕ್ಕೆ ಸಾರ್ವಜನಿಕರ ಪ್ರವೇಶವನ್ನೂ ನಿರ್ಬಂಧಿಸಲಾಗಿತ್ತು. ಆದ್ದರಿಂದ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಕಡಿಮೆ ಸಂಖ್ಯೆಯ ಜನರಿದ್ದರು.

ಕಸಾಪ ಅಧ್ಯಕ್ಷ ಮನು ಬಳಿಗಾರ್ ಅಭಿಮತ

'ದೇಶ ಪ್ರಗತಿಯತ್ತ ಹೆಜ್ಜೆ ಹಾಕುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶವು ಪ್ರಗತಿಯತ್ತ ಹೆಜ್ಜೆ ಹಾಕುತ್ತಿದೆ. ಶ್ರದ್ಧಾವಂತ ದುಡಿಮೆಯ ಮೂಲಕ ನಾವು ದೇಶವನ್ನು ಜಾಗತಿಕವಾಗಿ ಮತ್ತಷ್ಟು ಮುಂದಕ್ಕೆ ಕೊಂಡೊಯ್ಯಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮನು ಬಳಿಗಾರ್ ತಿಳಿಸಿದರು.

ಪರಿಷತ್ತಿನ ವತಿಯಿಂದ ಭಾನುವಾರ ಆಯೋಜಿಸಿದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿದ ಅವರು, ವಿ. ಗೌರಮ್ಮ ಗಂಗಾಧರಯ್ಯ ಸ್ಮರಣಾರ್ಥ ಪರಿಷತ್ತಿನ ಸಿಬ್ಬಂದಿಗೆ ನೀಡುವ 'ಸಿಬ್ಬಂದಿ ಸೇವಾ ಸಾಧನೆ ದತ್ತಿ ಪ್ರಶಸ್ತಿ'ಯನ್ನು ಎನ್. ಶಿವಣ್ಣ ಹಾಗೂ ಪಾರ್ಶ್ವನಾಥ ಅವರಿಗೆ ಹಾಗೂ 'ಎಸ್. ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ'ಯನ್ನು ವಿ. ಚಿನ್ನಪ್ಪರಾಜು ಅವರಿಗೆ ಪ್ರದಾನ ಮಾಡಿದರು.

'ಸ್ವಾತಂತ್ರ್ಯ ದೊರೆತ ಮೂರು ವರ್ಷಗಳ ಬಳಿಕ ನಮ್ಮ ಸಂವಿಧಾನ ರಚನೆಗೊಂಡಿದೆ. ಸಂವಿಧಾನ ನೀಡಿರುವ ಅತ್ಯಮೂಲ್ಯ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ' ಎಂದರು.

ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್, 'ನಮ್ಮ ರಾಷ್ಟ್ರ ಹಿಂದೆಂದಿಗಿಂತಲೂ ಈಗ ಬಲಿಷ್ಠ ಹಾಗೂ ಸದೃಢವಾಗಿದೆ. ನಾವು ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುವತ್ತ ದೃಷ್ಟಿನೆಟ್ಟಿದ್ದೇವೆ. ಭಾರತಕ್ಕೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸ್ಥಾನ ಸಿಗಬೇಕು. ಲಕ್ಷಾಂತರ ಮಂದಿ ತೆರೆಮರೆಯಲ್ಲಿದ್ದುಕೊಂಡು ತ್ಯಾಗ ಮತ್ತು ಬಲಿದಾನ ಮಾಡಿದ್ದಾರೆ' ಎಂದರು.

ಕಾರ್ಯಕ್ರಮದಲ್ಲಿ ಶಿವಣ್ಣ ಹಾಗೂ ಪಾರ್ಶ್ವನಾಥ ಅವರಿಗೆ 'ಸಿಬ್ಬಂದಿ ಸೇವಾ ಸಾಧನೆ ದತ್ತಿ ಪ್ರಶಸ್ತಿ' ಮತ್ತು ವಿ. ಚಿನ್ನಪ್ಪರಾಜು ಅವರಿಗೆ 'ಎಸ್. ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮರಾಜ ದಂಡಾವತಿ, ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ, ಮನು ಬಳಿಗಾರ್ ಹಾಗೂ ಕೆ. ರಾಜಕುಮಾರ್ ಇದ್ದರು.

ಸ್ವಾತಂತ್ರ್ಯ ಸಂರಕ್ಷಣೆಯ ಮಹತ್ವ ಸಾರಿದ 'ಮಾತು-ಕವಿತೆ'

'ಜಾತಿ ಎಂಬ ಕಲ್ಮಶದಿಂದ ಹೊರಬರಬೇಕಿದೆ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ಸ್ವಾತಂತ್ರ್ಯವನ್ನು ಸಮಸಮಾಜ ನಿರ್ಮಾಣಕ್ಕೆ ಬಳಸುವಲ್ಲಿ ವಿಫಲ'
- 'ಶಿಕ್ಷಣ ವ್ಯವಸ್ಥೆ ಸುಧಾರಣೆಯಾಗುವ ಅಗತ್ಯವಿದೆ'

ಬೆಂಗಳೂರು: 'ನಮ್ಮನ್ನು ಆಳುವವರು ಜಾತಿ ಎಂಬ ಕಲ್ಮಶದಿಂದ ಹೊರಬಂದು ಸಾಮಾಜಿಕ ನ್ಯಾಯ ಒದಗಿಸುವ ದಿಸೆಯಲ್ಲಿ ಹೆಜ್ಜೆ ಇಡಬೇಕು. ಆದರೆ, ಆ ಕೆಲಸ ಆಗುತ್ತಿಲ್ಲ. ಎಲ್ಲರನ್ನೂ ಸಂತೃಪ್ತಿಗೊಳಿಸುವ ಸಲುವಾಗಿ ಮನಸ್ಸಿಗೆ ತೋಚಿದ ರೀತಿಯಲ್ಲಿ ಆಯೋಗ, ಸಮಿತಿ, ನಿಗಮಗಳನ್ನು ರಚಿಸುತ್ತಿರುವುದನ್ನು ನೋಡಿದರೆ ಇಂದಿನ ರಾಜಕಾರಣ ಹೇಸಿಗೆ ಹುಟ್ಟಿಸುತ್ತದೆ' ಎಂದು ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಯು.ಭೂಪತಿ ಸ್ಮಾರಕ ಟ್ರಸ್ಟ್, ಆನ್‌ಲೈನ್ ಮೂಲಕ ಆಯೋಜಿಸಿದ್ದ 'ಸ್ವಾತಂತ್ರ್ಯದ ಪರಿಕಲ್ಪನೆ; ಮಾತು–ಕವಿತೆ' ಕಾರ್ಯಕ್ರಮದಲ್ಲಿ ಭಾನುವಾರ ಅವರು ಮಾತನಾಡಿದರು.

'ಮಠಗಳಿಗೆ ಹಣ ಹಂಚುವ ಮೂಲಕ ಹಣಕಾಸು ನೀತಿಯ ಆಶಯಗಳನ್ನೇ ನಾಶಗೊಳಿಸಲಾಗುತ್ತಿದೆ. ಸಂವಿಧಾನವನ್ನೇ ಬದಲಿಸುತ್ತೇವೆ ಎನ್ನುವವರು ನಾಲ್ಕೈದು ಬಾರಿ ಸಂಸದರಾಗಿ ಆಯ್ಕೆಯಾಗುತ್ತಾರೆ. ಪಕ್ಷಾಂತರಿಗಳು ಮತ್ತೆ ಚುನಾವಣೆಗಳಲ್ಲಿ ಗೆದ್ದು ಬರುತ್ತಾರೆ. ಜನ ಎಷ್ಟು ಭ್ರಷ್ಟರಾಗಿದ್ದಾರೆ ಎಂಬುದು ಇದರಿಂದ ಮನದಟ್ಟಾಗುತ್ತದೆ' ಎಂದರು.

ಬಿ.ಟಿ.ಲಲಿತಾ ನಾಯಕ್



ಪ್ರೊ.ಎಸ್.ಜಿ. ಸಿದ್ಧರಾಮಯ್ಯ

'ಸ್ವಾತಂತ್ರ್ಯವನ್ನು ಸಮಸಮಾಜ ನಿರ್ಮಾಣಕ್ಕೆ ಬಳಸುವಲ್ಲಿ ವಿಫಲವಾಗಿದ್ದೇವೆ. ಶಿಕ್ಷಣ ವ್ಯವಸ್ಥೆ ಹಿಂದಕ್ಕೆ ಹೋಗುತ್ತಿದೆ. ಕೋವಿಡ್ ನಂತರ ಗ್ರಾಮೀಣ ಭಾಗದ ಲಕ್ಷಾಂತರ ಮಕ್ಕಳು ಶಿಕ್ಷಣದಿಂದ ವಿಮುಖರಾಗಿದ್ದಾರೆ. 52 ಸಾವಿರ ಇದ್ದ ಸರ್ಕಾರಿ ಶಾಲೆಗಳ ಸಂಖ್ಯೆ ಈಗ 30 ಸಾವಿರಕ್ಕೆ ಇಳಿದಿದೆ. ಶಿಕ್ಷಣ ವ್ಯವಸ್ಥೆ ಸುಧಾರಣೆಯಾಗಬೇಕು. ಮಕ್ಕಳೂ ಜಾಗೃತರಾಗಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ' ಎಂದರು.

ಸಾಹಿತಿ ಬಿ.ಟಿ.ಲಲಿತಾ ನಾಯಕ್, 'ಪ್ರಭುತ್ವವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡುವ ಪ್ರಜ್ಞೆಯನ್ನು ಯುವ ಸಮುದಾಯದಲ್ಲಿ ಮೂಡಿಸಬೇಕು. ಜಾತಿ ಪದ್ಧತಿ, ಬಡವರ ಮೇಲಿನ ದೌರ್ಜನ್ಯ ಹೆಚ್ಚುತ್ತಲೇ ಇವೆ. ಇವುಗಳನ್ನು ತೊಡೆದು ಹಾಕುವ ಮಾರ್ಗದ ಬಗ್ಗೆ ಯೋಚಿಸಬೇಕಿದೆ. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಬಳಿಕ ಕೆಲವು ಕ್ರಾಂತಿಕಾರಕ ನಿರ್ಧಾರಗಳನ್ನು ತೆಗೆದುಕೊಂಡಿದ್ದು ಖುಷಿಯ ವಿಚಾರ' ಎಂದರು.

ಕಮ್ಯುನಿಸ್ಟ್ ಮುಖಂಡ ಸಿದ್ದನಗೌಡ ಪಾಟೀಲ, 'ಮೇಕ್ ಇನ್ ಇಂಡಿಯಾ ಹೆಸರಿನಲ್ಲಿ ನಾವು ಕಂಪನಿ ಸರ್ಕಾರಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಆರೋಗ್ಯ ಕ್ಷೇತ್ರದ ಖಾಸಗೀಕರಣದಿಂದಾಗಿ ಕೋವಿಡ್ ಎದುರಿಸುವಲ್ಲಿ ಸರ್ಕಾರ ಎಡವಿದೆ. ಚಿಕಿತ್ಸೆಗೆ ಆಮ್ಲಜನಕ ಸಿಗದೆ ಜನ ಪ್ರಾಣ ಕಳೆದುಕೊಳ್ಳುವಂತಾಗಿದೆ. ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ ಜೊತೆ ಮಾತುಕತೆ ನಡೆಸಲು ಪ್ರಧಾನಿ ಹಿಂದೇಟು ಹಾಕುತ್ತಿದ್ದಾರೆ. ದೇಶವು ಕಾರ್ಪೊರೇಟ್ ಕಂಪನಿಗಳ ಹಿಡಿತದಲ್ಲಿ ಇರುವುದಕ್ಕೆ ನಿದರ್ಶನವಿದು. ನಾವು ಕಂಪನಿ ರಾಜ್ಯದಿಂದ ಕಲ್ಯಾಣ ರಾಜ್ಯದೆಡೆ ಸಾಗಬೇಕಿದೆ' ಎಂದು ಹೇಳಿದರು.

ವಸುಂಧರಾ ಭೂಪತಿ, ಅಭಿಮನ್ಯು ಭೂಪತಿ, ಡಾ.ಸುರೇಶ್ ಸಗರದ, ಪ್ರೊ.ಜಿ. ಶರಣಪ್ಪ, ಅಬ್ದುಲ್ ಹೈ ತೋರಣಗಲ್ಲು, ತಿಪ್ಪೇರುದ್ರ ಸಂಡೂರು ಇದ್ದರು.

ನಾಡಪ್ರಭು ಕೆಂಪೇಗೌಡ ಬಡಾವಣೆ: ಕಾಮಗಾರಿ ವಿಳಂಬ – ನಿವೇಶನದಾರರ ಕಳವಳ

ವರ್ಷ ಐದು ಕಳೆದರೂ ತಲೆ ಎತ್ತುತ್ತಿಲ್ಲ ಸೂರು

• ಪ್ರವೀಣ್ ಕುಮಾರ್ ಪಿ.ವಿ.

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೆಂಗಳೂರು: ಆಳೆತ್ತರ ಬೆಳೆದ ಹುಲ್ಲು, ನಡುವೆ ಮೇವ ದನಗಳು, ತಗ್ಗು ದಿಣ್ಣೆಗಳಿಂದ ಕೂಡಿದ ಈ ದೃಶ್ಯಗಳನ್ನು ನೋಡಿ ಇದೇನಪ್ಪಾ ಯಾವುದೋ ಗದ್ದೆಯಲ್ಲಿ ಇದ್ದೇವಾ ಎಂದು ಭಾವಿಸಬೇಡಿ. ಇದು ಯಾವುದೋ ಗದ್ದೆಯೋ, ಕೆರೆ ಏರಿಯೂ ಅಲ್ಲ! ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯ ದೃಶ್ಯಗಳಿವು.

ಮಾಗಡಿ ರಸ್ತೆಯಿಂದ ಮೈಸೂರು ರಸ್ತೆ ನಡುವಿನ ಕೆಂಚನಪುರ, ಸೀಗೇಹಳ್ಳಿ, ಕನ್ನಳ್ಳಿ, ಕೊಡಿಗೇಹಳ್ಳಿ, ಮಂಗನಹಳ್ಳಿ, ರಾಮಸಂದ್ರ, ಸೂಲಿಕೆರೆ, ಕೊಮ್ಮಘಟ್ಟ, ಕೆ.ಕೃಷ್ಣಸಾಗರ, ಚಲ್ಲಘಟ್ಟ, ಭೀಮನಕುಪ್ಪೆ, ಅರ್ಚಕರ ಬಡಾವಣೆ ಸೇರಿದಂತೆ 10ಕ್ಕೂ ಅಧಿಕ ಗ್ರಾಮಗಳಲ್ಲಿ ಭೂಸ್ವಾಧೀನ ಮಾಡಿಕೊಂಡು ಬಿಡಿಎ ಈ ಬಡಾವಣೆಯನ್ನು ನಿರ್ಮಿಸುತ್ತಿದೆ. ವಿವಿಧ ಅಳತೆಗಳ ಒಟ್ಟು 23,119 ಮಧ್ಯಂತರ ನಿವೇಶನಗಳನ್ನು ಹಂಚಿಕೆ ಮಾಡಿದೆ.

2010ರಲ್ಲೇ ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದರೂ ನಿವೇಶನ ರಚಿಸುವ ಕೆಲಸ ಶುರುವಾಗಿದ್ದು 2015ರ ಬಳಿಕ. ಇಲ್ಲಿ ಒಟ್ಟು ಒಂಬತ್ತು ಬ್ಲಾಕ್‌ಗಳಲ್ಲಿ ನಿವೇಶನಗಳನ್ನು ರಚಿಸಿ ಸೌಕರ್ಯ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಬಿಡಿಎ ಬಡಾವಣೆಗಳಲ್ಲಿ ನಿವೇಶನ ಪಡೆದವರು ಐದು ವರ್ಷಗಳ ಒಳಗೆ ಮನೆ ನಿರ್ಮಿಸಬೇಕು. ಇಲ್ಲದಿದ್ದರೆ ಬಿಡಿಎ ಅವರಿಗೆ ದಂಡ ವಿಧಿಸಬೇಕು. ಅಚ್ಚರಿಯೆಂದರೆ 2016ರಲ್ಲಿ ಮೊದಲ ಹಂತದಲ್ಲಿ ನಿವೇಶನಗಳು ಹಂಚಿಕೆ ಆಗಿದ್ದರೂ ಇಲ್ಲಿ ಇನ್ನೂ ಸೂರುಗಳು ತಲೆ ಎತ್ತುತ್ತಿಲ್ಲ. ಈ ಬಡಾವಣೆಗೆ ಬಿಡಿಎ ಇನ್ನೂ ಪೂರ್ಣ ಪ್ರಮಾಣದಲ್ಲಿ ಮೂಲಸೌಕರ್ಯ ಕಲ್ಪಿಸದಿರುವುದೇ ಇದಕ್ಕೆ ಕಾರಣ.

ಈ ಬಡಾವಣೆಯ 1,2,3,4ನೇ ಬ್ಲಾಕ್‌ಗಳಿಗೆ ಹಾಗೂ ಬ್ಲಾಕ್ 5ರ 'ಎ' ವಲಯದ ಕಾಮಗಾರಿಗಳನ್ನು ಎಲ್ ಆ್ಯಂಡ್ ಟಿ ಕಂಪನಿ ನಿರ್ವಹಿಸುತ್ತದೆ. ಈ ಕಂಪನಿ 2021ರ ಜೂನ್‌ವರೆಗೆ ಶೇ 37.9ರಷ್ಟನ್ನು ಮಾತ್ರ ಅನುಷ್ಠಾನಗೊಳಿಸಿದೆ. ಬಡಾವಣೆಯ 6, 7, 8, 9 ನೇ ಬ್ಲಾಕ್‌ಗಳ ಹಾಗೂ ಐದನೇ ಬ್ಲಾಕ್‌ನ 'ಬಿ' ವಲಯದ ಕಾಮಗಾರಿಗಳನ್ನು ಎಸ್‌ಪಿಎಂಎಲ್ ಅಮೃತಾ ಕನ್‌ಸ್ಟ್ರಕ್ಷನ್ಸ್ ಕಂಪನಿ ನಿರ್ವಹಿಸುತ್ತಿದ್ದು, ಶೇ 26.8ರಷ್ಟನ್ನು ಮಾತ್ರ ಅನುಷ್ಠಾನಗೊಳಿಸಿದೆ.

ಬಹುತೇಕ ಬ್ಲಾಕ್‌ಗಳಲ್ಲಿ ಈಗಲೂ ಕಚ್ಚಾ ರಸ್ತೆಗಳನ್ನು ಮಾತ್ರ ರಚಿಸಲಾಗಿದೆ. ಮೂಲಸೌಕರ್ಯ ಕೊಳವೆಗಳನ್ನು ಅಳವಡಿಸುವ ಕಾರ್ಯ ಕೆಲವೆಡೆ ಮಾತ್ರ ಪೂರ್ಣಗೊಂಡಿದೆ. ಯಾವುದೇ ಬ್ಲಾಕ್‌ಗೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ. ನೀರಿನ ತೊಟ್ಟಿಗಳ ಕಾಮಗಾರಿಗಳೂ ಈಗಷ್ಟೇ ನಡೆಯುತ್ತಿವೆ. ನಿರ್ಮಾಣವಾಗಬೇಕಾದ 5 ವಿದ್ಯುತ್ ಸರಬರಾಜು ಉಪಕೇಂದ್ರಗಳಲ್ಲಿ ಒಂದೂ ಪೂರ್ಣಗೊಂಡಿಲ್ಲ. ಕೊಮ್ಮಘಟ್ಟದಲ್ಲಿ ಒಂದು ಉಪಕೇಂದ್ರದ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. 1ರಿಂದ 8ನೇ ಬ್ಲಾಕ್‌ವರೆಗೆ ಕೊಳಚೆ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಆದರೆ 9ನೇ ಬ್ಲಾಕ್‌ನಲ್ಲಿ ಎಸ್‌ಟಿಪಿ ಕಾಮಗಾರಿಯೇ ಆರಂಭವಾಗಿಲ್ಲ,

ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ, 'ಕೋವಿಡ್ ಬಂದಿದ್ದರಿಂದ ಕಾಮಗಾರಿಗೆ ಸ್ವಲ್ಪ ಹಿನ್ನಡೆ ಆಗಿದೆ. ಕುಡಿಯುವ ನೀರು ಪೂರೈಕೆ, ವಿದ್ಯುದೀಕರಣ ಕಾಮಗಾರಿಗಳು ನಡೆಯುತ್ತಿವೆ. ನೀರಿನ ಕೊಳವೆ ಹಾಗೂ ಒಳಚರಂಡಿ ಕಾಮಗಾರಿ ಪೂರ್ಣಗೊಂಡ ಬಳಿಕವೇ ರಸ್ತೆಗಳಿಗೆ ಡಾಂಬರ್ ಹಾಕಲು ಸಾಧ್ಯ. ರಸ್ತೆಗಳ ನಿರ್ಮಾಣವೂ ಪ್ರಗತಿಯಲ್ಲಿದೆ. 7 ಸಾವಿರ ಮನೆಗಳಾಗುವವರೆಗೆ ಒಂದು ವಿದ್ಯುತ್ ಉಪಕೇಂದ್ರ ಸಾಕು. ಇದಕ್ಕೆ ಟೆಂಡರ್ ಕರೆದಿದ್ದೇವೆ. ಹಂತ ಹಂತವಾಗಿ ವಿದ್ಯುತ್ ಉಪಕೇಂದ್ರಗಳ ಸಂಖ್ಯೆ ಹೆಚ್ಚಿಸುತ್ತೇವೆ' ಎಂದು ಪ್ರತಿಕ್ರಿಯಿಸಿದರು.

ಈ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ ಎನ್‌ಪಿಕೆಎಲ್ ಬಡಾವಣೆ ನಿವೇಶನದಾರರ ಮುಕ್ತ ವೇದಿಕೆ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಕ್ಕೆ (ರೇರಾ) ದೂರು ನೀಡಿದೆ. 2021ರ ಡಿಸೆಂಬರ್ ಒಳಗೆ ಬಡಾವಣೆಯ ಮೂಲಸೌಕರ್ಯ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತೇವೆ ಎಂದು ರೇರಾಕ್ಕೆ ಬಿಡಿಎ ವಾಗ್ದಾನ ನೀಡಿದೆ. ಆದರೆ, ಇಲ್ಲಿನ ಪ್ರತಿಯೊಂದು ಬ್ಲಾಕ್‌ಗಳಲ್ಲಿ ನಡೆದಿರುವ ಕಾಮಗಾರಿಗಳನ್ನು ಖುದ್ದಾಗಿ ಅವಲೋಕಿಸಿದಾಗ ಅವು ಗಡುವಿನೊಳಗೆ ಪೂರ್ಣಗೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ. ಕನಿಷ್ಠ ಪಕ್ಷ ಇಲ್ಲಿ ಮನೆ ಕಟ್ಟುವುದಕ್ಕೆ ಅಗತ್ಯವಿರುವಷ್ಟು ಸೌಕರ್ಯಗಳು ಸಿಗುವ ಭರವಸೆಯೂ ಉಳಿದಿಲ್ಲ ಎಂದು ಕಳವಳ ವ್ಯಕ್ತಪಡಿಸುತ್ತಾರೆ ನಿವೇಶನದಾರರು.

ವಸ್ತುಸ್ಥಿತಿ ಹೀಗಿದ್ದರೂ, 'ಗುತ್ತಿಗೆದಾರರು ಕಾಮಗಾರಿಗಳನ್ನು ಗಡುವಿನೊಳಗೆ ಪೂರ್ಣಗೊಳಿಸುತ್ತಾರೆ' ಎಂದು ಬಿಡಿಎ ಆಯುಕ್ತ ರಾಜೇಶ್ ಗೌಡ ವಿಶ್ವಾಸ ವ್ಯಕ್ತಪಡಿಸುತ್ತಾರೆ. ನಿವೇಶನದಾರರು ಇಟ್ಟಿರುವ ವಿಶ್ವಾಸವನ್ನು ಬಿಡಿಎ ಕಾದು ಉಳಿಸಿಕೊಳ್ಳುತ್ತದೆಯೇ ನೋಡಬೇಕಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ಮೂಲಸೌಕರ್ಯ ಕಾಮಗಾರಿ ವಿವರ

ಕಾಮಗಾರಿ	ಒಟ್ಟು	ಪೂರ್ಣಗೊಂಡಿದ್ದು	ಅನುಷ್ಠಾನ (ಶೇ)
(ಪ್ಯಾಕೇಜ್–1: ಕಂಪನಿ: ಎಲ್ ಆ್ಯಂಡ್ ಟಿ ಬ್ಲಾಕ್‌ಗಳು: 1,2,3,4 ಹಾಗೂ ಬ್ಲಾಕ್ 5ರ ಎ ವಲಯ)			
ಅಗತ್ಯ ಮೂಲಸೌಕರ್ಯ ಕೊಳವೆ	140.04 ಕಿ.ಮೀ	90.1 ಕಿ.ಮೀ	66.2
ಮ್ಯಾನ್‌ಹೋಲ್	6,606	1,328	27.5
ಒಳಚರಂಡಿ ಕೊಳವೆ	167.2 ಕಿ.ಮೀ	70.7 ಕಿ.ಮೀ	43.3
ವಿದ್ಯುತ್ ಪೂರೈಕೆ ಮಾರ್ಗ	14.33 ಕಿ.ಮೀ	6.3 ಕಿ.ಮೀ	44
ಕುಡಿಯುವ ನೀರಿನ ಕೊಳವೆ	239.52 ಕಿ.ಮೀ	43.1 ಕಿ.ಮೀ	21.5
ಶುದ್ಧೀಕರಿಸಿದ ನೀರಿನ ಕೊಳವೆ	140.2 ಕಿ.ಮೀ	25 ಕಿ.ಮೀ	25
(ಪ್ಯಾಕೇಜ್–2 ಕಂಪನಿ: ಎಸ್‌ಪಿಎಂಎಲ್ ಬ್ಲಾಕ್‌ಗಳು: 6,7,8,9 ಮತ್ತು 5ನೇ ಬ್ಲಾಕ್‌ನ ಬಿ ವಲಯ)			
ಅಗತ್ಯ ಸೌಕರ್ಯ ಕೊಳವೆ	187.65 ಕಿ.ಮೀ	84.92 ಕಿ.ಮೀ	45.3
ಮ್ಯಾನ್‌ಹೋಲ್	6,681	2,640	39.5
ಒಳಚರಂಡಿ ಕೊಳವೆ	209.62 ಕಿ.ಮೀ	71.33 ಕಿ.ಮೀ	34
ವಿದ್ಯುತ್ ಪೂರೈಕೆ ಮಾರ್ಗ	12.92 ಕಿ.ಮೀ	2.5 ಕಿ.ಮೀ	19.3
ಕುಡಿಯುವ ನೀರಿನ ಕೊಳವೆ	295.6 ಕಿ.ಮೀ	26.86 ಕಿ.ಮೀ	9.1
ಶುದ್ಧೀಕರಿಸಿದ ನೀರಿನ ಕೊಳವೆ	191.87 ಕಿ.ಮೀ	26.3 ಕಿ.ಮೀ	13.7

'ಡಿಸೆಂಬರ್‌ವರೆಗೂ ಇದೆ ಕಾಲಾವಕಾಶ'



ಕೋವಿಡ್ ಕಾರಣದಿಂದ ಕಾಮಗಾರಿ ಎರಡು– ಮೂರು ತಿಂಗಳುಗಳಷ್ಟು ವಿಳಂಬವಾಗಿರಬಹುದು. ಕಾಮಗಾರಿ ಪೂರ್ಣಗೊಳಿಸಲು 2021ರ ಡಿಸೆಂಬರ್‌ವರೆಗೆ ಕಾಲಾವಕಾಶ ಇದೆ. ಗುತ್ತಿಗೆದಾರರು ಈ ಗಡುವಿನೊಳಗೆ ಎಲ್ಲ ಕೆಲಸ ಪೂರ್ಣಗೊಳಿಸಲೇಬೇಕು

ಎಂ.ಬಿ.ರಾಜೇಶ್ ಗೌಡ, ಬಿಡಿಎ ಆಯುಕ್ತ

ನಾಡಪ್ರಭು ಕೆಂಪೇಗೌಡ ಬಡಾವಣೆ– ಪ್ರಜಾವಾಣಿ ಚಿತ್ರಗಳು/ ಮಂಜುನಾಥ ಎಂ.ಎಸ್

ಅಂಕಿ-ಅಂಶಗಳು

4043 ಎಕರೆ **27** ಗುಂಟೆ – ಬಿಡಿಎ ನಾಡಪ್ರಭು ಕೆಂಪೇಗೌಡ ಬಡಾವಣೆಯ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ ಪ್ರದೇಶದ ವಿಸ್ತೀರ್ಣ

2,635 ಎಕರೆ **37** ಗುಂಟೆ – ಐತೀರ್ಪು ಅನುಮೋದನೆಗೊಂಡು ಪ್ರಾಧಿಕಾರದ ಸ್ವಾಧೀನಕ್ಕೆ ಬಂದ ಪ್ರದೇಶ

1,329 ಎಕರೆ **39** ಗುಂಟೆ – ಜಾಗದ ಐತೀರ್ಪು ಪ್ರಕಟಣೆ ಬಾಕಿ ಇದೆ

600 ಎಕರೆ **17** ಗುಂಟೆ – ಭೂಸ್ವಾಧೀನ ಸಂಬಂಧ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳಿವೆ

2,144 ಎಕರೆ **9** ಗುಂಟೆ – ಪ್ರದೇಶದಲ್ಲಿ ನಿವೇಶನ ರಚನೆ ಮಾಡಿರುವ ಪ್ರದೇಶ

23,119 – ಹಂಚಿಕೆ ಮಾಡಲಾದ ಒಟ್ಟು ಮಧ್ಯಂತರ ನಿವೇಶನಗಳು

10 ಸಾವಿರ – ಸಾರ್ವಜನಿಕರಿಗೆ ಎರಡು ಹಂತಗಳಲ್ಲಿ ಹಂಚಿಕೆ ಮಾಡಿದ ನಿವೇಶನಗಳು

1,211 – ಹಣ ಪಾವತಿಸಲಾಗದೇ ಹಿಂತಿರುಗಿಸಲಾದ ನಿವೇಶನಗಳು

8,759 – ಫಲಾನುಭವಿಗಳ ಹೆಸರಿನಲ್ಲಿರುವ ನಿವೇಶನಗಳು

10,299 – ಬಡಾವಣೆಗೆ ಜಮೀನು ಬಿಟ್ಟುಕೊಟ್ಟ ರೈತರಿಗೆ ಹಂಚಿಕೆ ಮಾಡಿದ ನಿವೇಶನಗಳು

954 – ಪ್ರಮುಖ ಆರ್ಟರಿಯಲ್ ರಸ್ತೆಗಾಗಿ ಜಾಗ ನೀಡಿದ ರೈತರಿಗೆ ಹಂಚಿಕೆ ಮಾಡಿದ ನಿವೇಶನಗಳು

1445 – ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಕಳೆದುಕೊಂಡವರಿಗೆ ಹಂಚಲಾದ ನಿವೇಶನಗಳು

'ಬಿಡಿಎ ದಂಡ ಪಾವತಿ ಮಾಡಬೇಕಾದೀತು'



ಬಿಡಿಎ ತನ್ನ ಯೋಜನೆಗಳನ್ನು ಖಾಸಗಿ ಕಂಪನಿಗಳಿಗೆ ಪೈಪೋಟಿ ನೀಡುವ ಮಟ್ಟಕ್ಕೆ ಅನುಷ್ಠಾನಗೊಳಿಸಬೇಕಿತ್ತು. ರಿಯಲ್ ಎಸ್ಟೇಟ್ ನಿಯಂತ್ರಣ ಕಾಯ್ದೆಯನ್ನೂ ಬಿಡಿಎ ಗಂಭೀರವಾಗಿ ಪರಿಗಣಿಸಿಲ್ಲ. ಈ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡಿ ಐದು ವರ್ಷಗಳ ಬಳಿಕವೂ ಮೂಲಸೌಕರ್ಯ ಕಲ್ಪಿಸಿಲ್ಲ. ರೇರಾಕ್ಕೆ ನೀಡಿದ ವಾಗ್ದಾನದಂತೆ ಸಕಾಲದಲ್ಲಿ ಯೋಜನೆಯನ್ನು ಪೂರ್ಣಗೊಳಿಸದೇ ಹೋದರೆ ನಿವೇಶನದಾರರಿಗೆ ಬಿಡಿಎಯೇ ದಂಡ ಪಾವತಿ ಮಾಡಬೇಕಾಗುತ್ತದೆ.

ಶ್ರೀಧರ್ ನುಗ್ಗೇಹಳ್ಳಿ, ಎನ್‌ಪಿಕೆಎಲ್ ನಿವೇಶನದಾರರ ಮುಕ್ತ ವೇದಿಕೆ ಅಧ್ಯಕ್ಷ

'ಕಾಮಗಾರಿ ಪ್ರಗತಿ ಸಾಲದು'

ನೀಲನಕ್ಷೆ ನೋಡಿದರೆ ಇದು ಮಾದರಿ ಬಡಾವಣೆ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ, ಅದರ ಅನುಷ್ಠಾನದಲ್ಲಿ ಬಿಡಿಎ ವಿಫಲವಾಗಿದೆ. ಮೂಲಸೌಕರ್ಯ ಕಾಮಗಾರಿಗಳ ಪ್ರಗತಿ ಏನೇನೂ ಸಾಲದು. ಬ್ಲಾಕ್ 6ರಲ್ಲಿ ಶೇ 10ರಷ್ಟೂ ಕಾಮಗಾರಿಗಳಾಗಿಲ್ಲ

ಎಂ.ಅಶೋಕ್, ಎನ್‌ಪಿಕೆಎಲ್ ನಿವೇಶನದಾರರ ಮುಕ್ತ ವೇದಿಕೆಯ ಕಾರ್ಯದರ್ಶಿ

'ಮನೆ ನಿರ್ಮಾಣ ವೆಚ್ಚ ಜಾಸ್ತಿ ಆಗಲಿದೆ'

ಬಾಡಿಗೆ ಮನೆಯಲ್ಲಿರುವ ನಮ್ಮಂಥವರು ಈಗಾಗಲೇ ನಿವೇಶನ ಖರೀದಿಗೆ ಪಡೆದ ಸಾಲದ ಬಡ್ಡಿಯನ್ನೂ ಕಟ್ಟುತ್ತಿದ್ದೇವೆ. ಸಾಮಗ್ರಿ ದರ ಏರಿಕೆ ಆಗುತ್ತಿದೆ. ಮೂಲಸೌಕರ್ಯ ವಿಳಂಬವಾದಷ್ಟೂ ಮನೆ ನಿರ್ಮಾಣಕ್ಕೆ ತಗಲುವ ವೆಚ್ಚ ಜಾಸ್ತಿ ಆಗುತ್ತಲೇ ಸಾಗುತ್ತದೆ.

ಎ.ಎಸ್.ಸೂರ್ಯಕಿರಣ್, ಎನ್‌ಪಿಕೆಎಲ್ ನಿವೇಶನದಾರರ ಮುಕ್ತ ವೇದಿಕೆಯ ವಕ್ತಾರ

'ಹಸಿರೀಕರಣಕ್ಕೆ ಸಿಗಲಿ ಆದ್ಯತೆ'

ಈ ಬಡಾವಣೆಗಾಗಿ 2 ಲಕ್ಷಕ್ಕೂ ಅಧಿಕ ಗಿಡ ಮರಗಳನ್ನು ಕಡಿಯಲಾಗಿದೆ. ಈ ಬಡಾವಣೆಯ ಹಸಿರೀಕರಣಕ್ಕೂ ಬಿಡಿಎ ಆದ್ಯತೆ ನೀಡಬೇಕು. ಸಾಧ್ಯವಿರುವ ಕಡೆಗಳಲ್ಲೆಲ್ಲ ಗಿಡಗಳನ್ನು ಬೆಳೆಸಬೇಕು

ಸಂಜೀವ, ನಿವೇಶನದಾರರು

'ನಾಲ್ಕನೇ ಬ್ಲಾಕ್‌ಗೆ ದೊಡ್ಡ ರಸ್ತೆಯೇ ಇಲ್ಲ'

ಬಡಾವಣೆಯ ನಾಲ್ಕನೇ ಬ್ಲಾಕ್‌ನಲ್ಲಿ ಇಲ್ಲಿಗೆ ಸಿಟಿ ಬಸ್ ಬರಲು ಸಾಧ್ಯವಾಗುವಂತಹ 30 ಅಡಿಗಿಂತ ಅಗಲದ ರಸ್ತೆಯೇ ಇಲ್ಲ. ರಾಜಕಾಲುವೆ ಪಕ್ಕದಲ್ಲಿ ಅಗಲವಾದ ರಸ್ತೆ ನಿರ್ಮಿಸಬೇಕು.

ಪದ್ಮಾ ಪ್ರಸಾದ್, ಬಡಾವಣೆಯ ನಿವೇಶನದಾರರು

'ನಿವೇಶನ ಗುರುತಿಸಲಾಗುತ್ತಿಲ್ಲ'

ಮೂಲಸೌಕರ್ಯ ಕಾಮಗಾರಿ ಕುಂಠಿತವಾಗಿರುವುದು ಮಾತ್ರವಲ್ಲ, ನಮ್ಮ ನಿವೇಶನಗಳು ಎಲ್ಲಿವೆ ಎಂದೇ ತಿಳಿಯುತ್ತಿಲ್ಲ. ಲಕ್ಷಾಂತರ ರೂಪಾಯಿ ಸಾಲ ಮಾಡಿ ನಿವೇಶನ ಖರೀದಿಸಿದರೂ ಇಲ್ಲಿ ಮನೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ ಎಂಬುದು ನಿವೇಶನದಾರರ ಅಳಲು.

'ಬಿಡಿಎ ಬಡಾವಣೆಯಲ್ಲಿ ನಿವೇಶನಕ್ಕಾಗಿ 1987ರಿಂದ ಅರ್ಜಿ ಹಾಕುತ್ತಲೇ ಇದ್ದೆವು. 2016ರಲ್ಲಿ ನಿವೇಶನ ಹಂಚಿಕೆ ಮಾಡಿದ ಬಿಡಿಎ ಎರಡು ವರ್ಷಗಳೊಳಗೆ ಮನೆಕಟ್ಟುವಂತೆ ಒತ್ತಡ ಹಾಕಿತ್ತು. ಇಲ್ಲಿ ನೋಡಿದರೆ ನಮ್ಮ ನಿವೇಶನ ಯಾವುದೆಂದೇ ತಿಳಿಯದಷ್ಟು ಗಿಡ–ಗಂಟಿಗಳು ಬೆಳೆದಿವೆ' ಎಂದು ಜಿ.ಕೃಷ್ಣಯ್ಯ ಹಾಗೂ ಮಹಾಲಕ್ಷ್ಮಿ ಬೇಸರ ತೋಡಿಕೊಂಡರು.

ಇಲ್ಲಿನ 1ನೇ ಬ್ಲಾಕ್‌ನ 'ಎಲ್' ಸೆಕ್ಟರ್ ಹಾಗೂ 2ನೇ ಬ್ಲಾಕ್‌ನ 'ಬಿ' ಮತ್ತು 'ಎಚ್' ಸೆಕ್ಟರ್‌ಗಳ ತಗ್ಗು ಪ್ರದೇಶದಲ್ಲಿ ನೀರು ನಿಲ್ಲುತ್ತಿದೆ. ಇದರಿಂದಾಗಿ ಮೂಲಸೌಕರ್ಯ ಕಾಮಗಾರಿ ನಡೆಸುವುದೂ ಸಮಸ್ಯೆಯಾಗಿದೆ. ಈ ಪ್ರದೇಶದಲ್ಲಿ 2 ಅಡಿಪಾಯ ತೆಗೆಯುವಷ್ಟರಲ್ಲಿ ನೀರು ಬರುತ್ತದೆ ಎಂಬುದು ನಿವೇಶನದಾರರು ಅಳಲು.

ನಿವೇಶನದಾರರಿಗೆ ಹತ್ತು ಹಲವು ಚಿಂತೆ

ಬಡಾವಣೆಯಲ್ಲಿ ಮನೆ ಕಟ್ಟಿಕೊಂಡು ನಿಶ್ಚಿಂತರಾಗುವ ಕನಸು ಹೊತ್ತಿದ್ದ ನಿವೇಶನದಾರರನ್ನು ಹತ್ತು ಹಲವು ಚಿಂತೆಗಳು ಕಾಡುತ್ತಿವೆ. ಸಾಲ ಮಾಡಿ ನಿವೇಶನ ಖರೀದಿಸಿದ್ದೇವೆ. ಬೇಗ ಮನೆ ನಿರ್ಮಿಸಿ ಇಲ್ಲೇ ವಾಸ ಮಾಡುವಾಸೆ. ಇಲ್ಲಿ ಮೂಲ ಸೌಕರ್ಯ ಸಿಗದೇ ಮನೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ಈಗ ಮನೆ ಬಾಡಿಗೆ ಹಾಗೂ ನಿವೇಶನ ಖರೀದಿಗೆ ಮಾಡಿದ ಸಾಲದ ಕಂತುಗಳೆರಡನ್ನೂ ಪಾವತಿಸಬೇಕಿದೆ. ಬಿಡಿಎ ಆದಷ್ಟು ಬೇಗ ಮೂಲಸೌಕರ್ಯ ಕಲ್ಪಿಸಬೇಕು ಎಂಬುದು ನಿವೇಶನದಾರರ ಒತ್ತಾಯ

ಇಲ್ಲೂ ಭೂಸ್ವಾಧೀನ ಕಗ್ಗಂಟು

ಈ ಬಡಾವಣೆಗೆ ಬಿಡಿಎ ಒಟ್ಟು 4,043 ಎಕರೆ 27 ಗುಂಟೆ ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿದೆ. ಇದರಲ್ಲಿ 600 ಎಕರೆ 17 ಗುಂಟೆ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳಿವೆ. ಭೂಸ್ವಾಧೀನ ಪೂರ್ಣಗೊಳ್ಳದ ಕಾರಣ ಕೆಲವೆಡೆ ನಿವೇಶನಗಳಿಗೆ ಸಂಪರ್ಕ ರಸ್ತೆ ಹಾಗೂ ಇತರ ಮೂಲಸೌಕರ್ಯ ಕಲ್ಪಿಸುವುದು ಕಗ್ಗಂಟಾಗಿದೆ.

ಹೆಲಿಕಾಪ್ಟರ್ ಪತನ ಪ್ರಕರಣ: ಪೈಲಟ್ ಶವ ಪತ್ತೆ

ನವದೆಹಲಿ: ಜಮ್ಮುವಿನ ಗಡಿಭಾಗದ ರಾಜ್‌ನೀತ್ ಸಾಗರ್ ಅಣೆಕಟ್ಟೆಯಲ್ಲಿ ಪತನಗೊಂಡಿದ್ದ ಸೇನೆಯ ಹೆಲಿಕಾಪ್ಟರ್‌ನ ಪೈಲಟ್ ಒಬ್ಬರ ಶವ ಅಪಘಾತವಾದ 12 ದಿನದ ನಂತರ ಭಾನುವಾರ ಪತ್ತೆಯಾಗಿದೆ. ಇನ್ನೊಬ್ಬ ಪೈಲಟ್ ಪತ್ತೆ ಶೋಧ ಮುಂದುವರಿದಿದೆ.

ಲೆಫ್ಟಿನಂಟ್ ಕರ್ನಲ್ ಎ.ಎಸ್.ಬಾತ್ ಅವರ ಶವವು ಅಣೆಕಟ್ಟೆಯ 75.9 ಮೀಟರ್ ಆಳದಲ್ಲಿ ಪತ್ತೆಯಾಯಿತು ಎಂದು ಸೇನೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇಬ್ಬರು ಪೈಲಟ್‌ಗಳಿದ್ದ ಹೆಲಿಕಾಪ್ಟರ್ ಆ. 3ರಂದು ಅಣೆಕಟ್ಟೆಯಲ್ಲಿ ಪತನಗೊಂಡಿತ್ತು.ನಾಪತ್ತೆಯಾಗಿದ್ದ ಪೈಲಟ್‌ಗಳ ಪತ್ತೆಗೆ ಸೇನೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ರಾಜ್ಯ ಪೊಲೀಸ್ ಪಡೆಯ ಸಿಬ್ಬಂದಿ ಜಂಟಿಯಾಗಿ ಸುಮಾರು 500 ಅಡಿ ಆಳದ ಅಣೆಕಟ್ಟೆಯಲ್ಲಿ ಶೋಧ ಕಾರ್ಯ ಕೈಗೊಂಡಿದ್ದರು.

ಮನೆಯಲ್ಲೇ 'ಡ್ರಗ್ಸ್' ಲ್ಯಾಬ್: ಎನ್‌ಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು, ಹೈದರಾಬಾದ್‌ನಲ್ಲಿರುವ ಮನೆಯೊಂದರ ಮೇಲೆ ದಾಳಿ ಮಾಡಿ ₹ 12.75 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ನಾಲ್ವರು ಆರೋಪಿಗಳನ್ನೂ ಬಂಧಿಸಿದ್ದಾರೆ.

'ವೈ. ಸುಧಾಕರ್, ಎ. ನರೇಶ್, ಕೆ.ಪಿ. ಕುಮಾರ್ ಹಾಗೂ ಎ. ಶ್ರೀಕಾಂತ್ ಬಂಧಿತರು. ಬೆಂಗಳೂರು ಹಾಗೂ ಹೈದರಾಬಾದ್ ವಲಯದ ಅಧಿಕಾರಿಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಿದ್ದರು. ಸ್ವಿಫ್ಟ್ ಹಾಗೂ ಹೊಂಡಾ ಕಾರುಗಳನ್ನೂ ಜಪ್ತಿ ಮಾಡಲಾಗಿದೆ' ಎಂದು ಎನ್‌ಸಿಬಿ ವಲಯ ನಿರ್ದೇಶಕ ಅಮಿತ್ ಘಾವಟೆ 'ಪ್ರಜಾವಾಣಿ'ಗೆ ತಿಳಿಸಿದರು.

'ಕರ್ನಾಟಕ ಹಾಗೂ ಆಂಧ್ರಪ್ರದೇಶದಲ್ಲಿ ಆಲ್ಪ್ರಝೋಲಮ್ ಡ್ರಗ್ಸ್ ಮಾರಾಟ ಜಾಲ ಸಕ್ರಿಯವಾಗಿರುವ ಮಾಹಿತಿ ಸಿಕ್ಕಿತ್ತು. ತನಿಖೆಗೆ ತಂಡಗಳನ್ನು ರಚಿಸಿ, ಡ್ರಗ್ಸ್ ಸಾಗಿಸುತ್ತಿದ್ದ ಕಾರುಗಳನ್ನು ಹಿಂಬಾಲಿಸಲಾಗಿತ್ತು. ಆರೋಪಿ ವೈ. ಸುಧಾಕರ್ ಹೈದರಾಬಾದ್‌ನ ಬಾಲನಗರದಲ್ಲಿರುವ ತಮ್ಮ ಮನೆಯಲ್ಲೇ ಡ್ರಗ್ಸ್ ತಯಾರಿಸಲು ಲ್ಯಾಬ್ ಮಾಡಿಕೊಂಡಿದ್ದು ತಿಳಿಯಿತು. ಮತ್ತೊಬ್ಬ ಆರೋಪಿ ಮನೆ ಮೇಲೆ ನೀರಿನ ಟ್ಯಾಂಕ್ ಇರಿಸಲು ನಿರ್ಮಿಸಲಾಗಿದ್ದ ಸಣ್ಣ ಕೊಠಡಿಯಲ್ಲಿ ಲ್ಯಾಬ್ ಮಾಡಿಕೊಂಡು ಡ್ರಗ್ಸ್ ಉತ್ಪಾದಿಸುತ್ತಿದ್ದ. ಅದಕ್ಕಾಗಿ ಆಧುನಿಕ ಉಪಕರಣಗಳನ್ನು ಬಳಸುತ್ತಿದ್ದ. ಎರಡೂ ಮನೆಗಳ ಮೇಲೆ ದಾಳಿ ಮಾಡಿ, ಲ್ಯಾಬ್‌ನಲ್ಲಿದ್ದ ಸಲಕರಣೆಗಳನ್ನೂ ಸುಪರ್ದಿಗೆ ಪಡೆಯಲಾಗಿದೆ' ಎಂದೂ ಅವರು ಹೇಳಿದರು.

ಆಲ್ಪ್ರಝೋಲಮ್ ಡ್ರಗ್ಸ್ ಉತ್ಪಾದಿಸಲು ಮನೆಯಲ್ಲೇ ನಿರ್ಮಿಸಿಕೊಂಡಿದ್ದ ಲ್ಯಾಬ್

'ಆಲ್ಪ್ರಝೋಲಮ್ ಡ್ರಗ್ಸ್ ಸೇವನೆಯಿಂದ ಸಾವು ಸಂಭವಿಸುತ್ತದೆ. ಇದು ಅಪಾಯಕಾರಿ ಆಗಿರುವುದರಿಂದ ಅಕ್ರಮವಾಗಿ ಉತ್ಪಾದಿಸುವುದನ್ನು ನಿಷೇಧಿಸಲಾಗಿದೆ. ಅಷ್ಟಾದರೂ ಆರೋಪಿಗಳು, ಐದು ವರ್ಷಗಳಿಂದ ಆಲ್ಪ್ರಝೋಲಮ್ ಉತ್ಪಾದಿಸುತ್ತಿದ್ದರು. ಕಾರ್ತಿಕೇಯ್ ಲೈಫ್ ಸೈನ್ಸ್ ಹೆಸರಿನಲ್ಲಿ ಕಂಪನಿ ಮಾಡಿಕೊಂಡಿದ್ದ ಆರೋಪಿಗಳು, ಡ್ರಗ್ಸ್ ಮಾರಾಟದಿಂದಲೇ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದರು' ಎಂದೂ ಅವರು ತಿಳಿಸಿದರು.

'ಮೇಕೆದಾಟು ಅಣೆಕಟ್ಟೆ ನಿರ್ಮಾಣ ಶತಸಿದ್ಧ'

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯೂ ಸೇರಿ ರಾಜ್ಯದ ಪಾಲಿನ ಜೀವನಾಡಿ ಆಗಲಿರುವ ಮೇಕೆದಾಟು ಅಣೆಕಟ್ಟೆ ಯೋಜನೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟವಾಗಿ ಹೇಳಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ 75ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

'ಕುಡಿಯುವ ನೀರಿನ ಉದ್ದೇಶಕ್ಕಾಗಿ ಅನುಷ್ಠಾನವಾಗುತ್ತಿರುವ ಈ ಯೋಜನೆ ನಿಲ್ಲುವುದಿಲ್ಲ. ಈಗಾಗಲೇ ಯೋಜನೆಯ ಸಮಗ್ರ ಯೋಜನಾ ವರದಿ (ಡಿಪಿಆರ್) ಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ' ಎಂದು ಅವರು ಹೇಳಿದರು.

'ಆಯೋಗದಿಂದ ಒಪ್ಪಿಗೆ ಸಿಕ್ಕಿದ ಕೂಡಲೇ ಯೋಜನೆ ಕಾಮಗಾರಿ ಆರಂಭ ಮಾಡಲಾಗುವುದು. ಈ ಯೋಜನೆಯನ್ನು ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ. ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಪೂರೈಕೆಗೆ ಇದು ಅಗತ್ಯವಾದ ಯೋಜನೆ. ಈ ಯೋಜನೆಯನ್ನು ನೆರೆ ರಾಜ್ಯ ವಿರೋಧಿಸುವುದು ಸರಿಯಲ್ಲ. ಯಾರು ವಿರೋಧ ಮಾಡಿದರೂ ಯೋಜನೆ ನಿಲ್ಲುವುದೂ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಮೊಬೈಲ್ ಕೊಡದಿದ್ದುದಕ್ಕೆ ಬಾಲಕಿ ಆತ್ಮಹತ್ಯೆ

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ತಂದೆ ಮೊಬೈಲ್ ಕೊಡದಿದ್ದದ್ದಕ್ಕೆ ಮನನೊಂದು ಹಳದೀಪುರ ಗ್ರಾಮದ ಗೌಡಕುಳಿಯ ಅಪೂರ್ವ ಗಜಾನನ ಹರಿಕಾಂತ (15) ಎಂಬ ಬಾಲಕಿ ಭಾನುವಾರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

'ಭಾನುವಾರ ಮೊಬೈಲ್ ಕೊಡುವಂತೆ ಗಲಾಟೆ ಮಾಡಿದ್ದ ಆಕೆಗೆ ಮತ್ತೆ ಬುದ್ಧಿವಾದ ಹೇಳಿ ನಾನು ನನ್ನ ಪತ್ನಿಯೊಂದಿಗೆ ಮೀನು ವ್ಯಾಪಾರಕ್ಕೆ ಹೋಗಿದ್ದೆ. ಇದೇ ವೇಳೆ ಅಪೂರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದಳು. ಆಸ್ಪತ್ರೆಗೆ ದಾಖಲಿಸುವ ಮೊದಲೇ ಮೃತಪಟ್ಟಳು' ಎಂದು ಬಾಲಕಿಯ ತಂದೆ ಪೊಲೀಸರಿಗೆ ದೂರು ನೀಡಿದ್ದಾರೆ.

75 ನಿವೃತ್ತ ಯೋಧರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ದೇಶ ಸುಭದ್ರವಾಗಿರಲು ಸೈನಿಕರ ಪಾತ್ರ ಮಹತ್ವದ್ದು. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರನ್ನು ಪ್ರತಿಯೊಬ್ಬರೂ ಸ್ಮರಿಸಬೇಕು' ಎಂದು ಸಂಸದ ಪಿ.ಸಿ.ಮೋಹನ್ ತಿಳಿಸಿದರು.

ಕಲ್ಯಾಣನಗರ ನಾಗರಿಕರ ಸಾಂಸ್ಕೃತಿಕ ವೇದಿಕೆ ವತಿಯಿಂದ ಕಾಚರಕನಹಳ್ಳಿಯಲ್ಲಿ ಭಾನುವಾರ ನಡೆದ ಸ್ವಾತಂತ್ರ್ಯ ದಿನ ಹಾಗೂ ನಿವೃತ್ತ ಸೇನಾ ಸಿಬ್ಬಂದಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅನೇಕ ಮಹನೀಯರ ಪ್ರಾಣತ್ಯಾಗದಿಂದ ದೇಶ ಸುಭದ್ರವಾಗಿದೆ. ನಮ್ಮ ಮೇಲೆ ಹಿಡಿತ ಸಾಧಿಸಿದ್ದ ಬ್ರಿಟಿಷರಿಂದ ಸ್ವತಂತ್ರಗೊಂಡ ದಿನವಿದು. ದೇಶದ ಜನರ ರಕ್ಷಣೆಗಾಗಿ ಸೈನಿಕರು ತಮ್ಮ ಪ್ರಾಣದ ಹಂಗು ತೊರೆದು, ಕಾಯುತ್ತಿದ್ದಾರೆ. ಅವರನ್ನು ಸನ್ಮಾನಿಸುವುದು ಶ್ಲಾಘನೀಯ' ಎಂದರು.

ನಿವೃತ್ತ ಸೇನಾ ಸಿಬ್ಬಂದಿಯನ್ನು ಸಂಸದ ಪಿ.ಸಿ.ಮೋಹನ್ ಸನ್ಮಾನಿಸಿದರು. ಪದ್ಮನಾಭರೆಡ್ಡಿ, ಕಲ್ಯಾಣನಗರ ನಾಗರಿಕರ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಉತ್ತಪ್ಪ, ಪೊಲೀಸ್ ಅಧಿಕಾರಿ ಸತೀಶ್, ಮುಖಂಡರಾದ ಎಂ.ಎನ್.ರೆಡ್ಡಿ, ಕೆ.ಪಿ.ಮೂರ್ತಿ ಹಾಗೂ ಇತರರು ಇದ್ದರು.

ಬಿಜೆಪಿ ಮುಖಂಡ ಪದ್ಮನಾಭ ರೆಡ್ಡಿ, 'ಕಾಚರಕನಹಳ್ಳಿಯಲ್ಲಿ ಯೋಧರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪರಮವೀರ ಚಕ್ರ ಪ್ರಶಸ್ತಿ ಪಡೆದ ಲೆಫ್ಟಿನೆಂಟ್ ಕರ್ನಲ್ ಬಿ.ಎಸ್.ಗಣಪತಿ ಇದೇ ವಾರ್ಡಿನವರು. ಒಟ್ಟು ಸೇನಾ ವಲಯಗಳಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿರುವ 75 ಮಂದಿಗೆ ಸನ್ಮಾನ ಮಾಡಲಾಯಿತು' ಎಂದು ಅವರು ಹೇಳಿದರು.

ಮೇಘಾಲಯ: ಸಿ.ಎಂ. ನಿವಾಸದ ಮೇಲೆ ಪೆಟ್ರೋಲ್ ಬಾಂಬ್ ದಾಳಿ

ಶಿಲ್ಲಾಂಗ್: ಪೊಲೀಸರು ನಡೆಸಿದ ಎನ್‌ಕೌಂಟರ್‌ನಲ್ಲಿ ಬಂಡುಕೋರ ಮೃತಪಟ್ಟ ಘಟನೆ ಖಂಡಿಸಿ ಮೇಘಾಲಯದಲ್ಲಿ ಆರಂಭವಾಗಿರುವ ಪ್ರತಿಭಟನೆ ಭಾನುವಾರ ಹಿಂಸಾಚಾರಕ್ಕೆ ತಿರುಗಿದೆ. ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ಅವರ ಖಾಸಗಿ ನಿವಾಸದ ಮೇಲೆ ಪೆಟ್ರೋಲ್ ಬಾಂಬ್‌ಗಳನ್ನು ಎಸೆಯಲಾಗಿದೆ.

ಈ ಹಿನ್ನೆಲೆಯಲ್ಲಿ ನಗರದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಈ ಘಟನೆ ವೇಳೆ, ಮುಖ್ಯಮಂತ್ರಿ ಸಂಗ್ಮಾ ಅವರು ಗೃಹ ಕಚೇರಿಯಲ್ಲಿದ್ದರು.

ಗೃಹ ಸಚಿವ ಲಖ್ಮೆನ್ ರಿಂಬುಯಿ ಅವರು ಬೆಳಿಗ್ಗೆಯಷ್ಟೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಒಳ ಶತ್ರುಗಳು ಅಪಾಯಕಾರಿ'

ಪ್ರಜಾವಾಣಿ ವಾರ್ತೆ

ಯಲಹಂಕ:'ದೇಶದ ಹೊರಗಿನ ಭಯೋತ್ಪಾದಕರು ನೇರ ಶತ್ರುಗಳಾದರೆ, ನಮ್ಮ ನಡುವೆಯೇ ಇದ್ದುಕೊಂಡು ದೇಶಕ್ಕೆ ದ್ರೋಹ ಬಗೆಯುವವರು ಹೆಚ್ಚು ಅಪಾಯಕಾರಿ. ಇಂತಹವರನ್ನು ನಾವು ಎಂದಿಗೂ ಸಹಿಸಬಾರದು' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಯಲಹಂಕ ತಾಲ್ಲೂಕು ಆಡಳಿತದ ವತಿಯಿಂದ ಹೊಯ್ಸಳ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅನೇಕ ವೀರರ ತ್ಯಾಗ–ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಅವರನ್ನು ನಾವು ಸದಾ ಸ್ಮರಿಸಬೇಕು' ಎಂದರು.

ಪೊಲೀಸ್, ಎನ್‌ಸಿಸಿ, ಭಾರತ ಸೇವಾದಳ, ವಿದ್ಯಾರ್ಥಿಗಳು ಹಾಗೂ ವಾದ್ಯಗೋಷ್ಠಿ ತಂಡಗಳಿಂದ ಪಥಸಂಚಲನ ನಡೆಯಿತು.

ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಧ್ವಜಾರೋಹಣ ನೆರವೇರಿಸಿದರು. ಶಾಸಕ ಎಸ್.ಆರ್.ವಿಶ್ವನಾಥ್, ವಿಶೇಷ ತಹಶೀಲ್ದಾರ್ ಬಿ.ಆರ್.ಮಂಜುನಾಥ್ ಇದ್ದರು

ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತ ಅಶೋಕ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾ ಅಧಿಕಾರಿ ಎಂ.ವೆಂಕಟೇಶ್, ಮುಖಂಡರಾದ ಎಂ.ಸತೀಶ್, ಎಂ.ಮುನಿರಾಜು ಹಾಗೂ ಇತರರು ಭಾಗವಹಿಸಿದ್ದರು.

ಭೂವಿಜ್ಞಾನ ಮಾಹಿತಿ ತಂತ್ರಜ್ಞರ ಶಿಫಾರಸು • ಬೇರೆ ರಾಜ್ಯಗಳಲ್ಲಿರುವ ವ್ಯವಸ್ಥೆ ರೂಪಿಸಲು ಒತ್ತಾಯ

ವಿಜ್ಞಾನ ವಿಭಾಗಕ್ಕೆ ಸೇರಲಿ ಭೂಗೋಳ

• ಗುರು ಪಿ.ಎಸ್

ಬೆಂಗಳೂರು: ನೀರು, ಮಣ್ಣು, ಸಸ್ಯ, ಪ್ರಾಣಿವರ್ಗ ಹಾಗೂ ಜನರ ನಡುವೆ ಸಂಪರ್ಕ ಕೊಂಡಿಯಂತಿರುವ ಭೂಗೋಳವನ್ನು ರಾಜ್ಯದಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಮಾತ್ರ ಬೋಧಿಸಲಾಗುತ್ತಿದೆ. ಪರಿಸರದ ಅಂಶವನ್ನೇ ಹೆಚ್ಚಾಗಿ ಒಳಗೊಂಡಿರುವ ಈ ವಿಷಯವನ್ನು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೂ ಕಲಿಸಬೇಕು ಮತ್ತು ನೂತನ ಶಿಕ್ಷಣ ನೀತಿ ಜಾರಿಯ ವೇಳೆಯೇ ಈ ಬೇಡಿಕೆಯೂ ಕಾರ್ಯರೂಪಕ್ಕೆ ಬರಬೇಕು ಎಂಬ ಒತ್ತಾಯ ಕೇಳಿಬಂದಿದೆ.

ಭೌಗೋಳಿಕ ಮಾಹಿತಿ ತಂತ್ರಜ್ಞರ ಒಕ್ಕೂಟವು (ಯುಜಿಐಟಿ) ರಾಜ್ಯಸರ್ಕಾರದ ಮುಂದೆ ಇಂಥದ್ದೊಂದು ಬೇಡಿಕೆಯನ್ನು ಇಟ್ಟಿದೆ. ತಮಿಳುನಾಡು,

ಡಾ. ಅಶೋಕ ಹಂಜಗಿ

ಕೇರಳ, ಗೋವಾ ಮತ್ತು ಮಹಾರಾಷ್ಟ್ರದಲ್ಲಿ ವಿಜ್ಞಾನ ನಿಕಾಯದ ಅಡಿಯಲ್ಲಿಯೇ ಈ ವಿಷಯವನ್ನು ಬೋಧಿಸಲಾಗುತ್ತಿದೆ. ರಾಜ್ಯದಲ್ಲಿಯೂ ಇದೇ ವ್ಯವಸ್ಥೆಯನ್ನು ತರಬೇಕು ಎಂಬುದು ಒಕ್ಕೂಟದ ಒತ್ತಾಯ.

ವಿಶ್ವಸಂಸ್ಥೆ ರೂಪಿಸಿರುವ ಅಭಿವೃದ್ಧಿ ಗುರಿಗಳಲ್ಲಿ ಬಹುಪಾಲು ನೇರವಾಗಿ ಭೂಗೋಳಕ್ಕೆ ಸಂಬಂಧಿಸಿದವುಗಳೇ ಆಗಿವೆ. ಕೃಷಿ ಅಭಿವೃದ್ಧಿ, ನೀರು–ಮಣ್ಣಿನ ಸಂರಕ್ಷಣೆ, ಹಸಿವು ಮುಕ್ತ ದೇಶ, ಗುಣಮಟ್ಟದ ಶಿಕ್ಷಣದಂತಹ ಗುರಿಗಳು ಭೂಗೋಳ ಕಲಿಕೆಗೆ ಪೂರಕವಾಗಿವೆ.

‘ಗಾಳಿ, ಮೋಡ, ಮಣ್ಣು, ನೀರು, ಸೂರ್ಯನ ಬಗ್ಗೆ ತಿಳಿಸುವ ಭೂಗೋಳ ಅಥವಾ ಭೂವಿಜ್ಞಾನವನ್ನು ಕಲಾ ವಿಭಾಗದವರು ಮಾತ್ರವಲ್ಲದೆ, ವಿಜ್ಞಾನ, ವಾಣಿಜ್ಯ ನಿಕಾಯದ ವಿದ್ಯಾರ್ಥಿಗಳು ಕಲಿಯುವ ಅವಶ್ಯಕತೆ ಇದೆ. ಭೌಗೋಳಿಕ ತಿಳಿವಳಿಕೆ ಇಲ್ಲದೆ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗುವುದೇ ಇಲ್ಲ’ ಎಂದು ಯುಜಿಐಟಿ ಮುಖ್ಯ-ಕಾರ್ಯದರ್ಶಿ ಮತ್ತು ನೂತನ ಶಿಕ್ಷಣ ನೀತಿ ಪಠ್ಯಕ್ರಮ ಸಮಿತಿಯ ಅಧ್ಯಕ್ಷ ಡಾ.ಅಶೋಕ ಹಂಜಗಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಓದಿದರೆ ಮಾತ್ರ ಹೆಚ್ಚು ಉದ್ಯೋಗಾವಕಾಶ ಇರುತ್ತವೆ ಎಂಬ ಭಾವನೆ ಪೋಷಕರಲ್ಲಿ ಇದೆ. ಆದರೆ, ಭೂಗೋಳ ಪದವೀಧರರಿಗೂ ಈಗ ಹೆಚ್ಚು ಅವಕಾಶಗಳು ಅರಸಿಕೊಂಡು ಬರುತ್ತಿವೆ. ದೂರಸಂವೇದಿ ಅಂಶಗಳನ್ನು ಅಧ್ಯಯನ ಮಾಡುವುದು, ಉಪಗ್ರಹ ಆಧಾರಿತ ಚಿತ್ರಗಳನ್ನು ವಿಶ್ಲೇಷಿಸುವುದು ಮತ್ತು ಬೆಳೆ ಸ್ವರೂಪ, ಅರಣ್ಯಗಳ ಬಗ್ಗೆ ಅಧ್ಯಯನ, ಮ್ಯಾಪಿಂಗ್ ಕ್ಷೇತ್ರದಲ್ಲಿ ಭೂಗೋಳ ಪದವೀಧರರಿಗೆ ಅವಕಾಶಗಳು ಇವೆ. ಬೇಡಿಕೆ ಪೂರೈಸುವಷ್ಟು ವಿದ್ಯಾರ್ಥಿಗಳೇ ನಮಗೆ ಸಿಗುತ್ತಿಲ್ಲ. ಬೇರೆ ರಾಜ್ಯಗಳ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ’ ಎಂದು ಅವರು ಹೇಳಿದರು.

‘ವಿದ್ಯಾರ್ಥಿಗಳು ತೆರೆದ ವಾತಾವರಣದಲ್ಲಿ ಅಥವಾ ಪ್ರಾಯೋಗಿಕವಾಗಿ ಕಲಿಯಲೂ ಈ ವಿಷಯವು ಅವಕಾಶ ಮಾಡಿಕೊಡುತ್ತದೆ. ಮಣ್ಣಿನ ರಚನೆ ಹೇಗೆ, ಮಣ್ಣಿನ ಸವಕಳಿಯಿಂದಾಗುವ ಅನಾಹುತಗಳೇನು, ಇದಕ್ಕೆ ಪರಿಹಾರಗಳೇನು ಎಂಬುದನ್ನು ಕಲಿಯಬೇಕು ಎಂದರೆ ಭೂಗೋಳ ಅಭ್ಯಸಿಸಬೇಕು’ ಎಂದು ಅವರು ಸಲಹೆ ನೀಡಿದರು.

‘ವಿಜ್ಞಾನ ವಿಭಾಗದವರಿಗೂ ಭೂಗೋಳವನ್ನು ಕಲಿಸಬೇಕು ಎಂಬ ವಿಚಾರವಾಗಿ ಯುಜಿಐಟಿ ವತಿಯಿಂದ ವರದಿಯನ್ನು ಸಿದ್ಧಪಡಿಸಲಾಗಿದೆ. ಅದನ್ನು ಸರ್ಕಾರಕ್ಕೆ ಸಲ್ಲಿಸಿ, ಮನವಿ ಮಾಡಲಾಗುವುದು’ ಎಂದೂ ಅವರು ತಿಳಿಸಿದರು.

ಭೂವಿಜ್ಞಾನ ತಜ್ಞರ ಶಿಫಾರಸು

- ಪರಿಸರ ಮತ್ತು ಮನುಷ್ಯನ ನಡುವಣ ಸಂಬಂಧ ತಿಳಿಯಲು ಭೂಗೋಳ ಅಧ್ಯಯನ ಅಗತ್ಯ
- ಯಾವುದೇ ದೇಶದ ಅಭಿವೃದ್ಧಿ ಆಯಾ ರಾಷ್ಟ್ರದ ಭೌಗೋಳಿಕ ರಚನೆಯನ್ನೂ ಅವಲಂಬಿಸಿರುತ್ತದೆ
- ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಗೆ ಭೌಗೋಳಿಕ ತಿಳಿವಳಿಕೆ ಅವಶ್ಯ
- ವಿದ್ಯಾರ್ಥಿಗಳ ತಾರ್ಕಿಕ ಶಕ್ತಿ ವೃದ್ಧಿಸುವ ಭೂವಿಜ್ಞಾನ
- ಡಿಜಿಟಲ್ ಸಮೀಕ್ಷೆಯಂತಹ ಆಧುನಿಕ ಉಪಕ್ರಮಗಳಿಗೂ ಭೌಗೋಳಿಕ ತಿಳಿವಳಿಕೆ ಬೇಕು
- ಎಲ್ಲ ವಿಶ್ವವಿದ್ಯಾಲಯಗಳು, ಕಾಲೇಜುಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಭೂಗೋಳ ಬೋಧಿಸಬೇಕು

ಧ್ವಜಸ್ತಂಭಕ್ಕೆ ವಿದ್ಯುತ್ ಸ್ಪರ್ಶ: ವಿದ್ಯಾರ್ಥಿ ಸಾವು

ಕೋರ: ತುಮಕೂರು ತಾಲ್ಲೂಕಿನ ಕರೀಕೆರೆ ಗ್ರಾಮದಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಮಯದಲ್ಲಿ ಧ್ವಜಕಂಬ ಅಳವಡಿಸುವಾಗ ವಿದ್ಯುತ್ ತಗುಲಿ 10ನೇ ತರಗತಿ ವಿದ್ಯಾರ್ಥಿ ಮೃತಪಟ್ಟಿದ್ದು, ಮತ್ತಿಬ್ಬರು ಗಾಯಗೊಂಡಿದ್ದಾರೆ.

ಚಿಕ್ಕತೊಟ್ಲುಕೆರೆ ಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಚಂದನ್ (16) ಮೃತಪಟ್ಟ ವಿದ್ಯಾರ್ಥಿ.

ರೇಣುಕ ವಿದ್ಯಾಪೀಠದಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಶಶಾಂಕ್ (16), ಟ್ರ್ಯಾಕ್ಟರ್ ಷೋರೂಂನಲ್ಲಿ ಕೆಲಸ ಮಾಡುತ್ತಿರುವ ಪವನ್ (19) ಗಾಯಗೊಂಡಿದ್ದಾರೆ. ಇಬ್ಬರನ್ನೂ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಮೂವರೂ ಕರೀಕೆರೆ ಗ್ರಾಮದವರಾಗಿದ್ದು, ಸ್ವಾತಂತ್ರ್ಯ ದಿನಾಚರಣೆಗಾಗಿ ಧ್ವಜಕಂಬವನ್ನು ಕೆಳಗಿಳಿಸುವ ಸಮಯದಲ್ಲಿ ಶಾಲೆಯ ಸಮೀಪದಲ್ಲೇ ಹಾದು ಹೋಗಿದ್ದ ವಿದ್ಯುತ್ ತಂತಿಗೆ ಸ್ಪರ್ಶಿಸಿ ಈ ಅವಘಡ ಸಂಭವಿಸಿದೆ.

ಚಂದನ್

‘ವಿದ್ಯಾರ್ಥಿ ಸಾವು ಆಘಾತ ತಂದಿದೆ’ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಟ್ವೀಟ್ ಮಾಡಿದ್ದಾರೆ. ಘಟನೆ ಬಗ್ಗೆ ಜಿಲ್ಲಾಧಿಕಾರಿಯಿಂದ ಮಾಹಿತಿ ಪಡೆದು ತನಿಖೆ ನಡೆಸಲು ಸೂಚಿಸುವುದಾಗಿ ಭರವಸೆ ನೀಡಿದ್ದಾರೆ. ಆಸ್ಪತ್ರೆ ಬಳಿ ಮೃತ ಚಂದನ್ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

‘ಜಮೀರ್ ರಾಜಕೀಯ ಚರ್ಚಿಸಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ಪಕ್ಷದ ಶಾಸಕ ಜಮೀರ್ ಅಹಮ್ಮದ್ ಖಾನ್ ಅವರ ಮನೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ಭೇಟಿ ನೀಡಿದರು.

ಆಗಸ್ಟ್ 5ರಂದು ಜಮೀರ್ ಮನೆ, ಕಚೇರಿ ಮತ್ತು ಸಹೋದರರು, ಸಂಬಂಧಿಕರ ಮನೆಗಳ ಮೇಲೆ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ದಾಳಿ ನಡೆಸಿ, ಹಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದರು. ಆ ಬಳಿಕ, ಮೊದಲ ಬಾರಿಗೆ ಸಿದ್ದರಾಮಯ್ಯ ಅವರನ್ನು ಅವರ ನಿವಾಸದಲ್ಲಿ ಜಮೀರ್ ಶನಿವಾರ ಭೇಟಿ ಮಾಡಿದ್ದರು.

‘ಐಎಂಎ ಪ್ರಕರಣದಲ್ಲಿ ನನ್ನ ಪಾತ್ರ ಇಲ್ಲ. ನಾನು ಮನೆ ಕಟ್ಟಿರುವುದು ಐಎಂಎ ಹಣದಿಂದ ಎಂದು ಅಪಪ್ರಚಾರ ಮಾಡಲಾಗಿದೆ. ಇದೆಲ್ಲ ಸುಳ್ಳು’ ಎಂದು ಸಿದ್ದರಾಮಯ್ಯ ಬಳಿ ಜಮೀರ್ ಹೇಳಿಕೊಂಡಿದ್ದಾರೆ. ಅದಕ್ಕೆ ಸಿದ್ದರಾಮಯ್ಯ, ಹಿರಿಯ ವಕೀಲರನ್ನು ಸಂಪರ್ಕಿಸಿ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಭೇಟಿ ಬಳಿಕ ಮಾತನಾಡಿದ ಸಿದ್ದರಾಮಯ್ಯ, ‘ಜಮೀರ್ ಅವರ ಗೃಹಪ್ರವೇಶಕ್ಕೆ ಬರಲು ಆಗಿರಲಿಲ್ಲ. ಹೀಗಾಗಿ, ಜಮೀರ್ ಮನೆಗೆ ಇಂದು ಬಂದಿದ್ದೇನೆ. ಯಾವುದೇ ರಾಜಕೀಯ ಚರ್ಚೆ ನಡೆಸಿಲ್ಲ. ಅವರ ಮೇಲೆ ಇಡಿ ದಾಳಿ ರಾಜಕೀಯ ಪ್ರೇರಿತ’ ಎಂದು ಆರೋಪಿಸಿದರು.

‘ಇಡಿ ದಾಳಿ ಬಗ್ಗೆ ಜಮೀರ್‌ಗೆ ನಾನು ಸಲಹೆ ನೀಡಿಲ್ಲ. ಸಲಹೆ ನೀಡಲು ಅವರ ವಕೀಲರಿದ್ದಾರೆ. ನಮ್ಮ ಪಕ್ಷದ ಕುರಿತು ಮಾತ್ರ ಮಾತನಾಡಿದ್ದೇವೆ’ ಎಂದರು.

ತಮ್ಮ ಮನೆಗೆ ಬಂದ ಸಿದ್ದರಾಮಯ್ಯ ಅವರನ್ನು ಜಮೀರ್ ಗೌರವಿಸಿದರು

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು ‘Deccan Herald-Prajavani Relief Trust’ ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಕಾಲೇಜು ಶುಲ್ಕ ಭರಿಸಿದೆ

‘ಪ್ರಜಾವಾಣಿ’ ನೀಡಿದ ಸ್ಕಾಲರ್‌ಶಿಪ್ ಹಣವನ್ನು ಪ್ರಥಮ ಪಿಯು ತರಗತಿಯ ಶುಲ್ಕಕ್ಕೆ ಬಳಸಿಕೊಂಡೆ. ಉಳಿದ ಹಣವನ್ನು ಪುಸ್ತಕ ಖರೀದಿಸಲು ಬಳಸಿಕೊಂಡೆ. ಕಾಲೇಜು ಸೇರುವ ವೇಳೆ ತುಂಬಾ ಸಮಸ್ಯೆ ಇತ್ತು. ಸ್ಕಾಲರ್‌ಶಿಪ್ ನೀಡಿದ್ದು ತುಂಬಾ ಉಪಯುಕ್ತವಾಯಿತು.

ವಿಕಾಸ್ ಜೆ.ವಿ., ನ್ಯಾಮತಿ, ದಾವಣಗೆರೆ ಜಿಲ್ಲೆ

ನೋಟ್‌ಬುಕ್ ಖರೀದಿಸಿದೆ

‘ಪ್ರಜಾವಾಣಿ’ ನೀಡಿದ ಸ್ಕಾಲರ್‌ಷಿಪ್ ಹಣದಿಂದ ತುಂಬಾ ಅನುಕೂಲವಾಯಿತು. ಅದನ್ನು ದ್ವಿತೀಯ ಪಿಯುಸಿ ಶುಲ್ಕ ಹಾಗೂ ನೋಟ್‌ಬುಕ್ ಖರೀದಿಸಲು ಬಳಸಿಕೊಂಡೆ. ವಿಜ್ಞಾನ ವಿಷಯ ಆಯ್ಕೆ ಮಾಡಿಕೊಂಡಿರುವ ನನಗೆ, ಮುಂದೆ ಎಂಜಿನಿಯರಿಂಗ್ ಮಾಡಬೇಕೆಂಬ ಆಸೆಯಿದೆ. ವಿದ್ಯಾರ್ಥಿಗಳನ್ನು ಈ ರೀತಿ ಆರ್ಥಿಕವಾಗಿ ಪ್ರೋತ್ಸಾಹಿಸುವುದರಿಂದ ಇನ್ನಷ್ಟು ಓದಲು ಪ್ರೇರಣೆ ಸಿಗುತ್ತದೆ.

ನಾಗಶ್ರೀ, ಮಂಗಳೂರು

ಕೋವಿಡ್: 29.29 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,431 ಮಂದಿ ಕೊರೊನಾ ಸೋಂಕಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.29 ಲಕ್ಷ ದಾಟಿದೆ.

ಒಂದು ದಿನದಲ್ಲಿ 1.52 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.93ರಷ್ಟು ವರದಿಯಾಗಿದೆ. 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 311, ಮೈಸೂರಿನಲ್ಲಿ 83 ಹಾಗೂ ಕೊಡಗಿನಲ್ಲಿ 82 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 305 ಹಾಗೂ ಉಡುಪಿಯಲ್ಲಿ 177 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 21 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 11 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 4, ಹಾಸನ ಹಾಗೂ ಬೆಂಗಳೂರಿನಲ್ಲಿ ತಲಾ 3, ಚಿತ್ರದುರ್ಗ, ಕೋಲಾರ ಹಾಗೂ ಉಡುಪಿಯಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉತ್ತರ ಕನ್ನಡ ಸೇರಿದಂತೆ ಐದು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ1.46 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 36,979ಕ್ಕೆ ಏರಿದೆ. ಸೋಂಕಿತರಲ್ಲಿ 1,611 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.69 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 22,497ಕ್ಕೆ ಇಳಿಕೆಯಾಗಿದೆ.

ಅಕ್ರಮ ವಲಸಿಗರನ್ನು ಹೊರಹಾಕಲು ಕ್ರಮ: ಗೃಹ ಸಚಿವ

ಚಿಕ್ಕಮಗಳೂರು: ‘ಅಕ್ರಮ ವಲಸಿಗರನ್ನು ಹೊರಹಾಕಲು ಪ್ರಯತ್ನ ನಡೆಯುತ್ತಿದೆ. ವೀಸಾ ಅವಧಿ ಮುಗಿದಿರುವವರನ್ನು ಬಂಧಿಸಬೇಕು, ಇಲ್ಲವೇ ಹೊರದಬ್ಬಬೇಕು. ಈ ಬಗ್ಗೆ ಕ್ರಮ ವಹಿಸಲು ಅಧಿಕಾರಿಗಳಿಗೆ ತಿಳಿಸಿದ್ದೇನೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕೆಲವರು ಉದ್ದೇಶಪೂರ್ವಕವಾಗಿ ಸಣ್ಣಪುಟ್ಟ ಕೇಸು ಹಾಕಿಸಿಕೊಂಡು ಇಲ್ಲಿ ಇರುತ್ತಾರೆ. ಇಲ್ಲಿಯೇ ನೆಲೆಸಲು ಪ್ರಯತ್ನ ನಡೆಸುತ್ತಾರೆ’ ಎಂದು ಪ್ರತಿಕ್ರಿಯಿಸಿದರು. ‘ಅಕ್ರಮ ವಲಸಿಗರ ಸಮಸ್ಯೆ ಬೆಂಗಳೂರಿನಲ್ಲಿ ಜಾಸ್ತಿ ಇದೆ. ಯಾವ್ಯಾವ ಪ್ರದೇಶದಲ್ಲಿ ಇದ್ದಾರೆ ಎಂಬ ಬಗ್ಗೆ ಸಮೀಕ್ಷೆ ನಡೆಯುತ್ತಿದೆ’ ಎಂದು ಉತ್ತರಿಸಿದರು.

ಆರಗ ಜ್ಞಾನೇಂದ್ರ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	120.53	2,908	5,581
ಹಾರಂಗಿ	2,859	2,856.98	5,019	1,850
ಕಬಿನಿ	2284.00	2,283	6,661	700
ಹೇಮಾವತಿ	2,922	2,920.13	3,656	4,605
ಲಿಂಗನಮಕ್ಕಿ	1,819	1,812.20	9,392	5,738
ಸೂಪಾ (ಮೀ)	564	554.55	4,008	3,151
ಮಾಣಿ	594.36	585.10	1,259	-
ತುಂಗಭದ್ರಾ	1,633	1,632.91	11,466	14,994
ಮಲಪ್ರಭಾ	2079.5	2,077.30	2,556	894
ಘಟಪ್ರಭಾ	2175	2,175	5,688	5,688
ಭದ್ರಾ	186	184.10	5,239	4,336
ಆಲಮಟ್ಟಿ (ಮೀ)	519.6	519.60	30,444	18,257
ನಾರಾಯಣಪುರ (ಮೀ)	492.25	491.48	20,000	8,800

* ನೆಲಮಟ್ಟದಿಂದ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

‘ಹೊರ ಗುತ್ತಿಗೆ ಕಾರ್ಮಿಕರ ಹಿತಕ್ಕಾಗಿ ಹೊಸ ಕಾಯ್ದೆ’

ಕಾರವಾರ: ‘ಹೊರ ಗುತ್ತಿಗೆ ಕಾರ್ಮಿಕರ ಹಿತ ಕಾಯುವ ಸಲುವಾಗಿ ರಾಜ್ಯದಲ್ಲಿ ಹೊಸ ಕಾಯ್ದೆಯನ್ನು ರೂಪಿಸಲಾಗುತ್ತಿದೆ. ಇದು ಜಾರಿಯಾದ ಬಳಿಕ ಉದ್ಯೋಗದಾತರು ಕಾರ್ಮಿಕರ ಭವಿಷ್ಯ ನಿಧಿ ಪಾವತಿಸಿದ ದಾಖಲೆಯ ಪ್ರತಿಯೊಂದನ್ನು, ಪ್ರತಿ ತಿಂಗಳು 30ನೇ ತಾರೀಕಿನಂದು ಇಲಾಖೆಗೆ ಕಡ್ಡಾಯವಾಗಿ ತಲುಪಿಸಬೇಕಾಗುತ್ತದೆ’ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ತಿಳಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹೊರ ಗುತ್ತಿಗೆ ನೌಕರಿಯು ಶೋಷಣೆಯ ಮಾರ್ಗ ಹಿಡಿದಿದೆ ಎಂಬ ಆರೋಪಗಳಿವೆ. ಹಲವು ಸಂಸ್ಥೆಗಳು, ಏಜೆನ್ಸಿಗಳು ಕಾರ್ಮಿಕರ ಭವಿಷ್ಯ ನಿಧಿ (ಪಿ.ಎಫ್), ಕಾರ್ಮಿಕರ ವಿಮೆ (ಇ.ಎಸ್.ಐ) ಪಾವತಿಸುತ್ತಿಲ್ಲ, ವೇತನ ಸರಿಯಾಗಿ ಕೊಡುತ್ತಿಲ್ಲ. ಈ ಬಗ್ಗೆ ಪ್ರಶ್ನಿಸಿದರೆ ಕೆಲಸದಿಂದ ವಜಾ ಮಾಡುತ್ತಾರೆ ಎಂಬ ದೂರುಗಳಿವೆ. ಲಗಾಮು ಇಲ್ಲದ ಕುದುರೆಯಂತೆ ಈ ವಲಯ ಸಾಗುತ್ತಿದೆ. ಹಾಗಾಗಿ ಅದರ ನಿಯಂತ್ರಣಕ್ಕೆ ನಮ್ಮ ಇಲಾಖೆ ಮುಂದಾಗಿದೆ’ ಎಂದು ಹೇಳಿದರು.

ಶಿವರಾಮ ಹೆಬ್ಬಾರ

‘ಹೊಸ ಕಾಯ್ದೆ ಪ್ರಕಾರ ಯಾರೂ ಪಿ.ಎಫ್, ಇ.ಎಸ್.ಐ, ವೇತನ ಪಾವತಿಸದಿರಲು ಸಾಧ್ಯವಿಲ್ಲ. ಇದು ಸರ್ಕಾರಿ ಹಾಗೂ ಸರ್ಕಾರೇತರ–ಎರಡೂ ವಲಯಗಳ ಸಂಸ್ಥೆಗಳಿಗೆ ಅನ್ವಯಿಸುತ್ತದೆ’ ಎಂದು ಸ್ಪಷ್ಟಪಡಿಸಿದರು.

‘ಇದೇ ರೀತಿ, ಕಾರ್ಮಿಕ ಇಲಾಖೆಯಲ್ಲಿ ಆ.16ರಿಂದ ಸೆ.15ವರೆಗೆ ರಾಜ್ಯದಾದ್ಯಂತ ‘ಕಾರ್ಮಿಕ ಅದಾಲತ್’ ಹಮ್ಮಿಕೊಳ್ಳಲು ಸೂಚಿಸಲಾಗಿದೆ. ಪಿಂಚಣಿಯಂಥ ಯಾವುದೇ ಅರ್ಜಿಗಳೂ ಬಾಕಿ ಉಳಿಯಬಾರದು ಎಂದು ನಿರ್ದೇಶನ ನೀಡಲಾಗಿದೆ’ ಎಂದು ತಿಳಿಸಿದರು.

ಜೊಲ್ಲೆಯಿಂದ ಅಕ್ಷಮ್ಯ ಅಪರಾಧ: ರಕ್ಷಾ ರಾಮಯ್ಯ

ಬೆಂಗಳೂರು: ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಹತ್ತನೇ ತರಗತಿಯ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ ಹತ್ಯೆ ಮಾಡಿರುವ ಘಟನೆ ಖಂಡನೀಯ. ಆದರೆ, ಮುಜರಾಯಿ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಬಾಲಕಿಯ ಗುರುತು ಬಹಿರಂಗಪಡಿಸಿ ಮಾಧ್ಯಮಗಳಿಗೆ ಹೇಳಿಕೆ ನೀಡಿರುವುದು ಅಕ್ಷಮ್ಯ ಅಪರಾಧ’ ಎಂದು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ರಕ್ಷಾ ರಾಮಯ್ಯ ಟೀಕಿಸಿದ್ದಾರೆ.

‘ಸಂತ್ರಸ್ತೆಯ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ ಹೇಳುವ ಜೊತೆಗೆ ತಾತ್ಕಾಲಿಕ ಪರಿಹಾರ ನೀಡಿರುವುದು ಸ್ವಾಗತಾರ್ಹ. ಆದರೆ, ಭೇಟಿ ಮಾಡಿರುವ ವಿಡಿಯೊ, ಆಡಿಯೊ ತುಣುಕು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವುದು ಸರಿಯಲ್ಲ. ಸಚಿವರು ಹೇಳಿಕೆಯಲ್ಲಿ ಅತ್ಯಾಚಾರಕ್ಕೆ ಒಳಗಾದ ಬಾಲಕಿಯ ಹೆಸರನ್ನೂ ಉಲ್ಲೇಖಿಸಿರುವುದು ಖಂಡನೀಯ’ ಎಂದು ಹೇಳಿದ್ದಾರೆ.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿಕೆ

ಸಮಗ್ರ ನಗರ ಅಭಿವೃದ್ಧಿ ಯೋಜನೆಗೆ ಹೊಸ ಆಯಾಮ

ಪ್ರಜಾವಾಣಿ ವಾರ್ತೆ

ದಾವಣಗೆರೆ: 2018ರಲ್ಲಿ ಉದ್ದೇಶಿಸಲಾಗಿದ್ದ ಸಮಗ್ರ ನಗರ ಅಭಿವೃದ್ಧಿ ಯೋಜನೆಯನ್ನು ಈವರೆಗೂ ಅಂದುಕೊಂಡಂತೆ ರೂಪಿಸಲು ಆಗಿಲ್ಲ. ಬೆಂಗಳೂರಿನಲ್ಲಿ ಸೋಮವಾರ ನಡೆಯುವ ಉನ್ನತ ಅಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ಹೊಸ ಆಯಾಮ ನೀಡಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

ದಾವಣಗೆರೆಯಲ್ಲಿ ಭಾನುವಾರ ಕ್ರೆಡಾಯ್ ನೂತನ ಕೇಂದ್ರದ ಉದ್ಘಾಟನೆ ಮತ್ತು ಅನುಸ್ಥಾಪನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕಲಬುರ್ಗಿ, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ದಾವಣಗೆರೆ, ಶಿವಮೊಗ್ಗ, ಮೈಸೂರು ಹಾಗೂ ಮಂಗಳೂರು ನಗರಗಳಲ್ಲಿ ಸಿಡಿಪಿ ಪ್ಲಾನ್ ಆಗಿಲ್ಲ. ಜನರಿಗೆ ಎಲ್ಲೆಲ್ಲಿ, ಯಾವ ರೀತಿ ಸಮಸ್ಯೆಯಾಗಿದೆ ಎಂಬುದನ್ನು ಮನಗಂಡು ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಅನೇಕ ಬದಲಾವಣೆ ತರಲು ಕಾರ್ಯೋನ್ಮುಖರಾಗುತ್ತೇವೆ. ಬಹಳ ದಿನಗಳ ಈ ಸಮಸ್ಯೆ ಮುಕ್ತಿ ಕಾಣುವ ಹಂತಕ್ಕೆ ಬಂದಿದೆ’ ಎಂದು ಹೇಳಿದರು.

ಬೈರತಿ ಬಸವರಾಜ

‘ಪ್ರತಿ 10 ವರ್ಷಗಳಿಗೊಮ್ಮೆ ಸಮಗ್ರ ನಗರ ಅಭಿವೃದ್ಧಿ ಯೋಜನೆ ರೂಪಿತವಾಗುತ್ತಿದೆ. 2008ರಲ್ಲಿ ರೂಪಿಸಲಾಗಿತ್ತು. 2018ರ ಯೋಜನೆ ಈವರೆಗೂ ಅನುಷ್ಠಾನಕ್ಕೆ ಬಂದಿಲ್ಲ ಎಂದು ಕ್ರೆಡಾಯ್ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಜಿ. ಅಜಯ್‌ಕುಮಾರ್ ಅವರು ಸಚಿವರ ಗಮನಕ್ಕೆ ತಂದರು. ಈ ವೇಳೆ ಮೇಲಿನಂತೆ ಸಚಿವರು ಪ್ರತಿಕ್ರಿಯಿಸಿದರು.

‘ರಿಯಲ್ ಎಸ್ಟೇಟ್ ಉದ್ಯಮಿಗಳು ಬಡಾವಣೆಗಳನ್ನು ಅಭಿವೃದ್ಧಿಪಡಿಸುವಾಗ ಮೂಲಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಬೇಕು. ಅರ್ಧಂಬರ್ಧ ಕಾಮಗಾರಿಗಳನ್ನು ಮಾಡಿದರೆ ಜನರಿಗೆ ತೊಂದರೆಯಾಗಲಿದೆ. ಇದರಿಂದಾಗಿ ಶುಲ್ಕ ವಸೂಲಾತಿಗೆ ಹೊಡೆತ ಬೀಳಲಿದೆ’ ಎಂದರು.

ನಿಧನ ವಾರ್ತೆ

ಸಿದ್ಧಲಿಂಗ ಸ್ವಾಮೀಜಿ

ಸಿಂದಗಿ (ವಿಜಯಪುರ): ಪಟ್ಟಣದ ವಿರಕ್ತ ಮಠದ ಪೀಠಾಧಿಕಾರಿಗಳಾಗಿದ್ದ ಸಿದ್ಧಲಿಂಗ ಸ್ವಾಮೀಜಿ (58) ಭಾನುವಾರ ಲಿಂಗೈಕ್ಯರಾದರು.

1985 ರಲ್ಲಿ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ಜರುಗಿತ್ತು. ಅವರು, ಸುದೀರ್ಘ ಪರಂಪರೆ ಹೊಂದಿದ ವಿರಕ್ತಮಠದ 18ನೇ ಪೀಠಾಧಿಕಾರಿಗಳಾಗಿದ್ದರು.

ಶ್ರೀಗಳ ಪಾರ್ಥಿವ ಶರೀರದ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಿತು. ನಂತರ ಮಠದ ಆವರಣದಲ್ಲಿ ನಿರ್ಮಿಸಿದ್ದ ಗದ್ದುಗೆಯಲ್ಲಿ ವಿರಕ್ತಮಠದ ಸಂಪ್ರದಾಯದಂತೆ, ನಾಡಿನ ಹಲವಾರು ಗುರು-ವಿರಕ್ತ ಸ್ವಾಮೀಜಿಗಳ ಸಮ್ಮುಖದಲ್ಲಿ ಅಂತ್ಯಕ್ರಿಯೆ ನೆರವೇರಿತು.

ರಾಮಾನಂದ ಅವಧೂತರು

ಕುಮಟಾ (ಉತ್ತರ ಕನ್ನಡ ಜಿಲ್ಲೆ): ವರದಹಳ್ಳಿಯ ಶ್ರೀಧರ ಸ್ವಾಮೀಜಿ ಅವರ ಶಿಷ್ಯರಲ್ಲಿ ಒಬ್ಬರಾಗಿ ಅಧ್ಯಾತ್ಮ, ಸರಳತೆಯ ಮೂಲಕ ‘ರಾಮಾನಂದ ಅವಧೂತ’ ಎಂದೇ ಪ್ರಸಿದ್ಧರಾಗಿದ್ದ ರಾಮಾನಂದ ಸ್ವಾಮೀಜಿ (98) ಶನಿವಾರ ರಾತ್ರಿ ನಿಧನರಾದರು.

ದೀವಗಿಯಲ್ಲಿ ಆಶ್ರಮ ಕಟ್ಟಿ, ಆಂಜನೇಯ ಗುಡಿ ಸ್ಥಾಪಿಸಿದ್ದ ಅವರು ‘ದೀವಗಿ ಮಠದ ಸ್ವಾಮೀಜಿ’ ಎಂದು ಪರಿಚಿತರಾಗಿದ್ದರು.

22ನೇ ವಯಸ್ಸಿನಲ್ಲಿ ಸಹಜಾನಂದ ಅವಧೂತ ಸ್ವಾಮೀಜಿ ಅವರಿಂದ ಸನ್ಯಾಸ ದೀಕ್ಷೆ ಪಡೆದಿದ್ದರು. ನಂತರ ಶ್ರೀಧರ ಸ್ವಾಮೀಜಿ ಅವರ ಶಿಷ್ಯರಾದರು.

‘ಅವರ ಪಾರ್ಥಿವ ಶರೀರವನ್ನು ಆಶ್ರಮ ಆವರಣದ ಒಳಗೆ ಸಮಾಧಿ ಮಾಡುವ ನಿರ್ಣಯ ಕೈಕೊಳ್ಳಲಾಗಿದೆ’ ಎಂದು ರಾಮಾನಂದ ಅವಧೂತ ಟ್ರಸ್ಟ್ ಉಪಾಧ್ಯಕ್ಷ ಡಾ.ಪ್ರಕಾಶ ಪಂಡಿತ ಮಾಹಿತಿ ನೀಡಿದರು.

ಡಾ.ಚಿತ್ತರಂಜನ ಕಲಕೋಟಿ

ಹಾವೇರಿ: ಮಾಜಿ ಶಾಸಕ, ತಾಲ್ಲೂಕಿನ ಕೊರಡೂರ ಗ್ರಾಮದ ಡಾ. ಚಿತ್ತರಂಜನ ಕಲಕೋಟಿ (90) ಅವರು ವಯೋಸಹಜ ಕಾಯಿಲೆಯಿಂದ ಭಾನುವಾರ ನಿಧನರಾದರು.

ಅವರಿಗೆ ಪತ್ನಿ ಅನ್ನಪೂರ್ಣಮ್ಮ, ಪುತ್ರ ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆಯು ಕೊರಡೂರಿನಲ್ಲಿ ಸೋಮವಾರ (ಆ.16) ಮಧ್ಯಾಹ್ನ ಸಕಲ ಸರ್ಕಾರಿ ಗೌರವದೊಂದಿಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಚಿತ್ತರಂಜನ ಅವರು ಹಾವೇರಿ ವಿಧಾನಸಭಾ ಕ್ಷೇತ್ರದಿಂದ 1983 ಹಾಗೂ 1985ರಲ್ಲಿ ಜನತಾ ಪರಿವಾರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಇದಕ್ಕೂ ಮುನ್ನ ಹಾವೇರಿ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ, ಹಾವೇರಿ ಎಪಿಎಂಸಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ರಾಜಕೀಯ ಕ್ಷೇತ್ರದಲ್ಲಿ ಪ್ರಾಮಾಣಿಕ ಹಾಗೂ ಸರಳ ಸಜ್ಜನಿಕೆಯ ರಾಜಕಾರಣಿ ಎಂದು ಗುರುತಿಸಿಕೊಂಡಿದ್ದರು.

ರಾಮಕೃಷ್ಣ ಹೆಗಡೆ ಮತ್ತು ಎಸ್. ಆರ್.ಬೊಮ್ಮಾಯಿ ಅವರಿಗೆ ಪರಮಾಪ್ತರಾಗಿದ್ದರು. ಸಂಗೂರ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಪ್ರಮುಖ ಪಾತ್ರ ವಹಿಸಿ, ಅದರ ಅಭಿವೃದ್ಧಿಗೂ ಶ್ರಮಿಸಿದರು.

1958ರಲ್ಲಿ ಮುಂಬೈನ ಪೋದಾರ್ ಮೆಡಿಕಲ್ ಕಾಲೇಜಿನಿಂದ ಎಂಬಿಬಿಎಸ್ ಪದವಿಗೆ ಸರಿಸಮನಾದ ಜಿಎಫ್‌ಎಎಂ ಪದವಿ ಪಡೆದು, ಕೊರಡೂರಿನ ಗಾಂಧಿ ಸೇವಾ ಆಶ್ರಮದಲ್ಲಿ ಅವರು ಉಚಿತ ವೈದ್ಯಕೀಯ ಸೇವೆ ನೀಡುವ ಮೂಲಕ ಜನರಿಗೆ ಪ್ರೀತಿಪಾತ್ರರಾಗಿದ್ದರು.

ಬೊಟ್ಟಿಕೆರೆ ಪುರುಷೋತ್ತಮ ಪೂಂಜ

ಮುಡಿಪು (ಮಂಗಳೂರು): ಯಕ್ಷಗಾನ ರಂಗದ ‘ಅಭಿನವ ವಾಲ್ಮೀಕಿ’ ಖ್ಯಾತಿಯ ಕಲಾವಿದ, ಪ್ರಸಂಗಕರ್ತ, ಭಾಗವತರಾದ ಮಂಜನಾಡಿ ಗ್ರಾಮದ ಬೊಟ್ಟಿಕೆರೆ ಪುರುಷೋತ್ತಮ ಪೂಂಜ (68) ಶನಿವಾರ ತಡರಾತ್ರಿ ನಿಧನರಾದರು. ಅವರಿಗೆ ಪತ್ನಿ ಶೋಭಾ ಪೂಂಜ, ಪುತ್ರರಾದ ಜೀವಿತೇಶ, ಪರೀಕ್ಷಿತ ಇದ್ದಾರೆ.

ನಾಲ್ಕು ದಶಕಗಳ ಕಾಲ ಅವರು ಯಕ್ಷಗಾನ ರಂಗದಲ್ಲಿ ಸೇವೆ ಸಲ್ಲಿಸಿದ್ದರು. ಉಪ್ಪಳ ಭಗವತಿ ಮೇಳ, ಮುಂಬೈ ಗೀತಾಂಬಿಕಾ ಮಂಡಳಿ, ಪುತ್ತೂರು ಮೇಳ, ಕರ್ನಾಟಕ ಮೇಳ, ಸುಮಾರು 30 ವರ್ಷ ಕಟೀಲು ಮೇಳದಲ್ಲಿ ಸೇವೆ ಸಲ್ಲಿಸಿದ್ದರು. ಹಲವು ಪೌರಾಣಿಕ, ಕಾಲ್ಪನಿಕ, ತುಳು ಪ್ರಸಂಗಗಳನ್ನು ರಚಿಸಿದ ಹಿರಿಮೆ ಅವರದು.

ಚಿತ್ತೂರು ನಾರಾಯಣ ದೇವಾಡಿಗ

ಉಡುಪಿ: ಯಕ್ಷಗಾನ ಕಲಾವಿದ ಚಿತ್ತೂರು ನಾರಾಯಣ ದೇವಾಡಿಗ (70) ಭಾನುವಾರ ಬೈಂದೂರಿನಲ್ಲಿರುವ ಪುತ್ರಿಯ ನಿವಾಸದಲ್ಲಿ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಕುಂದಾಪುರ ತಾಲ್ಲೂಕಿನ ಹಳ್ನಾಡಿನ ಚಿತ್ತೂರು ನಾರಾಯಣ ದೇವಾಡಿಗರು 14ನೇ ವಯಸ್ಸಿನಲ್ಲಿ ಗೆಜ್ಜೆ ಕಟ್ಟಿ, ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಗುರು ವೀರಭದ್ರ ನಾಯಕ, ನೀಲಾವರ ರಾಮಕೃಷ್ಣಯ್ಯ, ಹಿರಿಯಡ್ಕ ಗೋಪಾಲರಾಯರ ಗರಡಿಯಲ್ಲಿ ಪಳಗಿ, ಸ್ತ್ರೀವೇಷಧಾರಿಯಾಗಿ ಮೇಳ ಸೇರಿದರು.

ಇವರ ಕಲಾಸಾಧನೆಗೆ ದ್ಯೋತಕವಾಗಿ ಹಲವು ಪುರಸ್ಕಾರಗಳು ಸಂದಿವೆ.

ಒಳನೋಟ

ಶಕ್ತರಾಗಲಿ ಚಿಣ್ಣರು

ಬೆಂಗಳೂರು: ಅಪೌಷ್ಟಿಕ ‘ಕರ್ನಾಟಕ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಆ.15) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಅಪೌಷ್ಟಿಕತೆ ದೇಶದ ಭವಿಷ್ಯಕ್ಕೆ ಮಾರಕ

ಪೌಷ್ಟಿಕ ಹಾಗೂ ಸದೃಢವಾದ ಮಕ್ಕಳಿಂದ ಭವ್ಯಭಾರತ ನಿರ್ಮಾಣ ಸಾಧ್ಯ. ರಾಜ್ಯದಲ್ಲಿ ಶಿಶುವಿನ ಹಂತದಿಂದಲೇ ಅಪೌಷ್ಟಿಕತೆ ದಾಳಿ ನಡೆಸುತ್ತಿದೆ. ಇದರಿಂದ ಶಿಶು ಮರಣ, ಮಕ್ಕಳ ಬೆಳವಣಿಗೆ ಕುಂಠಿತದಂತಹ ಸಮಸ್ಯೆಗಳು ಹೆಚ್ಚಾಗುತ್ತಿವೆ. ಮಕ್ಕಳನ್ನು ಬಲಿಷ್ಠಗೊಳಿಸದಿದ್ದರೆ, ದೇಶದ ಭವಿಷ್ಯ ಯಾವ ಕಾರಣಕ್ಕೂ ಬಲಿಷ್ಠವಾಗಿರುವುದಿಲ್ಲ.

ಕಿರಣ್ ಬಂಡ್ರಿ, ಬಳ್ಳಾರಿ

ಮಕ್ಕಳನ್ನು ಸದೃಢಗೊಳಿಸಿ

ಸಸ್ಯದ ಬೆಳವಣಿಗೆಗೆ ಉತ್ತಮ ಮಣ್ಣು, ಗೊಬ್ಬರ, ನೀರು ಅಗತ್ಯವಿರುವಂತೆ ಒಂದು ಮಗು ಸದೃಢವಾಗಿ ಬೆಳೆಯಲು ಪೌಷ್ಟಿಕ ಆಹಾರ ಮುಖ್ಯ. ಬಾಲ್ಯದಿಂದಲೇ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗಬೇಕು. ಕೋವಿಡ್‌ನಿಂದಾಗಿ ಕಳೆದ ವರ್ಷದಿಂದ ಪೌಷ್ಟಿಕ ಆಹಾರಗಳ ಪೂರೈಕೆಗೆ ತೊಡಕಾಗಿದೆ. ಸರ್ಕಾರ ಇದಕ್ಕೆ ಪರ್ಯಾಯ ಮಾರ್ಗಗಳನ್ನು ಅನುಸರಿಸಿ, ಎಲ್ಲ ಮಕ್ಕಳಿಗೆ ಪೌಷ್ಟಿಕಯುಕ್ತ ಆಹಾರ ಪೂರೈಸಬೇಕು.

ಮಮತಾ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ

ಪೋಷಕರೇ ಫಲಾನುಭವಿಗಳು

ಅಪೌಷ್ಟಿಕತೆಯಿಂದ ಮಕ್ಕಳಲ್ಲಿ ಆರೋಗ್ಯದ ಜೊತೆಗೆ ವ್ಯಕ್ತಿತ್ವದ ಬೆಳವಣಿಗೆಯಲ್ಲೂ ದೀರ್ಘಾವಧಿಯ ಪರಿಣಾಮ ಬೀರುತ್ತದೆ. ಪೋಷಣ್ ಅಭಿಯಾನಕ್ಕೆ ಸರ್ಕಾರದ ಜೊತೆ ಪೋಷಕರೂ ಕೈಜೋಡಿಸಬೇಕು. ಪೋಷಕರ ಪಾಲಾಗುತ್ತಿರುವ ಪೌಷ್ಟಿಕ ಆಹಾರ ಮಗುವಿಗೆ ಸಿಗುವಂತಾಗಬೇಕು. ಆಹಾರ ಪದಾರ್ಥಗಳನ್ನು ಕಾಳಸಂತೆಯಲ್ಲಿ ಮಾರಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಮಾರುತಿ, ಧಾರವಾಡ

ಸಮರ್ಪಕ ಹಂಚಿಕೆಯಾಗಲಿ

ಗ್ರಾಮಾಂತರ ಪ್ರದೇಶದವರಿಗೆ ಪೌಷ್ಟಿಕ ಆಹಾರ ಯಾವ ಪ್ರಮಾಣದಲ್ಲಿ ಕೊಡುತ್ತಾರೆ ಎಂಬ ಮಾಹಿತಿಯೇ ಇಲ್ಲ. ಬರುತ್ತಿರುವ ಆಹಾರ ಪದಾರ್ಥಗಳು ಸರಿಯಾಗಿ ಹಂಚಿಕೆಯೂ ಆಗುತ್ತಿಲ್ಲ. ಕೋವಿಡ್ ಕಾಲದಲ್ಲಿ ಮಕ್ಕಳಿಗೆ ಉತ್ತಮ ಆಹಾರ ತುರ್ತಾಗಿ ಸಿಗಬೇಕಾಗಿದೆ. ಅಧಿಕಾರಿಗಳು ಈ ಬಗ್ಗೆ ವಿಶೇಷ ಗಮನ ನೀಡಬೇಕು.

ಜಿ.ಪಿ.ಬಿರಾದಾರ, ವಿಜಯಪುರ

ಹಣ ಏನಾಗುತ್ತಿದೆ?

ಬೇರೆ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಅಪೌಷ್ಟಿಕತೆ ಪ್ರಮಾಣ ಏರಿಕೆ ಕಂಡಿರುವುದು ದುರಂತ. ಅಪೌಷ್ಟಿಕತೆ ನಿವಾರಣೆಗೆ ಸರ್ಕಾರ ಕೋಟಿಗಟ್ಟಲೆ ಹಣ ವ್ಯಯ ಮಾಡುತ್ತಿದೆ. ಹಾಗಾದರೆ ಹಣವೆಲ್ಲ ಎಲ್ಲಿ ಸೇರುತ್ತಿದೆ? ಸರ್ಕಾರದ ಯೋಜನೆಗಳಲ್ಲಿ ಅಕ್ರಮ, ಭ್ರಷ್ಟಾಚಾರಗಳು ಅವ್ಯಾಹತವಾಗಿ ನಡೆಯುತ್ತಿದ್ದು, ಈ ಬಗ್ಗೆ ತನಿಖೆಯಾಗಬೇಕು.

ಸೋಮಲಿಂಗಪ್ಪ, ಕೊಪ್ಪಳ

ನೋಡಲ್ ಅಧಿಕಾರಿ ನೇಮಿಸಿ

ಅಧಿಕಾರಿಗಳು ಹಾಗೂ ಅಂಗನವಾಡಿ ಕಾರ್ಯಕರ್ತರ ಇಚ್ಛಾಶಕ್ತಿ ಕೊರತೆಯಿಂದ ಯೋಜನೆಗಳ ಸೌಲಭ್ಯಗಳು ಸಮರ್ಪಕವಾಗಿ ದಡ ಸೇರುತ್ತಿಲ್ಲ. ಬೇಲಿಯೇ ಎದ್ದು ಹೊಲ ಮೇಯುವಂತೆ ಅಧಿಕಾರಿಗಳು ಮತ್ತು ಸಚಿವರು ಯೋಜನೆಗಳ ಹಣ ನುಂಗಿರುವುದು ಅಪೌಷ್ಟಿಕತೆ ಸ್ಥಿತಿಗೆ ಕಾರಣ. ಹಾಲು, ಮೊಟ್ಟೆ ಹಾಗೂ ಪೌಷ್ಟಿಕ ಧಾನ್ಯಗಳ ವಿತರಣೆಯಲ್ಲಿನ ಸತ್ಯಾಸತ್ಯತೆ ಪರಿಶೀಲಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು.

ಆರ್.ಮಾರುತಿ, ಚಿತ್ರದುರ್ಗ

ಜನಪರ ಯೋಜನೆ ಸಂಕಲ್ಪ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಆಡಳಿತಾವಧಿಯಲ್ಲಿ ಜನಪರ, ಜನೋಪಯೋಗಿ ಯೋಜನೆಗಳನ್ನು ರೂಪಿಸಿ, ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುವ ಸಂಕಲ್ಪ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನ ಮಂಡಲದ ಉಭಯ ಸದನಗಳ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆದ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ ಉದ್ಘಾಟಿಸಿ ಮಾತನಾಡಿದ ಅವರು, 'ಜನರಿಗಾಗಿ, ಜನರ ಕಲ್ಯಾಣಕ್ಕಾಗಿ ನನ್ನ ಆಡಳಿತ ಇರಲಿದೆ. ಜನಪ್ರಿಯರಾಗುವುದು ಸುಲಭ. ಆದರೆ, ಜನೋಪಯೋಗಿ ಆಗಬೇಕು' ಎಂದರು.

'ವಿಧಾನಸೌಧ ಪ್ರಜಾಪ್ರಭುತ್ವದ ದೇವಾಲಯ. ಅಂಬೇಡ್ಕರ್ ನೀಡಿರುವ ಸಂವಿಧಾನವೇ ಈ ದೇಗುಲದ ಧರ್ಮ ಗ್ರಂಥ' ಎಂದ ಅವರು, 'ಆಳುವ ವರ್ಗದವರು ಜನಸ್ನೇಹಿ ಆಗಿರಬೇಕು. ವಿಧಾನಸಭೆ, ವಿಧಾನಪರಿಷತ್ ಜನಸ್ನೇಹಿ ಕಾನೂನುಗಳನ್ನು ರೂಪಿಸಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಚಿಂತನೆ ನಡೆಸಬೇಕು' ಎಂದೂ ಆಶಿಸಿದರು.

'ವ್ಯಕ್ತಿಯೊಬ್ಬರಿಗೆ 75 ವರ್ಷ ವಯಸ್ಸು ಎಂದರೆ ವೃದ್ಧಾಪ್ಯ. ಆದರೆ, ಪ್ರದೇಶಕ್ಕೆ, ದೇಶಕ್ಕೆ ಚಿರ ಯೌವನದ ವಯಸ್ಸು. ಯೌವನದಲ್ಲಿ ಉತ್ಸಾಹ, ಸಾಧಿಸುವ ಹಂಬಲ, ಸ್ಫೂರ್ತಿ ಹೇಗೆ ಹೆಚ್ಚಿರುತ್ತದೊ, ಅಂಥ ಕಾಲಘಟ್ಟಕ್ಕೆ ನಮ್ಮ ದೇಶ ಬಂದು ಮುಟ್ಟಿದೆ. ಇಂಥ ಸಂದರ್ಭದಲ್ಲಿ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಎಲ್ಲ ಮಹನೀಯರನ್ನು ಗೌರವಿಸುವ ಜೊತೆಗೆ, ಅವರು ಹಾಕಿಕೊಟ್ಟ ದಾರಿಯಲ್ಲಿ ದೇಶದ ಪ್ರಗತಿಗಾಗಿ ಕೆಲಸ ಮಾಡೋಣ' ಎಂದರು.

ಆಂತರಿಕವಾಗಿಯೂ ಅಪಾಯವಿದೆ: ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, 'ನೆರೆಯ ರಾಷ್ಟ್ರಗಳಿಂದ ಮಾತ್ರ ಭಯೋತ್ಪಾದನೆಯ ಅಪಾಯ ನಾವು ಎದುರಿಸುತ್ತಿಲ್ಲ. ಆಂತರಿಕವಾಗಿಯೂ ಅಪಾಯವಿದೆ. ಮಾವೋವಾದಿಗಳ ರೂಪದಲ್ಲಿ, ನಕ್ಸಲರ ರೂಪದಲ್ಲಿ ಸಮಾಜ ಒಡೆಯುವ ಪ್ರಯತ್ನಗಳು ನಡೆದಿದೆ' ಎಂದರು.

'ನಮ್ಮ ಶಿಕ್ಷಣ ವ್ಯವಸ್ಥೆ ಬದಲಾಗಬೇಕಾಗಿದೆ. ಹಿಂದಿನ ಸರ್ಕಾರಗಳ ತಪ್ಪಿನಿಂದಾಗಿ ನಾವು ಇನ್ನೂ ಬ್ರಿಟಿಷ್ ಮಾದರಿಯ ಶಿಕ್ಷಣ ವ್ಯವಸ್ಥೆಯನ್ನೇ ಅನುಸರಿಸುತ್ತಿದ್ದೇವೆ. ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಶಿಕ್ಷಣ ವ್ಯವಸ್ಥೆ ನಮ್ಮದಾಗಬೇಕು' ಎಂದು ತಿಳಿಸಿದರು.

'ನೈತಿಕತೆ, ತತ್ವ ಸಿದ್ಧಾಂತಗಳು ಮತ್ತು ಮಾನವೀಯ ಮೌಲ್ಯಗಳು ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ಮುಂದಿನ ಪೀಳಿಗೆಯಲ್ಲಿ ಸಾಮಾಜಿಕ ಮೌಲ್ಯಗಳನ್ನು ಬಿತ್ತುವ ಮೂಲಕ ಭಾರತೀಯ ಪ್ರಜಾಪ್ರಭುತ್ವವನ್ನು ಇನ್ನಷ್ಟು ಗಟ್ಟಿಗೊಳಿಸೋಣ' ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ಬಗ್ಗೆ ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ವಿಶೇಷ ಉಪನ್ಯಾಸ ನೀಡಿದರು. ದೇಶಭಕ್ತಿ ಗೀತೆಗಳು, ಸ್ವಾತಂತ್ರ್ಯ ಕುರಿತ ಗೀಗೀ ಪದ ಮತ್ತು ಸಾಂಸ್ಕೃತಿಕ ಕಾರ್ಯಕಮಗಳೂ ನಡೆದವು.

ವಿಧಾನಸೌಧದ ಮುಂಭಾಗದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಧ್ವಜಾರೋಹಣ ಮಾಡಿದರು – ಪ್ರಜಾವಾಣಿ ಚಿತ್ರ

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸಂವಾದ ಬೆಳಿಗ್ಗೆ 11ರಿಂದ 12
ರಾಜಕೀಯದಲ್ಲಿ ಅಪರಾಧೀಕರಣ: ಸುಪ್ರೀಂ ಕೋರ್ಟ್ ತೀರ್ಪಿನ ಬಳಿಕ..
ಬಸವರಾಜ ರಾಯರಡ್ಡಿ, ಮಾಜಿ ಸಚಿವ, ಕಾಂಗ್ರೆಸ್
ಪೃಥ್ವಿ ರೆಡ್ಡಿ, ಆಮ್ ಆದ್ಮಿ ಪಾರ್ಟಿ, ರಾಜ್ಯ ಸಂಚಾಲಕ
ಮುನೀರ್ ಕಾಟಿಪಳ್ಳ, ಡಿವೈಎಫ್ಐ ರಾಜ್ಯ ಅಧ್ಯಕ್ಷ
ಪಾಡ್‌ಕಾಸ್ಟ್: ಇಂದಿನ ವಿಶೇಷ: ವಚನವಾಣಿ,
ಪ್ರತೀ ದಿನ: ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ ಬುಲೆಟಿನ್, ಸಂಪಾದಕೀಯ, ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ಶಿರಾಡಿ ಘಾಟ್ ಇಂದು ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಶಿರಾಡಿ ಘಾಟ್ ಸೋಮವಾರದಿಂದ ಸಂಚಾರಕ್ಕೆ ಮುಕ್ತವಾಗಿದೆ.

'ಶಿರಾಡಿ ಘಾಟ್‌ನಲ್ಲಿ 20 ಟನ್ ಭಾರದೊಳಗಿನ ವಾಹನಗಳಿಗೆ ಸಂಚಾರ ಮುಕ್ತವಾಗಿವೆ. ಆದರೆ, ಸಂಚಾರದ ಕುರಿತು ಸೋಮವಾರ ಹಾಸನ ಜಿಲ್ಲಾಧಿಕಾರಿ ಅಧಿಕೃತವಾಗಿ ಸ್ಪಷ್ಟಪಡಿಸಲಿದ್ದಾರೆ' ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ಸುದ್ದಿಗಾರರಿಗೆ ತಿಳಿಸಿದ್ದಾರೆ.

ಟೀಕೆಗಳನ್ನೇ ಯಶಸ್ಸಿನ ಮೆಟ್ಟಿಲಾಗಿ ಸ್ವೀಕರಿಸುವುದಾಗಿ ಹೇಳಿಕೆ

ಭಾಷಣದಲ್ಲಿ ಸಂಪ್ರದಾಯ ಮುರಿದ ಬೊಮ್ಮಾಯಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆಯ ಸಂದೇಶ ನೀಡುವಾಗ ಮುದ್ರಿತ ಭಾಷಣವನ್ನಷ್ಟೇ ಓದುವ ಸಂಪ್ರದಾಯವನ್ನು ಮುರಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜಕೀಯ ಟೀಕೆಗಳು ಮತ್ತು ತಮ್ಮ ಮುಂದಿರುವ ಸವಾಲುಗಳ ಕುರಿತು ಪ್ರತಿಕ್ರಿಯಿಸಿದರು. ಟೀಕೆಗಳಿಗೆ ಎದೆಗುಂದದೆ ಸಾಗುವುದಾಗಿ ಸಂದೇಶ ರವಾನಿಸುವ ಪ್ರಯತ್ನ ಮಾಡಿದರು.

'ಹಲವು ದಿನಗಳಿಂದ ನನ್ನನ್ನು ಟೀಕಿಸುವುದು, ಅವಮಾನಿಸುತ್ತಿರುವುದೂ ನಡೆಯುತ್ತಿದೆ. ಟೀಕೆ, ಅವಮಾನ ಎಲ್ಲವೂ ಆಶೀರ್ವಾದ ಎಂದೇ ಭಾವಿಸುವೆ. ಅವುಗಳನ್ನೇ ಮೆಟ್ಟಿಲಾಗಿ ಬಳಸಿಕೊಂಡು ಯಶಸ್ವಿಯಾಗುವೆ' ಎಂದು ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಹೇಳಿದರು.

ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಭಾನುವಾರ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಗಡಿ ಭದ್ರತಾ ಪಡೆಯ ಯೋಧರು ರಾಷ್ಟ್ರ ಧ್ವಜದ ಮುಂದೆ ನಿಂತಿದ್ದ ದೃಶ್ಯ –ಪ್ರಜಾವಾಣಿ ಚಿತ್ರ

ತಮಗೆ ಇರುವುದು ಕೇವಲ 20 ತಿಂಗಳ ಅವಧಿ ಎಂಬ ಅರಿವಿದೆ. ಈ ಕಾರಣಕ್ಕಾಗಿಯೇ ರಾಜ್ಯದ ಅಭಿವೃದ್ಧಿಗೆ ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರಲಾಗುವುದು. ಅಭಿವೃದ್ಧಿ ಎಂದರೆ ಕೇವಲ ಅಂಕಿಅಂಶಗಳಲ್ಲ. ಅಭಿವೃದ್ಧಿಯ ಸುತ್ತ ಜನರು ಸುತ್ತುವಂತಾಗಬಾರದು. ಜನರ ಬಳಿಗೆ ಅಭಿವೃದ್ಧಿ ತಲುಪಬೇಕು ಎಂಬ ಮಾತಿನಲ್ಲಿ ತಮಗೆ ನಂಬಿಕೆ ಇದೆ. ಅದೇ ರೀತಿ ತಮ್ಮ ಸರ್ಕಾರ ಕೆಲಸ ಮಾಡಲಿದೆ ಎಂದು ಅವರು ಹೇಳಿದರು.

'ಜನರು ಸರ್ಕಾರಿ ಸೇವೆಗಳನ್ನು ಪಡೆಯಲು ಕಚೇರಿಯಿಂದ ಕಚೇರಿಗೆ ಅಲೆದಾಡುವುದು ಕೊನೆಯಾಗಬೇಕು. ಜನರ ಬಳಿಗೆ ಸುಲಭವಾಗಿ ಸರ್ಕಾರಿ ಸೇವೆಗಳು ತಲುಪಬೇಕು. ಆಡಳಿತ ನಡೆಸುವುದು ಮತ್ತು ಆಳುವುದು ಬೇರೆ ಬೇರೆ ಎಂಬ ಮಾತು ಇದೆ. ಈ ವ್ಯತ್ಯಾಸ ಅರಿತು ಕೆಲಸ ಮಾಡುತ್ತೇನೆ. ನವ ಕರ್ನಾಟಕದ ನಿರ್ಮಾಣಕ್ಕೆ ಈ ಕ್ಷಣದಿಂದಲೇ ಕಾರ್ಯಪ್ರವೃತ್ತನಾಗಿದ್ದೇನೆ' ಎಂದು ಹೇಳಿದರು.

ನೈಸರ್ಗಿಕ ಸಂಪತ್ತನ್ನು ಜನಪರವಾಗಿ ಬಳಸಿಕೊಳ್ಳಲಾಗುವುದು. ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಅಭಿವೃದ್ಧಿಗೆ ವೇಗ ನೀಡಲಾಗುವುದು. ಕಾನೂನು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವುದಕ್ಕೆ ಆದ್ಯತೆ ನೀಡಲಾಗುವುದು. ಮಹಿಳೆಯರ ಶಕ್ತಿಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಯೋಜನೆ ರೂಪಿಸಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಜನರ ವೈಯಕ್ತಿಕ ಆದಾಯ ಹೆಚ್ಚಿಸುವ ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದು ಘೋಷಿಸಿದರು.

ಸಹಕಾರಕ್ಕೆ ಮನವಿ: 'ಒಂದೂವರೆ ವರ್ಷಗಳಿಂದ ಕೋವಿಡ್ ನಮ್ಮನ್ನು ಕಾಡುತ್ತಿದೆ. ಈಗ ಮೂರನೇ ಅಲೆಯ ಭೀತಿಯಲ್ಲಿ ಇದ್ದೇವೆ. ಜನರು ಆರೋಗ್ಯ ಇಲಾಖೆ ಮತ್ತು ತಜ್ಞರ ಸಲಹೆ, ನಿರ್ದೇಶನಗಳನ್ನು ಪಾಲಿಸುವ ಮೂಲಕ ಸಂಪೂರ್ಣ ಸಹಕಾರ ನೀಡಬೇಕು' ಎಂದು ಮುಖ್ಯಮಂತ್ರಿ ಮನವಿ ಮಾಡಿದರು.

ಬಿಎಸ್‌ವೈಗೆ ಅಭಿನಂದನೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ವಾತಂತ್ರ್ಯ ದಿನಾಚರಣೆ ಸಂದೇಶ ನೀಡುವಾಗ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಎರಡು ಬಾರಿ ಸ್ಮರಿಸಿದರು. ಕೋವಿಡ್ ಬಿಕ್ಕಟ್ಟಿನ ನಿರ್ವಹಣೆ ಮತ್ತು ಅಭಿವೃದ್ಧಿ ಯೋಜನೆಗಳ ವಿಷಯ ಪ್ರಸ್ತಾಪಿಸುವಾಗ ಅವರಿಗೆ ಅಭಿನಂದನೆ ಹೇಳಿದರು.

ಅಮೃತ ಮಹೋತ್ಸವಕ್ಕೆ 14 'ಅಮೃತ' ಯೋಜನೆ

ಒಂದನೇ ಪುಟದಿಂದ...

750 ಶಾಲಾ, ಕಾಲೇಜುಗಳನ್ನು ಗುರುತಿಸಿ, ಅಲ್ಲಿನ ವಿದ್ಯಾರ್ಥಿಗಳನ್ನು ಸಮುದಾಯ ಸೇವೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಲು 'ಅಮೃತ ಸಮುದಾಯ ಅಭಿವೃದ್ಧಿ ಯೋಜನೆ' ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ರೈತ ಉತ್ಪಾದಕ ಸಂಸ್ಥೆ: ರೈತರು, ನೇಕಾರರು ಮತ್ತು ಮೀನುಗಾರರ ಉತ್ಪನ್ನಗಳ ಉತ್ಪಾದನೆ ಹಾಗೂ ಮಾರಾಟವನ್ನು ಉತ್ತೇಜಿಸಲು 750 'ಅಮೃತ ರೈತ ಉತ್ಪಾದಕ ಸಂಸ್ಥೆ'ಗಳನ್ನು ಸ್ಥಾಪಿಸಲಾಗುವುದು. ಈ ಸಂಸ್ಥೆಗಳಿಗೆ ತಲಾ ₹ 30 ಲಕ್ಷದಂತೆ ಮೂರು ವರ್ಷದ ಅವಧಿಯಲ್ಲಿ ಒಟ್ಟು ₹ 225 ಕೋಟಿ ಅನುದಾನ ನೀಡಲಾಗುವುದು ಎಂದು ಪ್ರಕಟಿಸಿದರು.

75 ನಗರ ಸ್ಥಳೀಯ ಸಂಸ್ಥೆಗಳಲ್ಲಿ 'ಅಮೃತ ನಿರ್ಮಲ ನಗರ' ಯೋಜನೆ ಅನುಷ್ಠಾನಗೊಳಿಸಲಾಗುವುದು. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತೆ ಮತ್ತು ಸೌಂದರ್ಯ ಕಾಪಾಡಿಕೊಳ್ಳಲು ತಲಾ ₹ 1 ಕೋಟಿ ಅನುದಾನ ನೀಡಲಾಗುವುದು. 750 ಶಾಲೆಗಳಿಗೆ ತಲಾ ₹ 10 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ಕಟ್ಟಡ, ಪ್ರಯೋಗಾಲಯ, ಗ್ರಂಥಾಲಯ, ಶೌಚಾಲಯ ಮತ್ತಿತರ ಸೌಲಭ್ಯ ಕಲ್ಪಿಸಲು 'ಅಮೃತ ಶಾಲಾ ಸೌಲಭ್ಯ ಯೋಜನೆ' ಜಾರಿಗೆ ಬರಲಿದೆ ಎಂದರು.

ತಲಾ ₹ 1 ಲಕ್ಷ ಅನುದಾನದಲ್ಲಿ 750 ಅಂಗನವಾಡಿ ಕೇಂದ್ರಗಳ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು 'ಅಮೃತ ಅಂಗನವಾಡಿ ಕೇಂದ್ರ' ಯೋಜನೆ ರೂಪಿಸಲಾಗಿದೆ. 'ಅಮೃತ ಆರೋಗ್ಯ ಮೂಲಸೌಕರ್ಯ ಉನ್ನತೀಕರಣ ಯೋಜನೆ' ಅಡಿಯಲ್ಲಿ 750 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುವುದು. ಇದಕ್ಕಾಗಿ ₹ 150 ಕೋಟಿ ವೆಚ್ಚ ಮಾಡಲಾಗುವುದು ಎಂದು ಬೊಮ್ಮಾಯಿ ಘೋಷಿಸಿದರು.

ಕಿರು ಉದ್ದಿಮೆಗಳ ಆರಂಭ: 7,500 ಸ್ವಸಹಾಯ ಗುಂಪುಗಳನ್ನು ಕಿರು ಉದ್ಯಮ ಸಂಸ್ಥೆಗಳನ್ನಾಗಿ ರೂಪಿಸಲು 'ಅಮೃತ ಸ್ವಸಹಾಯ ಕಿರು ಉದ್ಯಮ' ಯೋಜನೆಯಡಿ ತಲಾ ₹ 1 ಲಕ್ಷ ಮೂಲಧನ ನೀಡಲಾಗುವುದು. ಇದಕ್ಕಾಗಿ ₹ 75 ಕೋಟಿ ಅನುದಾನ ಒದಗಿಸಲಾಗುವುದು ಎಂದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯಗಳ 75,000 ಯುವಕ, ಯುವತಿಯರಿಗೆ 'ಅಮೃತ ಕೌಶಲ್ಯ ಯೋಜನೆ'ಯಡಿ ಕೌಶಲ ಅಭಿವೃದ್ಧಿ ತರಬೇತಿ ನೀಡಲಾಗುವುದು. ಈ ಯೋಜನೆಗೆ ₹ 112 ಕೋಟಿ ವೆಚ್ಚವಾಗಲಿದೆ ಎಂದರು.

ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದಲ್ಲಿ ಚಿನ್ನ ಗೆಲ್ಲುವಂತಹ ಸಾಮರ್ಥ್ಯವುಳ್ಳ ಕ್ರೀಡಾಪಟುಗಳನ್ನು ರೂಪಿಸುವುದಕ್ಕಾಗಿ 'ಅಮೃತ ಕ್ರೀಡಾ ದತ್ತು ಯೋಜನೆ' ಅಡಿಯಲ್ಲಿ 75 ಕ್ರೀಡಾಪಟುಗಳಿಗೆ ತರಬೇತಿ, ಪ್ರೋತ್ಸಾಹ ನೀಡಲಾಗುವುದು. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದ 75 ನವೋದ್ಯಮಗಳಿಗೆ 'ಅಮೃತ' ಪ್ರೋತ್ಸಾಹಧನ ನೀಡಲಾಗುವುದು ಎಂದು ಮುಖ್ಯಮಂತ್ರಿ ಪ್ರಕಟಿಸಿದರು.

'ಮೇಕೆದಾಟು ಅನುಷ್ಠಾನ ಖಚಿತ'

'ನೆರೆಯ ರಾಜ್ಯ ಅಡ್ಡಿಪಡಿಸಿದರೂ ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಾಣ ಯೋಜನೆಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಕಾವೇರಿ ಜಲ ವಿವಾದ ನ್ಯಾಯಾಧಿಕರಣ ಮತ್ತು ಸುಪ್ರೀಂಕೋರ್ಟ್ ತೀರ್ಪಿನ ಅನುಸಾರ ರಾಜ್ಯಕ್ಕೆ ಹಂಚಿಕೆಯಾಗಿರುವ ಹೆಚ್ಚುವರಿ ನೀರಿನ ಬಳಕೆಗೆ ಈ ಯೋಜನೆ ಸಹಕಾರಿಯಾಗಲಿದೆ. ಕುಡಿಯುವ ನೀರು ಪೂರೈಕೆ ಮತ್ತು ವಿದ್ಯುತ್ ಉತ್ಪಾದನೆಗೆ ಅಗತ್ಯವಾಗಿರುವ ಈ ಯೋಜನೆಯ ಅನುಷ್ಠಾನದಿಂದ ನಮ್ಮ ಸರ್ಕಾರ ಹಿಂದೆ ಸರಿಯುವುದಿಲ್ಲ. ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಗೆ ಶೀಘ್ರದಲ್ಲಿ ಕೇಂದ್ರದ ಅನುಮೋದನೆ ದೊರೆಯುವ ನಿರೀಕ್ಷೆ ಇದೆ' ಎಂದು ಸ್ವಾತಂತ್ರ್ಯ ದಿನಾಚರಣೆ ಸಂದೇಶದಲ್ಲಿ ತಿಳಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು. ಮಹದಾಯಿ ಯೋಜನೆಯ ಅನುಷ್ಠಾನಕ್ಕೆ ವೇಗ ನೀಡುವ ಕೆಲಸವನ್ನು ಸರ್ಕಾರ ಮಾಡಲಿದೆ ಎಂದರು.

'ರಾಜ್ಯದ ಹಿತಾಸಕ್ತಿ ರಕ್ಷಣೆಗೆ ಕಟಿಬದ್ಧನಾಗಿ ಕೆಲಸ ಮಾಡುತ್ತೇನೆ' ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ನಮ್ಮದು ಕಟ್ಟುವ, ಬಿಜೆಪಿಯವರದ್ದು ಕೆಡಹುವ ಪರಂಪರೆ- ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮದು (ಕಾಂಗ್ರೆಸ್) ಕಟ್ಟುವ ಪರಂಪರೆ. ಬಿಜೆಪಿಯವರದ್ದು ಕೆಡಹುವ ಪರಂಪರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕಾಂಗ್ರೆಸ್ ಭವನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶವನ್ನು ಕಟ್ಟಿದ ಮಹನೀಯರ ಹೆಸರು ಬದಲಿಸುವ ಚರ್ಚೆ ನಡೆಯುತ್ತಿದೆ. ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಲು ಷಡ್ಯಂತ್ರ ನಡೆದಿದೆ. ಮಹನೀಯರ ಹೆಸರು ಬದಲಿಸಿದರೂ ಅವರು ಜನಮಾನಸದಲ್ಲಿ ಚಿರಸ್ಥಾಯಿ ಎನ್ನುವುದನ್ನು ಮರೆಯಬಾರದು' ಎಂದರು.

'ಪ್ರಜಾಪ್ರಭುತ್ವ, ಸಂವಿಧಾನ ಮೇಲೆ ದಾಳಿಯಾಗುತ್ತಿದ್ದು, ಮತ್ತೆ ಸ್ವಾತಂತ್ರ್ಯ ಸಂಗ್ರಾಮದ ರೀತಿ ಹೋರಾಟದ ಸಂದರ್ಭ ಎದುರಾಗಿದೆ. ಸ್ವಾತಂತ್ರ್ಯ ಹೋರಾಟದ ಮುಂದಾಳತ್ವ ವಹಿಸಿದ್ದ ಗಾಂಧೀಜಿ ಹಾಗೂ ಇತರ ನಾಯಕರನ್ನು ಬಿಜೆಪಿ ತೆಗಳಲು ಆರಂಭಿಸಿದೆ. ಧರ್ಮ, ಸಂಸ್ಕೃತಿ, ನಂಬಿಕೆ ಯಾವತ್ತೂ ರಾಜಕೀಯ ಅಸ್ತ್ರವಾಗಬಾರದು. ಆದರೆ, ಅವುಗಳೇ ರಾಜಕೀಯ ಅಸ್ತ್ರ ಆಗಿರುವುದು ದುರ್ದೈವ' ಎಂದರು.

'ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವವನ್ನು ವರ್ಷವಿಡೀ ಆಚರಿಸಲು ಪಕ್ಷದ ನಾಯಕಿ ಸೋನಿಯಾ ಗಾಂಧಿ ತಿಳಿಸಿದ್ದಾರೆ. ಹೀಗಾಗಿ, ಪಕ್ಷದ ನಾಯಕರೊಂದಿಗೆ ಚರ್ಚಿಸಿ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಗಾಂಧೀಜಿ ಜನ್ಮ ತಿಂಗಳಾಗಿರುವ ಅಕ್ಟೋಬರ್‌ನಲ್ಲಿ ಪಕ್ಷದ ನಾಯಕರು ಪಂಚಾಯಿತಿಗಳಿಗೆ ಹೋಗಲಿದ್ದಾರೆ. ನವೆಂಬರ್‌ನಲ್ಲಿ ನೆಹರೂ ಜನ್ಮದಿನವಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆ ಮೇಲಿನ ನಂಬಿಕೆ ರಕ್ಷಣೆಗೆ ಹೋರಾಡುವ ಕಾರ್ಯಕ್ರಮ ರೂಪಿಸಲಾಗುವುದು. ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಸಂಸ್ಥಾಪನಾ ದಿನದ ಹಿನ್ನೆಲೆಯಲ್ಲಿ ನಾಯಕರು, ಕಾರ್ಯಕರ್ತರಿಗೆ ತರಬೇತಿ ಶಿಬಿರ ನಡೆಸಲಾಗುವುದು' ಎಂದರು.

ಬಾಯ್ತಪ್ಪಿ 'ಸೋನಿಯಾ ಹುತಾತ್ಮ': ಮಾತಿನ ಭರದಲ್ಲಿ ಶಿವಕುಮಾರ್, ಹುತಾತ್ಮ ಇಂದಿರಾ ಗಾಂಧಿ ಎನ್ನುವ ಬದಲು ಸೋನಿಯಾ ಗಾಂಧಿ ಎಂದರು. ತಪ್ಪಿನ ಅರಿವಾಗುತ್ತಿದ್ದಂತೆ ಎಚ್ಚೆತ್ತುಕೊಂಡು, ಇಂದಿರಾ ಗಾಂಧಿ ಅವರ ಸಾಧನೆಗಳನ್ನು ಪ್ರಸ್ತಾಪಿಸಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹಮದ್, ರಾಮಲಿಂಗಾ ರೆಡ್ಡಿ, ರಾಜ್ಯಸಭೆ ಸದಸ್ಯ ಜಿ.ಸಿ. ಚಂದ್ರಶೇಖರ್, ಶಾಸಕ ದಿನೇಶ್ ಗುಂಡೂರಾವ್, ಪರಿಷತ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಯು.ಬಿ. ವೆಂಕಟೇಶ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ಇದ್ದರು



ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಂದ ಧ್ವಜಾರೋಹಣ

'ಸ್ವಾವಲಂಬಿ, ಶಕ್ತಿಶಾಲಿ ಭಾರತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಸಂಗ್ರಾಮದ ವೇಳೆ ಸ್ವತಂತ್ರ ಭಾರತದ ಕುರಿತಾಗಿ ಇದ್ದ ಕನಸುಗಳನ್ನು ನನಸಾಗಲು ಮಾಡುವಲ್ಲಿ ಪ್ರಧಾನಿ ನರೇಂದ್ರಮೋದಿ ಶ್ರಮಿಸುತ್ತಿದ್ದು, ಕಳೆದ ಏಳು ವರ್ಷಗಳಲ್ಲಿ ಭಾರತ ವಿಶ್ವದ ಪ್ರಬಲ ರಾಷ್ಟ್ರವಾಗಿ ಹೊರ ಹೊಮ್ಮಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಕಾರ್ಯಾಲಯದಲ್ಲಿ ಏರ್ಪಡಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ ಮಾತನಾಡಿದರು. ಭಾರತವು 'ಜಗದ್ವಂದ್ಯ' ರಾಷ್ಟ್ರವಾಗುವತ್ತ ದಾಪುಗಾಲಿಟ್ಟಿದೆ ಎಂದು ಹೇಳಿದರು.

'ದೇಶಾದ್ಯಂತ ನಡೆದ ಜನರ ಹೋರಾಟ, ಅಹಿಂಸಾತ್ಮಕ ಹೋರಾಟ, ತ್ಯಾಗ ಮತ್ತು ಬಲಿದಾನದ ಫಲವಾಗಿ ಭಾರತವು ಸ್ವಾತಂತ್ರ್ಯ ಪಡೆದಿದೆ. ಅಂತಹ ಹಿರಿಯರ ಸ್ಮರಣೆ ಅನಿವಾರ್ಯ. ಆ ಹಿರಿಯರು ಕಂಡಿದ್ದ ವಿಶ್ವಕ್ಕೆ ಮಾರ್ಗದರ್ಶನ ನೀಡುವ ದೇಶ ನಮ್ಮದಾಗಬೇಕು ಎಂಬ ಕನಸನ್ನು ನನಸು ಮಾಡಬೇಕಾಗಿದೆ' ಎಂದು ನಳಿನ್ ಹೇಳಿದರು.

'ಒಂದು ಕಾಲದಲ್ಲಿ ಭಾರತವನ್ನು ಭಿಕ್ಷುಕರ ದೇಶ, ಹಾವಾಡಿಗರ ದೇಶ ಎಂದು ಕರೆಯುತ್ತಿದ್ದರು. ಕಳೆದ ಏಳು ವರ್ಷಗಳಲ್ಲಿ ಮೋದಿಯವರ ಆಡಳಿತದ ಪರಿಣಾಮವಾಗಿ ಭಾರತ ವಿಶ್ವದಲ್ಲಿ ಪ್ರಬಲ ರಾಷ್ಟ್ರವಾಗಿ ಹೊರ ಹೊಮ್ಮಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿ ಜಗತ್ತಿನ ಅತಿ ಎತ್ತರದ ಸ್ಥಾನಕ್ಕೆ ಏರಿದೆ' ಎಂದು ನಳಿನ್ ತಿಳಿಸಿದರು.

'ಭಾರತವು ಹಲವು ಕ್ಷೇತ್ರಗಳಲ್ಲಿ ಮುಂಚೂಣಿಗೆ ಬಂದಿದೆ. ವಿಶೇಷವಾಗಿ ಕೋವಿಡ್ ಮೊದಲ ಅಲೆಯ ನಂತರ ಸ್ವದೇಶಿ ಲಸಿಕೆ ಉತ್ಪಾದಿಸಿ ಹಲವು ರಾಷ್ಟ್ರಗಳಿಗೆ ರಫ್ತು ಮಾಡಿತು. ಮೋದಿ ಸರ್ಕಾರ ಅಭಿವೃದ್ಧಿ ಕಾರ್ಯಗಳು ಮತ್ತು ಬಡವರಿಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳಿಂದಾಗಿ 139 ಕೋಟಿ ಜನರ ಮನ ಗೆದ್ದಿದೆ' ಎಂದು ನಳಿನ್ ಹೇಳಿದರು.

ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, 'ಸ್ವಾತಂತ್ರ್ಯದ ನೂರನೇ ವರ್ಷಾಚರಣೆ ಸಂದರ್ಭದಲ್ಲಿ ಭಾರತ ಜಗತ್ತಿನ ನಂಬರ್ ಒನ್ ರಾಷ್ಟ್ರವಾಗಿರಬೇಕು ಎಂಬ ಪ್ರಧಾನಿಯವರ ಕನಸು ನನಸಾಗಿಸಲು ನಾವೆಲ್ಲರೂ ಶ್ರಮಿಸಬೇಕು. ಇಲ್ಲಿನ ಸವಾಲುಗಳನ್ನು ಅವಕಾಶವಾಗಿ ಮಾರ್ಪಡಿಸಬೇಕು ಎಂಬ ಚಿಂತನೆ ಅವರದು' ಎಂದರು.

ಟೀಕೆಗಳು ಎಲ್ಲೆ ಮೀರದಿರಲಿ: ಸಚಿವ ಸುನಿಲ್ ಕುಮಾರ್

ಉಡುಪಿ: ರಾಜಕೀಯ ನಾಯಕರ ಟೀಕೆಗಳು ಎಲ್ಲೆ ಮೀರಬಾರದು ಎಂದು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ವಿ. ಸುನಿಲ್ ಕುಮಾರ್ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಧ್ವಜಾರೋಹಣ ನೆರವೇರಿಸಿದ ಬಳಿಕ ಮಾತನಾಡುತ್ತಾ, ವಾಜಪೇಯಿ ಕುರಿತು ಕಾಂಗ್ರೆಸ್ ಮುಖಂಡ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವರು, 'ಟೀಕಿಸುವಾಗ ಬಳಸುವ ಪದಗಳನ್ನು ಜನರು ಸೂಕ್ಷ್ಮವಾಗಿ ಗಮನಿಸುತ್ತಾರೆ. ಟೀಕೆ ಮಾಡುವವರ ವ್ಯಕ್ತಿತ್ವವನ್ನು ಆ ಮೂಲಕ ಅಳೆಯುತ್ತಾರೆ' ಎಂದರು.

ಅಜಾತಶತ್ರು ವಾಜಪೇಯಿ ವ್ಯಕ್ತಿತ್ವದ ಬಗ್ಗೆ ಜನರಿಗೆ ತಿಳಿದಿದೆ. ಕರಿನೀರಿನ ಶಿಕ್ಷೆ ಅನುಭವಿಸಿದ ಸಾವರ್ಕರ್‌ಗೆ ಕಾಂಗ್ರೆಸ್ ಎಂದೂ ಗೌರವ ಕೊಟ್ಟಿಲ್ಲ. ಮಣಿಶಂಕರ್ ಅಯ್ಯರ್ ಕೇಂದ್ರ ಸಚಿವರಾಗಿದ್ದಾಗ ಅಂಡಮಾನ್ ನಿಕೋಬಾರ್ ಜೈಲಿನಲ್ಲಿದ್ದ ಸಾವರ್ಕರ್ ಹೆಸರನ್ನು ತೆಗೆಸಿ ಹಾಕಲು ಪ್ರಯತ್ನಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರಿಗೆ ಕಾಂಗ್ರೆಸ್ ಅವಮಾನ ಮಾಡಿದೆ ಎಂದರು.

ಪರಿಸರ ಸ್ನೇಹಿ ವಿದ್ಯುತ್: ಕಲ್ಲಿದ್ದಲಿನ ಬದಲಾಗಿ ಸೋಲಾರ್ ಹಾಗೂ ಪವನ ಶಕ್ತಿಯಿಂದ ವಿದ್ಯುತ್ ಉತ್ಪಾದನೆಗೆ ಒತ್ತು ನೀಡುವ ಮೂಲಕ ರಾಜ್ಯದಲ್ಲಿ ಪರಿಸರ ಸ್ನೇಹಿ ವಿದ್ಯುತ್ ಉತ್ಪಾದನೆಗೆ ಒತ್ತು ನೀಡಲಾಗುವುದು ಎಂದರು.

ಬೆಂಗಳೂರು: ಅತ್ಯುತ್ತಮ ಸೇವೆ ಸಲ್ಲಿಸಿದ್ದಕ್ಕಾಗಿ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಗೃಹರಕ್ಷಕ ದಳ ಹಾಗೂ ಪೌರರಕ್ಷಣೆ ದಳದ **11** ಸಿಬ್ಬಂದಿಗೆ **2021ನೇ ಸಾಲಿನ ರಾಷ್ಟ್ರಪತಿ ಶ್ಲಾಘನೀಯ ಸೇವಾ ಪದಕ** ಲಭಿಸಿದೆ. ಪದಕ ಪಡೆದವರ ವಿವರ ಇಲ್ಲಿದೆ.

ಬಿ.ಪಿ.ಕೃಷ್ಣಪ್ಪ, ಹಿರಿಯೂರು ಅಗ್ನಿಶಾಮಕ ಠಾಣಾಧಿಕಾರಿ

ಚಿದಾನಂದ ಮಾನೆ, ಬೆಳಗಾವಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ

ಮೀರ್ ಮಹಮ್ಮದ್ ಗೌಸ್, ಬಂಟ್ವಾಳ ಪ್ರಮುಖ ಅಗ್ನಿಶಾಮಕ

ಕೆ.ಆರ್. ಮಂಜುನಾಥ್, ತೀರ್ಥಹಳ್ಳಿ ಅಗ್ನಿಶಾಮಕ ಚಾಲಕ

ಪ್ರಶಾಂತ್, ಹೆಬ್ಬಾಳ ಅಗ್ನಿಶಾಮಕ ಚಾಲಕ

ಎಂ.ಎ. ಷಕೀಬ್, ಬಳ್ಳಾರಿ ಜಿಲ್ಲೆಯ ಗೃಹರಕ್ಷಕ ದಳದ ಸಮಾದೇಷ್ಟರು

ಸಿ.ಎನ್. ಸುಜೇಂದ್ರಕುಮಾರ್, ಬೆಂ. ಉತ್ತರ ಗೃಹರಕ್ಷಕ ದಳದ ಪ್ಲಟೂನ್ ಕಮಾಂಡರ್

ಕೆ. ಜಗನ್ನಾಥ್, ಚಿತ್ರದುರ್ಗ ಗೃಹರಕ್ಷಕ ದಳದ ಪ್ಲಟೂನ್ ಕಮಾಂಡರ್

ನಿಂಬನಗೌಡ, ರಾಯಚೂರು ಗೃಹರಕ್ಷಕ ದಳದ ಹಿರಿಯ ಪ್ಲಟೂನ್ ಕಮಾಂಡರ್

ಡಾ. ಎಂ.ಎಸ್ ರಾಜೇಶ್, ಬೆಂಗಳೂರು ಪೌರರಕ್ಷಣೆ ವಿಭಾಗೀಯ ವಾರ್ಡನ್

ಕೆ. ಮೋಹನ್, ಬೆಂಗಳೂರು ಪೌರರಕ್ಷಣೆ ವಿಭಾಗೀಯ ವಾರ್ಡನ್

ಮೇಕೆದಾಟು: ಬಿಜೆಪಿ ಸಂಸದರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು

'ಧೈರ್ಯ ಇದ್ದರೆ ಮೋದಿ ಮುಂದೆ ಮಾತಾಡಿ'

ಪ್ರಜಾವಾಣಿ ವಾರ್ತೆ

ರಾಮನಗರ: 'ಮೇಕೆದಾಟು ವಿಚಾರದಲ್ಲಿ ಸಚಿವರು ಕೇವಲ ಪ್ರಚಾರಕ್ಕೆ ಹೇಳಿಕೆ ನೀಡುತ್ತಿದ್ದಾರೆ. ರಾಜ್ಯದ ಸಂಸದರು, ಸಚಿವರಿಗೆ ಧೈರ್ಯ ಇದ್ದರೆ ಪ್ರಧಾನಿ ಹಾಗೂ ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿ ಮಾಡಿ ತಮ್ಮ ಹಕ್ಕು ಮಂಡಿಸಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಕನಕಪುರದಲ್ಲಿ ಭಾನುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಮಾತನಾಡಿದರೆ ಎಲ್ಲಿ ನಮ್ಮ ಸ್ಥಾನ, ಅಧಿಕಾರ ಹೋಗುತ್ತದೆ ಎಂದು ರಾಜ್ಯದ ಸಂಸದರು ಹಾಗೂ ಸಚಿವರು ಮೋದಿ ಎದುರು ಮಾತನಾಡಲು ಹೆದರುತ್ತಿದ್ದಾರೆ' ವ್ಯಂಗ್ಯವಾಡಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಜಗದೀಶ ಶೆಟ್ಟರ್ ಮೊದಲಾದ ಬಿಜೆಪಿ ನಾಯಕರ ಉಸಿರು ನಿಂತು ಹೋಗಿದೆ. ಹೀಗಾಗಿಯೇ ಮೇಕೆದಾಟು, ಮಹದಾಯಿ ಸೇರಿದಂತೆ ಎಲ್ಲ ವಿಚಾರಗಳಲ್ಲೂ ರಾಜ್ಯಕ್ಕೆ ಅನ್ಯಾಯ ಆಗುತ್ತಿದೆ' ಎಂದರು.

ಹೇಳಿಕೆಗೆ ವಿರೋಧ: 'ಮೇಕೆದಾಟು ವಿಚಾರದಲ್ಲಿ ಕೇಂದ್ರ ಸರ್ಕಾರ ನಮ್ಮ ಪರವಾಗಿದೆ ಎಂದು ಸಚಿವ ಅಶ್ವತ್ಥನಾರಾಯಣ ಹೇಳಿದ್ದಾರೆ. ಇದೊಂದು ಮಾತು ಸಾಕು, ತಮಿಳುನಾಡು ಸರ್ಕಾರದವರು ಇದನ್ನೇ ಮುಂದಿಟ್ಟುಕೊಂಡು ನ್ಯಾಯಾಲಯದಲ್ಲಿ ತಕರಾರು ಅರ್ಜಿ ಸಲ್ಲಿಸುತ್ತಾರೆ. ಸಚಿವರು ಜವಾಬ್ದಾರಿಯಿಂದ ಹೇಳಿಕೆ ಕೊಡಬೇಕು' ಎಂದು ಶಿವಕುಮಾರ್ ಹೇಳಿದರು.

'ಕಾವೇರಿ: ಕೇಂದ್ರ ನಮ್ಮ ಪರ'

ರಾಮನಗರ: 'ಕೇಂದ್ರ ಸರ್ಕಾರ ಕಾವೇರಿ ವಿಚಾರದಲ್ಲಿ ಈ ಹಿಂದೆ ನಮ್ಮ ಪರವಾಗಿ ಅಫಿಡವಿಟ್ ಕೊಟ್ಟಿದೆ. ಎಲ್ಲ ಸಮಯದಲ್ಲೂ ರಾಜ್ಯದ ನೆರವಿಗೆ ಬರುತ್ತಿದೆ' ಎಂದು ಉನ್ನತ ಶಿಕ್ಷಣ ಮತ್ತು ಐ.ಟಿ. ಬಿ.ಟಿ. ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಭಾನುವಾರ ಧ್ವಜಾರೋಹಣದ ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಕೇಂದ್ರ ಸರ್ಕಾರ ಕರ್ನಾಟಕದ ಪರ ಇದ್ದು, ಮಲತಾಯಿ ಧೋರಣೆ ತೋರುತ್ತಿದೆ ಎಂದು ತಮಿಳುನಾಡು ಸಹ ಆರೋಪಿಸಿದೆ' ಎಂದರು.

'ಯೋಜನೆಯಿಂದ ತಮಿಳುನಾಡಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ. ಈ ಬಗ್ಗೆ ಇರುವ ಕಾನೂನು ತೊಡಕನ್ನು ನಿವಾರಿಸಿಕೊಳ್ಳಲಾಗುವುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು 'ಅವರು ಯಾವುದೋ ನಶೆಯಲ್ಲಿ ಇದ್ದಾರೆ. ಆ ಬಗ್ಗೆ ಮಾತು ಬೇಡ' ಎಂದಷ್ಟೇ ಹೇಳಿದರು.

'ಅಮೃತ'ದತ್ತ ಭಾರತದ ಚಿತ್ತ

ಒಂದನೇ ಪುಟದಿಂದ...

ಸರ್ಕಾರದ ವಿವಿಧ ಯೋಜನೆಗಳನ್ನು ಮೋದಿ ಉಲ್ಲೇಖಿಸಿದರು. ನೇರ ನಗದು ವರ್ಗಾವಣೆಯೂ ಅದರಲ್ಲಿ ಪ್ರಮುಖವಾಗಿತ್ತು. ಸಣ್ಣ ರೈತರಿಗೆ ಸರ್ಕಾರವು ಹೆಚ್ಚು ಗಮನ ನೀಡುತ್ತಿದೆ ಎಂಬುದನ್ನು ಮನದಟ್ಟು ಮಾಡಲು ಪ್ರಧಾನಿ ಯತ್ನಿಸಿದ್ದಾರೆ. 'ಸಣ್ಣ ರೈತರು ದೇಶದ ಹೆಮ್ಮೆ' ಎಂಬ ಹೊಸ ಘೋಷಣೆಯನ್ನೂ ಅವರು ಕೊಟ್ಟಿದ್ದಾರೆ.

ಮುಂದಿನ 25 ವರ್ಷಗಳು ಭಾರತದ ಪಾಲಿಗೆ ಭವ್ಯವಾಗಿರಲಿದೆ. ಅದು ದೇಶವನ್ನು ಮೂಲಸೌಕರ್ಯದಲ್ಲಿ ಜಗತ್ತಿನಲ್ಲಿಯೇ ಆಧುನಿಕವಾಗಿಸಲಿದೆ, ಹೊಸ ಭಾರತದಲ್ಲಿ ನಗರ ಮತ್ತು ಗ್ರಾಮ ಎಂಬ ವಿಭಜನೆಯೂ ಇರದು ಎಂದು ತಮ್ಮ ಸತತ 8ನೇ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಮೋದಿ ಹೇಳಿದ್ದಾರೆ.

ಪ್ರಧಾನಿ ಪ್ರತಿಪಾದನೆ

- ಪೂರ್ವ, ಈಶಾನ್ಯ, ಜಮ್ಮು–ಕಾಶ್ಮೀರ, ಲಡಾಖ್, ಇಡೀ ಹಿಮಾಲಯ ಪ್ರದೇಶ, ಕರಾವಳಿ ಪ್ರದೇಶ, ಬುಡಕಟ್ಟು ಪ್ರದೇಶ ಎಲ್ಲವೂ ಭಾರತದ ಭವಿಷ್ಯದ ಅಭಿವೃದ್ಧಿಗೆ ಬಹುದೊಡ್ಡ ನೆಲೆ ಆಗಲಿದೆ
- ನೀವು ತಯಾರಿಸುವ ಪ್ರತಿ ವಸ್ತುವೂ ಭಾರತದ ರಾಯಭಾರಿಯಾಗಿದೆ. ಉತ್ಪನ್ನವು ಎಲ್ಲಿಯವರೆಗೆ ಉಪಯುಕ್ತವೋ ಅಲ್ಲಿವರೆಗೆ ಬಳಕೆದಾರನು ಇದು ಭಾರತದ ಉತ್ಪನ್ನ ಎನ್ನುತ್ತಾನೆ ಎಂಬುದು ಗಮನದಲ್ಲಿ ಇರಲಿ ಎಂಬುದು ತಯಾರಕರಿಗೆ ನೆನಪಿಸಲು ಬಯಸುತ್ತೇನೆ
- ನೀತಿಯನ್ನು ಸಂಕೀರ್ಣಗೊಳಿಸುವ ಸರ್ಕಾರಿ ಹಸ್ತಕ್ಷೇಪವನ್ನು ತಗ್ಗಿಸಬೇಕಿದೆ. ಇಂತಹ 15 ಸಾವಿರ ಅಂಶಗಳನ್ನು ಈಗಾಗಲೇ ರದ್ದುಪಡಿಸಲಾಗಿದೆ. ಸುಲಲಿತ ಬದುಕು ಮತ್ತು ಸುಲಲಿತ ವ್ಯಾಪಾರಕ್ಕಾಗಿ ತೆರಿಗೆ ಸುಧಾರಣೆಗಳನ್ನು ಮಾಡಿದ್ದೇವೆ
- ಇಂಧನದ ವಿಚಾರದಲ್ಲಿ ಭಾರತವು ಸ್ವಾವಲಂಬಿ (ಆತ್ಮನಿರ್ಭರ) ಆಗಿಲ್ಲ. ಪ್ರತಿ ವರ್ಷ ತೈಲ ಆಮದಿಗಾಗಿ ₹12 ಲಕ್ಷ ಕೋಟಿ ವೆಚ್ಚ ಆಗುತ್ತಿದೆ. ಈ ವಿಷಯದಲ್ಲಿ ಆತ್ಮನಿರ್ಭರ ಆಗಬೇಕಿದೆ
- ರಾಷ್ಟ್ರೀಯ ಹೈಡ್ರೋಜನ್ ಮಿಷನ್‌ಗೆ ಚಾಲನೆ ಕೊಡಲಾಗುವುದು
- 2030ರ ಹೊತ್ತಿಗೆ ರೈಲ್ವೆಯ ಕಾರ್ಬನ್ ಹೊರಸೂಸುವಿಕೆಯನ್ನು ಶೂನ್ಯಕ್ಕೆ ತರುವ ಗುರಿ
- ಕೊಡಗು ಮತ್ತು ವಿಜಯಪುರದ ಸೈನಿಕ ಶಾಲೆಯ ರೀತಿಯಲ್ಲಿಯೇ ದೇಶದ ಎಲ್ಲ ಸೈನಿಕ ಶಾಲೆಗಳಲ್ಲಿಯೂ ಹೆಣ್ಣು ಮಕ್ಕಳಿಗೆ ಪ್ರವೇಶ ನೀಡಲಾಗುವುದು. ಪ್ರಾಯೋಗಿಕ ನೆಲೆಯಲ್ಲಿ ಹೆಣ್ಣು ಮಕ್ಕಳಿಗೆ ಪ್ರವೇಶ ನೀಡಿಕೆಯನ್ನು ಕೆಲವು ಶಾಲೆಗಳಲ್ಲಿ 2018–19ರಲ್ಲಿ ಆರಂಭಿಸಲಾಗಿತ್ತು

₹100 ಲಕ್ಷ ಕೋಟಿಯ 'ಗತಿಶಕ್ತಿ'

ಒಂದನೇ ಪುಟದಿಂದ...

'ಪ್ರಧಾನಮಂತ್ರಿ ಗತಿಶಕ್ತಿ ರಾಷ್ಟ್ರೀಯ ಯೋಜನೆಯನ್ನು ದೇಶವು ಶೀಘ್ರದಲ್ಲಿಯೇ ಜಾರಿಗೊಳಿಸಲಿದೆ' ಎಂದು ಪ್ರಧಾನಿ ಹೇಳಿದರು. ಈ ಯೋಜನೆಯು ಲಕ್ಷಾಂತರ ಯುವಕರಿಗೆ ಹೊಸ ಉದ್ಯೋಗಾವಕಾಶ ಸೃಷ್ಟಿಸಲಿದೆ ಎಂದರು.

'ಗತಿಶಕ್ತಿ'ಯು ಇಡೀ ದೇಶದಲ್ಲಿನ ಮೂಲಸೌಕರ್ಯ ಯೋಜನೆಗಳಿಗೆ ಅಡಿಪಾಯ ಹಾಕುವ ಮಹಾಯೋಜನೆ. ಇದು ಅರ್ಥ ವ್ಯವಸ್ಥೆಗೆ ಸಮಗ್ರ, ಎಲ್ಲವನ್ನೂ ಒಳಗೊಳ್ಳುವ ಪಥವೊಂದನ್ನು ಹಾಕಿಕೊಡುತ್ತದೆ' ಎಂದು ಹೇಳಿದರು.

'ಗತಿಶಕ್ತಿ ಯೋಜನೆಯು ಪ್ರಯಾಣದ ಸಮಯವನ್ನು ತಗ್ಗಿಸುತ್ತದೆ, ಕೈಗಾರಿಕೆಗಳಲ್ಲಿನ ಉತ್ಪಾದಕತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ದೇಶದ ತಯಾರಿಕಾ ವಲಯವು ಜಾಗತಿಕ ಮಟ್ಟದಲ್ಲಿ ಇನ್ನಷ್ಟು ಸ್ಪರ್ಧಾತ್ಮಕ ಆಗುವಲ್ಲಿ ನೆರವಾಗಲಿದೆ' ಎಂದು ವಿವರಿಸಿದರು.

ಪಾಕಿಸ್ತಾನ, ಚೀನಾದ ಸವಾಲುಗಳನ್ನು ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಸ್ತಾಪಿಸಿದ ಮೋದಿ

ಉಗ್ರವಾದ, ವಿಸ್ತರಣವಾದದ ಉಲ್ಲೇಖ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಯೋತ್ಪಾದನೆ ಮತ್ತು ವಿಸ್ತರಣವಾದ ಎಂಬ ಎರಡು ಸವಾಲುಗಳ ವಿರುದ್ಧ ಭಾರತ ಹೋರಾಡುತ್ತಿದೆ. ಇವುಗಳನ್ನು ಸಮರ್ಥವಾಗಿ ಮತ್ತು ನಿರ್ಬಂಧಿತ ಮಾದರಿಯಲ್ಲಿ ಎದುರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಹೇಳಿದರು.

ಪಾಕಿಸ್ತಾನ ಮತ್ತು ಚೀನಾದಿಂದ ದೇಶ ಎದುರಿಸುತ್ತಿರುವ ಭದ್ರತಾ ಮತ್ತು ಸಾರ್ವಭೌಮತೆಯ ಸವಾಲುಗಳ ಕುರಿತು ಸೂಚ್ಯವಾಗಿ ಅವರು ಮಾತನಾಡಿದರು. ಇಡೀ ಪ್ರಪಂಚ ಭಾರತವನ್ನು ಈಗ ಬೇರೆಯದೇ ದೃಷ್ಟಿಕೋನದಲ್ಲಿ ನೋಡುತ್ತಿದೆ. ಭಾರತ ತನ್ನ ಹೊಣೆಯನ್ನು ಸಂಪೂರ್ಣಗೊಳಿಸಬೇಕು ಎಂದರೆ ನಮ್ಮ ಭದ್ರತಾ ತಯಾರಿ ಕೂಡಾ ದೃಢವಾಗಿರಬೇಕು ಎಂದರು.

ಭಾರತೀಯ ಸೇನೆ ಶತ್ರುಗಳನ್ನು ಎದುರಿಸುತ್ತಿರುವ ರೀತಿಯನ್ನು ಕುರಿತು ಮಾತನಾಡಿದ ಅವರು, ಶತ್ರುಗಳಿಗೆ ನವ ಭಾರತ ಎಷ್ಟು ಅಪಾಯಕಾರಿಯಾಗಿರಲಿದೆ ಎಂಬುದನ್ನು ನಾವು ನಿರ್ದಿಷ್ಟ ದಾಳಿ ಮತ್ತು ವಾಯುದಾಳಿಗಳನ್ನು ನಡೆಸುವುದರ ಮೂಲಕ ತೋರಿಸಿದ್ದೇವೆ. 2016ರ ಸೆಪ್ಟಂಬರ್‌ನಲ್ಲಿ (ಉರಿ ದಾಳಿ) ಗಡಿ ನಿಯಂತ್ರಣ ರೇಖೆ ಬಳಿಯ ಉಗ್ರರ ಶಿಬಿರದ ಮೇಲೆ ಭಾರತ ದಾಳಿ ಮಾಡಿತ್ತು. 2019ರ ಫೆಬ್ರುವರಿಯಲ್ಲಿ (ಬಾಲಾಕೋಟ್ ದಾಳಿ) ಪಾಕಿಸ್ತಾನದ ಗಡಿ ಒಳಗಿದ್ದ ಉಗ್ರರ ಶಿಬಿರದ ಮೇಲೆ ದಾಳಿ ನಡೆಸಿತ್ತು. ಈ ಮೂಲಕ ಭಾರತ ಬದಲಾಗುತ್ತಿದೆ ಮತ್ತು ಎಂತಹ ಕಠಿಣ ನಿರ್ಧಾರವನ್ನೂ ತೆಗೆದುಕೊಳ್ಳುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ.

ದೇಶವನ್ನು ರಕ್ಷಿಸುತ್ತಿರುವ ನಮ್ಮ ಸೇನಾ ಪಡೆಯ ಕೈ ಬಲಪಡಿಸುವ ನಿಟ್ಟಿನಲ್ಲಿ ಎಲ್ಲಾ ಅವಕಾಶಗಳನ್ನೂ ನಮ್ಮ ದೇಶ ಬಳಸಿಕೊಳ್ಳುತ್ತದೆ ಎಂದು ನಾನು ಭರವಸೆ ಕೊಡುತ್ತೇನೆ. ಅಫ್ಗಾನಿಸ್ತಾನದಿಂದ ಅಮೆರಿಕ ತನ್ನ ಸೇನಾ ಪಡೆ ಮತ್ತು ನ್ಯಾಟೊ ಪಡೆಗಳನ್ನು ಹಿಂದೆ ಪಡೆದ ಬಳಿಕ ಅಲ್ಲಿ ತಾಲಿಬಾನ್ ಮೇಲುಗೈ ಸಾಧಿಸುತ್ತಿದೆ. ಇದರಿಂದ ಪಾಕಿಸ್ತಾನದ ತಂತ್ರಗಾರಿಕೆಗೆ ಬಲ ಸಿಗಬಹುದು ಎಂಬ ಆತಂಕವೂ ಇದೆ. ಪಾಕಿಸ್ತಾನದ ಭಾರತ ವಿರೋಧಿ ಉಗ್ರರಿಗೆ ತಾಲಿಬಾನ್ ಈ ಹಿಂದೆ ಬೆಂಬಲ ನೀಡಿತ್ತು. 1999ರಲ್ಲಿ ಇಂಡಿಯನ್ ಏರ್‌ಲೈನ್ಸ್‌ನ ವಿಮಾನವನ್ನು ಅಪಹರಿಸಲೂ ಸಹಕಾರ ನೀಡಿತ್ತು ಎಂದು ಅವರು ಹೇಳಿದರು.

ಮಿಲಿಟರಿ ಸಲಕರಣೆಗಳನ್ನು ದೇಶೀಯವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸ್ವದೇಶಿ ಯಂತ್ರೋಪಕರಣ ಉದ್ಯಮಗಳು ಮತ್ತು ದೇಶೀಯ ಕಂಪನಿಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಈ ಮೂಲಕ ಭದ್ರತಾ ವಲಯವನ್ನು ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ ಎಂದರು.

75ನೇ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಭಾನುವಾರ ಕಂಗೊಳಿಸಿದ ನವದೆಹಲಿಯ ಐತಿಹಾಸಿಕ ಕೆಂಪುಕೋಟೆ ಪಿಟಿಐ ಚಿತ್ರ

‘ಸಣ್ಣ ಹಿಡುವಳಿಯೇ ಸವಾಲು’

ರೈತರ ಹಿಡುವಳಿ (ಹೊಲ) ಗಾತ್ರ ಕುಗ್ಗುತ್ತಿರುವುದು ಬಹುದೊಡ್ಡ ಸವಾಲು. ಸಣ್ಣ ರೈತರ ಸಾಮೂಹಿಕ ಶಕ್ತಿಯನ್ನು ಹೆಚ್ಚಿಸಬೇಕಿದೆ. ಒಟ್ಟು ರೈತ ಸಮುದಾಯದಲ್ಲಿ ಸಣ್ಣ ರೈತರ ಪ್ರಮಾಣವು ಶೇ 80ರಷ್ಟಿದೆ ಎಂದು ಪ್ರಧಾನಿ ಹೇಳಿದ್ದಾರೆ.

ಸಣ್ಣ ರೈತರು ಎರಡು ಹೆಕ್ಟೇರ್‌ಗಿಂತ ಕಡಿಮೆ ಜಮೀನು ಹೊಂದಿದ್ದಾರೆ. ಅದೂ ಅಲ್ಲದೆ, ಜಮೀನಿನ ಗಾತ್ರವು ಇನ್ನಷ್ಟು ಸಣ್ಣದಾಗುತ್ತಿದೆ. ಕುಟುಂಬಗಳ ವಿಭಜನೆ ಮತ್ತು ಜನಸಂಖ್ಯೆ ಹೆಚ್ಚಳ ಇದಕ್ಕೆ ಕಾರಣ. ಈ ಹಿಂದಿನ ಸರ್ಕಾರಗಳಂತೆ ಅಲ್ಲದೆ, ಈಗಿನ ಸರ್ಕಾರವು ಸಣ್ಣ ರೈತರ ಮೇಲೆ ಗಮನ ಕೇಂದ್ರೀಕರಿಸಿದೆ. ಪಿಎಂ–ಕಿಸಾನ್, ಫಸಲ್ ಬಿಮಾ ಯೋಜನೆ ರೀತಿಯ ಕಾರ್ಯಕ್ರಮಗಳನ್ನು ಸರ್ಕಾರವು ಹಮ್ಮಿಕೊಂಡಿದೆ ಎಂದು ಅವರು ಹೇಳಿದರು.

ಸಣ್ಣ ರೈತರನ್ನು ದೇಶದ ಹೆಮ್ಮೆಯಾಗಿ ಪರಿವರ್ತಿಸುವುದು ತಮ್ಮ ಗುರಿ. ಸಣ್ಣ ರೈತರು ಸಾಮೂಹಿಕ ಶಕ್ತಿ ಹೆಚ್ಚಳವಾಗಬೇಕು. ಅದಕ್ಕಾಗಿ ಅವರಿಗೆ ಸೌಲಭ್ಯಗಳನ್ನು ನೀಡಬೇಕು ಎಂದು ಪ್ರಧಾನಿ ವಿವರಿಸಿದರು.

ಸಣ್ಣ ರೈತರನ್ನು ಗಮನದಲ್ಲಿ ಇರಿಸಿಕೊಂಡೇ ಹೊಸ ಕೃಷಿ ನೀತಿ ಮತ್ತು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯವು ಸಹಕಾರಿ ಸ್ಫೂರ್ತಿ ಮತ್ತು ಸಂಸ್ಕೃತಿಯನ್ನು ಬಲಪಡಿಸಲಿದೆ ಎಂದು ಅವರು ತಿಳಿಸಿದರು.

ತಂತ್ರಜ್ಞಾನದ ಅನುಕೂಲಗಳನ್ನು ಪಡೆದುಕೊಳ್ಳಲು ಕೃಷಿ ಕ್ಷೇತ್ರವು ಇನ್ನಷ್ಟು ಕಾಲ ಕಾಯಲು ಸಾಧ್ಯವಿಲ್ಲ. ನಮ್ಮ ವಿಜ್ಞಾನಿಗಳ ಶಕ್ತಿ ಮತ್ತು ಬದ್ಧತೆಯನ್ನು, ತಂತ್ರಜ್ಞಾನದ ಪ್ರಭಾವವನ್ನು ಕೋವಿಡ್–19ರ ಸಂದರ್ಭದಲ್ಲಿ ಎಲ್ಲರೂ ನೋಡಿದ್ದಾರೆ ಎಂದರು.

ಲಸಿಕೆಗೆ ಶ್ಲಾಘನೆ: ಕೋವಿಡ್ ವಿರುದ್ಧ ಜಗತ್ತಿನ ಅತ್ಯಂತ ದೊಡ್ಡ ಲಸಿಕಾ ಅಭಿಯಾನ ನಡೆಸಿರುವುದಕ್ಕೆ ಭಾರತವು ಹೆಮ್ಮೆ ಪಡಬಹುದಾಗಿದೆ. ಈವರೆಗೆ 54 ಕೋಟಿ ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ ಎಂದು ಮೋದಿ ಹೇಳಿದ್ದಾರೆ.

ಕೋವಿಡ್ ವಿರುದ್ಧದ ಹೋರಾಟದಲ್ಲಿ ಕೈಜೋಡಿಸಿದ ವಿಜ್ಞಾನಿಗಳು, ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿ ಮತ್ತು ಇತರರನ್ನು ಮೋದಿ ಶ್ಲಾಘಿಸಿದರು.

ಲಸಿಕೆ ತಯಾರಿಕಾ ಕಂಪನಿಗಳನ್ನೂ ಮೋದಿ ಹೊಗಳಿದರು. ಈ ಕಂಪನಿಗಳ ಶ್ರಮದಿಂದಾಗಿ ಭಾರತವು ಬೇರೆಯವರನ್ನು ಅವಲಂಬಿಸಬೇಕಾಗಿ ಬರಲಿಲ್ಲ ಎಂದರು. ಭಾರತವು ತನ್ನದೇ ಆದ ಲಸಿಕೆ ಅಭಿವೃದ್ಧಿಪಡಿಸದೇ ಇದ್ದಿದ್ದರೆ ಹೊರಗಿನಿಂದ ಬರುವ ಲಸಿಕೆಗಳ ಪೂರೈಕೆಯು ಅನಿಶ್ಚಿತವಾಗಿ ಇರುತ್ತಿತ್ತು ಎಂದರು.

ಸುದ್ದಿ 2 ನಿಮಿಷ

15ನೇ ಬಾರಿ ಧ್ವಜಾರೋಹಣ ಮಾಡಿದ ಸಿ.ಎಂ ನಿತೀಶ್ ಕುಮಾರ್

ಪಟ್ನಾ (ಪಿಟಿಐ): ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ 15 ಬಾರಿಗೆ ಧ್ವಜಾರೋಹಣ ಮಾಡಿದ ಬಿಹಾರದ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ನಿತೀಶ್ ಕುಮಾರ್ ಪಾತ್ರರಾಗಿದ್ದಾರೆ.

ಈ ಸಂಬಂಧ ಟ್ವೀಟ್ ಮೂಲಕ ಖುಷಿ ಹಂಚಿಕೊಂಡಿರುವ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಸಂಜಯ್ ಝಾ, ನಿತೀಶ್ ಕುಮಾರ್ ಅವರು ಸ್ವಾತಂತ್ರ್ಯ ದಿನಾಚರಣೆಯ ಈ ಸಂದರ್ಭದಲ್ಲಿಯೇ ತಮ್ಮ ಅಧಿಕಾರಾವಧಿಯ 5,474 ದಿನಗಳನ್ನು ಪೂರೈಸಿದ್ದಾರೆ ಎಂದು ತಿಳಿಸಿದ್ದಾರೆ.



‘ನಿತೀಶ್ ಕುಮಾರ್ ಅವರ ಆಡಳಿತ ಜನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದೆ. ಬಿಹಾರವೂ ಪ್ರಗತಿ ಸಾಧಿಸಬಹುದು ಎಂಬ ಮನಃಸ್ಥಿತಿಯನ್ನು ಮೂಡಿಸಿದೆ. ಮುಖ್ಯಮಂತ್ರಿ ಅವರ ನಿರ್ಧಾರಗಳಿಗೆ ಬೆಂಬಲ ನೀಡುವ ಮೂಲಕ ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ನಾವು ದೃಢ ನಿಶ್ಚಯ ಮಾಡೋಣ’ ಎಂದು ಅವರು ಹೇಳಿದ್ದಾರೆ.

ಬಿಹಾರದಲ್ಲಿ 1961ರವರೆಗೆ ಮುಖ್ಯಮಂತ್ರಿಯಾಗಿದ್ದ ಶ್ರೀಕೃಷ್ಣ ಸಿನ್ಹಾ ಅವರ ಹೆಸರಲ್ಲಿ ಇದುವರೆಗಿನ ದಾಖಲೆ ಇತ್ತು.

ದೇಶಕ್ಕೇ ಮಾದರಿಯಾದ ದೆಹಲಿ ಆಡಳಿತ: ಕೇಜ್ರಿವಾಲ್

ನವದೆಹಲಿ (ಪಿಟಿಐ): ‘ಇಡೀ ದೇಶದಲ್ಲಿ ದೆಹಲಿ ಆಡಳಿತವು ಮಾದರಿಯಾಗಿ ಹೊರಹೊಮ್ಮಿದೆ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ಹೇಳಿದ್ದಾರೆ.

75ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಮಾತನಾಡಿದ ಅವರು, ಸೆ. 27ರಿಂದ ದೆಹಲಿಯ ಸರ್ಕಾರಿ ಶಾಲೆಗಳಲ್ಲಿ ‘ದೇಶಭಕ್ತಿ’ ಪಠ್ಯಕ್ರಮ ಹಾಗೂ ಅ. 2ರಿಂದ ದೆಹಲಿಯ ವಸತಿ ಪ್ರದೇಶಗಳಲ್ಲಿ ಯೋಗ ತರಗತಿಗಳನ್ನು ಆರಂಭಿಸುವುದಾಗಿ ಘೋಷಿಸಿದರು.

ದೆಹಲಿ ಸರ್ಕಾರದ ವಿವಿಧ ಯೋಜನೆಗಳು ಮತ್ತು ಸಾಧನೆಗಳನ್ನು ವಿವರಿಸಿದ ಕೇಜ್ರಿವಾಲ್, ‘ಇಡೀ ಭಾರತದಲ್ಲಿ ದೆಹಲಿ ಆಡಳಿತವು ಮಾದರಿಯಾಗಿ ಹೊರಹೊಮ್ಮಿದೆ. ಇದೊಂದು ರೀತಿಯಲ್ಲಿ ಪ್ರಯೋಗಾಲಯವಾಗಿದ್ದು, ಇಲ್ಲಿನ ಯೋಜನೆಗಳನ್ನು ಭಾರತ ಮಾತ್ರವಲ್ಲದೆ ಪ್ರಪಂಚದ ವಿವಿಧೆಡೆ ಚರ್ಚಿಸಲಾಗಿದ್ದು, ಅಳವಡಿಸಿಕೊಳ್ಳಲಾಗುತ್ತಿದೆ’ ಎಂದು ಹೇಳಿದರು.

ತಮ್ಮ ಭಾಷಣದಲ್ಲಿ ಅವರು, ಸ್ವಾತಂತ್ರ್ಯ ಹೋರಾಟಗಾರರು, ಕೋವಿಡ್ ಸಮಯದಲ್ಲಿ ಜನರಿಗೆ ಸೇವೆ ಸಲ್ಲಿಸುವಾಗ ತಮ್ಮ ಪ್ರಾಣ ಕಳೆದುಕೊಂಡ ವೈದ್ಯರು, ದಾದಿಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗೆ ಗೌರವ ಸೂಚಿಸಿದರು.

‘ಸೆ.27 ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ವೀರ ಮರಣವನ್ನಪ್ಪಿದ ದಿನ. ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಲುವಾಗಿ ಆ ದಿನ ದೆಹಲಿಯ ಸರ್ಕಾರಿ ಶಾಲೆಗಳಲ್ಲಿ ‘ದೇಶಭಕ್ತಿ’ ಪಠ್ಯಕ್ರಮ ಕಲಿಕೆಗೆ ಚಾಲನೆ ನೀಡಲಾಗುವುದು. ಅ. 2ರಿಂದ ದೆಹಲಿ ವಸತಿಪ್ರದೇಶಗಳ ಉದ್ಯಾನ, ಸಮುದಾಯ ಭವನದಂಥ ಸ್ಥಳಗಳಲ್ಲಿ ಯೋಗ ತರಗತಿಗಳನ್ನು ಆರಂಭಿಸಲಾಗುವುದು. ಯಾವುದೇ ವಸತಿ ಪ್ರದೇಶದ 40ರಿಂದ 50 ಜನರು ಮುಂದೆ ಬಂದರೆ ಅವರಿಗೆ ದೆಹಲಿ ಸರ್ಕಾರವು ಯೋಗ ಶಿಕ್ಷಕರನ್ನು ಒದಗಿಸುತ್ತದೆ’ ಎಂದೂ ತಿಳಿಸಿದರು.

ಗಡಿಯಲ್ಲಿ ಸಿಹಿ ವಿನಿಮಯ

ಭಾರತ–ಪಾಕಿಸ್ತಾನದ ವಾಘಾ ಗಡಿಯಲ್ಲಿ 75ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಬಿಎಸ್‌ಎಫ್ ಯೋಧರು ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡರು –ಚಿತ್ರ ಎಎಫ್‌ಪಿ

ಜಮ್ಮು, ಅಟ್ಟಾರಿ (ಪಿಟಿಐ): ‘ಭಾರತದ 75ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಭಾರತೀಯ ಸೇನೆ ಮತ್ತು ಬಿಎಸ್‌ಎಫ್ ಸಿಬ್ಬಂದಿ ಭಾನುವಾರ ಪಾಕಿಸ್ತಾನದ ಗಡಿ ಭದ್ರತಾ ಯೋಧರೊಂದಿಗೆ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಮತ್ತು ಅಂತರರಾಷ್ಟ್ರೀಯ ಗಡಿ (ಐಬಿ)ಯಲ್ಲಿ ಸಿಹಿ ವಿನಿಮಯ ಮಾಡಿಕೊಂಡರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಭಾರತೀಯ ಸೇನೆಯು ಪಾಕಿಸ್ತಾನದ ಸೇನಾ ಪಡೆಗಳೊಂದಿಗೆ ಮೆಂಧರ್‌ನ ತಟಪಾನಿ ಕ್ರಾಸಿಂಗ್ ಪಾಯಿಂಟ್ ಮತ್ತು ಪೂಂಚ್ ಜಿಲ್ಲೆಯ ಎಲ್‌ಒಸಿ ಉದ್ದಕ್ಕೂ ರಾವಲಕೋಟ್ ಕ್ರಾಸಿಂಗ್ ಪಾಯಿಂಟ್‌ನಲ್ಲಿ ಸಿಹಿ ಮತ್ತು ಅಭಿನಂದನೆಗಳನ್ನು ವಿನಿಮಯ ಮಾಡಿಕೊಂಡಿದೆ’ ಎಂದು ರಕ್ಷಣಾ ಇಲಾಖೆಯ ವಕ್ತಾರರು ಮಾಹಿತಿ ನೀಡಿದ್ದಾರೆ.

‘ಅಮೃತಸರದಿಂದ 35 ಕಿ.ಮೀ. ದೂರ ವಿರುವ ಅಟ್ಟಾರಿ–ವಾಘಾ ಗಡಿಯಲ್ಲಿ ಭಾರತದ ಬಿಎಸ್‌ಎಫ್ ಪಡೆಯು ಪಾಕಿಸ್ತಾನದ ಗಡಿಭದ್ರತಾ ಯೋಧರೊಂದಿಗೆ ಸಿಹಿ ವಿನಿಮಯ ಮಾಡಿಕೊಂಡಿತು. ಎರಡೂ ಕಡೆಯ ಭದ್ರತಾ ಸಿಬ್ಬಂದಿ ಪರಸ್ಪರ ಕೈಕುಲುಕಿದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಂಘು ಗಡಿಯಲ್ಲಿ ನಿವೃತ್ತ ಸೈನಿಕರ ಪಥಸಂಚಲನ

ನವದೆಹಲಿ (ಪಿಟಿಐ): ರೈತರು ಪ್ರತಿಭಟನೆ ನಡೆಸುತ್ತಿರುವ ಸಿಂಘು ಗಡಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನಿವೃತ್ತ ಸೈನಿಕರು ಸೇನಾ ಸಮವಸ್ತ್ರ ಧರಿಸಿ ಪಥಸಂಚಲವನ್ನು ನಡೆಸಿದರು.

‘ಪ್ರತಿಭಟನೆ ನಿರತ ರೈತರು ಕಿಸಾನ್ ಮಜ್ದೂರ್ ಆಜಾದ್ ಸಂಗ್ರಾಮ್ ದಿನ ಆಚರಿಸಿದರು. ಹಿರಿಯ ರೈತ ನಾಯಕ ಸತ್ನಾಮ್ ಸಿಂಗ್ (85) ಬೆಳಿಗ್ಗೆ 11 ಗಂಟೆಗೆ ಧ್ವಜಾರೋಹಣ ನೆರವೇರಿಸಿದರು. ಬಳಿಕ ನಿವೃತ್ತ ಸೈನಿಕರು ಪಥಸಂಚಲನ ನಡೆಸಿದರು. ಜಲಂಧರ್‌ನ ಡಿಎವಿ ಕಾಲೇಜಿನ ವಿದ್ಯಾರ್ಥಿಗಳು ಒಂದೂವರೆ ಗಂಟೆಗಳ ಕಾಲ ನೃತ್ಯ ಪ್ರದರ್ಶಿಸಿದರು. ಕಾರ್ಯಕ್ರಮ ಅಂದಾಜು ನಾಲ್ಕು ಗಂಟೆಗೆ ಮುಕ್ತಾಯವಾಯಿತು’ ಎಂದು ರೈತನಾಯಕ ರಾಮಿಂದರ್ ಸಿಂಗ್ ತಿಳಿಸಿದರು.

ಕೆಎಫ್‌ಸಿ ರೆಸ್ಟೋರೆಂಟ್ ಬಳಿ ಆರಂಭವಾದ ನಿವೃತ್ತ ಸೈನಿಕರ ಪಥಸಂಚಲನವು ಸಿಂಘು ಗಡಿಯ ಮುಖ್ಯದ್ವಾರದ ವರೆಗೆ ನಡೆಯಿತು. ಕಿಸಾನ್ ಮಜ್ದೂರ್ ಆಜಾದಿ ಸಂಗ್ರಾಮ್ ದಿವಸವನ್ನು ದೇಶದಾದ್ಯಂತ ಆಚರಿಸಲಾಗಿದೆ. ಜನರು ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ರೈತರಿಗೆ ಬೆಂಬಲ ಸೂಚಿಸಿದ್ದಾರೆ ಎಂದು ರಾಮಿಂದರ್ ಸಿಂಗ್ ಹೇಳಿದರು.

ಟಿಕ್ರಿ ಗಡಿಯಲ್ಲಿಯೂ ರೈತರು ತ್ರಿವರ್ಣ ಧ್ವಜವನ್ನು ಹಾರಿಸಿದ್ದಾರೆ. ಘಾಜಿಪುರ ಗಡಿಯಲ್ಲಿ ತಿರಂಗ ಯಾತ್ರೆ ನಡೆಸಲಾಗಿದೆ ಎಂದು ಭಾರತೀಯ ಕಿಸಾನ್ ಯೂನಿಯನ್‌ನ (ಬಿಕೆಯು) ಸದಸ್ಯ ಧರ್ಮೇಂದ್ರ ಮಲಿಕ್ ತಿಳಿಸಿದರು. ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ನೆರವೇರಿಸಲಾಯಿತು. ಸುಮಾರು 500 ಬೈಕುಗಳು ತಿರಂಗ ಯಾತ್ರೆಯಲ್ಲಿ ಭಾಗವಹಿಸಿದ್ದವು. ಯಾತ್ರೆ ಹಾಪುರ್‌ನಿಂದ ಆರಂಭವಾಗಿ ಘಾಜಿಪುರ ಗಡಿಯನ್ನು ತಲುಪಿತು ಎಂದಿದ್ದಾರೆ.

ಕೇಂದ್ರ ಸರ್ಕಾರ ಜಾರಿ ಮಾಡಿರುವ ಮೂರು ಕೃಷಿ ನೀತಿಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ರೈತರು ದೆಹಲಿಯ ಗಡಿಗಳಲ್ಲಿ 2020ರ ನವೆಂಬರ್ ತಿಂಗಳಿನಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

75 ವಂದೇ ಭಾರತ ರೈಲುಗಳ ಓಡಾಟ

2023ರ ಆಗಸ್ಟ್ 15ರ ಒಳಗೆ ದೇಶದಲ್ಲಿ 75 ವಂದೇ ಭಾರತ ಅತ್ಯಾಧುನಿಕ ರೈಲುಗಳನ್ನು ಓಡಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಸ್ವಾತಂತ್ರ್ಯೋತ್ಸವದ ಭಾಷಣದ ವೇಳೆ ಘೋಷಣೆ ಮಾಡಿದರು.

ಸ್ವಾತಂತ್ರ್ಯ ಪಡೆದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದ ಮೂಲೆ ಮೂಲೆಗಳನ್ನು ವಂದೇ ಭಾರತ ರೈಲುಗಳು ಸಂಪರ್ಕಿಸಲಿವೆ. ಜೊತೆಗೆ, ಈಶಾನ್ಯ ರಾಜ್ಯಗಳನ್ನು ದೆಹಲಿಗೆ ಸಂಪರ್ಕಿಸುವ ಕೆಲಸ ಆದಷ್ಟು ಬೇಗ ಪೂರ್ಣಗೊಳ್ಳುವುದು ಎಂದರು.

ಸದ್ಯ ದೇಶೀಯವಾಗಿ ನಿರ್ಮಿಸಲಾಗಿರುವ ಮಧ್ಯಮ ವೇಗದ ಎರಡು ವಂದೇ ಭಾರತ ರೈಲುಗಳು ಓಡಾಡುತ್ತಿವೆ. ವಾರಾಣಸಿಯಿಂದ ದೆಹಲಿ, ಕತ್ರಾದಿಂದ ದೆಹಲಿ ನಡುವೆ ಈ ರೈಲುಗಳು ಸಂಚರಿಸುತ್ತಿವೆ. 2022ರ ಆಗಸ್ಟ್ ಒಳಗೆ 40 ನಗರಗಳ ಮಧ್ಯೆ ಸಂಪರ್ಕ ಸಾಧಿಸುವ ಸುಮಾರು 10 ರೈಲುಗಳ ಕಾರ್ಯಾರಂಭ ಮಾಡುವ ನಿಟ್ಟಿನಲ್ಲಿ ಭಾರತೀಯ ರೈಲ್ವೆ ಕೆಲಸ ಮಾಡುತ್ತಿದೆ.

‘ಅವಲಂಬನೆ ಹೆಚ್ಚಿದರೆ ಮಂಡಿಯೂರಬೇಕಾದೀತು’

ಮುಂಬೈ (ಪಿಟಿಐ): ‘ತಂತ್ರಜ್ಞಾನ ಕುರಿತಂತೆ ಚೀನಾದ ಮೇಲೆ ಅವಲಂಬನೆ ಹೆಚ್ಚಿದಷ್ಟೂ, ಅದರ ಮುಂದೆ ಮಂಡಿಯೂರುವುದು ಅನಿವಾರ್ಯವಾಗಲಿದೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಎಚ್ಚರಿಸಿದರು.

75ನೇ ಸ್ವಾತಂತ್ರ್ಯೋತ್ಸವ ನಿಮಿತ್ತ ಇಲ್ಲಿನ ಮುಂಬೈ ಶಾಲೆಯಲ್ಲಿ ಧ್ವಜಾರೋಹಣ ನೆರವೇರಿಸಿದ ಅವರು, ‘ನಾವು ಇಂಟರ್‌ನೆಟ್ ಮತ್ತು ತಂತ್ರಜ್ಞಾನವನ್ನು ಅತಿಯಾಗಿ ಬಳಸುತ್ತಿದ್ದೇವೆ. ಆದರೆ, ಭಾರತವು ತನ್ನದೇ ಆದ ತಂತ್ರಜ್ಞಾನವನ್ನು ಹೊಂದಿಲ್ಲ. ಇದನ್ನು ಹೊರಗಿನಿಂದ ಪಡೆದಿದ್ದೇವೆ’ ಎಂದರು.

‘ಒಂದು ಸಮಾಜವಾಗಿ ನಾವು ಚೀನಾ ಮತ್ತು ಚೀನಿ ವಸ್ತುಗಳ ವಿರುದ್ಧ ಎಷ್ಟೇ ಆಕ್ರೋಶ ವ್ಯಕ್ತಪಡಿಸಬಹುದು. ಆದರೆ, ನಿಮ್ಮ ಮೊಬೈಲ್‌ನಲ್ಲಿರುವ ಅಷ್ಟೂ ಅಂಶಗಳು ಎಲ್ಲಿಂದ ಬರುತ್ತವೆ?’ ಎಂದು ಪ್ರಶ್ನಿಸಿದರು.

‘ಆರ್ಥಿಕ ಭದ್ರತೆಯು ಮುಖ್ಯವಾದುದು. ತಂತ್ರಜ್ಞಾನದ ಅಳವಡಿಕೆಯೂ ನಿಬಂಧನೆಗೆ ಒಳಪಟ್ಟಿರಬೇಕು. ಸ್ವದೇಶಿ ಎಂದರೆ ಭಾರತದ ನಿಬಂಧನೆಗಳಿಗೆ ಅನುಗುಣವಾಗಿ ಉದ್ದಿಮೆ ನಡೆಸುವುದು. ನಾವು ಸ್ವನಿರ್ಭರರಾಗಿರಬೇಕು. ನಮ್ಮದೇ ನಿಬಂಧನೆಗೆ ಅನುಗುಣವಾಗಿ ಅಂತರರಾಷ್ಟ್ರೀಯ ವ್ಯವಹಾರ ಇರಬೇಕು’ ಎಂದು ಪ್ರತಿಪಾದಿಸಿದರು.

ದೇಶೀಯವಾಗಿ ಉತ್ಪಾದನೆಯಾಗುವ ವಸ್ತು ಹೊರಗಿನದ್ದನ್ನು ಆಧರಿಸಿರಬಾರದು. ಹೆಚ್ಚು ಉತ್ಪಾದನೆ ಮತ್ತು ಅತ್ಯುತ್ತಮ ಗುಣಮಟ್ಟದನ್ನು ಉತ್ಪಾದಿಸುವ ಸ್ಪರ್ಧಾತ್ಮಕತೆ ಹೊಂದುವುದೇ ಆರ್ಥಿಕತೆ ಗುರಿಯಾಗಿರಬೇಕು. ನಾವು ಅಂತರರಾಷ್ಟ್ರೀಯ ವಹಿವಾಟಿನ ವಿರುದ್ಧವಾಗಿಲ್ಲ. ಆದರೆ, ನಮ್ಮ ಉತ್ಪಾದನೆ ಗ್ರಾಮೀಣ ಭಾಗದಲ್ಲಿ ಆಗಬೇಕು.


ಮೋಹನ್ ಭಾಗವತ್

ಸಮೂಹ ಉತ್ಪಾದನೆಯಲ್ಲ, ಸಾಮೂಹಿಕ ಉತ್ಪಾದನೆ ನಮ್ಮದಾಗಿರಬೇಕು ಎಂದು ಹೇಳಿದರು.

ಉತ್ಪಾದನೆ ಪ್ರಕ್ರಿಯೆಯ ವಿಕೇಂದ್ರೀಕರಣವು ಹೆಚ್ಚಿನ ಉದ್ಯೋಗ ಮತ್ತು ಸ್ವಯಂ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಲಿದೆ. ಉತ್ಪಾದನೆ ಹೆಚ್ಚಿದಷ್ಟು ಹೆಚ್ಚಿನವರು ಸ್ವಯಂ ನಿರ್ಭರರಾಗುತ್ತಾರೆ. ಇದೇ ಸಂದರ್ಭದಲ್ಲಿ ಆದಾಯದ ಸಮಾನ ಹಂಚಿಕೆಯೂ ಅಗತ್ಯ ಎಂದರು.

‘ಸಂಶೋಧನೆ, ಅಭಿವೃದ್ಧಿ, ಸಣ್ಣ–ಅತಿಸಣ್ಣ ಉದ್ದಿಮೆಗಳ ಪ್ರಗತಿ ಹಾಗೂ ಸಹಕಾರ ಕ್ಷೇತ್ರಗಳತ್ತ ಹೆಚ್ಚಿನ ಗಮನ ಕೇಂದ್ರೀಕರಿಸಬೇಕು. ದೇಶ ಮತ್ತು ಅಭಿವೃದ್ಧಿಗೆ ಏನು ಅಗತ್ಯವೋ ಅವುಗಳನ್ನು ಉತ್ಪಾದಿಸಲು ಸರ್ಕಾರವು ನಿರ್ದೇಶನ ನೀಡಬೇಕು. ಅಲ್ಲದೆ, ಪ್ರಕೃತಿದತ್ತ ಸಂಪತ್ತಿನ ಶೋಷಣೆಯನ್ನು ತಪ್ಪಿಸಲು ‘ಅನುಭೋಗ’ದ ಮೇಲಿನ ನಿಯಂತ್ರಣವೂ ಅಗತ್ಯ’ ಎಂದು ಭಾಗವತ್ ಸರ್ಕಾರಕ್ಕೆ ಕಿವಿಮಾತು ಹೇಳಿದರು.

ಒಟ್ಟಾರೆ ವ್ಯಕ್ತಿಯ ಜೀವನಮಟ್ಟವನ್ನು ನಿರ್ಧರಿಸಲು ನಾವು ಎಷ್ಟು ಸಂಪಾದಿಸುತ್ತೇವೆ ಎಂಬುದಲ್ಲ, ಸಮಾಜಕ್ಕೆ ಮರಳಿ ನಾವು ಎಷ್ಟು ಕೊಡುತ್ತೇವೆ ಎಂಬುದೇ ಮಾನದಂಡವಾಗಬೇಕು ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ನರೇಂದ್ರ ಮೋದಿ ಭಾಷಣ ಟೊಳ್ಳು: ಪ್ರತಿಪಕ್ಷಗಳ ಟೀಕೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿಯವರ ಸ್ವಾತಂತ್ರ್ಯ ದಿನದ ಭಾಷಣವನ್ನು ‘ವಾಕ್ಚಾತುರ್ಯ ಮತ್ತು ಖಾಲಿ ಘೋಷಣೆ’ಗಳಿಂದ ಕೂಡಿದೆ ಎಂದಿರುವ ಪ್ರತಿಪಕ್ಷಗಳು, ಎಂಟು ವರ್ಷಗಳಿಂದ ಅದೇ ಭಾಷಣ ಮಾಡುತ್ತಿದ್ದಾರೆ ಎಂದು ಟೀಕಿಸಿವೆ. ಘೋಷಿಸಲಾಗಿರುವ ಅಂಶಗಳು ಜಾರಿಗೆ ತರುವಂತಹವುಗಳಲ್ಲ ಎಂದು ಅಭಿಪ್ರಾಯಪಟ್ಟಿವೆ.

‘ಪ್ರಧಾನಿ ಅಧಿಕಾರ ಸ್ವೀಕರಿಸಿದ ನಂತರ ದೇಶವು ‘ಅದೇ ಭಾಷಣಗಳನ್ನು’ ಕೇಳುತ್ತಿದೆ. ಆದರೆ ರೈತರು ಸೇರಿದಂತೆ ಅನ್ಯಾಯಕ್ಕೊಳಗಾದವರಿಗೆ ಯಾವುದೇ ಪರಿಹಾರಗಳನ್ನು ನೀಡುತ್ತಿಲ್ಲ’ ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರು ಟೀಕಿಸಿದ್ದಾರೆ.

‘ಮೋದಿ ಅವರು ಹೊಸ ಯೋಜನೆಗಳನ್ನು ಘೋಷಿಸುತ್ತಾರೆ, ಆದರೆ ಅವುಗಳನ್ನು ಎಂದಿಗೂ ಕಾರ್ಯಗತಗೊಳಿಸುವುದಿಲ್ಲ. ಅವರು ಬಹಳಷ್ಟು ವಿಷಯಗಳನ್ನು ಹೇಳುತ್ತಾರೆ, ಆದರೆ ಎಂದಿಗೂ ಅವುಗಳನ್ನು ಪಾಲಿಸುವುದಿಲ್ಲ’ ಎಂದರು. ಮೂರು ವಿವಾದಾತ್ಮಕ ಕೃಷಿ ಕಾನೂನುಗಳನ್ನು ರದ್ದುಗೊಳಿಸದ ಸರ್ಕಾರದ ನಡೆಯನ್ನು ಖಂಡಿಸಿದ ಅವರು, ಈ ಮೂಲಕ ಮೋದಿ ಅವರು ರೈತರನ್ನು ದುರವಸ್ಥೆಗೆ ತಳ್ಳಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷವನ್ನು ಪದೇ ಪದೇ ಟೀಕಿಸಿದರೆ ದೇಶ ಪ್ರಗತಿಯಾಗುವುದಿಲ್ಲ ಎಂದು ಒತ್ತಿ ಹೇಳಿದ ಅವರು, ‘ಕಾಂಗ್ರೆಸ್ ತನ್ನ ಆಡಳಿತಾವಧಿಯಲ್ಲಿ ರೈತರಿಗೆ ನೀರಾವರಿ ವ್ಯವಸ್ಥೆಯನ್ನು ಒದಗಿಸುವಂತಹ ಬಹಳಷ್ಟು ಕೆಲಸಗಳನ್ನು ಮಾಡಿದೆ. ಯುಪಿಎ ಅಧಿಕಾರದಲ್ಲಿದ್ದಾಗ ರೈತರ ಸಾಲವನ್ನು ಮನ್ನಾ ಮಾಡಿದೆ’ ಎಂದರು.

ಸಿಪಿಎಂ ಮುಖ್ಯಸ್ಥ ಸೀತಾರಾಂ ಯೆಚೂರಿ ಅವರೂ ಖರ್ಗೆ ಮಾತಿಗೆ ದನಿಗೂಡಿಸಿದ್ದಾರೆ. ‘ಕೋವಿಡ್ ಸಾಂಕ್ರಾಮಿಕದ ಅಸಮರ್ಪಕ ನಿರ್ವಹಣೆಯಿಂದ ಹಾಗೂ ಲಸಿಕೆ ಕೊರತೆಯಿಂದ ಬಳಲುತ್ತಿರುವ ಕೋಟ್ಯಂತರ ಜನರಿಗೆ ಯಾವುದೇ ಭರವಸೆ ಇಲ್ಲ. ನಿರುದ್ಯೋಗ, ಬಡತನ, ಹಸಿವು, ಬೆಲೆಗಳು ಹೆಚ್ಚುತ್ತಿವೆ. ನಮ್ಮ ಜೀವನ ಮತ್ತಷ್ಟು ಕೆಟ್ಟ ಸ್ಥಿತಿಯಲ್ಲೇ ಮುಂದುವರಿಯುವ ಎಚ್ಚರಿಕೆ ಇದು’ ಎಂದು ಅವರು ಪ್ರಧಾನಿ ಭಾಷಣವನ್ನು ವಿಶ್ಲೇಷಿಸಿದ್ದಾರೆ.

ಮೋದಿ ಭಾಷಣವು ಜನರನ್ನು ಪ್ರೇರೇಪಿಸುವಲ್ಲಿ ವಿಫಲವಾಗಿದೆ ಎಂದು ಆರ್‌ಜೆಡಿ ಹಿರಿಯ ಸಂಸದ ಮನೋಜ್ ಝಾ ಆರೋಪಿಸಿದ್ದಾರೆ. ವಿಶೇಷವಾಗಿ ಕೋವಿಡ್ ಎರಡನೇ ಅಲೆ ನಂತರ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ಸಾಂತ್ವನದ ಅಗತ್ಯವಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇಶ ಎದುರಿಸುತ್ತಿರುವ ಯಾವುದೇ ಸಮಸ್ಯೆಗಳಿಗೆ ಪರಿಹಾರವನ್ನು ನೀಡದ ಕಾರಣ ಪ್ರಧಾನಿಯವರ ಮಾತು ನಿರಾಶಾದಾಯಕವಾಗಿದೆ ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಹೇಳಿದರು. ನಿರುದ್ಯೋಗಿ ಯುವಕರು ಮತ್ತು ರೈತರ ಸಂಕಷ್ಟಗಳನ್ನು ಕಡೆಗಣಿಸಿದ ಪ್ರಧಾನಿ, ಖಾಲಿ ಘೋಷಣೆಗಳಿಗೆ ತಮ್ಮ ಭಾಷಣ ಸೀಮಿತಗೊಳಿಸಿದರು ಎಂದಿದ್ದಾರೆ.

ಮೂಲಸೌಕರ್ಯ ವಲಯದಲ್ಲಿ ₹100 ಲಕ್ಷ ಕೋಟಿ ಹೂಡಿಕೆಯ ಘೋಷಣೆ ಉಲ್ಲೇಖಿಸಿ, ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೆವಾಲಾ ಟ್ವೀಟ್ ಮಾಡಿದ್ದಾರೆ. 2019ರ ಆಗಸ್ಟ್ 15ರಂದು ಮಾಡಿದ ಪ್ರಧಾನಿ ಮಾಡಿದ್ದ ಘೋಷಣೆಗೆ ಎರಡು ವರ್ಷಗಳು ಕಳೆದಿವೆ ಎಂದು ನೆನಪಿಸಿದ್ದಾರೆ.

ಅಫ್ಗಾನಿಸ್ತಾನ ಅಯೋಮಯ: ಅಧಿಕಾರ ಹಸ್ತಾಂತರ ಪ್ರಕ್ರಿಯೆ ಆರಂಭ

ತಾಲಿಬಾನ್ ಬಿಗಿಹಿಡಿತ; ಘನಿ ಪಲಾಯನ

ಕಾಬೂಲ್ (ಪಿಟಿಐ/ಎಎಫ್‌ಪಿ/ಎಪಿ): ಅಫ್ಗಾನಿಸ್ತಾನ ಈಗ ತಾಲಿಬಾನ್ ಬಂಡುಕೋರರ ಬಿಗಿ ಹಿಡಿತದಲ್ಲಿದೆ. ಅವರು ರಾಜಧಾನಿ ಕಾಬೂಲ್ ಪ್ರವೇಶಿಸುತ್ತಿದ್ದಂತೆಯೇ, ಅಧ್ಯಕ್ಷ ಅಶ್ರಫ್ ಘನಿ ಅವರು ದೇಶದಿಂದ ಪಲಾಯನ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘನಿ ದೇಶದಿಂದ ಓಡಿಹೋಗಿರುವುದನ್ನು ಇಬ್ಬರು ಅಧಿಕಾರಿಗಳು ಖಚಿತಪಡಿಸಿದ್ದಾರೆ. ಅಫ್ಗನ್ ರಾಷ್ಟ್ರೀಯ ಸಾಮರಸ್ಯ ಮಂಡಳಿಯ ಮುಖ್ಯಸ್ಥ ಅಬ್ದುಲ್ಲಾ ಅಬ್ದುಲ್ಲಾ ಇದನ್ನು ದೃಢಪಡಿಸಿದ್ದಾರೆ. ‘ದೇಶ ಸಂಕಷ್ಟದಲ್ಲಿರುವ ಸಮಯದಲ್ಲಿ ಅವರು ಪಲಾಯನ ಮಾಡಿದ್ದಾರೆ’ ಎಂದು ಅವರು ದೂರಿದ್ದಾರೆ.

ತಾಲಿಬಾನ್ ಉಗ್ರರಿಗೆ, ಕಾಬೂಲ್ ಹೊರವಲಯದಲ್ಲೇ ಇರುವಂತೆ ಸೂಚಿಸಲಾಗಿದೆ. ಅಫ್ಗಾನಿಸ್ತಾನ ಸರ್ಕಾರದ ಆಡಳಿತವನ್ನು ತಾಲಿಬಾನ್‌ಗೆ ಹಸ್ತಾಂತರಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ, ಕಾಬೂಲ್‌ನ ಭದ್ರತೆಯ ಜವಾಬ್ದಾರಿ ಅಫ್ಗನ್ ಸರ್ಕಾರದ್ದು ಎಂದು ತಾಲಿಬಾನ್ ವಕ್ತಾರರು ಟ್ವೀಟ್ ಮಾಡಿದ್ದಾರೆ.

ಕಾಬೂಲ್‌ನಲ್ಲಿ ರಕ್ತಪಾತವನ್ನು ತಪ್ಪಿಸಲು ಮತ್ತು ತಾಲಿಬಾನ್‌ಗೆ ಅಧಿಕಾರವನ್ನು ಹಸ್ತಾಂತರಿಸಲು ಮಾತುಕತೆಗಳು ನಡೆಯುತ್ತಿವೆ ಎಂದು ಅಫ್ಗಾನ್ ಸರ್ಕಾರ ಮೊದಲೇ ತಿಳಿಸಿತ್ತು. ‘ಅಫ್ಗನ್ ಜನರು ಚಿಂತಿಸಬಾರದು, ನಗರದ ಮೇಲೆ ಯಾವುದೇ ದಾಳಿ ನಡೆಯುವುದಿಲ್ಲ. ಶಾಂತಿಯುತವಾಗಿ ಅಧಿಕಾರ ವರ್ಗಾವಣೆ ಆಗುತ್ತದೆ’ ಎಂದು ಆಂತರಿಕ ಸಚಿವ ಅಬ್ದುಲ್ ಸತ್ತಾರ್ ಮಿರ್ಜಕ್ವಾಲ್ ಅವರು ಧ್ವನಿಮುದ್ರಿತ ಭಾಷಣದಲ್ಲಿ ಹೇಳಿದ್ದರು.

ತಾಲಿಬಾನ್‌ನ ಸಂಧಾನ ತಂಡದ ಭಾಗವಾಗಿರುವ ಕತಾರ್‌ನಲ್ಲಿ ನೆಲೆಸಿರುವ ಸುಹೇಲ್ ಶಾಹೀನ್ ಅವರು, ಶೀಘ್ರ ಅಧಿಕಾರ ಹಸ್ತಾಂತರಕ್ಕೆ ಬೇಡಿಕೆ ಇಟ್ಟಿದ್ದಾರೆ. ‘ಮುಂದಿನ ಒಂದು ವಾರದಲ್ಲಿ ಶಾಂತಿಯುತ ಹಸ್ತಾಂತರ ಆಗಬೇಕು’ ಎಂದು ಅವರು ಸುದ್ದಿಸಂಸ್ಥೆಯೊಂದಕ್ಕೆ ತಿಳಿಸಿದ್ದಾರೆ.

ಮಝರ್-ಎ-ಶರೀಫ್ ಮತ್ತು ಜಲಾಲಾಬಾದ್ ಅನ್ನು ತಾಲಿಬಾನ್ ಅತಿಕ್ರಮಿಸಿದ ನಂತರ ಘನಿ ಸರ್ಕಾರವು ಸಂಪೂರ್ಣವಾಗಿ ನಿರುತ್ತರವಾಗಿತ್ತು. ತಾಲಿಬಾನ್ ಪರ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಪೋಸ್ಟ್ ಮಾಡಿದ ವಿಡಿಯೊಗಳಲ್ಲಿ, ಶಸ್ತ್ರಸಜ್ಜಿತ ಬಂಡುಕೋರರು ಧ್ವಜ ಬೀಸುತ್ತಾ, ಸ್ಥಳೀಯರನ್ನು ಅಭಿನಂದಿಸುತ್ತಾ, ನಗರ ಸುತ್ತುತ್ತಿರುವ ದೃಶ್ಯಗಳಿವೆ.

ತಾಲಿಬಾನ್ ಉಗ್ರರು ಕ್ರೂರ ನಿಯಮವನ್ನು ಪುನಃ ಜಾರಿಗೆ ತರಬಹುದು ಎಂಬ ಭೀತಿ ನಾಗರಿಕರಲ್ಲಿ ಹರಡಿದೆ. ಹೀಗಾಗಿ ದೇಶವನ್ನು ತೊರೆಯಲು ಹವಣಿಸುತ್ತಿದ್ದಾರೆ. ಕೂಡಿಟ್ಟಿದ್ದ ಹಣವನ್ನು ಪಡೆಯಲು ಎಟಿಎಂಗಳ ಮುಂದೆ ಸಾಲುಗಟ್ಟಿದ್ದಾರೆ. ಅಮೆರಿಕ ಸೇರಿದಂತೆ ಪಾಶ್ಚಿಮಾತ್ಯ ದೇಶಗಳ ರಾಜತಾಂತ್ರಿಕ ಸಿಬ್ಬಂದಿಯನ್ನು ತೆರವುಗೊಳಿಸುವ ಯತ್ನಗಳು ನಡೆಯುತ್ತಿವೆ.

ಅಮೆರಿಕ ಸೇನೆ ವಾಪಸ್ ಆಗಿದ್ದರಿಂದ ತಾಲಿಬಾನ್ ಪ್ರತಿರೋಧವನ್ನು ತಡೆಯಲು ಅಫ್ಗನ್ ಸೇನೆಗೆ ಸಾಧ್ಯವಾಗಿಲ್ಲ. 2001ರಲ್ಲಿ ಕಾಬೂಲ್‌ನಲ್ಲಿ ತಾಲಿಬಾನ್ ಆಡಳಿತ ಕೊನೆಗೊಳಿಸಿದ್ದ ಅಮೆರಿಕವು ಸುಮಾರು ಎರಡು ದಶಕಗಳ ಕಾಲ ಸೇನೆ ನಿಯೋಜಿಸಿತ್ತು. ಇದೀಗ ಇಸ್ಲಾಮಿಕ್ ಸಂಘಟನೆಯು ಅಧಿಕಾರವನ್ನು ಮರಳಿ ಪಡೆಯುವ ಸನಿಹದಲ್ಲಿದೆ.

ಜಲಾಲಾಬಾದ್‌ನಲ್ಲಿ ಬೀಡುಬಿಟ್ಟಿರುವ ತಾಲಿಬಾನ್ ಬಂಡುಕೋರರು —ಎಎಫ್‌ಪಿ ಚಿತ್ರ

ಕಾಬೂಲ್‌ನಿಂದ ಹೊರಟ ಏರ್ ಇಂಡಿಯಾ ವಿಮಾನ

ಕಾಬೂಲ್ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿದ್ದ ಭಾರತದಿಂದ ತೆರಳಿದ್ದ ಏರ್ ಇಂಡಿಯಾ ವಿಮಾನಕ್ಕೆ ಎಟಿಸಿ ಅನುಮತಿ ಸಿಗುವವರೆಗೆ ಒಂದು ಗಂಟೆ ಕಾಲ ಆಗಸದಲ್ಲಿ ಹಾರಾಟ ನಡೆಸಬೇಕಾಯಿತು. ಅನುಮತಿ ಸಿಕ್ಕ ಬಳಿಕ ಇಳಿದ ವಿಮಾನವು 129 ಜನರೊಂದಿಗೆ ಕಾಬೂಲ್‌ನಿಂದ ಭಾರತದತ್ತ ಹೊರಟಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿ-ಕಾಬೂಲ್-ದೆಹಲಿ ವಿಮಾನವನ್ನು ರದ್ದುಗೊಳಿಸುವ ಯಾವುದೇ ಯೋಜನೆ ಇಲ್ಲ. ಸೋಮವಾರವೂ ಕಾರ್ಯನಿರ್ವಹಿಸಲು ನಿರ್ಧರಿಸಲಾಗಿದೆ ಎಂದು ಏರ್ ಇಂಡಿಯಾದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉರುಳಿದ ಬಂಡೆ–ಹೆದ್ದಾರಿ ಬಂದ್

ಶಿಮ್ಲಾ (ಪಿಟಿಐ): ಬೆಟ್ಟದಿಂದ ಬಂಡೆಗಳು ಉರುಳಿಬಿದ್ದ ಕಾರಣ ಹಿಮಾಚಲ ಪ್ರದೇಶದ ಲಾಹೌಲ್–ಸ್ಪಿತಿ ಜಿಲ್ಲೆಯ ಮನಾಲಿ– ಲೇಹ್ ಹೆದ್ದಾರಿಯಲ್ಲಿ ಸಂಚಾರ ನಿರ್ಬಂಧಿಸಲಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಂಡೆ ತೆರವು ಕಾರ್ಯಾಚರಣೆಗೆ ಜಿಲ್ಲಾಡಳಿತ ಗಡಿ ರಸ್ತೆ ಸಂಸ್ಥೆಯ(ಬಿಆರ್‌ಒ) ತಂಡವನ್ನು ನಿಯೋಜಿಸಿದೆ. ಶೀಘ್ರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದು ರಾಜ್ಯ ವಿಪತ್ತು ನಿರ್ವಹಣಾ ನಿರ್ದೇಶಕ ಸುದೇಶ್ ಕುಮಾರ್ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ಸಿಜೆಐ ಎನ್‌.ವಿ.ರಮಣ ವಿಷಾದ • ಮಸೂದೆ ಕುರಿತು ಸಮಗ್ರ ಚರ್ಚೆ ಅಗತ್ಯ

‘ಸಂಸತ್ ಕಲಾಪ: ಗುಣಮಟ್ಟ ಕೊರತೆ’

ನವದೆಹಲಿ (ಪಿಟಿಐ): ‘ಸಂಸತ್‌ನ ಕಲಾಪ, ಚರ್ಚೆ ದಯನೀಯ ಸ್ಥಿತಿಯಲ್ಲಿದೆ. ಗುಣಮಟ್ಟ ಮತ್ತು ಸಮಗ್ರ ಚರ್ಚೆಯ ಕೊರತೆಯಿದೆ. ಹೀಗಾಗಿ, ಮಸೂದೆಗಳು ಅಸ್ಪಷ್ಟತೆಯೊಂದಿಗೆ ಅಂಗೀಕಾರಗೊಳ್ಳುತ್ತಿವೆ’ ಎಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್‌.ವಿ.ರಮಣ ಅವರು ಭಾನುವಾರ ಹೇಳಿದರು.

ಸ್ವಾತಂತ್ರ್ಯ ವರ್ಷಗಳಿಗೆ ಹೋಲಿಕೆ ಮಾಡಿದಲ್ಲಿ ಇತ್ತೀಚಿನ ಅವಧಿಯಲ್ಲಿ ಸಂಸತ್ತಿನ ಕಲಾಪ, ಚರ್ಚೆಯ ಗುಣಮಟ್ಟವು ತೀವ್ರವಾಗಿ ಕುಸಿದಿದೆ ಎಂದೂ ಮುಖ್ಯ ನ್ಯಾಯಮೂರ್ತಿ ಅವರು ಅಭಿಪ್ರಾಯಪಟ್ಟರು.

ಸುಪ್ರೀಂಕೋರ್ಟ್ ವಕೀಲರ ಸಂಘವು ಕೋರ್ಟ್‌ನ ಆವರಣದಲ್ಲಿ ಆಯೋಜಿಸಿದ್ದ 75ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

‘ಕಾಯ್ದೆಯನ್ನು ರೂಪಿಸುವ ಹಂತದಲ್ಲಿಯೇ ವಿಸ್ತೃತವಾದ ಚರ್ಚೆ, ವ್ಯಾಖ್ಯಾನಗಳು ನಡೆಯಬೇಕು. ಶಾಸನಸಭೆ ಏನು ಹೇಳಬಯಸಿದೆ ಎಂದು ನಮಗೆ ಸ್ಪಷ್ಟ ಚಿತ್ರ ಇರಬೇಕು. ಆಗ ಕಾಯ್ದೆಯನ್ನು ಅರ್ಥೈಸುವ ಹಾಗೂ ಅದನ್ನು ಜಾರಿಗೊಳಿಸುವಲ್ಲಿ ನ್ಯಾಯಾಲಯದ ಮೇಲಿನ ಹೊರೆಯು ಕುಗ್ಗಲಿದೆ’ ಎಂದರು.

ಎನ್‌.ವಿ. ರಮಣ

‘ಒಟ್ಟಾರೆ, ಈಗ (ಕಲಾಪದ ಗುಣಮಟ್ಟ) ಶೋಚನೀಯ ಪರಿಸ್ಥಿತಿ ಇದೆ. ಈಗ ಏಕೆ ಅಂತಹ ಕಾಯ್ದೆ ರೂಪಿಸುತ್ತಾರೆ? ಸದನದಲ್ಲಿ ಅಗತ್ಯ ಸಂಖ್ಯೆಯಲ್ಲಿ ಬುದ್ಧಿಜೀವಿಗಳು, ವೃತ್ತಿಪರರು ಮತ್ತು ವಕೀಲರು ಇಲ್ಲದಿರುವುದೂ ಇಂತಹ ಪರಿಸ್ಥಿತಿಗೆ ಕಾರಣವಿರಬಹುದು’ ಎಂದೂ ಅಭಿಪ್ರಾಯಪಟ್ಟರು.

ಮಹಾತ್ಮಾಗಾಂಧಿ, ಸರ್ದಾರ್ ಪಟೇಲ್, ಜವಾಹರಲಾಲ್ ನೆಹರೂ, ಬಾಬು ರಾಜೇಂದ್ರ ಪ್ರಸಾದ್ ಅಂತಹ ವಕೀಲರು ಭಾರತದ ಸ್ವಾತಂತ್ರ್ಯದ ಹೋರಾಟವನ್ನು ಹೇಗೆ ಮುನ್ನಡೆಸಿದ್ದರು ಎಂದು ಮೆಲುಕುಹಾಕಿದರು.

‘ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯ ವಿಧಾನಸಭೆಗಳ ಪ್ರಪ್ರಥಮ ಅವಧಿಯ ಸದಸ್ಯರನ್ನು ಗಮನಿಸಿದರೆ ಅವರಲ್ಲಿ ಹೆಚ್ಚಿನವರು ವಕೀಲರೇ ಆಗಿದ್ದರು. ದುರದೃಷ್ಟವಶಾತ್ ನಂತರದ ವರ್ಷಗಳಲ್ಲಿ ಸಂಸತ್ತಿನಲ್ಲಿ ಏನಾಗುತ್ತಿದೆ ಎಂಬುದು ನಿಮಗೆ ಗೊತ್ತಿದೆ. ಶಾಸನಸಭೆಗಳಲ್ಲಿ ಬುದ್ಧಿಜೀವಿಗಳು, ವೃತ್ತಿಪರರು, ವಕೀಲರು ಇಲ್ಲದಿದ್ದರೆ ಇಂತಹ ಸ್ಥಿತಿಯೇ ನಿರ್ಮಾಣವಾಗಲಿದೆ’ ಎಂದು ಸಿಜೆಐ ರಮಣ ಅವರು ಅಭಿಪ್ರಾಯಪಟ್ಟರು.

‘ಸಾರ್ವಜನಿಕ ಬದುಕಿಗೆ ಹೆಚ್ಚು ತೊಡಗಿಸಿಕೊಳ್ಳಬೇಕು ಮತ್ತು ಸಕ್ರಿಯವಾಗಿ ಭಾಗವಹಿಸಬೇಕು’ ಎಂದು ವಕೀಲ ಸಮುದಾಯಕ್ಕೆ ಸಲಹೆ ಮಾಡಿದ ಅವರು, ‘ವಕೀಲರು ನೇತೃತ್ವ ವಹಿಸಿಕೊಳ್ಳಲು ಇದು ಸಕಾಲ. ಅವರು ತಮ್ಮನ್ನು ಕೇವಲ ವೃತ್ತಿಗಷ್ಟೇ ಸೀಮಿತಗೊಳಿಸಿಕೊಳ್ಳಬಾರದು. ಹಣ ಸಂಪಾದಿಸುವುದು ಅಥವಾ ನೆಮ್ಮದಿಯಿಂದ ಬದುಕು ಸಾಗಿಸುವುದಷ್ಟೇ ಆಗಬಾರದು’ ಎಂದು ಕಿವಿಮಾತು ಹೇಳಿದರು.

ನಿರೀಕ್ಷೆಗೂ ಮೀರಿದ ಕೊಡುಗೆ

ಜನರ ಹಕ್ಕುಗಳನ್ನು ರಕ್ಷಿಸುವಲ್ಲಿ ಸುಪ್ರೀಂ ಕೋರ್ಟ್ ವಹಿಸುತ್ತಿರುವ ಪಾತ್ರವನ್ನು ಮುಖ್ಯ ನ್ಯಾಯಮೂರ್ತಿಯವರು ಉಲ್ಲೇಖಿಸಿದರು. ‘ಸಂವಿಧಾನದ ನಿರೀಕ್ಷೆಗೂ ಮೀರಿದ ಕೊಡುಗೆಯನ್ನು ಸುಪ್ರೀಂ ಕೋರ್ಟ್ ನೀಡಿದೆ. ಕೇವಲ ಸಂವಿಧಾನವನ್ನು ಅರ್ಥೈಸಿಕೊಳ್ಳುವುದಷ್ಟೇ ಅಲ್ಲ, ಜನರ ಸಮಸ್ಯೆಗಳನ್ನು ಅರಿತು ಅವರ ಹಕ್ಕುಗಳ ರಕ್ಷಣೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿದೆ. ಈ ದೃಷ್ಟಿಯಿಂದ ಸುಪ್ರಿಂ ಕೋರ್ಟ್ ಸಕ್ರಿಯ ಪಾತ್ರವನ್ನು ವಹಿಸಿದ್ದು, ಇನ್ನಷ್ಟು ಕೊಡುಗೆ ನೀಡಲಿದೆ ಎಂಬ ವಿಶ್ವಾಸವಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಿಕ್ಷಣ

ಎಸ್ಸೆಸ್ಸೆಲ್ಸಿ ನಂತರ ಪಿಯುಸಿ ಹೊರತಾಗಿ ಸಾಕಷ್ಟು ವೃತ್ತಿಪರ ಕೋರ್ಸ್‌ಗಳಿವೆ. ವಿದ್ಯಾರ್ಥಿಗಳು ಇಂತಹ ಕೋರ್ಸ್‌ಗಳನ್ನು ಸೇರಿಕೊಂಡರೆ ಆಸಕ್ತಿಯ ಕ್ಷೇತ್ರಗಳಲ್ಲಿಯೇ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

ಎಸ್ಸೆಸ್ಸೆಲ್ಸಿ ನಂತರ ವೃತ್ತಿಪರ ಕೋರ್ಸ್‌ಗಳು

ಕೋಕಿಲ ಎಂ.ಎಸ್.

ಕೊರೊನಾ ಸಂಕಷ್ಟ, ಗೊಂದಲಗಳ ನಡುವೆಯೂ ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ಈಗಿನ ಪ್ರಶ್ನೆ 'ಮುಂದೇನು'? ಎನ್ನುವುದು. ಎಲ್ಲ ಕಾಲಮಾನಕ್ಕೂ ಎಲ್ಲ ವಿದ್ಯಾರ್ಥಿಗಳು ಎದುರಿಸುವ ಸಾಮಾನ್ಯ ಪ್ರಶ್ನೆ ಇದು. ಆದರೆ ಕಳೆದ ಒಂದು ವರ್ಷದಿಂದ ಇದರ ಸ್ಥಿತಿ ಹೊಸ ರೂಪ ಪಡೆದಿದೆ ಅಷ್ಟೆ.

'ಆಯ್ಕೆಗಳು ಗುರಿಗೆ ಕೀಲುಗಳಿದ್ದಂತೆ' ಎನ್ನುತ್ತಾರೆ ಅಮೆರಿಕಾದ ಖ್ಯಾತ ಬರಹಗಾರ ಮಾರ್ಕಮ್. ಹೌದು, ಸರಿಯಾದ ಸಮಯದಲ್ಲಿ ಮಾಡುವ ಆಯ್ಕೆ ಜೀವನದ ದಿಕ್ಕನ್ನೇ ಬದಲಿಸುತ್ತದೆ. ಪಿಯುಸಿ ಮುಗಿದ ನಂತರ ಮುಂದೇನು ಎಂದು ಯೋಚಿಸುವ ಬದಲು, ಎಸ್ಸೆಸ್ಸೆಲ್ಸಿ ನಂತರವೇ ಮುಂದಿನ ಭವಿಷ್ಯದ ದಾರಿಯನ್ನು ನಿರ್ಧರಿಸುವುದು ಒಳ್ಳೆಯದು. ಪಿಯುಸಿಯಲ್ಲಿ ಸೈನ್ಸ್, ಕಾಮರ್ಸ್, ಮತ್ತು ಆರ್ಟ್ಸ್‌ಗಳಿಗೆ ಸೇರುವವರೇ ಹೆಚ್ಚು. ಆದರೆ ಅದರ ಹೊರತಾಗಿಯೂ ಸಾಕಷ್ಟು ವೃತ್ತಿಪರ ಕೋರ್ಸ್‌ಗಳಿದ್ದು, ಆಸಕ್ತಿಯ ಕ್ಷೇತ್ರಗಳಲ್ಲಿಯೇ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

1 ರಾಜ್ಯದಲ್ಲಿ ಈಗಾಗಲೆ ಇರುವ 33 ಡಿಪ್ಲೊಮಾ ಕೋರ್ಸ್‌ಗಳ ಜೊತೆಗೆ ಈ ಬಾರಿ ಎಂಟು ಹೊಸ ಡಿಪ್ಲೊಮಾ ಕೋರ್ಸ್‌ಗಳು ಸೇರ್ಪಡೆಯಾಗಿವೆ. ಆಲ್ಟರ್‌ನೇಟಿವ್ ಎನರ್ಜಿ ಟೆಕ್ನಾಲಜೀಸ್, ಸೈಬರ್ ಭದ್ರತೆ, ಆಹಾರ ಸಂಸ್ಕರಣೆ, ಪ್ರವಾಸೋದ್ಯಮ , ಕ್ಲೌಡ್ ಕಂಪ್ಯೂಟಿಂಗ್, ಆಟೋಮೇಷನ್ ಮತ್ತು ರೋಬೋಟಿಕ್ಸ್, ನಿರ್ದೇಶನ ಮತ್ತು ಚಿತ್ರಕಥೆ ರಚನೆ, ಟಿ.ವಿ ಕಾರ್ಯಕ್ರಮಗಳ ನಿರ್ಮಾಣ ಹಾಗೂ ಸೈಬರ್ ಭೌತಿಕ ವ್ಯವಸ್ಥೆ ಮತ್ತು ಭದ್ರತೆ.

2 ಹೋಟೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ – ಎರಡು ವರ್ಷ ಅವಧಿಯ ಈ ಕೋರ್ಸ್‌ನಲ್ಲಿ ಹೋಟೆಲ್ ಉದ್ಯಮದ ನಿರ್ವಹಣೆಯ ಬಗ್ಗೆ ಹಾಗೂ ಕೇಟರಿಂಗ್ ಸೌಲಭ್ಯಗಳ ಬಗ್ಗೆ ಕಲಿಸಲಾಗುತ್ತದೆ. ಓದಿದ ನಂತರ ಹೋಟೆಲ್‌ಗಳಲ್ಲಿ ಕೇಟರಿಂಗ್ ಆಫೀಸರ್ ಆಗಿ, ಕ್ಯಾಬಿನ್ ಸಿಬ್ಬಂದಿಯಾಗಿ, ಆತಿಥ್ಯ ನಿರ್ವಹಣಾ ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸಬಹುದು.

3 ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ - ಟಿವಿ, ರೇಡಿಯೊ ಅಥವಾ ಪತ್ರಿಕೆಗಳಲ್ಲಿ ಕೆಲಸ ಮಾಡಲು ಆಸಕ್ತಿ ಉಳ್ಳವರು ಎಸ್ಸೆಸ್ಸೆಲ್ಸಿಯ ಆಧಾರದ ಮೇಲೆ ಪತ್ರಿಕೋದ್ಯಮದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ವಿಷಯದ ಆಧಾರದ ಮೇಲೆ ಆರು ತಿಂಗಳಿನಿಂದ ಹಿಡಿದು ಎರಡು ವರ್ಷಗಳವರೆಗಿನ ಕೋರ್ಸ್‌ಗಳೂ ಲಭ್ಯ.

4 ಫ್ಯಾಷನ್ ಟೆಕ್ನಾಲಜಿಯಲ್ಲಿ ಡಿಪ್ಲೊಮಾ - ಮೂರು ವರ್ಷಗಳ ಈ ಕೋರ್ಸ್ ಮುಗಿಸಿದವರು ವಸ್ತ್ರ ವಿನ್ಯಾಸಕರಾಗಿ, ಟೆಕ್ಸ್‌ಟೈಲ್ ವಿನ್ಯಾಸಕರಾಗಿ ಕೆಲಸ ಮಾಡಬಹುದು.

5 ಅಗ್ನಿ ಶಾಮಕ ವಿಷಯದಲ್ಲಿ ಡಿಪ್ಲೊಮಾ – ಅಗ್ನಿಶಾಮಕ ದಳದಲ್ಲಿ ಕೆಲಸ ಮಾಡಲು ಇಚ್ಛಿಸುವವರು ಆರು ತಿಂಗಳ ಈ ಡಿಪ್ಲೊಮಾವನ್ನು ಮಾಡಬಹುದು.

ಎರಡು ಅಥವಾ ಮೂರು ವರ್ಷಗಳ ಅವಧಿಯಲ್ಲಿ ಪೂರ್ಣಗೊಳ್ಳುವ ಸಾಕಷ್ಟು ಡಿಪ್ಲೊಮಾ ಕೋರ್ಸ್‌ಗಳಿವೆ. ಗ್ರಾಫಿಕ್ ಡಿಸೈನ್, ಅನಿಮೇಷನ್, ಬಾಣಸಿಗ (ಶೆಫ್), ವಿಷ್ಯುವಲ್ ಆರ್ಟ್ಸ್, ಸೈಕಾಲಜಿ, ಲಲಿತ ಕಲೆ, ಛಾಯಾಚಿತ್ರ ಕಲೆ, ವಿಡಿಯೋಗ್ರಫಿ, ವೆಬ್ ಡಿಸೈನಿಂಗ್, ಗೇಮಿಂಗ್, ದಂತ ಯಂತ್ರಶಾಸ್ತ್ರ (ಡೆಂಟಲ್ ಮೆಕ್ಯಾನಿಕ್ಸ್), ಬ್ಯಾಂಕಿಂಗ್, ಸೇಫ್ಟಿ ಮತ್ತು ಇನ್ಶೂರೆನ್ಸ್, ದಂತ ನೈರ್ಮಲ್ಯ ತಜ್ಞ (ಡೆಂಟಲ್ ಹೈಜಿನಿಸ್ಟ್), ಸ್ಪೋಕನ್ ಇಂಗ್ಲಿಷ್, ಹಿಂದಿಯಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳು, ಸಾಮಾಜಿಕ ಜಾಲತಾಣ ನಿರ್ವಹಣೆ. ಡೀಸೆಲ್ ಮೆಕ್ಯಾನಿಕ್ಸ್ , ಸ್ಟೆನೊಗ್ರಫಿ, ಬ್ಯೂಟಿಷಿಯನ್ ಕೋರ್ಸ್‌ಗಳು... ಹೀಗೆ ವೃತ್ತಿಯನ್ನಾರಿಸಲು ಸಾಕಷ್ಟು ಅವಕಾಶಗಳಿವೆ.

6 ಅರೆ ವೈದ್ಯಕೀಯ /ಪ್ಯಾರಾ ಮೆಡಿಕಲ್ ಕೋರ್ಸ್‌ಗಳು- ವೈದ್ಯಕೀಯ ಕ್ಷೇತ್ರದಲ್ಲಿ ಆಸಕ್ತಿ ಉಳ್ಳವರು ಈ ಡಿಪ್ಲೊಮಾ ಕೋರ್ಸ್‌ಗಳಲ್ಲಿ ಆಯ್ಕೆ ಮಾಡಿಕೊಳ್ಳಬಹುದು. ಆಸ್ಪತ್ರೆ ನೆರವು ಸಿಬ್ಬಂದಿ, ಗ್ರಾಮೀಣ ಆರೋಗ್ಯ ರಕ್ಷಣಾ ಸಿಬ್ಬಂದಿ, ಲ್ಯಾಬ್ ಟೆಕ್ನೀಷಿಯನ್, ಶುಶ್ರೂಷಾ ಸಹಾಯಕರು, ಎಕ್ಸ್ ರೇ ತಂತ್ರಜ್ಞಾನ, ಇಸಿಜಿ ತಂತ್ರಜ್ಞಾನ, ರೇಡಿಯೋಲಜಿ ಹಾಗೂ ಡಿಪ್ಲೊಮಾ ಇನ್ ಫಾರ್ಮಸಿ.

7 ಪ್ರವಾಸೋದ್ಯಮ- ಪ್ರಯಾಣ ಪ್ರಿಯರಿಗೆ, ಹೊಸ ಜಾಗಗಳ ಅನ್ವೇಷಣೆ ಮಾಡುವ ಹವ್ಯಾಸವಿರುವವರಿಗೆ ಇದು ಹೇಳಿ ಮಾಡಿಸಿದ ವೃತ್ತಿ. ಇದರಲ್ಲೂ ಹಲವು ವಿಶೇಷ ಕೋರ್ಸ್‌ಗಳಿವೆ. ಉದಾಹರಣೆಗೆ ವ್ಯಾಪಾರ ನಿರ್ವಹಣೆಯಲ್ಲಿ ಡಿಪ್ಲೊಮಾ (ಬ್ಯುಸಿನೆಸ್ ಮ್ಯಾನೇಜ್‌ಮೆಂಟ್), ಆಹಾರ ತಂತ್ರಜ್ಞಾನ (ಫುಡ್ ಟೆಕ್ನಾಲಜಿ) ಹಾಗೂ ಆತಿಥ್ಯ ನಿರ್ವಹಣೆ (ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್).

8 ನಟನೆಯಲ್ಲಿ ಆಸಕ್ತಿ ಇರುವವರಿಗಾಗಿಯೇ ಹಲವು ನಟನಾ ಸಂಸ್ಥೆಗಳಿವೆ. ಅಲ್ಲಿ ತರಬೇತಿ ಪಡೆದು ನಟನೆಯನ್ನೂ ವೃತ್ತಿಯಾಗಿಸಿಕೊಳ್ಳಬಹುದು.

ಈ ಕೋರ್ಸ್‌ಗಳನ್ನು ಮಾಡುವುದರಿಂದ ಒಂದಿಷ್ಟು ಅನುಕೂಲಗಳು ಇವೆ. ಕಡಿಮೆ ಸಮಯದಲ್ಲಿ ದುಡಿಯುವ ದಾರಿ ಹುಡುಕುವವರಿಗೆ ಇವು ವರದಾನ. ಆಯ್ಕೆಗೆ ಸಾಕಷ್ಟು ಅವಕಾಶಗಳಿರುವುದರಿಂದ ಆಸಕ್ತಿಯ ಕ್ಷೇತ್ರವನ್ನೇ ವೃತ್ತಿಯಾಗಿಸಿಕೊಳ್ಳಬಹುದು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಹಾಯವಾಗಬಲ್ಲವು. ಕಡಿಮೆ ಖರ್ಚಿನಲ್ಲಿ ವೃತ್ತಿಪರ ವಿಷಯಗಳನ್ನು ಓದಬಹುದು. ಹೆಚ್ಚಿನ ಕೋರ್ಸ್‌ಗಳು ಓದಿನ ಜೊತೆಗೆ ತರಬೇತಿಯನ್ನೂ ನೀಡುತ್ತವೆ.

ಯಾರದ್ದೋ ಬಲವಂತಕ್ಕೆ ಅಥವಾ ಪ್ರತಿಷ್ಠೆಗಾಗಿ ಇಷ್ಟವಿಲ್ಲದ ಕೋರ್ಸ್‌ಗಳಿಗೆ ಸೇರಿ ಸಮಯ, ನೆಮ್ಮದಿ ಮತ್ತು ಹಣ ಮೂರನ್ನೂ ವ್ಯಯ ಮಾಡುವುದರ ಬದಲು ಆಸಕ್ತಿಯ ಕ್ಷೇತ್ರವನ್ನೋ, ಹವ್ಯಾಸವನ್ನೋ ವೃತ್ತಿಯಾಗಿಸಿಕೊಳ್ಳುವುದು ಸರಿಯಲ್ಲವೆ!

ವಿದೇಶಿ ಭಾಷೆ ಯಾವುದಕ್ಕೆ ಹೆಚ್ಚು ಬೇಡಿಕೆ?

ಪ್ರೊ. ಎಸ್.ಕೆ.ಜಾರ್ಜ್

ವಿದೇಶಗಳಲ್ಲಿ ವ್ಯಾಸಂಗಕ್ಕಾಗಿ ಸಾಕಷ್ಟು ವಿದ್ಯಾರ್ಥಿಗಳು ತೆರಳುವುದು ಇತ್ತೀಚಿನ ಕೆಲವು ವರ್ಷಗಳಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಕೋವಿಡ್ ಸ್ವಲ್ಪ ಕಡಿಮೆಯಾಗುತ್ತಿದ್ದಂತೆಯೇ ಮತ್ತೆ ವಿದ್ಯಾರ್ಥಿಗಳು ವಿದೇಶಿ ವಿಶ್ವವಿದ್ಯಾಲಯಗಳತ್ತ ಮುಖ ಮಾಡುತ್ತಿದ್ದಾರೆ. ಇದರ ಜೊತೆಗೆ ಜಾಗತೀಕರಣ ಎನ್ನುವುದು ವಿದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಿದೆ. ವಿದ್ಯಾರ್ಥಿಗಳೇ ಇರಲಿ, ಉದ್ಯೋಗಸ್ಥರೇ ಇರಲಿ ವಿದೇಶಗಳಿಗೆ ಹೋಗಬೇಕಾದರೆ ಅಲ್ಲಿಯ ಭಾಷೆಯನ್ನು ಕರಗತ ಮಾಡಿಕೊಂಡರೆ ಅನುಕೂಲ. ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ ಸೇರಿದಂತೆ ದೇಶದ ಹಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ವಿದೇಶಿ ಭಾಷೆಗಳಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಕೋರ್ಸ್ ಅಭ್ಯಸಿಸಬಹುದು. ದೀರ್ಘಾವಧಿ ಕೋರ್ಸ್ ಮಾಡಿದರೆ ಆಯಾ ಭಾಷೆಯನ್ನು ಕಲಿಸುವ ಪ್ರಾಧ್ಯಾಪಕರಾಗಿಯೂ ಉದ್ಯೋಗಕ್ಕೆ ಸೇರಿಕೊಳ್ಳಬಹುದು.

ಹೆಚ್ಚು ಬೇಡಿಕೆಯಿರುವ ಕೆಲವು ವಿದೇಶಿ ಭಾಷೆಗಳ ಬಗ್ಗೆ ವಿವರಗಳು ಇಲ್ಲಿವೆ.

ಮ್ಯಾಂಡರಿನ್/ ಚೈನೀಸ್ ಭಾಷೆ: ಜಾಗತಿಕವಾಗಿ 1.19 ಶತಕೋಟಿಗಿಂತಲೂ ಅಧಿಕ ಮಂದಿ ಚೈನೀಸ್ ಭಾಷೆ ಮಾತನಾಡುತ್ತಿದ್ದು, ಇವರಲ್ಲಿ 8 ಲಕ್ಷಕ್ಕಿಂತಲೂ ಹೆಚ್ಚಿನ ಜನ ಮ್ಯಾಂಡರಿನ್ ಮಾತನಾಡುತ್ತಾರೆ. ಚೀನಾ ವಿಶ್ವವಿದ್ಯಾಲಯಗಳಲ್ಲಿ ಓದಲು ಹೋಗುವ ವಿದ್ಯಾರ್ಥಿಗಳಲ್ಲದೇ, ಅಲ್ಲಿರುವ ವ್ಯಾಪಾರ-ವಹಿವಾಟಿನ ಅವಕಾಶಗಳಿಂದಾಗಿ ಇತರರೂ ಈ ಭಾಷೆಯನ್ನು ಕಲಿಯಲು ಉತ್ಸುಕತೆ ತೋರುತ್ತಿದ್ದಾರೆ. ವಾಹನ ಹಾಗೂ ಎಲೆಕ್ಟ್ರಾನಿಕ್ಸ್ ಉದ್ಯಮವು ಹೆಚ್ಚಿನ ಜನರನ್ನು ಚೀನಾಗೆ ಸೆಳೆಯುತ್ತಿದೆ. ಹಾಗೆಯೇ ಇಲ್ಲಿರುವ ಚೀನಾ ಮೂಲದ ಕಂಪನಿಗಳಲ್ಲಿ ಉದ್ಯೋಗಕ್ಕೆ ಸೇರಲೂ ಚೈನೀಸ್ ಭಾಷೆ ಸಹಾಯಕ.

ಸ್ಪಾನಿಷ್: ಯೂರೋಪ್‌ನ 20ಕ್ಕೂ ಅಧಿಕ ದೇಶಗಳಲ್ಲಿ 53 ಕೋಟಿಯಷ್ಟು ಜನ ಈ ಭಾಷೆ ಮಾತನಾಡುತ್ತಾರೆ. ಚೈನೀಸ್/ ಮ್ಯಾಂಡರಿನ್ ನಂತರ ಅತಿ ಹೆಚ್ಚು ಜನ ಮಾತನಾಡುವ ಭಾಷೆಯೆಂದರೆ ಸ್ಪಾನಿಷ್. ಹಾಗೆಯೇ ಪ್ರವಾಸೋದ್ಯಮ, ಭಾಷಾಂತರ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಸ್ಪೇನ್ ಕಂಪನಿಗಳು ಹೂಡಿಕೆ ಮಾಡಿವೆ. ಅಲ್ಲಿಯ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ತೆರಳುವ ವಿದ್ಯಾರ್ಥಿಗಳ ಸಂಖ್ಯೆಯೂ ಸಾಕಷ್ಟಿದೆ.

ಜರ್ಮನ್: ಯೂರೋಪ್‌ನಲ್ಲಿ ಇಂಗ್ಲಿಷ್, ಬಿಟ್ಟರೆ ಅತ್ಯಂತ ಜನಪ್ರಿಯ ಭಾಷೆಯೆಂದರೆ ಜರ್ಮನ್. ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ. ಜರ್ಮನಿಯ ಕಂಪನಿಗಳಲ್ಲಿ ಉದ್ಯೋಗಾವಕಾಶಗಳು ಸಾಕಷ್ಟಿದ್ದು, ಅಮೆರಿಕಕ್ಕೆ ತೆರಳಿದರೂ ಕೂಡ ಅಲ್ಲಿರುವ ಜರ್ಮನ್ ಕಂಪನಿಗಳಲ್ಲಿ ಅವಕಾಶ ಗಿಟ್ಟಿಸಲು ಭಾಷೆ ಬಂದರೆ ಸೂಕ್ತ.

ಫ್ರೆಂಚ್: ಈ ಭಾಷೆಯಲ್ಲಿ ತಜ್ಞತೆ ಸಾಧಿಸಿದರೆ ಫ್ರಾನ್ಸ್‌ನಲ್ಲಿರುವ ವಿಶ್ವವಿದ್ಯಾಲಯಗಳು ಹಾಗೂ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಕಾಲೇಜುಗಳಲ್ಲಿ ಅಧ್ಯಯನ ನಡೆಸಲು ಸಹಾಯಕ. ಉನ್ನತ ಅಧ್ಯಯನ ನಡೆಸಲು ಅಲ್ಲಿಯ ಸರ್ಕಾರ ನೀಡುವ ಫೆಲೋಶಿಪ್ ಪಡೆಯಲು ಫ್ರೆಂಚ್ ಭಾಷೆಯಲ್ಲಿ ಪರಿಣತಿ ಸಾಧಿಸಬೇಕಾಗುತ್ತದೆ. ಹೋಟೆಲ್, ಫ್ಯಾಷನ್, ದೃಶ್ಯಕಲೆ ಮೊದಲಾದ ಕ್ಷೇತ್ರಗಳಲ್ಲಿ ಉದ್ಯೋಗ ಪಡೆಯಲು ಈ ಭಾಷೆ ಬಂದರೆ ಅನುಕೂಲ.

ರಷ್ಯನ್: ಯೂರೋಪ್‌ನಲ್ಲಿ ಸ್ಥಳೀಯವಾಗಿ ಈ ಭಾಷೆಯಲ್ಲಿ ಮಾತನಾಡುವವರ ಸಂಖ್ಯೆ ಸಾಕಷ್ಟಿದೆ. ಜಾಗತಿಕವಾಗಿ 300 ದಶಲಕ್ಷ ಮಂದಿ ಈ ಭಾಷೆಯನ್ನು ಮಾತನಾಡುತ್ತಾರೆ. ಎಂಜನಿಯರಿಂಗ್, ವಿಜ್ಞಾನ ಮತ್ತು ತಂತ್ರಜ್ಞಾನ, ತೈಲ ಮತ್ತು ಅನಿಲ ಮೊದಲಾದ ಕ್ಷೇತ್ರಗಳಲ್ಲದೇ ರಕ್ಷಣಾ ಕ್ಷೇತ್ರದಲ್ಲೂ ರಷ್ಯಾದ ಕಂಪನಿಗಳಲ್ಲಿ ಭಾರತೀಯರಿಗೆ ವಿಪುಲ ಅವಕಾಶಗಳಿವೆ. ಹೀಗಾಗಿ ಈ ಭಾಷೆಯಲ್ಲಿ ಪರಿಣತಿ ಪಡೆದರೆ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು.

ಜಪಾನೀಸ್: ಇಂಗ್ಲಿಷ್ ಮತ್ತು ಚೈನೀಸ್ ನಂತರ ಅಂತರ್ಜಾಲದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಲ್ಲಿರುವ ಭಾಷೆಯಿದು. ಇದಲ್ಲದೇ ಜಪಾನ್‌ನ ಬಹಳಷ್ಟು ಕಂಪನಿಗಳು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿವೆ. ಸೋನಿ, ಹೋಂಡಾ, ಟೊಯೋಟ, ಮಿಷುಬಿಶಿ ಮೊದಲಾದ ದೊಡ್ಡ ದೊಡ್ಡ ಬ್ರ್ಯಾಂಡ್‌ನ ಕಂಪನಿಗಳು ಭಾರತೀಯ ಮಾರುಕಟ್ಟೆಗೆ ಚಿರಪರಿಚಿತ. ಹೀಗಾಗಿ ಜಪಾನೀಸ್ ಭಾಷೆ ಕಲಿತರೆ ಇಂತಹ ಕಂಪನಿಗಳಲ್ಲಿ ಕೆಲಸ ಮಾಡುವ ಅವಕಾಶ ಪಡೆಯಬಹುದು.

ಈ ಭಾಷೆಗಳಲ್ಲದೇ ಕೊರಿಯನ್, ಅರೇಬಿಕ್, ಇಟಾಲಿಯನ್ ಮೊದಲಾದ ಭಾಷೆಗಳನ್ನು ಕಲಿತರೆ ಸಾಕಷ್ಟು ಬೇಡಿಕೆಗಳಿವೆ. ಈಗ ಆನ್‌ಲೈನ್‌ನಲ್ಲೂ ಸರ್ಟಿಫಿಕೇಟ್ ಕೋರ್ಸ್‌ಗಳಿದ್ದು, ಉತ್ತಮ ಆನ್‌ಲೈನ್ ಕಲಿಕಾ ಸಂಸ್ಥೆಗಳನ್ನು ಸೇರಿಕೊಂಡರೆ ಭವಿಷ್ಯದ ದೃಷ್ಟಿಯಿಂದ ಅನುಕೂಲ.

ಆರ್ಥಿಕ ಸಮಸ್ಯೆಯಿದ್ದರೆ ಯಾವ ಕೋರ್ಸ್ ಮಾಡಬಹುದು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ನಾನು ದ್ವಿತೀಯ ಪಿಯುಸಿ (ವಿಜ್ಞಾನ) ಮಾಡುತ್ತಿದ್ದೇನೆ. ಆರ್ಥಿಕ ಸಮಸ್ಯೆಯಿರುವುದರಿಂದ ಕಡಿಮೆ ಶುಲ್ಕದ ಯಾವ ಕೋರ್ಸ್ ಮಾಡಿದರೆ ಉತ್ತಮ ಎಂದು ತಿಳಿಸಿ.

ಹೆಸರು ತಿಳಿಸಿಲ್ಲ, ಶೃಂಗೇರಿ.

ಆರ್ಥಿಕ ಸಮಸ್ಯೆಯ ಕಾರಣದಿಂದ ನಿಮ್ಮ ಭವಿಷ್ಯದ ಕನಸುಗಳನ್ನು ಕಾಣದೆ ಮುಂದಿನ ಬದುಕಿನ ಬಗ್ಗೆ ರಾಜಿಯಾಗದಿರಿ. ನಿಮ್ಮ ಸಾಮರ್ಥ್ಯ, ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯನ್ನು ಪ್ರತಿಬಿಂಬಿಸುವ ವೃತ್ತಿಯ ಬಗ್ಗೆ ಚಿಂತಿಸಿ. ಅದರಂತೆ ಕೋರ್ಸ್ ಆಯ್ಕೆ ಮಾಡಿ, ಸರ್ಕಾರಿ ಕಾಲೇಜುಗಳಲ್ಲಿ ನಿಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ. ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಆರ್ಥಿಕ ಸಮಸ್ಯೆಯಿರುವ ವಿದ್ಯಾರ್ಥಿಗಳಿಗಿರುವ ಅನೇಕ ಸ್ಕಾಲರ್‌ಶಿಪ್, ಉಚಿತ ಪುಸ್ತಕಗಳು, ವಿದ್ಯಾರ್ಥಿ ವೇತನಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಿ ಆ ಅನುಕೂಲಗಳನ್ನು ಪಡೆದುಕೊಳ್ಳಿ. ಜೊತೆಗೆ, ನಿಮಗೆ ಸಹಾಯವಾಗಬಹುದಾದ ಅನೇಕ ಅರೆಕಾಲಿಕ ಕೆಲಸಗಳನ್ನು ಕೂಡಾ ಮಾಡಬಹುದು. ಆರ್ಥಿಕ ಸಮಸ್ಯೆಗಳು ತಾತ್ಕಾಲಿಕ. ಹಾಗಾಗಿ, ನಿಮ್ಮ ಈಗಿನ ಪರಿಸ್ಥಿತಿಯಿಂದ ಎದೆಗುಂದದೆ ದೀರ್ಘಾವಧಿ ಕನಸುಗಳನ್ನು ಸಾಕಾರಗೊಳಿಸುವ ಬಗ್ಗೆ ಸಕಾರಾತ್ಮಕವಾಗಿ ಯೋಚಿಸಿ. ಸಾಧಕರ ಕಥೆಗಳನ್ನು ಓದಿ, ವಿಡಿಯೊಗಳನ್ನು ವೀಕ್ಷಿಸಿ; ಸ್ವಯಂ ಪ್ರೇರಣೆಯನ್ನು ಬೆಳೆಸಿಕೊಂಡು ನೀವೂ ಒಬ್ಬ ಸಾಧಕರಾಗಿ.

2. ನಾನು ಪಿಯುಸಿ ಮುಗಿಸಿ ಎಂಜಿನಿಯರಿಂಗ್ ಮಾಡಿ ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ (ರಾ) ಅಥವಾ ಇಂಟೆಲಿಜೆನ್ಸ್ ಬ್ಯೂರೋ (ಐಬಿ)ಗೆ ಸೇರಬೇಕೆಂದುಕೊಂಡಿದ್ದೇನೆ. ಎಂಜಿನಿಯರಿಂಗ್‌ನಲ್ಲಿ ಯಾವ ಬ್ರ್ಯಾಂಚ್ ಓದಬೇಕು? ಕೆಲಸಕ್ಕೆ ಯಾವ ಪರೀಕ್ಷೆಗಳನ್ನು ಬರೆಯಬೇಕು?

ಪೃಥ್ವಿ, ಊರು ತಿಳಿಸಿಲ್ಲ.

ರಾ ಮತ್ತು ಐಬಿ ಸರ್ಕಾರಿ ವಲಯದ ಪ್ರತಿಷ್ಠಿತ ಸಂಸ್ಥೆಗಳು. ಹಾಗಾಗಿ, ಇಲ್ಲಿನ ಹುದ್ದೆಗಳ ನೇಮಕಾತಿಗೆ ಕಠಿಣವಾದ ಪ್ರಕ್ರಿಯೆಯಿದೆ. ಯಾವುದೇ ಪದವಿಯ ನಂತರ ಐಬಿ ಸಂಸ್ಥೆಗಾದರೆ ಕೇಂದ್ರ ಗೃಹ ಸಚಿವಾಲಯ ನಡೆಸುವ ಐಬಿ ಎಸಿಐಒ ಪರೀಕ್ಷೆಯನ್ನು ಬರೆಯಬೇಕು. ರಾ ಸಂಸ್ಥೆಗೆ ವೃತ್ತಿ ಸಂಬಂಧಿತ ಅನುಭವವಿರಬೇಕು ಮತ್ತು ಗ್ರೂಪ್ ಎ ಸಿವಿಲ್ ಸರ್ವಿಸಸ್ ಪರೀಕ್ಷೆಯನ್ನು ಬರೆಯಬೇಕು. ಸಾಮಾನ್ಯವಾಗಿ ಇನ್ನಿತರ ಸರ್ಕಾರಿ ಇಲಾಖೆಗಳಿಂದ ಅನುಭವಿ ಅಧಿಕಾರಿಗಳನ್ನು ರಾ ಸಂಸ್ಥೆಗೆ ನೇಮಕಾತಿ ಮಾಡಿಕೊಳ್ಳುವ ವಾಡಿಕೆಯಿದೆ.

3. ನಾನು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಈಗಷ್ಟೇ ಮುಗಿಸಿದ್ದು, ಆಕಾಶವಾಣಿ ಅಥವಾ ದೂರದರ್ಶನ ವಾಹಿನಿಯಲ್ಲಿ ನಿರೂಪಕಿ/ ವಾಯ್ಸ್ ಓವರ್ ಆರ್ಟಿಸ್ಟ್ ಆಗಬೇಕೆಂದುಕೊಂಡಿದ್ದೇನೆ. ಈ ವಿಭಾಗದಲ್ಲಿ ಸರ್ಕಾರಿ ಕೆಲಸ ಪಡೆಯಲು ಯಾವ ಸ್ಪರ್ಧಾತ್ಮಕ ಪರೀಕ್ಷೆಗಳಿವೆ?

ಪಲ್ಲವಿ ಎಸ್.ಜಿ., ಬಾಗಲಕೋಟೆ.

ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರದ ಕೆಲಸಗಳಿಗೆ ವೃತ್ತಿ ಸಂಬಂಧಿತ ಅನುಭವ ಮತ್ತು ಅರ್ಹತೆಯಿರಬೇಕು. ಸಾಮಾನ್ಯವಾಗಿ ಲಿಖಿತ ಪರೀಕ್ಷೆ, ಸ್ಕ್ರೀನ್ ಟೆಸ್ಟ್ ಮತ್ತು ಸಂದರ್ಶನದ ಮುಖಾಂತರ ನೇಮಕಾತಿಯಾಗುತ್ತದೆ. ಕೆಲವೊಮ್ಮೆ, ಕಾಂಟ್ರ್ಯಾಕ್ಟ್ ನೇಮಕಾತಿಯಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://prasarbharati.gov.in/

4. ನಾನು ಪಿಯುಸಿ ಮುಗಿಸಿ ಬಿಬಿಎ (ಏವಿಯೇಷನ್) ಮಾಡಬೇಕೆಂದುಕೊಂಡಿದ್ದೇನೆ. ನನಗೆ ಈ ಕೋರ್ಸ್ ಮತ್ತು ಉದ್ಯೋಗದ ಕುರಿತು ಮಾಹಿತಿ ನೀಡಿ.

ಸಂಜಯ್, ಶಿವಮೊಗ್ಗ.

ಬಿಬಿಎ (ಏವಿಯೇಷನ್) ಕೋರ್ಸಿನಲ್ಲಿ ಏರ್‌ಲೈನ್ಸ್ ಸಂಬಂಧಿತ ವಿಷಯಗಳ ಬಗ್ಗೆ ಅಂದರೆ ಏರ್‌ಪೋರ್ಟ್ ಮ್ಯಾನೇಜ್‌ಮೆಂಟ್, ಸೆಕ್ಯೂರಿಟಿ, ಇನ್ಫರ್ಮೇಷನ್ ಸಿಸ್ಟಮ್ ಮ್ಯಾನೇಜ್‌ಮೆಂಟ್, ಮಾರ್ಕೆಟಿಂಗ್, ಕಾರ್ಗೊ ಇತ್ಯಾದಿಗಳ ಕುರಿತು ಜ್ಞಾನಾರ್ಜನೆಯಾಗುತ್ತದೆ. ಹಾಗಾಗಿ, ಈ ಕೋರ್ಸ್ ನಂತರ ಏರ್‌ಲೈನ್ಸ್ ಮತ್ತು ಏರ್‌ಪೋರ್ಟ್‌ಗಳಲ್ಲಿ ಉದ್ಯೋಗಾವಕಾಶಗಳಿವೆ. ಆದರೆ, ಈಗ ಕೋವಿಡ್ ಕಾರಣದಿಂದ ಏರ್‌ಲೈನ್ಸ್ ಉದ್ದಿಮೆ ಸಂಕಷ್ಟದಲ್ಲಿದೆ. ಆದರೆ, ಇನ್ನೆರಡು ಮೂರು ವರ್ಷಗಳಲ್ಲಿ ಪುನಶ್ಚೇತನಗೊಂಡು ಪ್ರಗತಿಯ ಹಾದಿಗೆ ಬರುವ ನಿರೀಕ್ಷೆಯಿದೆ.

5. ನಾನು ಬಿಬಿಎ ಅಂತಿಮ ವರ್ಷದಲ್ಲಿದ್ದು ಮುಂದೆ ಎಂಬಿಎ (ಎಚ್‌ಆರ್) ಮಾಡಲು ಇಚ್ಛಿಸಿದ್ದೇನೆ. ಈ ಕೋರ್ಸ್ ನಂತರ ಉದ್ಯೋಗದ ಅವಕಾಶಗಳ ಕುರಿತು ತಿಳಿಸಿ.

ಆಸ್ಮ ಭಾನು, ಮೈಸೂರು.

ಆದಷ್ಟು, ಕ್ಯಾಂಪಸ್ ನೇಮಕಾತಿ ಇರುವ, ಉತ್ತಮ ರ್ಯಾಂಕಿಂಗ್ ಇರುವ ಪ್ರತಿಷ್ಠಿತ ಕಾಲೇಜು/ ವಿಶ್ವವಿದ್ಯಾಲಯದಲ್ಲಿ ಎಂಬಿಎ ಮಾಡಬೇಕು. ಈ ಮಾಹಿತಿಯನ್ನು ಅನೇಕ ಮಾಧ್ಯಮಗಳು ಅಂತರ್ಜಾಲದಲ್ಲಿ ಪ್ರಕಟಿಸುತ್ತವೆ.

ಎಂಬಿಎ (ಎಚ್‌ಆರ್) ಪದವೀಧರರಿಗೆ ಖಾಸಗಿ ಕ್ಷೇತ್ರದಲ್ಲಿ ಸಾಕಷ್ಟು ಬೇಡಿಕೆಯಿದೆ. ಈ ಕ್ಷೇತ್ರದಲ್ಲಿ ಸಾಧನೆ ಮಾಡಲು ಅನುಭೂತಿ, ತಾಳ್ಮೆ, ಯೋಜನಾ ಶಕ್ತಿ, ಸಮಯದ ನಿರ್ವಹಣೆ, ಉತ್ತಮ ಸಂವಹನ, ಅಂತರ್ ವೈಯಕ್ತಿಕ ನೈಪುಣ್ಯತೆ, ನಾಯಕತ್ವದ ಕೌಶಲ ಸೇರಿದಂತೆ ಸಕಾರಾತ್ಮಕ ಮನೋಭಾವ ಮತ್ತು ವೃತ್ತಿ ಸಂಬಂಧಿತ ಕೌಶಲಗಳ ಅಗತ್ಯವಿದೆ. ಇವುಗಳನ್ನು ಉದ್ಯೋಗದ ಸಂದರ್ಶನದಲ್ಲಿ ಪರೀಕ್ಷಿಸಲಾಗುತ್ತದೆ.

ಸರ್ಕಾರಿ ಕ್ಷೇತ್ರದಲ್ಲಿರುವ ಅವಕಾಶಗಳನ್ನು ಯುಪಿಎಸ್‌ಸಿ/ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳ ಮುಖಾಂತರ ಅನ್ವೇಷಿಸಬಹುದು.

6. ನಾನು ಪಿಯುಸಿ ಕಾಮರ್ಸ್ 2018ರಲ್ಲಿ ಉತ್ತರ ಪ್ರದೇಶದಿಂದ ಪಾಸಾಗಿದ್ದೇನೆ. ಈಗ ನಾನು ಬಿಎ ಅಥವಾ ಯಾವ ಕೋರ್ಸ್ ಮಾಡಬಹುದು?

ಮಾನಸ, ತುಮಕೂರು.

ನೀವು ಬಿಕಾಂ, ಬಿಎ, ಬಿಸಿಎ, ಬಿಬಿಎ, ಸಿಎ, ಎಸಿಎಸ್, ಐಸಿಎಂಎ ಕೋರ್ಸ್‌ಗಳನ್ನು ಮಾಡಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಕನ್ಯಾ ಸ್ಕಾಲರ್‌ಶಿಪ್ 2021

ವಿವರ: ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಕೋಟಕ್ ಮಹೀಂದ್ರ ಸಂಸ್ಥೆಯು ಪಿಯುಸಿ ಮುಗಿಸಿದ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ವೃತ್ತಿಪರ ಕೋರ್ಸ್‌ಗಳಿಗೆ ದಾಖಲಾಗಿರಬೇಕು. ಪಿಯುಸಿಯಲ್ಲಿ ಶೇ 75ಕ್ಕೂ ಹೆಚ್ಚು ಅಂಕ ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 3 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ವರ್ಷಕ್ಕೆ ₹ 1 ಲಕ್ಷ

ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 30 ಆಗಸ್ಟ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/KKGS1

ಕೋವಿಡ್ ಕ್ರೈಸಿಸ್ (ಜ್ಯೋತಿ ಪ್ರಕಾಶ್) ಸಪೋರ್ಟ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021

ವಿವರ: ಕೋವಿಡ್ ಕಾರಣದಿಂದಾಗಿ ಮುಂದಿನ ಓದಿನ ತೊಂದರೆ ಅನುಭವಿಸುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ: ಒಂದನೇ ತರಗತಿಯಿಂದ ಹಿಡಿದು ಪದವಿ ಓದುತ್ತಿರುವವರೂ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಪೋಷಕರನ್ನು ಕಳೆದುಕೊಂಡಿರುವ, ಉದ್ಯೋಗ ನಷ್ಟ ಮುಂತಾದ ಸಮಸ್ಯೆಯಿಂದ ಬಳಲುತ್ತಿರುವ ಕುಟುಂಬದ ಮಕ್ಕಳು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಆರ್ಥಿಕ ಸಹಾಯ: ವಾರ್ಷಿಕ ₹ 30 ಸಾವಿರ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಆಗಸ್ಟ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿ: www.b4s.in/praja/CCSP1

ಕೃಪೆ: buddy4study.com

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 41

546. ಮರಳುಗಾಡಿನ ಮರೀಚಿಕೆಗೆ ಕಾರಣ
ಎ) ವಕ್ರೀಭವನ ಬಿ) ವರ್ಣಾಂತರಿಕ ಪ್ರತಿಫಲನ
ಸಿ) ವರ್ಣವಿಭಜನೆ ಡಿ) ಬೆಳಕಿನ ಚದುರುವಿಕೆ

547. ಭೂಪದರದಲ್ಲಿ ಇರುವ ಪ್ರಮುಖ ಧಾತು ಯಾವುದು?
ಎ) ಆಮ್ಲಜನಕ ಬಿ) ಸಿಲಿಕಾನ್
ಸಿ) ಅಲ್ಯುಮಿನಿಯಂ ಡಿ) ಕಬ್ಬಿಣ

548. ಕನ್ನಡದ ಕಾಳಿದಾಸ ಯಾರು?
ಎ) ಚನ್ನಬಸವಣ್ಣ ಬಿ) ಬಸವಪ್ಪಶಾಸ್ತ್ರಿ
ಸಿ) ಬಸವದೇವರು ಡಿ) ಬಸವಣ್ಣ

549. ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಿದ್ದಾಗ ಮುಖ್ಯಮಂತ್ರಿ ಯಾರಾಗಿದ್ದರು?
ಎ) ಗುಂಡೂರಾವ್ ಬಿ) ರಾಮಕೃಷ್ಣ ಹೆಗಡೆ
ಸಿ) ದೇವರಾಜ್ ಅರಸು ಡಿ) ವೀರೇಂದ್ರ ಪಾಟೀಲ

550. ರಾಜ್ಯಪುನರ್ ರಚನಾ ಆಯೋಗದ ಅಧ್ಯಕ್ಷರು ಯಾರಾಗಿದ್ದರು?
ಎ) ಫಜಲ್ ಅಲಿ ಬಿ) ವಲ್ಲಭಬಾಯಿ ಪಟೇಲ್
ಸಿ) ಜವಾಹರಲಾಲ್ ನೆಹರು
ಡಿ) ಲಾಲ್‌ಬಹದ್ದೂರ್ ಶಾಸ್ತ್ರಿ

551. ಕರ್ನಾಟಕದ ಜಲಿಯನ್‌ವಾಲಾಬಾಗ್ ಎಂದು ಯಾವ ಸ್ಥಳವನ್ನು ಕರೆಯಲಾಗುತ್ತದೆ?
ಎ) ಗೌರಿಬಿದನೂರು ಬಿ) ಮಂಡ್ಯ
ಸಿ) ವಿಧುರಾಶ್ವತ್ಥ ಡಿ) ತುಮಕೂರು

552. ಮೈಸೂರಿನ ಕೊನೆಯ ದಿವಾನ ಯಾರು?
ಎ) ಮಿರ್ಜಾ ಇಸ್ಮಾಯಿಲ್
ಬಿ) ಎ.ಆರ್.ಬ್ಯಾನರ್ಜಿ
ಸಿ) ವಿಶ್ವೇಶ್ವರಯ್ಯ ಡಿ) ಎ.ಎಂ.ರಾಮಸ್ವಾಮಿ

553. 20 ವರ್ಷಗಳ ಹಿಂದೆ ಗೌರಿಯ ವಯಸ್ಸು ಇವತ್ತಿನ ವಯಸ್ಸಿನ ಮೂರನೇ ಒಂದು ಭಾಗವಾಗಿತ್ತು. ಹಾಗಾದರೆ ಗೌರಿಯ ಈಗಿನ ವಯಸ್ಸೆಷ್ಟು?
ಎ) 66 ವರ್ಷ ಬಿ) 36 ವರ್ಷ
ಸಿ) 33 ವರ್ಷ ಡಿ) 30 ವರ್ಷ

554. ಸರಣಿ ಪೂರ್ಣಗೊ:ಳಿಸಿ 2, 4, 16,........
ಎ) 25 ಬಿ) 36 ಸಿ) 256 ಡಿ) 125

555. ಒಂದು ರೈಲು ಪ್ರತಿ ಗಂಟೆಗೆ 92.44 ಕಿ.ಮೀ. ವೇಗದಲ್ಲಿ ಚಲಿಸುತ್ತದೆ. ಹಾಗಾದರೆ 10 ನಿಮಿಷದಲ್ಲಿ ಎಷ್ಟು ಮೀಟರ್ ದೂರ ಚಲಿಸುತ್ತದೆ?
ಎ) 15000 ಬಿ) 15406
ಸಿ) 16000 ಡಿ) 16400

556. ಎಷ್ಟು ಪ್ರತಿಶತ ಜನರು ಇಂದಿಗೂ ಭಾರತದಲ್ಲಿ ಕೃಷಿ ಮೇಲೆ ಅವಲಂಬಿತರಾಗಿದ್ದಾರೆ?
ಎ) 46 % ಬಿ) 50 % ಸಿ) 58 % ಡಿ) 64 %

557. ಚಹವನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುವ ರಾಜ್ಯ
ಎ) ಕರ್ನಾಟಕ ಬಿ) ಕೇರಳ
ಸಿ) ಅಸ್ಸಾಂ ಡಿ) ಮಹಾರಾಷ್ಟ್ರ

558. 'ಆನೆಯೋಜನೆ' ಯಾವಾಗ ಜಾರಿಗೆ ಬಂತು?
ಎ) 1982 ಬಿ) 1992
ಸಿ) 2002 ಡಿ) 2012

559. 371 (ಜೆ) ಸಂವಿಧಾನ ತಿದ್ದುಪಡಿಯ ಲಾಭ ಎಷ್ಟು ಜಿಲ್ಲೆಗಿದೆ?
ಎ) 5 ಬಿ) 8 ಸಿ) 12 ಡಿ) 6

560. ಭಾರತದ ಮೊದಲ ಮಹಿಳಾ ರೈಲ್ವೆ ಸಚಿವೆ ಯಾರು?
ಎ) ಇಂದಿರಾ ಗಾಂಧಿ ಬಿ) ನಿರ್ಮಲಾ ಸೀತಾರಾಮನ್ ಸಿ) ಸುಷ್ಮಾ ಸ್ವರಾಜ್
ಡಿ) ಮಮತಾ ಬ್ಯಾನರ್ಜಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 40ರ ಉತ್ತರ: 531.ಡಿ, 532.ಸಿ, 533.ಬಿ, 534.ಬಿ, 535.ಡಿ, 536. ಸಿ, 537.ಡಿ, 538.ಸಿ, 539.ಎ, 540.ಸಿ, 541.ಸಿ, 542.ಎ, 543.ಡಿ, 544.ಬಿ, 545. ಬಿ

❦ ಸುಭಾಷಿತ ❦
ಗಿಳಿಯೋದು ಪುಸ್ತಕ ಜ್ಞಾನ- ನಿನ್ನನುಭವವೇ ನಿನಗೆ ಧರ್ಮದೀಪ.
-ಡಿ.ವಿ.ಜಿ.

ಬಹುತ್ವ ಭಾರತದ ಅಭಿವೃದ್ಧಿ ರಥಕ್ಕೆ ಪ್ರೇರಣೆಯಾಗಲಿ ಸ್ವಾತಂತ್ರ್ಯದ ಅಮೃತಪಥ

ದೇಶದ ಎಪ್ಪತ್ತೈದನೇ ಸ್ವಾತಂತ್ರ್ಯೋತ್ಸವ ಸಂದರ್ಭವು ಭಾರತೀಯರಲ್ಲಿ ಸಹಜವಾಗಿಯೇ ಹೆಮ್ಮೆ, ಅಭಿಮಾನ ಹಾಗೂ ಪುಳಕಕ್ಕೆ ಕಾರಣವಾಗಿದೆ. ಸ್ವಾತಂತ್ರ್ಯ ದಿನಾಚರಣೆಯ 'ಅಮೃತ ಮಹೋತ್ಸವ' ಸಂಭ್ರಮ 2023ರ ಆಗಸ್ಟ್ 15ರವರೆಗೂ ಮುಂದುವರಿಯಲಿದ್ದು, ಈ ವಿಶೇಷ ಸಂದರ್ಭವನ್ನು ಅವಿಸ್ಮರಣೀಯಗೊಳಿಸಲು ಕೇಂದ್ರ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾವಾಗ ಬೇಕಾದರೂ ಎರಗಬಹುದಾದ ಕೊರೊನಾದ ಮೂರನೇ ಅಲೆಯ ಆತಂಕದ ಕಾರಣದಿಂದಾಗಿ ಸಂಭ್ರಮದಲ್ಲಿ ಮೈಮರೆಯಲು ಅವಕಾಶವಿಲ್ಲವಾದರೂ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಅರ್ಥಪೂರ್ಣಗೊಳಿಸಲು ಸೃಜನಶೀಲ ದಾರಿಗಳು ಇದ್ದೇ ಇವೆ. ಅಂಥ ದಾರಿಗಳಲ್ಲೊಂದು, ದೇಶವನ್ನು ಸದೃಢವಾಗಿ ರೂಪಿಸುವ ದಿಸೆಯಲ್ಲಿ ನಡೆದಿರುವ ಪ್ರಯತ್ನಗಳನ್ನು, ಸರ್ಕಾರದ ಯೋಜನೆಗಳನ್ನು ವಿಮರ್ಶೆ ಮತ್ತು ವಿಶ್ಲೇಷಣೆಗೆ ಒಳಪಡಿಸುವ ವಿವೇಕವನ್ನು ಪ್ರದರ್ಶಿಸುವುದು. ಯಾವುದೇ ಸಂಭ್ರಮದ ಸಂದರ್ಭವು ಜವಾಬ್ದಾರಿಯನ್ನೂ ಅಪೇಕ್ಷಿಸುತ್ತದೆ. ಆ ಜವಾಬ್ದಾರಿಯಿಂದಲೇ ಸ್ವತಂತ್ರ ಭಾರತಕ್ಕೆ ಎಪ್ಪತ್ತೈದು ವರ್ಷಗಳಾಗಿರುವ ಸಂದರ್ಭವನ್ನು ಎದುರುಗೊಳ್ಳಬೇಕಾಗಿದೆ. ತ್ಯಾಗ, ಬಲಿದಾನಗಳ ಮೂಲಕ ಪಡೆದ ಸ್ವಾತಂತ್ರ್ಯವನ್ನು ಸಾರ್ಥಕಗೊಳಿಸಲು ಕಳೆದ ಏಳೂವರೆ ದಶಕಗಳಲ್ಲಿ ದೇಶ ಬಹಳಷ್ಟು ಸವಾಲುಗಳನ್ನು ಎದುರಿಸಿದೆ; ಎಡರು ತೊಡರುಗಳನ್ನು ದಾಟಿ ಮುನ್ನಡೆದಿದೆ. ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ದೇಶ ಎದುರಿಸುತ್ತಿದ್ದ ಹಸಿವು, ಬಡತನ, ಅನಕ್ಷರತೆಯ ಸಮಸ್ಯೆಗಳು ಏಳೂವರೆ ದಶಕಗಳ ಹಾದಿಯಲ್ಲಿ ತಕ್ಕಮಟ್ಟಿಗೆ ಬಗೆಹರಿದಿದ್ದರೂ, ಈಗಲೂ ದೇಶದಲ್ಲಿ ಕೋಟ್ಯಂತರ ಜನ ಹಸಿವಿನ ದವಡೆಗೆ ಸಿಲುಕಿರುವುದನ್ನು ನಿರಾಕರಿಸಲಾಗದು. ಸ್ವಾತಂತ್ರ್ಯ ಚಳವಳಿಯ ಭಾಗವಾಗಿದ್ದ ಸ್ವರಾಜ್ಯದ ಪರಿಕಲ್ಪನೆ ಈಗಲೂ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಂಡಿಲ್ಲ. ಭಾರತದ ಆತ್ಮ ಹಳ್ಳಿಗಳಲ್ಲಿದೆ ಎಂದು ಎಲ್ಲ ನಾಯಕರೂ ಸರ್ಕಾರಗಳೂ ಹೇಳುತ್ತಾ ಬಂದಿದ್ದರೂ ಸಾವಿರಾರು ಗ್ರಾಮಗಳು ಸ್ವಾವಲಂಬನೆ ಸಾಧಿಸುವುದಿರಲಿ, ಮೂಲಸೌಕರ್ಯಗಳನ್ನೂ ಹೊಂದಿಲ್ಲ. ಈ ಎಲ್ಲ ಸಂಗತಿಗಳ ಬಗ್ಗೆ, ಸ್ವತಂತ್ರ ಭಾರತದ ಸಾಧನೆಗಳೊಂದಿಗೆ ವೈಫಲ್ಯಗಳ ಬಗ್ಗೆಯೂ ಪರಾಮರ್ಶೆ ನಡೆಸಲು ಅಮೃತೋತ್ಸವ ಸಂದರ್ಭವನ್ನು ಪ್ರೇರಣೆಯ ರೂಪದಲ್ಲಿ ಬಳಸಿಕೊಳ್ಳಬೇಕಾಗಿದೆ.



ಕರ್ತೃತ್ವಶಕ್ತಿಯ ಮೂಲಕ ಎಲ್ಲರನ್ನೂ ಅಭಿವೃದ್ಧಿಪಥದಲ್ಲಿ ಕರೆದೊಯ್ಯುವ ಮುತ್ಸದ್ದಿತನವನ್ನು ಸರ್ಕಾರ ಪ್ರದರ್ಶಿಸಬೇಕು

ನವದೆಹಲಿಯ ಕೆಂಪುಕೋಟೆಯಲ್ಲಿ ನಡೆದ 75ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ದೇಶವನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿರುವ ಭಾಷಣದಲ್ಲಿ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತರುವ ವಿಷಯಕ್ಕೆ ಒತ್ತು ದೊರೆತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೂಡ ಗ್ರಾಮೀಣಾಭಿವೃದ್ಧಿಗೆ ಆದ್ಯತೆ ನೀಡುವ ಮಾತುಗಳನ್ನಾಡಿದ್ದಾರೆ. 'ಅಮೃತ ಗ್ರಾಮ ಪಂಚಾಯಿತಿ' ಯೋಜನೆಯಡಿ ಗ್ರಾಮ ಪಂಚಾಯಿತಿಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶ ಅವರದು. 'ದೇಶದ ಎಲ್ಲ ಯೋಜನೆಗಳು ಶೇಕಡ 100ರಷ್ಟು ಜನರಿಗೆ ಸಂಪೂರ್ಣವಾಗಿ ತಲುಪಬೇಕು' ಎಂದು ಹೇಳಿರುವ ಪ್ರಧಾನಿ, 'ದೇಶವು ಅಭಿವೃದ್ಧಿ ಪಥದಲ್ಲಿ ಸಾಗುವಾಗ ಯಾರೂ ಹಿಂದುಳಿಯಬಾರದು. ಸೌಲಭ್ಯಗಳಿಂದ ವಂಚಿತರಾದವರಿಗೆ ವಿಶೇಷ ಆದ್ಯತೆ ನೀಡಬೇಕು. ದುರ್ಬಲ ವರ್ಗದವರನ್ನು ಅಭಿವೃದ್ಧಿ ಪಥದಲ್ಲಿ ಕೈಹಿಡಿದು ನಡೆಸುವ ಅಗತ್ಯವಿದೆ' ಎಂದು ಹೇಳಿದ್ದಾರೆ. ಗ್ರಾಮೀಣ ಕರಕುಶಲಕರ್ಮಿಗಳಿಗೆ ಮಾರುಕಟ್ಟೆ ಕಲ್ಪಿಸಲು ಕೇಂದ್ರ ಸರ್ಕಾರ ಆರಂಭಿಸಲಿರುವ ಇ-ಕಾಮರ್ಸ್ ವೇದಿಕೆ ಹಾಗೂ ಪ್ರಾದೇಶಿಕ ಭಾಷೆಗಳಿಗೆ ಪ್ರೋತ್ಸಾಹ ನೀಡಲಿದೆ ಎಂದು ಹೇಳಲಾಗುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಪ್ರಧಾನಿ ಉತ್ಸಾಹದಿಂದ ಮಾತನಾಡಿದ್ದಾರೆ. 'ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್' ಎನ್ನುವ ತಮ್ಮ ಜನಪ್ರಿಯ ಘೋಷಣೆಯನ್ನು ಅವರು 'ಸಬ್‌ಕಾ ವಿಶ್ವಾಸ್ ಸಬ್‌ಕಾ ಪ್ರಯಾಸ್' ಎಂದು ವಿಸ್ತರಿಸಿದ್ದಾರೆ. 'ಎಲ್ಲರ ಜೊತೆ ಎಲ್ಲರ ಏಳ್ಗೆಗೆ ಎಲ್ಲರ ವಿಶ್ವಾಸ ಎಲ್ಲರ ಪ್ರಯತ್ನ' ಎನ್ನುವ ಆಶಯ ಬಹುತ್ವ ಭಾರತದ ಪರಿಕಲ್ಪನೆಗೆ ಪೂರಕವಾದುದು. ಸಾಮರಸ್ಯದ ಸಹಿಷ್ಣು ಭಾರತವನ್ನು ಕೇವಲ ಹೇಳಿಕೆಗಳಿಗೆ ಸೀಮಿತಗೊಳಿಸದೆ ನಿಜವಾದ ಅರ್ಥದಲ್ಲಿ ಬಹುತ್ವ ಭಾರತವನ್ನು ರೂಪಿಸುವ ಸವಾಲು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಮ್ಮ ಮುಂದಿರುವುದನ್ನು ಪ್ರಧಾನಿ ಸೂಚ್ಯವಾಗಿ ಹೇಳಿರುವಂತಿದೆ.

ಅಮೃತೋತ್ಸವ ಸಂದರ್ಭದ ಪ್ರಧಾನಿಯವರ ಮಾತುಗಳು ಭಾರತದ ನಾಳೆಗಳ ಬಗ್ಗೆ ಆಶಾಭಾವನೆ ಮೂಡಿಸುವಂತಿವೆ. ಆದರೆ, ಈ ಮಾತುಗಳು ವೇದಿಕೆಯ ಔಪಚಾರಿಕತೆಗೆ ಸೀಮಿತವಾಗದೆ ಕೃತಿರೂಪಕ್ಕೆ ಬರುವಂತಾಗಬೇಕು. ಅಮೃತ ಮಹೋತ್ಸವ ಸಂದರ್ಭವಾದ 2022-23ರ ವೇಳೆಗೆ ಪೂರ್ಣ ರೂಪದಲ್ಲಿ ಕಾರ್ಯರೂಪಕ್ಕೆ ತರಬೇಕಾದ ಗುರಿಗಳನ್ನು 'ನೀತಿ ಆಯೋಗ' 2018ರಲ್ಲಿ ಪ್ರಕಟಿಸಿತ್ತು. ಜನಜೀವನ ಉತ್ತಮಗೊಳ್ಳುವುದು, ರೈತರ ಬದುಕು ಸುಧಾರಿಸುವುದು ಹಾಗೂ ದೇಶದ ಆರ್ಥಿಕ ಪ್ರಗತಿಗೆ ವೇಗ ನೀಡಲಿಕ್ಕೆ ಅಗತ್ಯವಾದ ಅಂಶಗಳನ್ನು ಪ್ರಮುಖವಾಗಿ ಚರ್ಚಿಸಿದ್ದ ನೀತಿ ಆಯೋಗ, ಉದ್ದೇಶಿತ ಗುರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವುದಾಗಿ ಹೇಳಿತ್ತು. ಆಯೋಗದ ಗುರಿಗಳು ಎಷ್ಟರಮಟ್ಟಿಗೆ ಈಡೇರಿವೆ ಎನ್ನುವುದನ್ನು ತಿಳಿಸುವ ಹೊಣೆ ಸರ್ಕಾರದ್ದೇ ಆಗಿದೆ. ನೀತಿ ಆಯೋಗದ ಹಳೆಯ ಗುರಿಗಳನ್ನೇ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನಿ ಹೊಸ ರೂಪದಲ್ಲಿ ಹೇಳಿರುವಂತಿದೆ. ತಾನೇ ಗೊತ್ತುಪಡಿಸಿದ ಗುರಿಗಳನ್ನು ಸಾಧಿಸದೆ ಹೋದಲ್ಲಿ, ಸರ್ಕಾರದ ಮಾತುಗಳ ಬಗ್ಗೆ ಜನ ನಂಬಿಕೆ ಕಳೆದುಕೊಳ್ಳುವಂತಾಗುತ್ತದೆ. ಅಂಥ ಅಪನಂಬಿಕೆಗೆ ಅವಕಾಶ ಕೊಡದೆ, ಉದ್ದೇಶಿತ ಸಾಧನೆಯನ್ನು ನಿರ್ದಿಷ್ಟ ಅವಧಿಯಲ್ಲಿ ಸಾಧಿಸಲು ಕೇಂದ್ರ ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಬೇಕಾಗಿದೆ. ಮಾತಿನ ಬಲದಿಂದ ದೇಶವನ್ನು ಕಟ್ಟುವ ಪ್ರಯತ್ನದಲ್ಲಿ ನಂಬಿಕೆಯಿಡದೆ, ಕರ್ತೃತ್ವಶಕ್ತಿಯ ಮೂಲಕ ಎಲ್ಲರನ್ನೂ ಅಭಿವೃದ್ಧಿ ಪಥದಲ್ಲಿ ಕರೆದೊಯ್ಯುವ ಮುತ್ಸದ್ದಿತನವನ್ನು ಸರ್ಕಾರ ಪ್ರದರ್ಶಿಸಬೇಕು. ಆಗ, ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ ಅರ್ಥಪೂರ್ಣಗೊಳ್ಳಬಲ್ಲದು.

ದಿನದ ಟ್ವೀಟ್

ಪರಿಸರಪ್ರಿಯ ವಾಹನಕ್ಕೆ ಬೇಡಿಕೆ

ಮುಂದಿನ ವರ್ಷದ ಅಂತ್ಯದ ವೇಳೆಗೆ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು ಭಾರತದ ರಸ್ತೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲಿವೆ. ನನ್ನ ಪ್ರಕಾರ, 2023ರಿಂದ ದೇಶದಲ್ಲಿ ಪೆಟ್ರೋಲ್‌ನಿಂದ ಓಡುವ ದ್ವಿಚಕ್ರ ವಾಹನಗಳಿಗೆ ಹೆಚ್ಚಿನ ಬೇಡಿಕೆ ಇರುವುದಿಲ್ಲ.

ಸುಮಂತ್ ರಾಮನ್, ಟಿ.ವಿ. ನಿರೂಪಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ

ಪ್ರಧಾನಿ ಹುದ್ದೆ ಅಲಂಕರಿಸಿದ್ದ ಜವಾಹರಲಾಲ್ ನೆಹರೂ ಹಾಗೂ ಅಟಲ್ ಬಿಹಾರಿ ವಾಜಪೇಯಿ ಅವರದು ಮೇರು ವ್ಯಕ್ತಿತ್ವ. ಇವರ ಬಗ್ಗೆ ಎರಡೂ ಪಕ್ಷಗಳ (ಬಿಜೆಪಿ ಮತ್ತು ಕಾಂಗ್ರೆಸ್) ನಾಯಕರು ಅವಹೇಳನಕಾರಿಯಾಗಿ ಮಾತನಾಡುವುದನ್ನು ನಿಲ್ಲಿಸಬೇಕು. ಯಾರನ್ನು ಬೇಕಾದರೂ ಟೀಕೆ ಮಾಡಬಹುದು ಎಂಬ ಮನೋಭಾವ ಸರಿಯಲ್ಲ.

ಬಿ.ಶ್ರೀರಾಮುಲು, ಸಾರಿಗೆ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 16-8-1996

• ರಕ್ಷಣೆ, ಬಡವರ- ರೈತರ ಕಲ್ಯಾಣಕ್ಕೆ ಆದ್ಯತೆ- ಪ್ರಧಾನಿ

ನವದೆಹಲಿ, ಆ. 15- ಯಾವುದೇ ಕಠಿಣ ಸಂದರ್ಭ ಬಂದರೂ ರಾಷ್ಟ್ರದ ರಕ್ಷಣೆ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ದೇಶದ ಭದ್ರತೆಗೆ ಆದ್ಯತೆ. ಆರ್ಥಿಕ ರಂಗದಲ್ಲಿನ ಸಾಧನೆಗೆ ಸ್ವಾವಲಂಬನೆ, ಆಧುನೀಕರಣಕ್ಕೆ ಒತ್ತು, ಗ್ರಾಮೀಣ ಪ್ರದೇಶಗಳಿಗೆ ಮೂಲಭೂತ ಅವಶ್ಯಕತೆಗಳ ಪೂರೈಕೆ, ನದಿ ನೀರು ಹಂಚಿಕೆಗಾಗಿ ಹೊಸದಾಗಿ ರಾಷ್ಟ್ರೀಯ ಜಲನೀತಿ ರಚನೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಮತ್ತು ಆರ್ಥಿಕವಾಗಿ ಹಿಂದುಳಿದ ರೈತರಿಗಾಗಿ ಗಂಗಾ ಕಲ್ಯಾಣ ಯೋಜನೆ, ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಉತ್ತರಾಖಂಡಕ್ಕೆ ಪ್ರತ್ಯೇಕ ರಾಜ್ಯ ಸ್ಥಾನಮಾನ ನೀಡಿಕೆಗಾಗಿ ವಿಧೇಯಕ.

ಐವತ್ತನೇ ಸ್ವಾತಂತ್ರ್ಯೋತ್ಸವ ಆಚರಣೆಯ ಅಂಗವಾಗಿ ಐತಿಹಾಸಿಕ ಕೆಂಪು ಕೋಟೆಯ ಮೇಲೆ ಪ್ರಧಾನ ಮಂತ್ರಿ ಎಚ್.ಡಿ. ದೇವೇಗೌಡ ಅವರು ಇಂದು ಮುಂಜಾನೆ ಹಿಂದಿಯಲ್ಲಿ ತಮ್ಮ ಚೊಚ್ಚಲ ಭಾಷಣದ ಮೂಲಕ ರಾಷ್ಟ್ರವನ್ನು ಉದ್ದೇಶಿಸಿ ಈ ಮೇಲಿನ ಭರವಸೆ ನೀಡಿದರು.

• ಉಳಿದ ಮಾತು, ಉಲಿದ ಹಿಂದಿ

ನವದೆಹಲಿ, ಆ. 15 (ಯುಎನ್‌ಐ, ಪಿಟಿಐ)- ಐತಿಹಾಸಿಕ ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜಾರೋಹಣ ಮಾಡಿದ ಪ್ರಥಮ ಕನ್ನಡಿಗ, ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಇಂದು ಹಿಂದಿಯಲ್ಲಿ ಭಾಷಣ ಮಾಡಿ ತಮ್ಮ ಮಾತನ್ನು ಉಳಿಸಿಕೊಂಡರು.

ಕೇವಲ ಎರಡೂವರೆ ತಿಂಗಳ ಹಿಂದೆ ದೇಶದ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಅವರು ತಾವು ಆಗಸ್ಟ್ 15ರಂದು ರಾಷ್ಟ್ರವನ್ನು ಉದ್ದೇಶಿಸಿ ಹಿಂದಿಯಲ್ಲಿಯೇ ಭಾಷಣ ಮಾಡುವುದಾಗಿ ಹೇಳಿದ್ದರು.

ಹಿಂದಿನ ಪ್ರಧಾನಿಗಳಂತೆ ದೇವೇಗೌಡರು ಆಶುಭಾಷಣ ಮಾಡದಿದ್ದರೂ ಸಿದ್ಧಪಡಿಸಿದ ಭಾಷಣದ ಪ್ರತಿಯನ್ನು ಸುಮಾರು 40 ನಿಮಿಷಗಳ ಕಾಲ ಯಾವುದೇ ಅಡೆತಡೆ ಇಲ್ಲದೆ ಓದಿದರು. ಭಾಷಣದುದ್ದಕ್ಕೂ ಅವರು ಸಂಸ್ಕೃತ ಶಬ್ದಗಳನ್ನು ಪ್ರಯೋಗಿಸಿ ಅಚ್ಚರಿಗೊಳಿಸಿದರು.

• ಆಂಧ್ರ ಹೈಕೋರ್ಟ್‌ಗೆ ಇಂದು ರಾಜ್ಯ ವಕೀಲರ ಹಾಜರಿ

ಬೆಂಗಳೂರು, ಆ. 15- ಆಲಮಟ್ಟಿ ಅಣೆಕಟ್ಟೆ ಎತ್ತರಿಸುತ್ತಿರುವುದರ ಸಂಬಂಧದಲ್ಲಿ ಪ್ರಧಾನಿ ಹಾಗೂ ಕರ್ನಾಟಕದ ಮುಖ್ಯಮಂತ್ರಿ ಮತ್ತು ನೀರಾವರಿ ಸಚಿವರನ್ನೂ ಪ್ರತಿವಾದಿಗಳನ್ನಾಗಿ ಮಾಡಿ ಆಂಧ್ರ ಪ್ರದೇಶದ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯೊಂದು ನಾಳೆ ವಿಚಾರಣೆಗೆ ಬರಲಿರುವುದರಿಂದ ಅಡ್ವೊಕೇಟ್ ಜನರಲ್ ವಿಜಯಶಂಕರ್ ಅವರ ನೇತೃತ್ವದ ವಕೀಲರ ತಂಡ ಇಂದು ಹೈದರಾಬಾದ್‌ಗೆ ತೆರಳಿತು.

ಕೋಮುದ್ವೇಷ, ಅಭಿವೃದ್ಧಿಯೆಂಬೋ ಇದ್ದೋಣಿಯ ಪಯಣ ಕರ್ನಾಟಕಕ್ಕೆ ಸಲ್ಲದು

ಕತ್ತಲ ದಾರಿ, ಸವಾಲಿನ ಸವಾರಿ

ಗತಿಬಿಂಬ

ವೈ.ಗ. ಜಗದೀಶ್

ಅಧಿಕಾರವೆಂಬೋ ಶಕ್ತಿಕೇಂದ್ರದ ಮಗ್ಗುಲಲ್ಲೇ ಬೆಳೆದು ಬಂದ ಬಸವರಾಜ ಬೊಮ್ಮಾಯಿ ಈಗ ರಾಜ್ಯ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ.

ವೀರಶೈವ-ಲಿಂಗಾಯತರ 'ಸರ್ವೋಚ್ಚ ನಾಯಕ' ಎಂಬ ಯಡಿಯೂರಪ್ಪನವರ ಹಣೆಪಟ್ಟಿ ತೆಗೆದೊಗೆಯುವುದು; ಆ ಜಾಗದಲ್ಲಿ ಮತ್ತೊಬ್ಬರನ್ನು ಸೃಷ್ಟಿಸಿ ಲಿಂಗಾಯತರ ಸಂಭಾವ್ಯ ಬಂಡಾಯವನ್ನು ಹೊಸಕಲು ಬಿಜೆಪಿ ವರಿಷ್ಠರು ಬೊಮ್ಮಾಯಿ ಅವರಿಗೆ ಅವಕಾಶ ಕೊಟ್ಟರು. ಬಯಸದೇ ಲಾಬಿ ಮಾಡದೇ ಅಯಾಚಿತವಾಗಿ ಮುಖ್ಯಮಂತ್ರಿ ಸ್ಥಾನ ದಕ್ಕಿದೆ.

ಅವರ ಈ 20 ತಿಂಗಳ ಅವಧಿಯ ದಾರಿಗುಂಟ ಕತ್ತಲೇ ಆವರಿಸಿದೆ. 75ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿದ ಬೊಮ್ಮಾಯಿ, 'ನನ್ನನ್ನು ಹಲವರು ಅನುಮಾನದಿಂದ ನೋಡುತ್ತಿದ್ದಾರೆ. ಹಲವರು ಟೀಕೆಗಳನ್ನೂ ಮಾಡುತ್ತಿದ್ದಾರೆ. ಅನುಮಾನ, ಟೀಕೆಗಳನ್ನೇ ಯಶಸ್ಸಿನ ಮೆಟ್ಟಿಲಾಗಿಸಿಕೊಳ್ಳುವೆ' ಎಂದಿದ್ದಾರೆ.

ಆದರೆ, ಅದು ಅಷ್ಟು ಸಲೀಸಲ್ಲ. ಈ ಸರ್ಕಾರವೇ 'ವಲಸಿಗ'ರ ಊರುಗೋಲಿನ ಮೇಲೆ ನಿಂತಿರುವುದು. 'ಲಾಭದಾಯಕ' ಖಾತೆಯೇ ಬೇಕೆಂಬ ವಲಸಿಗರು ಹಾಗೂ ಮೂಲನಿವಾಸಿಗಳ ಹುಯಿಲು ಆರಿಲ್ಲ. ಸಚಿವ ಸ್ಥಾನ ಸಿಗದ ಅತೃಪ್ತರ ಸಂಖ್ಯೆಯೂ ದೊಡ್ಡದಾಗಿಯೇ ಇದೆ. ಮೈತ್ರಿ ಸರ್ಕಾರ ಕೆಡವಲು ಕಾರಣಕರ್ತರಾದ ರಮೇಶ ಜಾರಕಿಹೊಳಿ ಕುಟುಂಬ, ಎಚ್.ವಿಶ್ವನಾಥ್, ಸಿ.ಪಿ.ಯೋಗೇಶ್ವರ ಅವರೆಲ್ಲ ಸರ್ಕಾರದ ಭಾಗವಾಗಿಲ್ಲ. ಹೊರಗಿದ್ದುಕೊಂಡೇ ಅವರು ನಡೆಸಬಹುದಾದ ಕಾರ್ಯಾಚರಣೆಯ ಭಯವೆಂಬ ತಂತಿಯ ಮೇಲಿನ ನಡಿಗೆಯನ್ನು ಬೊಮ್ಮಾಯಿ ಮಾಡಬೇಕಿದೆ. ಚುನಾವಣೆ ಹತ್ತಿರವಾಗುತ್ತಿರುವಾಗ ಅನುದಾನದ ಬೇಡಿಕೆ ಹೊತ್ತೇ ಶಾಸಕರು ಬರುತ್ತಾರೆ. ಸಂಪನ್ಮೂಲವೇ ಬರಿದಾಗಿರುವ ಕಾಲದೊಳಗೆ ಅವರ 'ಮೂಟೆ' ತುಂಬಿಸದಿದ್ದರೆ ಅತೃಪ್ತಿ ಸುಡುಬೆಂಕಿಯಾಗುತ್ತದೆ.

ಯಡಿಯೂರಪ್ಪ ಮತ್ತು ಅವರ ಕುಟುಂಬ ಅಧಿಕಾರದ ಅಂಚಿನಿಂದಾಚೆಗಿದೆ. ಮಗನಿಗೆ ಅಧಿಕಾರ ಸಿಕ್ಕಿಲ್ಲ ಎಂಬ ಸಿಟ್ಟನ್ನು ಒಡಲೊಳಗೆ ಇಟ್ಟುಕೊಂಡಿರುವ ಯಡಿಯೂರಪ್ಪ ಸುಮ್ಮನೆ ಕೂರುವ ಜಾಯಮಾನದವರಲ್ಲ. ಆರು ತಿಂಗಳ ಬಳಿಕ ಅವರು ಬುಸುಗುಡ ತೊಡಗಿದರೆ ಬೊಮ್ಮಾಯಿ ಅದುರಿ ಹೋಗಬೇಕಾಗುತ್ತದೆ. ಇರುವ ಅಲ್ಪಾವಧಿಯಲ್ಲಿ, ಭ್ರಷ್ಟಾಚಾರರಹಿತ ಆಡಳಿತ ಕೊಡುವ ಜತೆಗೆ, ಜತೆಗಿರುವವರನ್ನೆಲ್ಲ ಸಂಭಾಳಿಸಬೇಕಾಗಿದೆ. ಇವೆಲ್ಲವನ್ನೂ ನೀಗಿಸಿ, ಚುನಾವಣೆ ಹೊತ್ತಿಗೆ ಜನರ ವಿಶ್ವಾಸ ಗಳಿಸುವ ನಿಜದ ಸವಾಲು ಬೊಮ್ಮಾಯಿ ಅವರ ಮುಂದಿದೆ.

ಈ ಹಿಂದಿನ ಎರಡು ವರ್ಷದ ಸರ್ಕಾರ ಭ್ರಷ್ಟಾಚಾರವನ್ನೇ ಹಾಸಿ-ಹೊದ್ದು ಮಲಗಿತ್ತು. ಕೈ ಚಾಚಿದ ಕಡೆಯೆಲ್ಲ ಕಾಸು ಗಿಂಜುವ ಮಂದಿಯೇ ಹೆಚ್ಚಾಗಿದ್ದರಿಂದಾಗಿ ಆಡಳಿತ ಹದ ತಪ್ಪಿ ಅರಾಜಕತೆ ಮೂಡಿತ್ತು. ಕೋವಿಡ್ ತಂದಿತ್ತ ಆಘಾತದ ಜತೆಗೆ, ಆಡಳಿತದ ಹಿಡಿತ ತಪ್ಪಿದ್ದರಿಂದಾಗಿ ಆರ್ಥಿಕತೆ ದಿವಾಳಿ ಅಂಚಿಗೆ ತಲುಪಿತ್ತು.

ರಾಜ್ಯದ ಜಿಎಸ್‌ಡಿಪಿ 2019ರಲ್ಲಿ ₹ 12,03,031 ಕೋಟಿ ತಲುಪಿ ಶೇ 6.8ರಷ್ಟು ಬೆಳವಣಿಗೆ ಕಂಡಿದ್ದರೆ, 2020ರಲ್ಲಿ ಇದು 11,13,818 ಕೋಟಿಗೆ ಇಳಿದು ಶೇ -2.6ಕ್ಕೆ ಕುಸಿದು ಬೀಳುವತ್ತ ಸಾಗಿತ್ತು. ಕೃಷಿ ಕ್ಷೇತ್ರದ ಬೆಳವಣಿಗೆ ದರ ಶೇ 3.9ರಿಂದ ಶೇ 6.4ಕ್ಕೆ ಏರಿಕೆಯಾಗುವ ಲಕ್ಷಣ ಕಾಣಿಸಿತ್ತು. ಆದರೆ, ಉದ್ಯೋಗ ಸೃಷ್ಟಿಯ ಬಹುಮುಖ್ಯ ವಲಯಗಳಾದ ಕೈಗಾರಿಕೆಯಲ್ಲಿ ಶೇ 4.8ರಷ್ಟಿದ್ದುದು ಶೇ -5.1 ಹಾಗೂ ಸೇವಾ ವಲಯದಲ್ಲಿ ಶೇ 7.8ರಿಂದ ಶೇ -3.1ಕ್ಕೆ ಧಸಕ್ಕನೇ ಇಳಿಕೆಯತ್ತ ಸಾಗಿರುವುದನ್ನು ಸರ್ಕಾರವೇ ತನ್ನ ವರದಿಯಲ್ಲಿ ಹೇಳಿದೆ.

ಇಂಥ ದುರಿತ ಕಾಲದಲ್ಲಿ ಅಧಿಕಾರ ಹಿಡಿದ ಬೊಮ್ಮಾಯಿ, ಆಡಳಿತವನ್ನು ಹಳಿಗೆ ತರುವ ಕೆಲಸಕ್ಕೆ ಕೈ ಹಾಕಿದ್ದಾರೆ. ಕುರ್ಚಿಯಲ್ಲಿ ಕುಳಿತ ದಿನದಿಂದ ಅವರು ಕೈಗೊಳ್ಳುತ್ತಿರುವ ನಿರ್ಧಾರಗಳ ಹಿಂದೆ ಜನತಾ ಪರಿವಾರದ ಛಾಯೆ ಕಾಣಿಸುತ್ತಿದೆ. ಸಿದ್ದರಾಮಯ್ಯ ಅವರು ಅನ್ನಭಾಗ್ಯ ಕೊಟ್ಟಂತೆ ಬೊಮ್ಮಾಯಿ ಅವರು ಮೊದಲ ದಿನವೇ ರೈತ ಮಕ್ಕಳ ಉನ್ನತ ಶಿಕ್ಷಣಕ್ಕೆ ನೆರವು, ವೃದ್ಧರ ಪಿಂಚಣಿ ಮೊತ್ತ ಹೆಚ್ಚಳದಂತಹ ಯೋಜನೆ ಘೋಷಿಸಿದ್ದಾರೆ. ಜನರಿಗೆ ತೊಂದರೆ ಕೊಡಲು ಇದ್ದಂತಿರುವ ಝೀರೊ ಟ್ರಾಫಿಕ್ ವ್ಯವಸ್ಥೆಯನ್ನು ಸರಳಗೊಳಿಸಲು ಸೂಚಿಸಿದ್ದಾರೆ. ಸರ್ಕಾರಿ ಸಮಾರಂಭಗಳಲ್ಲಿ ಹಾರ-ತುರಾಯಿಗಳ ಬದಲು ಕನ್ನಡ ಪುಸ್ತಕ ನೀಡುವ ಪದ್ಧತಿಗೆ ಚಾಲನೆ ಕೊಟ್ಟಿದ್ದಾರೆ.

ಆರು ಜನ ಮುಖ್ಯಮಂತ್ರಿಗಳ ನಿಕಟ ಒಡನಾಟ, 7 ಮುಖ್ಯಮಂತ್ರಿಗಳ ಆಡಳಿತ ವೈಖರಿಯ ಪ್ರತ್ಯಕ್ಷ ಅನುಭವ ಬೊಮ್ಮಾಯಿ ಅವರಿಗಿದೆ. ಕಳೆ ಅಂಟಿದ್ದ ಸರ್ಕಾರದ ವರ್ಚಸ್ಸಿಗೆ ಒಂದಿಷ್ಟು ಹೊಳಪು, ಹೊಸ ಕಸುವು ತಂದು ಕೊಡಲು ಬೊಮ್ಮಾಯಿ ಅವರಂತಹ ಅನುಭವಿ ಬೇಕು ಎಂಬುದು ಬಿಜೆಪಿ ವರಿಷ್ಠರ ಅಪೇಕ್ಷೆ ಇದ್ದೀತು. ಅದೇ ಹೊತ್ತಿಗೆ, ಪಕ್ಷದ ಮೂಲ ಕಾರ್ಯಸೂಚಿ ಆಗಿರುವ 'ಹಿಂದುತ್ವ'ದ ಅಮಲನ್ನು ಸಮಾಜದ ದಶದಿಕ್ಕಿಗೆ ಹಂಚಲು ಅದೇ ವರಿಷ್ಠರು ಕೆಲವು ನಾಯಕರಿಗೆ ಸೂಚನೆ ಕೊಟ್ಟಂತಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಸಚಿವ ಕೆ.ಎಸ್. ಈಶ್ವರಪ್ಪ ಅವರು ಹೊರಸೂಸುತ್ತಿರುವ ಮಾತುಗಳು ಅದಕ್ಕೆ ಸಾಕ್ಷಿಯಂತಿವೆ. ಮತ್ತೆ ಅಧಿಕಾರಕ್ಕೆ ಬರಲು ಒಳ್ಳೆಯ ಆಡಳಿತ ನೀಡುವುದರ ಜತೆಗೆ ಕೋಮು ಹಗೆ ಬಿತ್ತುವುದು ಅನಿವಾರ್ಯ ಎಂಬುದು ಬಿಜೆಪಿಯ ನಂಬಿಕೆ ಇದ್ದಂತಿದೆ. ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಕರ್ನಾಟಕ, ಅಂತಹ ದ್ವೇಷದ ರಾಜಕಾರಣಕ್ಕೆ ಒಗ್ಗಿಕೊಳ್ಳುವುದಿಲ್ಲ ಎಂಬುದು ಅನೇಕ ಬಾರಿ ಸಾಬೀತಾಗಿದೆ. ಹಾಗಿದ್ದರೂ ಮತ್ತೆ ಎರಡು ದೋಣಿಗಳ ಮೇಲೆ ಬಿಜೆಪಿ ಕಾಲಿಟ್ಟಿರುವುದೇಕೆ?

ಒಳ್ಳೆಯ ಆಡಳಿತ ಕೊಡಬೇಕೆಂಬ ಬೊಮ್ಮಾಯಿ ಅವರ ಅಪೇಕ್ಷೆಗೆ 'ಕೂಗುಮಾರಿ'ಗಳ ಮಾತು ಮುಳುವಾದೀತು. ಕೋಮುದ್ವೇಷವನ್ನೇ ಮೈ ಉಸಿರಾಗಿಸಿಕೊಂಡ ಉತ್ತರಪ್ರದೇಶ, ಅಭಿವೃದ್ಧಿ ಘೋಷಣೆಯ ಹುಸಿ ಮಾದರಿಯೊಂದನ್ನು ಬಿಂಬಿಸಿಕೊಂಡ ಗುಜರಾತ್, ಔದ್ಯಮಿಕ ಭ್ರಷ್ಟಾಚಾರಕ್ಕೆ (ಕಾರ್ಪೊರೇಟ್ ಕರಪ್ಷನ್) ಬಾಯ್ತೆರೆದುಕೊಂಡ ಕೇಂದ್ರದ ಮಾದರಿ ಹೀಗೆ ಬಿಜೆಪಿಯಲ್ಲಿ ಮೂರು ಮಾದರಿಗಳು ಚಾಲ್ತಿಯಲ್ಲಿವೆ. ಕರ್ನಾಟಕದ್ದೇ ಆದ ಹಲವು ಮಾದರಿಗಳನ್ನು ನಮ್ಮವರೇ ಬಿಟ್ಟು ಹೋಗಿದ್ದಾರೆ. ಬಿಜೆಪಿಯ ಸಿದ್ಧಮಾದರಿಯಲ್ಲದೇ, ತಮ್ಮ ಅನುಭವದಿಂದಲೇ ಕರ್ನಾಟಕದ್ದೇ ಒಂದು ಮಾದರಿಯನ್ನು ಬೊಮ್ಮಾಯಿ ತೋರಿಸಿದರೆ ನಾಡ ಭವಿಷ್ಯ ಉಜ್ವಲವಾದೀತು, ಬಿಜೆಪಿಯ ಮುಂದಿನ ಸರ್ಕಾರಗಳಿಗೆ ದಾರಿಯೂ ಕಂಡೀತು.

ಜೀವನಕ್ಕೆ ತಮ್ಮದೇ ಉದ್ಯಮ ಇದೆ, ಅದಕ್ಕಾಗಿ ಅಧಿಕಾರವನ್ನು ನೆಚ್ಚಿಕೊಳ್ಳಬೇಕಿಲ್ಲ, ಉತ್ತಮ ಆಡಳಿತ ನೀಡಬೇಕು ಎಂಬುದಷ್ಟೇ ತಮ್ಮ ಅಪೇಕ್ಷೆ ಎಂದು ಬೊಮ್ಮಾಯಿ ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದುಂಟು. ಅದು ಮಾತಿನಲ್ಲೇ ಉಳಿಯದೆ ಕಾರ್ಯರೂಪಕ್ಕೆ ಬರಬೇಕು. ಸರ್ಕಾರವೆಂದರೆ ಮುಖ್ಯಮಂತ್ರಿ ಮಾತ್ರವಲ್ಲ; ಅವರ ಸಂಪುಟದಲ್ಲಿರುವ ಸಚಿವರು, ಅಧಿಕಾರಿಗಳೂ ಸೇರುತ್ತಾರೆ. ಸಚಿವಾಲಯದಿಂದ ಕೊನೇ ಹಂತದ ಗ್ರಾಮ ಪಂಚಾಯಿತಿಯವರೆಗೆ ಹಾಸುಹೊಕ್ಕಾಗಿರುವ ಭ್ರಷ್ಟಾಚಾರ ಎಂಬ ಬೃಹನ್ಮರವನ್ನು ಬೇರು ಸಮೇತ ಕಿತ್ತೊಗೆಯಲು ಮುಂದಾಗಲಿ. 2018ರ ಚುನಾವಣೆಯಲ್ಲಿ ಬಿಜೆಪಿ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಎಸಿಬಿ ರದ್ದುಪಡಿಸಿ, ಲೋಕಾಯುಕ್ತಕ್ಕೆ ಬಲ ನೀಡುವ ಕೆಲಸವನ್ನು ಆದ್ಯತೆ ಮೇರೆಗೆ ಮಾಡಲಿ.

'ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು/ ಒರೆಯಾವಿನ ಬೆನ್ನ ಹರಿಯಲದೇಕಯ್ಯಾ?/ ಲಜ್ಜೆಗೆಡಲೇಕೆ? ನಾಣುಗೆಡಲೇಕೆ?/ ಕೂಡಲಸಂಗಮದೇವನುಳ್ಳನ್ನಕ್ಕ/ಬಿಜ್ಜಳನ ಭಂಡಾರವೆನಗೇಕಯ್ಯಾ?' ಎಂಬ ವಚನವು, ತಮ್ಮ ಹೆಸರಿನಲ್ಲೇ ಬಸವಣ್ಣರನ್ನು ಜೋಡಿಸಿಕೊಂಡಿರುವ ಬೊಮ್ಮಾಯಿಗೆ ಆದರ್ಶವಾಗಲಿ.

ಒಂದೂರಿನಲ್ಲಿ ಒಬ್ಬ ದೋಣಿ ನಡೆಸುವಾತನಿದ್ದ. ಒಮ್ಮೆ ಹೊಳೆ ದಾಟಿಸಿದರೆ 25 ಪೈಸೆ ಪಡೆಯುತ್ತಿದ್ದ. ತಮ್ಮ ಸರಕು ಸಾಗಾಣಿಕೆಗೆ, ಕೋಳಿ-ಕುರಿ ದಾಟಿಸಲು ದೋಣಿಯನ್ನೇ ನೆಚ್ಚಿಕೊಂಡಿದ್ದ ಜನರಿಗೆ ಸದಾ ತಕರಾರು ಮಾಡುತ್ತಿದ್ದ. ಆತ ಮೃತನಾದ ಬಳಿಕ ಅವನ ಮಗ ಆ ಸ್ಥಾನಕ್ಕೆ ಬಂದವನೇ ಶುಲ್ಕವನ್ನು 50 ಪೈಸೆಗೆ ಏರಿಸಿದ. ನಿಯಮಗಳನ್ನು ಇನ್ನಷ್ಟು ಕಠಿಣಗೊಳಿಸಿದ. ದೋಣಿಯನ್ನೇ ನಂಬಿದ ಜನ, 'ಈ ಮಾಣಿಗಿಂತ ಇವರ ಅಪ್ಪನೇ ವಾಸಿ ಮಾರಾಯ. ಆ ಕಾಲ ಎಷ್ಟೋ ಚೆನ್ನಾಗಿತ್ತು' ಎಂದು ದೋಣಿಯಲ್ಲೇ ಕುಳಿತು ಬೈಯತೊಡಗಿದರು. ಆಳುವವರಿಗೆ ಈ ಕತೆ ಪಾಠವಾದರೆ ಎಷ್ಟು ಚೆನ್ನ?

ಚುರುಮುರಿ

ಮಂತ್ರಿಗಿರಿ ಮಂತ್ರ

• ಸುಮಂಗಲಾ

ಬೆಕ್ಕಣ್ಣ ಬೆಳಗ್ಗೆ ಬೆಳಗ್ಗೆ ಲೊಚ್‌ಗುಡುತ್ತ ಕೂತಿತ್ತು. 'ಅದೇನ್ ವಳ್ಳೆ ಹಲ್ಲಿ ಹಂಗೆ ಲೊಚ್‌ಗುಡಾಕೆ ಹತ್ತಿ... ಈಗೇನಾತಲೇ ಅಂಥಾದು...' ಎಂದು ರೇಗಿದೆ.

'ಪಾಪ, ನಮ್ಮ ಸುರೇಶಮಾಮಾ ಎಲ್ಲ ಹುಡುಗ್ರಿನ್ನ ಹೈಸ್ಕೂಲು, ಪಿಯು ಪಾಸು ಮಾಡಿ ಪುಣ್ಯಕಟಗೊಂಡ, ಆದ್ರ ಅವನೇ ಹೈಕಮಾಂಡ್ ಪರೀಕ್ಷೆದಾಗ ಹಿಂಗ ಫೇಲ್ ಆಗೂದಾ...' ಎನ್ನುತ್ತ ಮತ್ತೆ ಲೊಚ್‌ಗುಟ್ಟಿತು.

'ಅವರೊಬ್ಬರೇ ಅಲ್ಲೇಳು. ಅತ್ತಾಗೆ ರಾಮದಾಸರೂ ಹೇಳ್ಯಾರಲ್ಲ... ಎಲ್ಲ ಛಲೋನೆ ಬರ್ದಿದ್ದೆ, ಆದರೂ ಇಂಟರ್ನಲ್ ಮಾರ್ಕ್ಸ್ ಕಮ್ಮಿ ಆಗ್ಯಾವು ಅಂತ. ಎಲ್ಲಾರೂ ಎಲ್ಲಾ ಸಲನೂ ಪಾಸ್ ಆಗಾಬೇಕು ಅಂತೇನಿಲ್ಲೇಳು' ನಾನು ವೇದಾಂತ ಕುಟ್ಟಿದೆ.

'ಅತ್ತಾಗೆ ನಮ್ಮ ಆನಂದಮಾಮಾನೂ ನನಗ ಪ್ರವಾಸ ಮಾಡೂದು ಆಗಿಬರಂಗಿಲ್ಲ, ದೊಡ್ಡ ಕುಳ ಅದೀನಿ, ದೊಡ್ಡ ಖಾತೆ ಕೊಡ್ರಿ ಅಂತ ಕೇಳ್ಯಾನ, ಅಗದಿ ಖರೇನ ಅದ ಮತ್ತ' ಎಂದು ಮುಸಿಮುಸಿ ನಕ್ಕಿತು.

'ಹ್ಞೂಂ ಮತ್ತ... ನಿಮ್ಮ ಆನಂದಮಾಮಾ ದೊಡ್ಡ ಖಾತೆ ನಿಭಾಯಿಸೂದ್ರಾಗ ಪಿಎಚ್‌ಡಿ ಮಾಡ್ಯಾರ ನೋಡು. ಎಲ್ಲಾರಿಗೂ ಹಾಲು ಕೊಡೋ ಎಮ್ಮಿನೇ ಬೇಕು... ಬರಡು ಎಮ್ಮಿ ಯಾರಿಗೆ ಬೇಕು'.

'ನಾ ಅದಕ್ಕನ ಒಂದು ಉಪಾಯ ಸಲಹೆ ಮಾಡೀ, ಹೈಕಮಾಂಡಿಗೆ ಮುಚ್ಚಿದ ಲಕೋಟೆ ಕೊಟ್ಟು ಬಂದೀನಿ. ಏನಪಾ ಅಂದರ... ಒಂದೊಂದು ಇಲಾಖೆಗೂ ಮಂತ್ರಿ, ಉಪಮಂತ್ರಿ, ಉಪೋಪಮಂತ್ರಿ, ಕಿರುಮಂತ್ರಿ ಅಂತ ನಾಕ್ಕೈದು ಕುರ್ಚಿ ಹಾಕಿ, ಸೀನಿಯಾರಿಟಿ ಮೇಲೆ ಕುಂದ್ರಿಸಬೇಕು. ಯಾವ್ಯಾವ ಫೈಲಿಗೆ ಯಾರು ಸಹಿ ಹಾಕಬಕು ಅಂತ ಮಾರ್ಕ್ ಮಾಡಿ, ನಿಮ್ಮ ನಿಮ್ಮ ಎಮ್ಮಿ ಹಾಲು ನೀವೇ ಹಿಂಡುಕೋರಿ ಅಂತ ಬಿಡಬೇಕು. ಒಬ್ಬರು ಇನ್ನೊಬ್ಬರ ಎಮ್ಮಿ ಹಾಲು ಹಿಂಡೂ ಹಂಗಿಲ್ಲ. ಎಲ್ಲಾ ಶಾಸಕರಿಗೂ ಒಂದಲ್ಲ ಒಂದು ಮಂತ್ರಿಕುರ್ಚಿ, ಹಾಲುಹಿಂಡೂ ಎಮ್ಮಿ, ಗೂಟದ ಕಾರು ಸಿಗತಾವು. ಭಿನ್ನಾಭಿಪ್ರಾಯನೇ ಇರಂಗಿಲ್ಲ... ಎಲ್ಲಾರೂ ಅಗದಿ ಭಯಂಕರವಾಗಿ ಜನತಾ ಜನಾರ್ದನ ಸೇವಾ ಮಾಡತಾರ... ಹೌದಿಲ್ಲೋ'.

ಮಾರ್ಜಾಲೋಪಾಯ ಹೇಳುತ್ತಲೇ ಖೊಳ್ಳನೆ ನಕ್ಕಿತು!

ಸಂಗತ

ಶಿಕ್ಷಣ ನೀತಿ: ಅಪನಂಬಿಕೆ ದೂರವಾಗಲಿ

ದೇಶದ ಶೈಕ್ಷಣಿಕ ದಿಕ್ಕನ್ನೇ ಪರಿವರ್ತಿಸಲು ಸಮರ್ಥವಾಗಿದೆ ಹೊಸ ಶಿಕ್ಷಣ ನೀತಿ

• ಡಾ. ರೋಹಿಣಾಕ್ಷ ಶಿರ್ಲಾಲು

ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಲ್ಲಿ ರಾಜ್ಯ ಸರ್ಕಾರ ಈಗಾಗಲೇ ಕಾರ್ಯಪ್ರವೃತ್ತವಾಗಿರುವಾಗ, ಹಿರಿಯ ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಅವರು 'ಶಿಕ್ಷಣ ನೀತಿ: ಒಂದು ಚಿಂತನ' ಎಂಬ ಲೇಖನದಲ್ಲಿ (ಪ್ರ.ವಾ., ಆ. 11) ಶಿಕ್ಷಣ ನೀತಿಯನ್ನು ವಿಮರ್ಶಿಸುತ್ತಾ, ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಮುಖ್ಯವಾಗಿ ಈ ನೀತಿಯನ್ನು ಅವರು ಟೀಕಿಸುತ್ತಿರುವುದು, ಇದು ಒಕ್ಕೂಟ ನೀತಿಗೆ ವಿರುದ್ಧದ ನಡೆ ಮತ್ತು ಖಾಸಗೀಕರಣಕ್ಕೆ ಒತ್ತು ಕೊಡುತ್ತದೆ ಎನ್ನುವ ಕಾರಣಕ್ಕಾಗಿ.

ಈ ಪ್ರಶ್ನೆಗಳು ನಮ್ಮ ಶೈಕ್ಷಣಿಕ ಮತ್ತು ವಿದ್ವತ್ ವಲಯದಲ್ಲಿ ಈಗಾಗಲೇ ಚರ್ಚೆಗೆ ಬಂದಿದ್ದು, ಅನೇಕ ಪ್ರಾಜ್ಞರು ಉತ್ತರಗಳನ್ನು ನೀಡಿದ್ದಾರೆ. ಆದರೂ ಮತ್ತೊಮ್ಮೆ ಈ ಅನುಮಾನಗಳನ್ನು ಪರಿಶೀಲಿಸೋಣ.

ಲೇಖಕರು ನಮ್ಮದು ಒಕ್ಕೂಟಗಳ ಭಾರತ, ಬಹುತ್ವ ಭಾರತ ಮತ್ತು ಬಹುಭಾಷಿಕ ಭಾರತ ಎನ್ನುತ್ತಾರೆ. ಆ ಮೂಲಕ ಹೊಸ ಶಿಕ್ಷಣ ನೀತಿಯು ಒಕ್ಕೂಟಕ್ಕೆ ಮತ್ತು ಬಹು ಭಾಷಿಕತೆಗೆ ವಿರುದ್ಧವಿದೆ ಎನ್ನುವ ಧ್ವನಿ ಪರೋಕ್ಷವಾಗಿ ಮೂಡಿದೆ. ವಾಸ್ತವದಲ್ಲಿ ನೀತಿಯು ಒಕ್ಕೂಟಕ್ಕೆ, ಇಲ್ಲಿನ ಬಹುತ್ವಕ್ಕೆ ಬೆಂಬಲವಾಗಿದೆಯೇ ಹೊರತು ಅಪಾಯಕಾರಿಯಾಗಿಲ್ಲ. ಸ್ಥಳೀಯ ಭಾಷೆ, ಸಂಸ್ಕೃತಿ ಇಲ್ಲಿ ಆದ್ಯತೆಯ ವಿಷಯಗಳಾಗಿವೆ.

ಇದು ಭಾಷೆಗಳನ್ನು ಹೇರುತ್ತದೆ ಎನ್ನುವುದರಲ್ಲಿಯೂ ಸತ್ಯಾಂಶವಿಲ್ಲ. ಇದು ತ್ರಿಭಾಷಾ ಸೂತ್ರವನ್ನು ಹೇರುತ್ತಿಲ್ಲ. ನೀತಿಯಲ್ಲಿ ಸ್ಪಷ್ಟವಾಗಿ ಹೇಳಿರುವಂತೆ 'ಮಕ್ಕಳು ಕಲಿಯುವ ಮೂರು ಭಾಷೆಗಳ ಪೈಕಿ ಆಯ್ಕೆ ಆಯಾ ರಾಜ್ಯಗಳ, ಪ್ರದೇಶಗಳ ಹಾಗೂ ಅದಕ್ಕಿಂತ ಮಿಗಿಲಾಗಿ ಕಲಿಯುವ ಮಕ್ಕಳ ಸ್ವಂತ ಆಯ್ಕೆಯೇ ಆಗಿರುತ್ತದೆ. ಆದರೆ ಕಲಿಯುವುದಕ್ಕೆ ಆಯ್ಕೆ ಮಾಡಿಕೊಳ್ಳುವ ಎರಡು ಭಾಷೆಗಳು ಭಾರತೀಯ ಭಾಷೆಗಳೇ ಆಗಿರಬೇಕು'.

'ರಾಜ್ಯ ಭಾಷೆಗಳ ಪ್ರಸ್ತಾಪವೇ ಬರುವುದಿಲ್ಲ' ಎನ್ನುವುದು ಕೂಡ ನಿರಾಧಾರ. ಶಾಲಾ ಶಿಕ್ಷಣದ ಭಾಷಾ ನೀತಿಯಲ್ಲಿ ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಯಾವುದೇ ತಾರತಮ್ಯವನ್ನು ತೋರಲಾಗಿಲ್ಲ. ನೀತಿಯ ಘೋಷಿತ ಉದ್ದೇಶವೇ 'ಸಾಧ್ಯವಾದಷ್ಟು ಮಟ್ಟಿಗೆ ಕಡೇಪಕ್ಷ ಐದನೆಯ ತರಗತಿಯವರೆಗೆ ಅಥವಾ ಅದಕ್ಕಿಂತಲೂ ಮುಂದೆ ಅಂದರೆ ಎಂಟನೆಯ ತರಗತಿಯವರೆಗೆ ಅಥವಾ ಅದಕ್ಕಿಂತಲೂ ಮುಂದೆ ಶಿಕ್ಷಣದ ಮಾಧ್ಯಮ ಮನೆಭಾಷೆ, ಮಾತೃಭಾಷೆ, ಸ್ಥಳೀಯಭಾಷೆ, ಪ್ರಾದೇಶಿಕ ಭಾಷೆ ಆಗಿರಬೇಕು. ಇದಾದ ನಂತರ ಸಾಧ್ಯವಾದಷ್ಟು ಮಟ್ಟಿಗೆ ಮನೆಭಾಷೆಯನ್ನು, ಸ್ಥಳೀಯ ಭಾಷೆಯನ್ನು ಒಂದು ಭಾಷೆಯಾಗಿ ಓದುವಂತೆ ಅವಕಾಶ ಇರತಕ್ಕದ್ದು. ಸರ್ಕಾರಿ ಹಾಗೂ ಖಾಸಗಿ ಎರಡೂ ಬಗೆಯ ಶಾಲೆಗಳಲ್ಲಿ ಇದನ್ನು ಜಾರಿಗೆ ತರಲಾಗುತ್ತದೆ'.

ನೀತಿಯ ಮುನ್ನೋಟವನ್ನು ಸಹಬಾಳ್ವೆ, ಸಮಾನತೆಯ ಆಶಯವನ್ನು ಪ್ರತಿನಿಧಿಸುವಂತೆ ರೂಪಿಸಲಾಗಿದೆ ಎನ್ನುವ ಲೇಖಕರು, ನೀತಿಯು ಒಕ್ಕೂಟ ನೀತಿಗೆ ವಿರುದ್ಧವಾಗಿದೆ, ಖಾಸಗೀಕರಣಕ್ಕೆ ಹೆಚ್ಚು ಒತ್ತು ನೀಡಿದೆ ಎನ್ನುತ್ತಾರೆ. ಇದು ಮೊಸರಲ್ಲಿ ಕಲ್ಲು ಹುಡುಕಿದಂತೆ.

ಶಿಕ್ಷಣ ನೀತಿಯು ವಿಕೇಂದ್ರೀಕರಣದ ತತ್ವಕ್ಕೆ ಯಾವ ರೀತಿಯಿಂದಲೂ ವಿರುದ್ಧವಾಗಿಲ್ಲ. ರಾಜ್ಯಗಳ ಜತೆಗೂಡಿ ಕೇಂದ್ರ ಸರ್ಕಾರ ಈ ನೀತಿಯನ್ನು ಅನುಷ್ಠಾನಕ್ಕೆ ತರುತ್ತಿದೆ. ಶಿಕ್ಷಣ ಸಂಸ್ಥೆಗಳ ಮಟ್ಟಗೂ ವಿಕೇಂದ್ರೀಕರಣದ ನೀತಿಯನ್ನು ಜಾರಿಗೊಳಿಸುತ್ತದೆ. ನೂರಾರು ಕಾಲೇಜುಗಳಿಗೆ ವಿಶ್ವವಿದ್ಯಾಲಯದ ಮಟ್ಟದಲ್ಲಿ ಯಾವುದೇ ಸ್ವಾತಂತ್ರ್ಯವಿಲ್ಲ. ಆದರೆ ಈ ನೀತಿಯು ಕಾಲೇಜುಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವುದರ ಬಗ್ಗೆ ಮಾತನಾಡುತ್ತಿದೆ. ಪಠ್ಯಗಳನ್ನು ರೂಪಿಸುವಲ್ಲಿಂದ ಪದವಿ ಪ್ರದಾನದವರೆಗೆ ಈ ಸ್ವಾಯತ್ತತೆ ಇರುತ್ತದೆ.

ಶಿಕ್ಷಣ ಉಳ್ಳವರಿಗೊಂದು, ಬಡವರಿಗೊಂದು ಎಂಬಂತೆ ಆಗುತ್ತಿರುವುದರ ಬಗ್ಗೆ ಲೇಖನ ಪ್ರಸ್ತಾಪಿಸಿದೆ. ಆದರೆ ಈ ಅಂತರವು ಹೊಸ ನೀತಿಯ ಪರಿಣಾಮದ್ದಲ್ಲ. ಯಾಕೆಂದರೆ ಈ ನೀತಿ ಇನ್ನೂ ಪ್ರಾಯೋಗಿಕವಾದ ಅನುಷ್ಠಾನದ ಹಂತದಲ್ಲಿದೆ. ಹಿಂದಿನ ಸರ್ಕಾರಗಳ ಕಾರ್ಯನಿರ್ವಹಣೆಯ ವೈಫಲ್ಯವದು. ಹಿಂದಿನ ಸರ್ಕಾರಗಳು ಸಮಾನ ಶಿಕ್ಷಣಕ್ಕಾಗಿ ನಡೆಸಿದ ಪ್ರಯತ್ನಗಳೇನು? ಹೊಸ ನೀತಿಯನ್ನು ಹಳಿಯುವುದಕ್ಕಾಗಿ, ಹಿಂದೆ ಸೃಷ್ಟಿಯಾದ ಅಸಮಾನತೆಯನ್ನು ಎತ್ತಿ ತೋರಿಸುತ್ತಿರುವುದು ನ್ಯಾಯವೇ?



ನೀತಿಯ 'ಎಚ್' ವಿಭಾಗದಲ್ಲಿ ಹೇಳಲಾದ 'ಶಾಲಾ ಕಾರ್ಯನಿರ್ವಹಣೆ ಹಾಗೂ ನಿಯಂತ್ರಣಗಳನ್ನು ಭಿನ್ನ ಭಿನ್ನ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುವುದು' ಎನ್ನುವ ಮಾತುಗಳನ್ನು ಲೇಖಕರು ಖಾಸಗೀಕರಣದ ವಶಕ್ಕೆ ಶಿಕ್ಷಣ ವ್ಯವಸ್ಥೆಯನ್ನು ಒಪ್ಪಿಸುವ ಪ್ರಯತ್ನ ಎನ್ನುತ್ತಾರೆ. ಅದಕ್ಕೆ ಆಧಾರ ಏನು? ಶಾಸನಬದ್ಧವಾಗಿ ಸ್ಥಾಪಿತವಾದ ಯಾವುದೇ ಸಂಸ್ಥೆಗಳೂ ಈ ಪ್ರಕ್ರಿಯೆಯ ಭಾಗವೇ ಆಗಬಹುದಲ್ಲವೇ? ಒಂದೆಡೆ ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯಗಳ ಪಾಲ್ಗೊಳ್ಳುವಿಕೆ ಹೆಚ್ಚಾಗಬೇಕು ಎನ್ನುವವರು ನಾವು. ಆದರೆ ಶಿಕ್ಷಣ ನೀತಿಯಲ್ಲಿ ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆಯನ್ನು ಮತ್ತು ಸ್ವಯಂಸೇವಾ ಸಂಸ್ಥೆಗಳ ಸ್ವಯಂಸೇವಕರನ್ನು ಭಾಗಿದಾರರನ್ನಾಗಿಸಬಹುದಾದ ಅವಕಾಶವನ್ನು ಅನುಮಾನದಿಂದ ನೋಡಲಾಗುತ್ತಿದೆ.

ನೀತಿಯ ಮೊದಲ ಭಾಗದಲ್ಲಿನ ಒಟ್ಟು ಕಾಳಜಿ, ಆಶಯ ಇರುವುದೇ ಸರ್ಕಾರಿ ವ್ಯವಸ್ಥೆಯನ್ನು ಸುಧಾರಣೆ ಮಾಡುವ ಕುರಿತು. ವಾಸ್ತವದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಶತಮಾನದಲ್ಲಿ ಜಾರಿಗೊಳ್ಳುತ್ತಿರುವ ಬಹುಮುಖ್ಯ ನೀತಿಗಳಲ್ಲಿ ಒಂದು. ಮುಂದಿನ ದಿನಗಳಲ್ಲಿ ನಮ್ಮ ದೇಶದ ಶೈಕ್ಷಣಿಕ ದಿಕ್ಕನ್ನೇ ಪರಿವರ್ತಿಸಲು ಸಮರ್ಥವಾಗಿದೆ. ಆದರೆ ರಾಜಕೀಯ ಪ್ರೇರಿತ ಆರೋಪಗಳು ನೀತಿಯ ಘನತೆಯನ್ನು ಕುಗ್ಗಿಸುತ್ತವೆ.

ಲೇಖಕ: ಸಹಾಯಕ ಪ್ರಾಧ್ಯಾಪಕ
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ

ವಾಚಕರ ವಾಣಿ

ಅಪೌಷ್ಟಿಕತೆಯ ಪ್ರಾದೇಶಿಕ ಆಯಾಮ

ಅಪೌಷ್ಟಿಕತೆಯನ್ನು 'ಮರೆಮಾಚಿದ ಹಸಿವು' ಎನ್ನುತ್ತಾರೆ ತಜ್ಞರು. ರಾಜ್ಯದ ಮಕ್ಕಳು ಮತ್ತು ಮಹಿಳೆಯರಲ್ಲಿ ರಕ್ತಹೀನತೆಯು (ಅನೀಮಿಯಾ) 2015- 16ರಿಂದ 2019- 20ರ ಅವಧಿಯಲ್ಲಿ ಅಧಿಕಗೊಂಡಿರುವುದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5ರಲ್ಲಿ ಬಹಿರಂಗವಾಗಿದೆ (ಪ್ರ.ವಾ., ಆ. 15). ಕಲಬುರ್ಗಿ ವಿಭಾಗದ ಆರು ಜಿಲ್ಲೆಗಳನ್ನು 2019ರಲ್ಲಿ ಕಲ್ಯಾಣ ಕರ್ನಾಟಕ ಎಂದು ನಾಮಕರಣ ಮಾಡಲಾಗಿದೆ. ಅಂದು ಮುಖ್ಯಮಂತ್ರಿ ನೀಡಿದ್ದ ಒಂದೂ ಭರವಸೆ ಈಡೇರಿಲ್ಲ. ಅಲ್ಲಿ ಮಕ್ಕಳ ಮತ್ತು ಮಹಿಳೆಯರ ಕಲ್ಯಾಣ ಸ್ಥಿತಿಯು ಚಿಂತಾಜನಕವಾಗಿದೆ. ಅಪೌಷ್ಟಿಕತೆಯನ್ನು ಪ್ರಾದೇಶಿಕ ಚೌಕಟ್ಟಿನಲ್ಲಿ ಪರಿಶೀಲಿಸುವ ಅಗತ್ಯವಿದೆ. ಉದಾ: 6-59 ತಿಂಗಳ ವಯೋಮಾನದ ರಾಜ್ಯದ ಒಟ್ಟು ಮಕ್ಕಳಲ್ಲಿ ಅನೀಮಿಯಾ ಎದುರಿಸುತ್ತಿರುವ ಮಕ್ಕಳ ಪ್ರಮಾಣ 2015- 16ರಲ್ಲಿ ಶೇ 60.9ರಷ್ಟಿದ್ದರೆ 2019- 20ರಲ್ಲಿ ಇದು ಶೇ 65.5ಕ್ಕೇರಿದೆ. ಕಲ್ಯಾಣ ಕರ್ನಾಟಕದ ಕೊಪ್ಪಳ, ಕಲಬುರ್ಗಿ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇದರ ಪ್ರಮಾಣ ಶೇ 70ಕ್ಕಿಂತ ಅಧಿಕವಾಗಿದೆ.

ಮಹಿಳೆಯರಲ್ಲಿನ ಅನೀಮಿಯಾ 2015-16ರಲ್ಲಿ ಶೇ 44.8ರಷ್ಟಿದ್ದರೆ, 2019- 20ರಲ್ಲಿ ಇದು ಶೇ 47.8ಕ್ಕೇರಿದೆ. ರಾಜ್ಯದಲ್ಲಿ ಅನೀಮಿಯಾ ಎದುರಿಸುತ್ತಿರುವ ಮಹಿಳೆಯರ ಪ್ರಮಾಣವು ಕಲ್ಯಾಣ ಕರ್ನಾಟಕದ 5 ಜಿಲ್ಲೆಗಳಲ್ಲಿ ಶೇ 55ಕ್ಕಿಂತ ಅಧಿಕವಾಗಿದೆ. ಪ್ರಾದೇಶಿಕ ಅಸಮಾನತೆ ಬಗ್ಗೆ ನಮ್ಮ ಸರ್ಕಾರ ನಿರ್ಲಕ್ಷ್ಯ ತಳೆದಂತೆ ಕಾಣುತ್ತಿದೆ. ಅಪೌಷ್ಟಿಕತೆಗೂ ಮಕ್ಕಳ ಶೈಕ್ಷಣಿಕ ಸಾಧನೆಗೂ ಮತ್ತು ಇವೆರಡಕ್ಕೂ ಹಾಗೂ ಅಭಿವೃದ್ಧಿಗೂ ನಡುವೆ ಸಂಬಂಧವಿದೆ. ಈ ದುಃಸ್ಥಿತಿ ಬಗ್ಗೆ ಸರ್ಕಾರ ವಿಶೇಷ ಗಮನ ನೀಡಬೇಕಾದ ಅಗತ್ಯವಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಪುಸ್ತಕದೊಟ್ಟಿಗೆ ಇರಲಿ ಪುಷ್ಪಗುಚ್ಛವೂ

ಸರ್ಕಾರಿ ಸಮಾರಂಭಗಳಲ್ಲಿ ಹಾರ ತುರಾಯಿ ಹಾಕುವುದು, ಹೂಗುಚ್ಛ ನೀಡುವುದನ್ನು ನಿಲ್ಲಿಸಿ, ಅದರ ಬದಲಿಗೆ ಪುಸ್ತಕಗಳನ್ನು ಕೊಡಲು ಸರ್ಕಾರ ಆದೇಶಿಸಿದೆ. ಆದರೆ ಪ್ರತಿಭಾನ್ವಿತ ವ್ಯಕ್ತಿಗಳು ಹಾಗೂ ಆದರಣೀಯರನ್ನು ಪುರಸ್ಕರಿಸುವಾಗ ಹೂವಿನ ಹಾರವು ಒಂದು ಗೌರವಾನ್ವಿತ ಭಾವನೆಯನ್ನು ಮೂಡಿಸುತ್ತದೆ.

ಮೊದಲು ಪುಷ್ಪಹಾರವನ್ನು ಹಾಕಿ, ಕೈಯಲ್ಲಿ ಒಂದು ಹೂಗುಚ್ಛವನ್ನು ಕೊಟ್ಟು, ನಂತರ ಒಳ್ಳೆಯ ಪುಸ್ತಕವನ್ನು ಪ್ರದಾನ ಮಾಡಿದರೆ ಎಷ್ಟು ಚೆನ್ನ? ಅಲ್ಲದೆ, ಇದು ಒಂದು ಗೌರವದ ಸಂಗತಿಯಾಗಿಯೂ ಕಾಣುತ್ತದೆ. ಇದರಿಂದ ಪುಷ್ಪ ಮಾರಾಟಕ್ಕೂ ಸಹಾಯವಾಗುವುದಲ್ಲದೆ ರೈತನಿಗೂ ತಾನು ಬೆಳೆದಂತಹ ಹೂವು ಸದ್ವಿನಿಯೋಗವಾಗುತ್ತಿದೆ ಎನ್ನುವ ಭಾವನೆ ಮೂಡಿಸುತ್ತದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಶಿಕ್ಷಣಕ್ಕೆ ಮೀಸಲಾಗಲಿ ಹೆಚ್ಚು ಹಣ

'...ಶಿಕ್ಷಣ ಕ್ರಾಂತಿಗಾಗಿ ಬಜೆಟ್‌ನಲ್ಲಿ ಶೇ 25ರಷ್ಟು ಹಣವನ್ನು ಮೀಸಲಿಟ್ಟು, ಸಮರ್ಪಕವಾಗಿ ಬಳಕೆ ಮಾಡಲಾಯಿತು' ಎಂಬ ದೆಹಲಿಯ ಎಎಪಿ ಶಾಸಕಿಯೊಬ್ಬರ ಹೇಳಿಕೆ (ಪ್ರ.ವಾ., ಆ. 14) ಕರ್ನಾಟಕದ ಇಂದಿನ ಪರಿಸ್ಥಿತಿಯಲ್ಲಿ ತುಂಬ ಗಮನಾರ್ಹವಾದುದಾಗಿದೆ. ಚಂದನ ವಾಹಿನಿಯ ಮೂಲಕ ನಮ್ಮ ಪ್ರೌಢಶಾಲಾ ಮಕ್ಕಳಿಗೆ ಈಗ ನೀಡುತ್ತಿರುವ ಆನ್‌ಲೈನ್ ತರಗತಿಗಳನ್ನು ಗಮನಿಸಿ: ಎರಡು ಅವಧಿಗಳಲ್ಲಿ ಬೋಧಿಸಬಹುದಾದ ವಿಷಯವನ್ನು ಒಂದೇ ಅವಧಿಯಲ್ಲಿ ವೇಗವಾಗಿ ಹಾಗೂ ಸಂಕ್ಷಿಪ್ತವಾಗಿ ನಿರೂಪಿಸಲಾಗುತ್ತಿದೆ. ಕೈ ಬೆರಳು ಅಥವಾ ಕೋಲಿನಿಂದ ನಿರ್ದಿಷ್ಟವಾಗಿ ಸೂಚಿಸದೆ ಇರುವುದರಿಂದ ಕಪ್ಪು ಹಲಗೆಯ ಬಳಕೆ ಸಮರ್ಪಕವಾಗಿದ್ದರೂ ಮಕ್ಕಳಿಗೆ ಅದು ಸಂವಹನವಾಗುತ್ತಿಲ್ಲ. ಇವೆಲ್ಲ ಒಂದು ರೀತಿಯಲ್ಲಿ ಪುನರಾವರ್ತನೆಯ ತರಗತಿಗಳ ಹಾಗೆ ಪರಿಣಮಿಸಿವೆ. ಮೊದಲ ಕೇಳುಗರಾದ ಬಹುಮಕ್ಕಳ ಗ್ರಹಿಕೆಗೆ ತ್ರಾಸದಾಯಕವಾಗಿವೆ.

ಇಂತಹ ಸಮಸ್ಯೆಗಳನ್ನು ಶಿಕ್ಷಕರು ಶಿಕ್ಷಣ ಅಧಿಕಾರಿಗಳೊಂದಿಗೆ ನಿವೇದಿಸಿಕೊಂಡರೂ ಅವರು ಆರ್ಥಿಕ ಕೊರತೆಯ ಕಾರಣ ಮತ್ತು ಹೆಚ್ಚಿನ ಹಣ ಮಂಜೂರಾತಿಗಾಗಿನ ಬೇಡಿಕೆಯು ತಾಂತ್ರಿಕವಾಗಿ ದುಸ್ಸಾಧ್ಯವೆಂದು ಹೇಳಿ ಕೈತೊಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಬಜೆಟ್ಟಿನಲ್ಲಿ ಈಗ ಶಿಕ್ಷಣಕ್ಕಾಗಿ ಮೀಸಲಿರಿಸಿರುವ ಮೊತ್ತವನ್ನು ಕನಿಷ್ಠ ದುಪ್ಪಟ್ಟುಗೊಳಿಸಬೇಕು. ನಾಡಿನ ಭವಿಷ್ಯದ ದೃಷ್ಟಿಯಿಂದ ಶಿಕ್ಷಣದ ಮಹತ್ವವನ್ನು ಅರಿತು ಈ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಪರಿಸರಸ್ನೇಹಿ ಗುಜರಿ ನೀತಿ

ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿರುವ 'ಮೋಟಾರು ವಾಹನ ಗುಜರಿ' ನೀತಿ ಪರಿಸರಸ್ನೇಹಿ ಹಾಗೂ ಗ್ರಾಹಕಸ್ನೇಹಿಯಾಗಿದೆ. ಈ ನೀತಿಯಂತೆ, 15 ವರ್ಷ ತುಂಬಿದ ಸರ್ಕಾರದ ನಾಲ್ಕು ಚಕ್ರ ವಾಹನಗಳು ಗುಜರಿ ಸೇರುತ್ತವೆ. 20 ವರ್ಷ ದಾಟಿದ ಖಾಸಗಿ ಹಾಗೂ 15 ವರ್ಷ ದಾಟಿದ ವಾಣಿಜ್ಯ ವಾಹನಗಳನ್ನು ಪರೀಕ್ಷೆಗೆ ಒಳಪಡಿಸಿ ಅರ್ಹತಾಪತ್ರ ಪಡೆಯಬೇಕಾಗುತ್ತದೆ. ಇಲ್ಲವಾದಲ್ಲಿ ಅಂತಹ ವಾಹನಗಳ ನೋಂದಣಿ ತನ್ನಿಂದತಾನೇ ರದ್ದಾಗುವುದರಿಂದ ಗತ್ಯಂತರವಿಲ್ಲದೆ ಗುಜರಿ ಸೇರುತ್ತವೆ.

ಅವಧಿ ಮೀರಿದ ತಮ್ಮ ವಾಹನವನ್ನು ಗುಜರಿಗೆ ನೀಡುವ ವಾಹನ ಮಾಲೀಕರಿಗೆ ಹೊಸ ವಾಹನದ ಮೌಲ್ಯದಲ್ಲಿ ರಿಯಾಯಿತಿ, ವಾಹನ ನೋಂದಣಿಯಲ್ಲಿ ರಿಯಾಯಿತಿ ಹಾಗೂ ರಸ್ತೆ ತೆರಿಗೆಯಲ್ಲೂ ಶೇ 25ರಷ್ಟು ಕಡಿಮೆಯಾಗುವುದರಿಂದ ಅಷ್ಟೇನೂ ಆರ್ಥಿಕ ಹೊಡೆತ ಬೀಳಲಾರದು. ಹಳೆ ವಾಹನದ ನಿರ್ವಹಣೆ ವೆಚ್ಚ ಸಹಜವಾಗಿಯೇ ಹೆಚ್ಚಾಗಿರುತ್ತದೆ ಹಾಗೂ ಇಂಧನ ಕ್ಷಮತೆ (ಮೈಲೇಜ್) ಕಡಿಮೆಯಾಗಿರುತ್ತದೆ ಎನ್ನುವುದನ್ನೂ ಗಮನದಲ್ಲಿ ಇರಿಸಿಕೊಳ್ಳಬೇಕು.

'ಮೋಟಾರು ವಾಹನ ಗುಜರಿ' ನೀತಿಯಿಂದಾಗಿ ಪರಿಸರ ಮಾಲಿನ್ಯ ಕಡಿಮೆಯಾಗುವುದರಲ್ಲಿ ಸಂಶಯವೇ ಇಲ್ಲ. ವಿದ್ಯುತ್ ಚಾಲಿತ ವಾಹನಗಳ ಖರೀದಿಯನ್ನು ಪ್ರೋತ್ಸಾಹಿಸಿದಂತಾಗಿ ಹೊಸ ಉದ್ಯಮಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಕಚ್ಚಾ ಸಾಮಾಗ್ರಿ ಆಮದು ಗಣನೀಯವಾಗಿ ಕಡಿಮೆಯಾಗುತ್ತದೆ. ಹೊಸದಾಗಿ ಗುಜರಿ ಉದ್ಯಮಗಳು ಸ್ಥಾಪನೆಗೊಳ್ಳುವುದರಿಂದ ಉದ್ಯೋಗ ಸೃಷ್ಟಿಯಾಗುತ್ತದೆ. ಈ ಎಲ್ಲ ಅನುಕೂಲಗಳಿಂದಾಗಿ ಹೊಸ ನೀತಿ ಸ್ವಾಗತಾರ್ಹವಾಗಿದೆ.

ಜಿ.ನಾಗೇಂದ್ರ, ಸಂಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಫ್ಗಾನಿಸ್ತಾನ ಪತನ

ಅಫ್ಗಾನಿಸ್ತಾನವನ್ನು ಆಳುತ್ತಿದ್ದ ತಾಲಿಬಾನ್ 'ಉಗ್ರಗಾಮಿ' ಸಂಘಟನೆಯನ್ನು 2001ರ ಸೆಪ್ಟೆಂಬರ್‌ನಲ್ಲಿ ಅಮೆರಿಕ ಸೋಲಿಸಿತ್ತು. ಪ್ರಜಾಪ್ರಭುತ್ವ ಸ್ಥಾಪನೆಯಾದ ಬಳಿಕ ಕಾವಲಿಗೆ ಸೇನೆಯನ್ನೂ ಅಮೆರಿಕ ಅಲ್ಲಿ ಇರಿಸಿತ್ತು. ಭಯೋತ್ಪಾದನೆ ಮತ್ತು ಮೂಲಭೂತವಾದದ ಏಟಿಗೆ ಜರ್ಜರಿತವಾಗಿದ್ದ ದೇಶದ ಮರುನಿರ್ಮಾಣಕ್ಕೆ ಭಾರತ ಸೇರಿದಂತೆ ಹಲವು ದೇಶಗಳು ಕೈಜೋಡಿಸಿದ್ದವು. ತಾಲಿಬಾನ್ ಉಗ್ರಗಾಮಿ ಸಂಘಟನೆಯು ದೇಶದ ಬುಡಕಟ್ಟು ಮತ್ತು ಗುಡ್ಡಗಾಡು ಪ್ರದೇಶಕ್ಕೆ ಸೀಮಿತಗೊಂಡಿತ್ತು. ಆದರೆ, ಇದು ಹಳೆಯ ಕತೆ. ಈಗ, ಅಫ್ಗಾನಿಸ್ತಾನದಲ್ಲಿನ ಪ್ರಜಾಪ್ರಭುತ್ವ ಕೊನೆಗೊಂಡಿದೆ ಮತ್ತು ದೇಶವು ತಾಲಿಬಾನ್ ಮೂಲಭೂತವಾದಿಗಳ ಕೈಗೆ ಮತ್ತೆ ಸಿಕ್ಕಿದೆ.

ಅಮೆರಿಕದ ಸೇನೆ ನೆಲೆಗೊಂಡಿದ್ದ ಇಷ್ಟು ದಿನಗಳಲ್ಲಿ ದೇಶವನ್ನು ವಶಕ್ಕೆ ಪಡೆಯುವ ದುಸ್ಸಾಹಸಕ್ಕೆ ತಾಲಿಬಾನ್ ಕೈಹಾಕಿರಲಿಲ್ಲ. ಆದರೆ, ಅಮೆರಿಕದ ಸೇನೆ ವಾಪಸಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈಗ ಅಲ್ಲಿ ಸುಮಾರು ಮೂರು ಸಾವಿರ ಸೈನಿಕರಷ್ಟೇ ಉಳಿದಿದ್ದಾರೆ. ಇನ್ನೇನು ಮೂರು ವಾರಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳಬೇಕಿತ್ತು. ಅಷ್ಟು ಹೊತ್ತಿಗಾಗಲೇ ದೇಶವನ್ನು ತಾಲಿಬಾನ್ ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಅಮೆರಿಕ ಸೇನೆ ಹಿಂತೆಗೆತ ಪ್ರಕ್ರಿಯೆ ಶುರುವಾದ ಬಳಿಕ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಅತ್ಯಂತ ವೇಗವಾಗಿ ಪ್ರಾಬಲ್ಯ ಪಡೆದುಕೊಂಡಿತು. ಸೇನೆಯನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಏಪ್ರಿಲ್ 14ರಂದು ಘೋಷಿಸಿದ್ದರು. ದಕ್ಷಿಣದ ಹೆಲ್ಮಂಡ್ ಪ್ರಾಂತ್ಯದ ಮೇಲೆ ಮೇ 4ರಂದೇ ತಾಲಿಬಾನ್ ಪಡೆ ದಾಳಿ ನಡೆಸಿತ್ತು. ಅದೇ ಹೊತ್ತಿಗೆ ಇತರ ಆರು ಪ್ರಾಂತ್ಯಗಳಲ್ಲಿಯೂ ಆಕ್ರಮಣ ಉಂಟಾಗಿತ್ತು.

ಅಫ್ಗಾನಿಸ್ತಾನದ ಅತೀ ಹೆಚ್ಚು ಭದ್ರತೆ ಇದ್ದ ಉತ್ತರ ಭಾಗವು ಶನಿವಾರದ ಹೊತ್ತಿಗೇ ತಾಲಿಬಾನ್ ಕೈ ಸೇರಿತ್ತು. ಉತ್ತರ ಭಾಗದಲ್ಲಿರುವ ಮಝರ್ ಎ ಶರೀಫ್, ಅಫ್ಗಾನಿಸ್ತಾನದ ನಾಲ್ಕನೇ ಅತ್ಯಂತ ದೊಡ್ಡ ನಗರ. ಸರ್ಕಾರದ ಸೇನೆ, ಇಬ್ಬರು ಪ್ರಾದೇಶಿಕ ಪ್ರಮುಖರ ತಂಡಗಳು ಮತ್ತು ಬಂಡುಕೋರ ಗುಂಪುಗಳು ಈ ನಗರವನ್ನು ರಕ್ಷಿಸುವ ಹೊಣೆ ಹೊತ್ತಿದ್ದವು. ಸರ್ಕಾರದ ಸೇನೆಯೇ ತಾಲಿಬಾನ್ ಮುಂದೆ ಮೊದಲಿಗೆ ಶರಣಾಯಿತು. ಹಾಗಾಗಿ, ಉಳಿದವರ ನೈತಿಕ ಸ್ಥೈರ್ಯ ಕುಸಿದು ಇಡೀ ನಗರವೇ ತಾಲಿಬಾನ್‌ಗೆ ಸಿಕ್ಕಿತು.

ಮಝರ್ ಎ ಶರೀಫ್ ನಗರವು ಪತನವಾಗುವುದರ ಹಿಂದೆ ಪಿತೂರಿ ಇದೆ ಎಂದು ಪ್ರಾದೇಶಿಕ ಪ್ರಮುಖರಲ್ಲಿ ಒಬ್ಬರು ಅಜ್ಞಾತ ಪ್ರದೇಶದಿಂದ ಮಾಡಿದ ಫೇಸ್‌ಬುಕ್ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಪಿತೂರಿ ಮಾಡಿದವರು ಯಾರು ಎಂದು ಅವರು ಹೇಳಿಲ್ಲ. ಅದಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನೂ ಅವರು ಬಹಿರಂಗಪಡಿಸಿಲ್ಲ.

ಅಫ್ಗಾನಿಸ್ತಾನ ಅಧ್ಯಕ್ಷ ಅಶ್ರಫ್ ಘನಿ ಅವರು ದೇಶವನ್ನು ಉದ್ದೇಶಿಸಿ ಶನಿವಾರ ಮಾತನಾಡಿ, ತಾಲಿಬಾನ್ ಕೈಯಿಂದ ದೇಶವು ಮುಕ್ತವಾದ ಬಳಿಕದ ಎರಡು ದಶಕಗಳ ಸಾಧನೆಗಳನ್ನು ವ್ಯರ್ಥವಾಗಲು ಬಿಡುವುದಿಲ್ಲ ಎಂದಿದ್ದರು. ಈಗ ಅವರು ದೇಶ ಬಿಟ್ಟು ಪರಾರಿಯಾಗಿದ್ದಾರೆ.

ಅಫ್ಗಾನಿಸ್ತಾನದ ಸರ್ಕಾರವನ್ನು ಬಲವಂತವಾಗಿ ಪತನಗೊಳಿಸಿ ಅಧಿಕಾರಕ್ಕೆ ಬರುವ ಹೊಸ ಸರ್ಕಾರಕ್ಕೆ ಮಾನ್ಯತೆ ಇಲ್ಲ ಎಂದು ಅಂತರರಾಷ್ಟ್ರೀಯ ಸಮುದಾಯವು ಹೇಳಿದೆ. ಆದರೆ, ಒಂದರ ನಂತರ ಒಂದರಂತೆ ದೊರೆತ ಸೇನಾ ವಿಜಯದಿಂದಾಗಿ ತಾಲಿಬಾನ್ ಈ ಯಾವ ಮಾತನ್ನೂ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ.

ಲಘ್‌ಮಾನ್ ಪ್ರಾಂತ್ಯದ ಬೀದಿಯೊಂದರಲ್ಲಿ ತಾಲಿಬಾನ್ ಸೈನಿಕನ ಪಹರೆ –ಎಎಫ್‌ಪಿ ಚಿತ್ರ

ರಾಜತಾಂತ್ರಿಕರ ತೆರವು ಯತ್ನ

ತಾಲಿಬಾನ್ ಪಡೆಗಳು ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ಗೆ ಪ್ರವೇಶಿಸುತ್ತಿದ್ದಂತೆ, ವಿವಿಧ ದೇಶಗಳು ಅಫ್ಗನ್‌ನಲ್ಲಿರುವ ತಮ್ಮ ನಾಗರಿಕರು ಹಾಗೂ ರಾಜತಾಂತ್ರಿಕ ಸಿಬ್ಬಂದಿಯನ್ನು ಅಲ್ಲಿಂದ ಕರೆತರುವ ವ್ಯವಸ್ಥೆ ಮಾಡಿಕೊಳ್ಳುತ್ತಿವೆ. ಅಮೆರಿಕ ರಾಜತಾಂತ್ರಿಕರನ್ನು ಅಫ್ಗಾನಿಸ್ತಾನದಿಂದ ಸ್ಥಳಾಂತರಿಸುವ ಮೇಲ್ವಿಚಾರಣೆಗಾಗಿ 5,000 ಸೈನಿಕರನ್ನು ಕಾಬೂಲ್‌ಗೆ ನಿಯೋಜಿಸಲಾಗುವುದು ಎಂದು ಅಧ್ಯಕ್ಷ ಜೋ ಬೈಡನ್ ಅವರು ಶನಿವಾರ ಘೋಷಿಸಿದ್ದಾರೆ. ಬ್ರಿಟನ್, ಜರ್ಮನಿ, ಇಟಲಿ, ಭಾರತವೂ ಸೇರಿದಂತೆ ಹಲವು ದೇಶಗಳು ತಮ್ಮ ಯತ್ನ ಚುರುಕುಗೊಳಿಸಿವೆ.

ರಾಜಧಾನಿ ಕಾಬೂಲ್‌ನ 'ಗ್ರೀನ್ ಜೋನ್'ನಲ್ಲಿ ನೆಲೆಯಾಗಿರುವ ಬಹುತೇಕ ದೇಶಗಳ ರಾಯಭಾರ ಕಚೇರಿಗಳು ಸಿಬ್ಬಂದಿಯನ್ನು ಈಗಾಗಲೇ ಕಡಿತಗೊಳಿಸಿವೆ. ಜರ್ಮನಿಯು ಕೆಲವೇ ಸಿಬ್ಬಂದಿ ಮೂಲಕ ಕೆಲಸ ನಿರ್ವಹಿಸುತ್ತಿದೆ. ಇನ್ನೂ ಕೆಲವು ದೇಶಗಳು ಕಚೇರಿಯನ್ನು ಸಂಪೂರ್ಣವಾಗಿ ಮುಚ್ಚಲು ನಿರ್ಧರಿಸಿವೆ. ತನ್ನ ಸಿಬ್ಬಂದಿ ತೆರವುಗೊಳಿಸಲು 600 ಸೈನಿಕರ ತಂಡವನ್ನು ಬ್ರಿಟನ್ ಕಳುಹಿಸಿದೆ.

ಸ್ಥಳೀಯ ಪರಿಸ್ಥಿತಿಯನ್ನು ಭಾರತ ಅವಲೋಕಿಸುತ್ತಿದ್ದು, ಭಾರತೀಯರು ಮತ್ತು ರಾಜತಾಂತ್ರಿಕ ಸಿಬ್ಬಂದಿ ತೆರವಿಗೆ ಸಿದ್ಧವಾಗಿದೆ. ಭಾರತೀಯ ವಾಯುಪಡೆಯ ಸಿ-17 ಗ್ಲೋಬ್‌ಮಾಸ್ಟರ್ ಸೇನಾ ವಿಮಾನವನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ ಎಂದು ತಿಳಿದುಬಂದಿದೆ.

ರಷ್ಯಾದೊಂದಿಗೆ ತಾಲಿಬಾನ್ ಉತ್ತಮ ಸಂಬಂಧವನ್ನು ಹೊಂದಿದೆ. ಹೀಗಾಗಿ ರಷ್ಯಾದ ರಾಯಭಾರ ಕಚೇರಿಗಳ ಕಾರ್ಯನಿರ್ವಹಣೆಗೆ ಅಡ್ಡಿ ಮಾಡುವುದಿಲ್ಲ ಎಂದು ತಾಲಿಬಾನ್ ರಾಜಕೀಯ ಕಚೇರಿಯ ವಕ್ತಾರ ಸುಹೇಲ್ ಶಾಹೀನ್ ಅವರ ಹೇಳಿಕೆಯನ್ನು ಉಲ್ಲೇಖಿಸಿ, ರಷ್ಯಾದ ಸರ್ಕಾರಿ ಸುದ್ದಿ ಸಂಸ್ಥೆ ಟಾಸ್ ವರದಿ ಮಾಡಿದೆ.

ತಾಲಿಬಾನ್ ಅನ್ನು ದೇಶದ 'ಕಾನೂನುಬದ್ಧ ಆಡಳಿತಗಾರ' ಎಂದು ಒಪ್ಪಿಕೊಳ್ಳಲು ಚೀನಾ ಸಿದ್ಧವಾಗಿದೆ ಎಂದು ಮೂಲಗಳು ತಿಳಿಸಿವೆ. ಅಫ್ಗನ್ ಸರ್ಕಾರವನ್ನು ಉರುಳಿಸಲು ತಾಲಿಬಾನ್ ಯಶಸ್ವಿಯಾದಲ್ಲಿ, ಅದಕ್ಕೆ ಸಹಕಾರ ನೀಡಲು ಚೀನಾ ಉತ್ಸುಕವಾಗಿದೆ ಎಂದು ಯುಎಸ್ ನ್ಯೂಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಅಫ್ಗಾನಿಸ್ತಾನದಲ್ಲಿ ಭದ್ರತಾ ಪರಿಸ್ಥಿತಿ ಹದಗೆಡುತ್ತಿರುವ ಕಾರಣ, ಕಚೇರಿಯನ್ನು ಸಂಪೂರ್ಣವಾಗಿ ಸ್ಥಳಾಂತರಿಸಬೇಕೆ ಎಂಬ ಬಗ್ಗೆ ನೆದರ್ಲೆಂಡ್ಸ್ ಚಿಂತನೆ ನಡೆಸುತ್ತಿದೆ. ಆದರೂ, ರಾಯಭಾರ ಕಚೇರಿಯನ್ನು ಸಾಧ್ಯವಾದಷ್ಟು ಸಮಯ ನಡೆಸುವ ಇರಾದೆಯಲ್ಲಿದೆ ಎಂದು ವಿದೇಶಾಂಗ ಸಚಿವ ಸಿಗ್ರಿಡ್ ಕಾಗ್ ಶುಕ್ರವಾರ ಹೇಳಿದ್ದರು.

ಸ್ವಿಟ್ಜರ್ಲೆಂಡ್ ದೇಶವು ಕಾಬೂಲ್‌ನಲ್ಲಿ ರಾಯಭಾರ ಕಚೇರಿ ಹೊಂದಿಲ್ಲ. ಆದರೆ ವಿದೇಶಾಂಗ ಕಾರ್ಯದರ್ಶಿ ಲಿವಿಯಾ ಲಿಯು ಅವರು ಕಾಬೂಲ್‌ನಲ್ಲಿರುವ ಎಲ್ಲಾ ವಿದೇಶಾಂಗ ವ್ಯವಹಾರ ಇಲಾಖೆ ಉದ್ಯೋಗಿಗಳನ್ನು ತೆರವುಗೊಳಿಸುವುದಾಗಿ ತಿಳಿಸಿದ್ದಾರೆ. ತನ್ನ ಇಬ್ಬರು ರಾಜತಾಂತ್ರಿಕರು ಕಾಬೂಲ್‌ನಿಂದ ಬರಲಿದ್ದಾರೆ ಎಂದು ಜೆಕ್ ಗಣರಾಜ್ಯ ಶನಿವಾರ ಘೋಷಿಸಿತ್ತು. ಜರ್ಮನಿಯು ಸಿಬ್ಬಂದಿ ಕರೆತರಲು ಸೇನಾ ವಿಮಾನವನ್ನು ಕಳುಹಿಸುತ್ತಿದೆ.

ಡೆನ್ಮಾರ್ಕ್ ದೇಶವು ಕಾಬೂಲ್‌ನಲ್ಲಿರುವ ತನ್ನ ರಾಯಭಾರ ಕಚೇರಿಯನ್ನು ತಾತ್ಕಾಲಿಕವಾಗಿ ಮುಚ್ಚುತ್ತಿದೆ ಎಂದು ವಿದೇಶಾಂಗ ಸಚಿವ ಜೆಪ್ಪೆ ಕೊಫೊಡ್ ಶುಕ್ರವಾರ ಹೇಳಿದ್ದಾರೆ. ನಾರ್ವೆ ಕೂಡ ಇದೇ ನಿರ್ಧಾರ ತಳೆದಿದೆ. ನಾರ್ವೆ ಹಾಗೂ ಡೆನ್ಮಾರ್ಕ್ ಜೊತೆಯಾಗಿ ತೆರವು ಕಾರ್ಯಾಚರಣೆ ನಡೆಸಲಿವೆ. ತಾಲಿಬಾನ್ ಉಪಟಳ ಶುರುವಾದ ಹಿನ್ನೆಲೆಯಲ್ಲಿ ಕಳೆದ ಮೇ ತಿಂಗಳಿನಲ್ಲೇ ಆಸ್ಟ್ರೇಲಿಯಾವು ಕಚೇರಿ ಮುಚ್ಚಿತ್ತು. ಸ್ಪೇನ್ ದೇಶವು ನಾಗರಿಕರು ಹಾಗೂ ಸಿಬ್ಬಂದಿಯನ್ನು ತೆರವು ಮಾಡಲು ನಿರ್ಧರಿಸಿದೆ.

ತಾಲಿಬಾನ್ ಪಡೆಗಳು ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ಗೆ ಪ್ರವೇಶಿಸುತ್ತಿದ್ದಂತೆ, ಗಡಿ ದೇಶಗಳಿಗೆ ಅಫ್ಗನ್ನರು ವಲಸೆ ಹೋಗುತ್ತಿದ್ದಾರೆ. ಆದರೆ ಹೊಸ ನಿರಾಶ್ರಿತರಿಗೆ ಯಾವುದೇ ಆಶ್ರಯ ನೀಡುವುದಿಲ್ಲ ಎಂದು ಗಡಿದೇಶ ಪಾಕಿಸ್ತಾನ ಸ್ಪಷ್ಟಪಡಿಸಿದ್ದು, ಗಡಿಗಳನ್ನು ಭದ್ರಗೊಳಿಸಿದೆ. ಯೋರ್ಖಾನ್ ಗಡಿಯನ್ನು ಮುಚ್ಚಿದೆ.

ಆಧಾರ: ರಾಯಿಟರ್ಸ್, ಪಿಟಿಐ, ಎಎಫ್‌ಪಿ, ಎಪಿ

ಭಯಭೀತ ಜನರು

ಸಾವಿರಾರು ಮಂದಿ ದೇಶ ತೊರೆದು ಪಲಾಯನ ಮಾಡಿದ್ದಾರೆ ಎಂಬ ವರದಿಗಳಿವೆ. ಎರಡು ದಶಕಗಳ ಹಿಂದೆ ಇದೇ ತಾಲಿಬಾನ್ ಸರ್ಕಾರವು ದಮನಕಾರಿ ಆಡಳಿತ ನಡೆಸಿತ್ತು. ಇಸ್ಲಾಂ ಪ್ರತಿಪಾದಿಸುತ್ತಿದೆ ಎನ್ನಲಾಗುವ ನಿಯಮಗಳನ್ನು ಕಠಿಣಾತಿಕಠಿಣವಾಗಿ ಆಗ ಜಾರಿಗೆ ತರಲಾಗಿತ್ತು. ಅದೇ ಪರಿಸ್ಥಿತಿ ಮತ್ತೆ ಮರುಕಳಿಸಲಿದೆ ಎಂಬ ಭೀತಿ ಜನರಲ್ಲಿ ಇದೆ.

ದೇಶದ ಕೆಲವೇ ಕೆಲವು ಮಹಿಳಾ ಜಿಲ್ಲಾ ಗವರ್ನರ್‌ಗಳ ಪೈಕಿ ಸಲೀಮಾ ಮಝಾರಿ ಅವರೂ ಒಬ್ಬರು. ಮಝರ್ ಎ ಶರೀಫ್ ಪತನಕ್ಕೆ ಸ್ವಲ್ಪ ಮೊದಲು ನೀಡಿದ ಸಂದರ್ಶನದಲ್ಲಿ ಅವರು ತಾಲಿಬಾನ್ ಆಡಳಿತದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. 'ತಾಲಿಬಾನ್ ಆಳ್ವಿಕೆ ಶುರುವಾದರೆ ಮಹಿಳೆಯರಿಗೆ ಸ್ಥಳವೇ ಇರುವುದಿಲ್ಲ. ನಗರ, ಪಟ್ಟಣಗಳಲ್ಲಿ ಅವರು ಕಾಣಿಸುವುದಿಲ್ಲ. ಅವರೆಲ್ಲರೂ ಮನೆಯಲ್ಲಿ ಬಂದಿಯಾಗಿರುತ್ತಾರೆ' ಎಂದು ಸಲೀಮಾ ಹೇಳಿದ್ದಾರೆ.

ಮೂಲಭೂತವಾದಿ ಮೌಲ್ವಿ ಮುಜೀಬ್ ರೆಹ್ಮಾನ್ ಅನ್ಸಾರಿಯನ್ನು ಹೇರಾತ್ ಪ್ರಾಂತ್ಯದ ಮಹಿಳಾ ವ್ಯವಹಾರಗಳ ಸಚಿವ ಎಂದು ತಾಲಿಬಾನ್ ಘೋಷಿಸಿದೆ ಎಂದು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯೊಬ್ಬರು ತಮ್ಮ ಹೆಸರು ಬಹಿರಂಗಪಡಿಸದೆಯೇ ಹೇಳಿದ್ದಾರೆ. ಈತ ಮಹಿಳಾ ಹಕ್ಕುಗಳ ವಿರೋಧಿ ಎಂದು ಹೋರಾಟಗಾರ್ತಿ ವಿವರಿಸಿದ್ದಾರೆ. ಮಹಿಳಾ ಹಕ್ಕುಗಳ ಪ್ರತಿಪಾದನೆ ಸಲ್ಲದು ಮತ್ತು ಮಹಿಳೆಯರು ಹಿಜಬ್ ಧರಿಸದಿದ್ದರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಬರೆದಿದ್ದ ಫಲಕಗಳನ್ನು ಹೇರಾತ್‌ನಾದ್ಯಂತ 2015ರಲ್ಲಿ ಹಾಕಿಸುವ ಮೂಲಕ ಅನ್ಸಾರಿ ಮುನ್ನೆಲೆಗೆ ಬಂದಿದ್ದ.

ಈಶಾನ್ಯದ ತಕ್‌ಹರ್ ಪ್ರಾಂತ್ಯದ ಗ್ರಾಮೀಣ ಪ್ರದೇಶವೊಂದರಲ್ಲಿ ನೂರಿಯ ಹಯಾ ದಾದಿಯಾಗಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿನವರೆಗೆ ಅವರು ಪುರುಷ ವೈದ್ಯರು ಮತ್ತು ಇತರ ಅಧಿಕಾರಿಗಳು ನಡೆಸುತ್ತಿದ್ದ ಸಭೆಗೆ ಹಾಜರಾಗುತ್ತಿದ್ದರು. ಈಗ, ಮಹಿಳೆಯರು ಮತ್ತು ಪುರುಷರು ಒಟ್ಟಾಗಿ ಸಭೆ ನಡೆಸುವಂತಿಲ್ಲ ಎಂದು ತಾಲಿಬಾನ್ ಆದೇಶಿಸಿದೆ.

'ಎಲ್ಲರೂ ಭಯಭೀತರಾಗಿದ್ದಾರೆ' ಎಂದು ಪಾಕಿಸ್ತಾನದ ಗಡಿಯಲ್ಲಿರುವ ಅರ್ಘಿಸ್ತಾನ್ ಜಿಲ್ಲೆಯ ಜಾನ್ ಅಘಾ ಹೇಳುತ್ತಾರೆ. ಹೆಚ್ಚಿನ ಗ್ರಾಮಗಳಲ್ಲಿ ತಾಲಿಬಾನ್ ಯೋಧರು ಗಸ್ತು ಆರಂಭಿಸಿದ್ದಾರೆ. ಮನೆಗಳ ಬಾಗಿಲು ಬಡಿದು ತಮಗೆ ಬೇಕಾದುದನ್ನು ಪಡೆದುಕೊಳ್ಳುತ್ತಿದ್ದಾರೆ.

ಎರಡು ದಶಕಗಳ ಹಿಂದೆ ಇದ್ದ 'ಭಯಭೀತ' ಆಳ್ವಿಕೆ ಮರಳಿ ಆರಂಭವಾಗಿದೆ.

ಹೆಲ್ಮಂಡ್ ಪ್ರಾಂತ್ಯದ ಹಲವು ಕುಟುಂಬಗಳು 2020ರ ಅಕ್ಟೋಬರ್‌ನಲ್ಲಿಯೇ ಹುಟ್ಟೂರು ತೊರೆದಿವೆ ಎಎಫ್‌ಪಿ ಚಿತ್ರ

ತಾಲಿಬಾನ್ ಚರಿತ್ರೆ

ಪಶ್ತೋ ಭಾಷೆಯಲ್ಲಿ ತಾಲಿಬಾನ್ ಅಂದರೆ 'ವಿದ್ಯಾರ್ಥಿಗಳು' ಎಂಬ ಅರ್ಥವಿದೆ. 1994ರಲ್ಲಿ ಕಂದಹಾರ್ ಬಳಿ ಈ ಸಂಘಟನೆ ಪ್ರವರ್ಧಮಾನಕ್ಕೆ ಬಂದಿತು. ಸೋವಿಯತ್ ಒಕ್ಕೂಟದ ವಾಪಸಾತಿ ಮತ್ತು ಆ ಬಳಿಕ ಸರ್ಕಾರದ ಪತನದ ನಂತರ, ದೇಶವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ತಾಲಿಬಾನ್ ಅಂತರ್ಯುದ್ಧ ಶುರುಮಾಡಿತು. ಅಮೆರಿಕದ ಬೆಂಬಲದೊಂದಿಗೆ 1980ರಲ್ಲಿ ಸೋವಿಯತ್ ಪಡೆಗಳನ್ನು ಹಿಮ್ಮೆಟ್ಟಿಸಿದ್ದ 'ಮುಜಾಹಿದೀನ್' ಹೋರಾಟಗಾರರನ್ನು ಈ ಸಂಘಟನೆ ಸೆಳೆಯಿತು.

ಎರಡು ವರ್ಷಗಳ ಅಂತರದಲ್ಲಿ, ದೇಶದ ಬಹುತೇಕ ಭಾಗಗಳ ಮೇಲೆ ತಾಲಿಬಾನ್ ಸಂಪೂರ್ಣ ನಿಯಂತ್ರಣ ಸಾಧಿಸಿತು. ಇಸ್ಲಾಮಿಕ್ ಕಾನೂನಿನ ಕಠಿಣ ವ್ಯಾಖ್ಯಾನದೊಂದಿಗೆ 1996ರಲ್ಲಿ 'ಇಸ್ಲಾಮಿಕ್ ಎಮಿರೇಟ್' ಎಂಬುದಾಗಿ ಘೋಷಿಸಿಕೊಂಡಿತು. ತನ್ನದೇ ಕಾನೂನು ಜಾರಿಗೆ ತಂದಿತು.

2001ರ ಸೆಪ್ಟೆಂಬರ್ 11ರಂದು ವರ್ಲ್ಡ್ ಟ್ರೇಡ್ ಸೆಂಟರ್‌ನ ಅವಳಿ ಕಟ್ಟಡಗಳನ್ನು ಅಲ್ ಖೈದಾ ಉಗ್ರರು ಧ್ವಂಸಗೊಳಿಸಿದ ಬಳಿಕ ಅಮೆರಿಕವು ಕಾಬೂಲ್‌ನಲ್ಲಿ ಭಾರಿ ವೈಮಾನಿಕ ದಾಳಿ ನಡೆಸಿತು. ಅಲ್ಲಿಂದ 20 ವರ್ಷಗಳ ಸೇನಾ ನಿಯೋಜನೆ ಶುರುವಾಯಿತು. ಈ ಅವಧಿ ಇದೇ ಆಗಸ್ಟ್ 31ರಂದು ಕೊನೆಯಾಗಲಿದ್ದು, ಅಮೆರಿಕವು ತನ್ನ ಸೇನೆಯನ್ನು ವಾಪಸ್ ಕರೆಸಿಕೊಂಡಿದೆ.

ಸಿದ್ಧಾಂತ: ತಾಲಿಬಾನ್ ಷರಿಯಾ ಕಾನೂನಿನ ಕಠಿಣ ರೂಪವನ್ನು ಜಾರಿಗೊಳಿಸಿತ್ತು. ಮಹಿಳೆಯರು ಕೆಲಸ ಮಾಡುವುದನ್ನು ಅಥವಾ ಅಧ್ಯಯನ ಮಾಡುವುದನ್ನು ನಿರ್ಬಂಧಿಸಿತ್ತು. ಅವರು ಒಬ್ಬಂಟಿಯಾಗಿ ಮನೆಬಿಟ್ಟು ಹೊರಬರುವಂತಿರಲಿಲ್ಲ. ಸಾರ್ವಜನಿಕವಾಗಿ ಮರಣದಂಡನೆ ಮತ್ತು ಚಾಟಿ ಏಟಿನ ಶಿಕ್ಷೆ ನೀಡುವುದು ಸಾಮಾನ್ಯವಾಗಿತ್ತು.

ಅಫ್ಗಾನಿಸ್ತಾನಕ್ಕೆ 'ನೈಜ ಇಸ್ಲಾಮಿಕ್ ವ್ಯವಸ್ಥೆ'ಯನ್ನು ಕಲ್ಪಿಸಲು ಬಯಸಿದ್ದಾಗಿ ತಾಲಿಬಾನ್ ಈ ವರ್ಷಾರಂಭದಲ್ಲಿ ಹೇಳಿತ್ತು.

ಅಂತರರಾಷ್ಟ್ರೀಯ ಮಾನ್ಯತೆ ಇಲ್ಲ: ನೆರೆಯ ಪಾಕಿಸ್ತಾನ, ಚೀನಾ ಸೇರಿದಂತೆ ಮೂರ್ನಾಲ್ಕು ದೇಶಗಳು ಮಾತ್ರ ಈ ಹಿಂದೆ ಅಧಿಕಾರದಲ್ಲಿ ಇದ್ದ ತಾಲಿಬಾನ್ ಸರ್ಕಾರಕ್ಕೆ ಮಾನ್ಯತೆ ನೀಡಿದ್ದವು.

ಸಂಸತ್ತಿನ ಮುಂಗಾರು ಅಧಿವೇಶನವು ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವಣ ಕಂದಕವು ಇನ್ನಷ್ಟು ತೀವ್ರಗೊಳ್ಳುವ ಮೂಲಕ ಕೊನೆಗೊಂಡಿದೆ. ಸಂಸತ್ ಕಲಾಪ ನಡೆದ ರೀತಿಯ ಬಗ್ಗೆ ಹಲವು ಪ್ರಶ್ನೆಗಳು ಎದ್ದಿವೆ. ಅದರ ನಡುವೆಯೇ ಎರಡೂ ಕಡೆಯವರು ತಮ್ಮ ನಿಲುವುಗಳನ್ನು ಇನ್ನಷ್ಟು ಗಟ್ಟಿಗೊಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಮುಖ್ಯ ಸಚೇತಕ **ಜೈರಾಂ ರಮೇಶ್** ಅವರು **ಪ್ರಜಾವಾಣಿ** ಜತೆಗೆ ಮಾತನಾಡಿದ್ದಾರೆ. ಅದರ ಆಯ್ದ ಭಾಗ ಇಲ್ಲಿದೆ:

'ಅರ್ಥಹೀನ ಘೋಷಣೆಗೆ ಮೋದಿ ನಿಸ್ಸೀಮ'

• ಶೆಮಿನ್ ಜಾಯ್

ಪ್ರಜಾವಾಣಿ ಸಂದರ್ಶನ
ಜೈರಾಂ ರಮೇಶ್



• ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲರ ಜತೆಗೆ, ಎಲ್ಲರ ವಿಕಾಸ ಎಂಬ ಘೋಷಣೆಗೆ 'ಎಲ್ಲರ ಪ್ರಯತ್ನ' ಎಂಬುದನ್ನೂ ಸೇರಿಸಿದ್ದಾರೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಅರ್ಥಹೀನ ಘೋಷಣೆ ಸೃಷ್ಟಿಸುವುದರಲ್ಲಿ ಮೋದಿ ನಿಸ್ಸೀಮರಾಗಿದ್ದಾರೆ. ಇವೆಲ್ಲವೂ ಆ ಕ್ಷಣದ ವಾಕ್ ವೈಭವ. ಈ ರೀತಿಯ ಅಪ್ರಾಮಾಣಿಕತೆ ಮತ್ತು ಆಷಾಢಭೂತಿತನದಲ್ಲಿ ಮೋದಿ ಅವರು ಭಾರಿ ಪಾರದರ್ಶಕವಾಗಿದ್ದಾರೆ. ಸಂವಿಧಾನ ತಿದ್ದುಪಡಿ (127ನೇ ತಿದ್ದುಪಡಿ) ಮಸೂದೆಗೆ ಕೂಡ ಸಂಸತ್ತಿಗೆ ಬಂದು ಮತ ಹಾಕಲು ಮನಸ್ಸಿಲ್ಲದ ಪ್ರಧಾನಿ ಅವರು. ಆದರೆ, ಭಾರತದ ರಾಜಕಾರಣಕ್ಕೆ ತಮ್ಮ ಕೊಡುಗೆ ಬಹಳ ದೊಡ್ಡದು ಎಂದು ಅವರು ಅಂದುಕೊಂಡಿದ್ದಾರೆ.

• ವಿಭಜನೆಯ ಕ್ರೌರ್ಯ ಸ್ಮರಣಾ ದಿನವನ್ನಾಗಿ ಆಗಸ್ಟ್ 14 ಅನ್ನು ಆಚರಿಸಲಾಗುವುದು ಎಂದು ಸರ್ಕಾರ ಹೇಳಿದೆ. ನೀವು ಇದನ್ನು ಒಪ್ಪುವಿರಾ?

ಇದು ಸಮಾಜವನ್ನು ವಿಭಜಿಸುವ ಮತ್ತು ಧ್ರುವೀಕರಿಸುವ ಯತ್ನ. ಬಂಗಾಳ ವಿಭಜನೆಯಾಗಬೇಕು ಎಂಬುದರ ಬಹುದೊಡ್ಡ ಪ್ರತಿಪಾದಕರಾಗಿ ಶ್ಯಾಮ್ ಪ್ರಸಾದ್ ಮುಖರ್ಜಿ ಅವರಿದ್ದರು. 1922ರಲ್ಲಿ ವಿ.ಡಿ. ಸಾವರ್ಕರ್ ಅವರು ಮುಂದಿಟ್ಟಿದ್ದ ಎರಡು ದೇಶ ಸಿದ್ಧಾಂತದ ಒಟ್ಟು ಫಲಿತಾಂಶವೇ ದೇಶ ವಿಭಜನೆ.

• ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಈ ಘೋಷಣೆ ಮಾಡಲಾಗಿದೆ ಎಂದು ಕೆಲವರು ಹೇಳುತ್ತಿದ್ದಾರೆ. ನೀವು ಒಪ್ಪುವಿರಾ?

ಹೌದು. ಇಡೀ ಸ್ವಾತಂತ್ರ್ಯ ಹೋರಾಟವನ್ನೇ ಅಪಮೌಲ್ಯಗೊಳಿಸಲು ಮೋದಿ ಬಯಸಿದ್ದಾರೆ. ದೇಶ ವಿಭಜನೆಗೆ ಮುಖ್ಯ ಕಾರಣ ಸಾವರ್ಕರ್, ಹಿಂದೂ ಮಹಾಸಭಾ, ಆರ್‌ಎಸ್‌ಎಸ್ ಮತ್ತು ಮುಸ್ಲಿಂ ಲೀಗ್.

• ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವಣ ಸಂಬಂಧವು ದುರಸ್ತಿಯಾಗದ ರೀತಿಯಲ್ಲಿ ಹಾಳಾಗಿದೆಯೇ?

ಇದು ಸಂಪೂರ್ಣವಾಗಿ ಛಿದ್ರವಾಗಿದೆ ಎಂಬುದು ನಿಜ. ಎರಡೂ ಕಡೆಯವರನ್ನು ಒಟ್ಟಾಗಿ ತರುವ ಪ್ರಯತ್ನವನ್ನು ರಾಜ್ಯಸಭೆಯ ಸಭಾಪತಿ (ವೆಂಕಯ್ಯ ನಾಯ್ಡು) ಮಾಡಲಿಲ್ಲ. ಸದನದ ನಾಯಕನನ್ನು (ಪೀಯೂಷ್ ಗೋಯಲ್) ನಾವು ನಂಬಲು ಸಾಧ್ಯವಿಲ್ಲ. ಸಂಸದೀಯ ವ್ಯವಹಾರ ಸಚಿವರು (ಪ್ರಲ್ಹಾದ ಜೋಶಿ) ಸಂಪೂರ್ಣವಾಗಿ ಅಪ್ರಾಮಾಣಿಕ. ವಿರೋಧ ಪಕ್ಷಗಳ ಮಟ್ಟಿಗೆ ಒಂದು ಸಕಾರಾತ್ಮಕ ಅಂಶ ಏನೆಂದರೆ, ಸದನ ನಾಯಕರೆಲ್ಲರೂ ಮಲ್ಲಿಕಾರ್ಜುನ ಖರ್ಗೆ (ರಾಜ್ಯಸಭೆಯ ವಿಪಕ್ಷ ನಾಯಕ) ಕೊಠಡಿಯಲ್ಲಿ ಸೇರುತ್ತಿದ್ದರು. ಏಳು ವರ್ಷಗಳಲ್ಲಿ ಇದೇ ಮೊದಲಿಗೆ ವಿರೋಧ ಪಕ್ಷಗಳು ಯೋಜನಾಬದ್ಧವಾಗಿ ಕೆಲಸ ಮಾಡಿವೆ. ಖರ್ಗೆ ಅವರ ವರ್ಚಸ್ಸು, ಹಿರಿತನ, ಆಕ್ರಮಣಕಾರಿ ಮನೋಭಾವ ಇದಕ್ಕೆ ದೊಡ್ಡ ಕೊಡುಗೆ ಕೊಟ್ಟಿದೆ.

• ಆಜಾದ್ ಅವರು ಆಕ್ರಮಣಶೀಲ ಆಗಿರಲಿಲ್ಲ ಎಂಬುದು ಇದರ ಅರ್ಥವೇ?

ಅವರ ಬಗ್ಗೆ ಏನೂ ಹೇಳಲಾರೆ. ಖರ್ಗೆ ಆಕ್ರಮಣಶೀಲವಾಗಿದ್ದಾರೆ, ಅವರು ನೇರವಾಗಿದ್ದಾರೆ ಮತ್ತು ಸರ್ಕಾರ ಅಥವಾ ಸಭಾಪತಿಯ ಅಸಂಬದ್ಧಗಳನ್ನು ಕೇಳಿಕೊಂಡು ಅವರು ಇರುವುದಿಲ್ಲ ಎಂದಷ್ಟೇ ಹೇಳಬಲ್ಲೆ.

• ಕಾಂಗ್ರೆಸ್‌ನ ನಾಯಕತ್ವ ಪ್ರಶ್ನೆಯು ಸದ್ಯದಲ್ಲೇ ಪರಿಹಾರ ಆಗಬಹುದೇ?

ಕೋವಿಡ್–19ರ ಎರಡನೇ ಅಲೆಯನ್ನು ನಾವು ಅಂದಾಜು ಮಾಡಿರಲಿಲ್ಲ. ಜನರು ವೈದ್ಯಕೀಯ ಆಮ್ಲಜನಕಕ್ಕಾಗಿ ಕಷ್ಟ ಪಡುತ್ತಿರುವಾಗ ಪಕ್ಷದ ಚುನಾವಣೆ ನಡೆಸುವುದು ಸಾಧ್ಯವಿರಲಿಲ್ಲ. ಹಾಗಾಗಿ ಗಡುವನ್ನು ಮುಂದಕ್ಕೆ ಹಾಕಲೇಬೇಕಿತ್ತು. ಈಗ, ಹೊಸ ಗಡುವು ಹಾಕಿಕೊಂಡಿಲ್ಲ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾದ್ರದೇವಿಯ ಸಂಕಟ

ಮಕ್ಕಳು ಕಾಣದಾದಾಗ, ಮಾದ್ರಿದೇವಿ ಗಾಬರಿಯಿಂದ ತನ್ನಷ್ಟಕ್ಕೆ ತಾನೇ ಮಾತನಾಡಿಕೊಂಡಳು, 'ಅಯ್ಯೋ, ಈ ಜಾಗದಲ್ಲೇ ನನ್ನ ಮಕ್ಕಳು, ಆಕಳ ಬಳಿಗೆ ಓಡಿ ಬರುವ ಕರುಗಳ ಹಾಗೆ ಬಂದು ನಿಲ್ಲುತ್ತಿದ್ದರು. ಜಿಂಕೆಯ ಮರಿಗಳಂತೆ ಆನಂದಿತರಾಗಿ, ಕುಣಿದು ಕುಪ್ಪಳಿಸಿ ಬರುತ್ತಿದ್ದ ಜಾಲಿಕುಮಾರ ಮತ್ತು ಕೃಷ್ಣಾಜಿನರನ್ನು ನಾನು ಇಂದು ಕಾಣುತ್ತಿಲ್ಲ. ಮಾಂಸಲೋಭಿಯಾದ ಸಿಂಹಿಣಿ ತನ್ನ ಮರಿಗಳನ್ನು ಬಿಟ್ಟು ಹೋಗುವಂತೆ ನಾನು ಅವರನ್ನು ಬಿಟ್ಟು ಹೋದೆ. ಅವರ ಧ್ವನಿಗಳೂ ಕೇಳುತ್ತಿಲ್ಲ. ಆಶ್ರಮ ಸುತ್ತಲೂ ಗರಗರನೆ ತಿರುಗುವಂತೆ ಭಾಸವಾಗುತ್ತಿದೆ. ಒಂದು ಪಕ್ಷಿಯೂ ಕೂಗುತ್ತಿಲ್ಲ. ಖಂಡಿತವಾಗಿಯೂ ನನ್ನ ಮಕ್ಕಳಿಗೆ ಏನೋ ಅನಾಹುತವಾಗಿದೆ'. ಹೀಗೆ ಅಳುತ್ತ ಆಕೆ ಬೋಧಿಸತ್ವನ ಬಳಿಗೆ ಬಂದು ಹಣ್ಣುಗಳಿಂದ ತುಂಬಿದ ಬುಟ್ಟಿಯನ್ನು ಕೆಳಗಿಳಿಸಿದಳು. ಆತ ಮೌನವಾಗಿ ಕುಳಿತಿದ್ದ. ಆಕೆಗೆ ಮತ್ತಷ್ಟು ಸಂಕಟವಾಯಿತು. 'ಯಾಕೆ ಮೌನದಿಂದ ಕುಳಿತಿದ್ದೀರಿ? ನನ್ನ ಮಕ್ಕಳಿಗೆ ಏನಾಗಿದೆ? ಯಾವ ಪಕ್ಷಿಗಳೂ ಕಾಣುತ್ತಿಲ್ಲ. ಮಕ್ಕಳನ್ನು ಕಾಡುಮೃಗಗಳು ತಿಂದುಬಿಟ್ಟವೆ? ಅಥವಾ ಯಾರಾದರೂ ಬಂದು ಎತ್ತಿಕೊಂಡು ಹೋದರೆ? ನೀವೇ ಅವರನ್ನು ಎಲ್ಲಿಗಾದರೂ ಕಳುಹಿಸಿಕೊಟ್ಟಿದ್ದೀರಾ? ಅವರು ಆಟವಾಗಲು ಹೋಗಿದ್ದಾರೆಯೇ? ಮಲಗಿದ್ದಾರೆಯೆ?' ಆಕೆ ಅಷ್ಟು ವಿಲಾಪ ಮಾಡುತ್ತ ಪ್ರಶ್ನೆಗಳನ್ನು ಕೇಳುತ್ತಿದ್ದರೂ ಬೋಧಿಸತ್ವ ಒಂದು ಮಾತೂ ಆಡಲಿಲ್ಲ.

ಮಾದ್ರಿದೇವಿ, 'ಪ್ರಭೂ, ಯಾಕೆ ನನ್ನೊಂದಿಗೆ ಮಾತನಾಡುತ್ತಿಲ್ಲ? ನಾನು ಮಾಡಿದ ಅಪರಾಧವೇನು?' ಎನ್ನುತ್ತ ಆಕೆ ಮತ್ತೆ ಕೇಳಿದಳು, 'ಜಾಲಿಕುಮಾರ ಮತ್ತು ಕೃಷ್ಣಾಜಿನರನ್ನು ಕಾಣದಿರುವುದು ದೇಹವನ್ನು ಶಲ್ಯದಿಂದ ಸೀಳಿಬಿಡುವುದಕ್ಕಿಂತ ಹೆಚ್ಚು ನೋವನ್ನುಂಟು ಮಾಡುವುದು. ಜಾಲಿಕುಮಾರ ಮತ್ತು ಕೃಷ್ಣಾಜಿನರನ್ನು ಕಾಣದಿರುವುದು ಮೊದಲನೆಯ ಶಲ್ಯ. ನೀವು ನನ್ನೊಂದಿಗೆ ಮಾತನಾಡದಿರುವುದು ನನ್ನ ಹೃದಯವನ್ನು ಭೇದಿಸುತ್ತಿರುವ ಎರಡನೆಯ ಶಲ್ಯ. ರಾಜಪುತ್ರ, ಈ ರಾತ್ರಿ ತಾವು ನನಗೆ ಇದರ ವಿಷಯವನ್ನು ತಿಳಿಸದಿದ್ದರೆ, ನಾಳೆ ಬೆಳಿಗ್ಗೆಯೊಳಗೆ ನನ್ನ ಶವವನ್ನು ಕಾಣುತ್ತೀರಿ'. ಬೋಧಿಸತ್ವ ಅವಳ ಮಕ್ಕಳ ಶೋಕವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಕಠೋರವಾಣಿಯಲ್ಲಿ ಕೇಳಿದ, 'ಎಲ್ಲೈ ಮಾದ್ರಿ, ನೀನು ಫಲಮೂಲಗಳನ್ನು ತರಲು ಬೆಳಿಗ್ಗೆಯೇ ಹೋದವಳು, ಇಷ್ಟು ರಾತ್ರಿಯಾದ ಮೇಲೆ ಮರಳಿದ್ದೀಯಲ್ಲ?'. ಆಕೆ ಮತ್ತೆ ಗಾಬರಿಯಾಗಿ ಹೇಳಿದಳು, 'ಆರ್ಯಪುತ್ರ, ನೀವು ಸ್ವಲ್ಪ ಹೊತ್ತಿಗೆ ಮುಂಚೆ ಹುಲಿ, ಸಿಂಹ, ಚಿರತೆಗಳ ಘರ್ಜನೆಯನ್ನು ಕೇಳಲಿಲ್ಲವೆ? ಭಯಂಕರವಾದ ಕಾಡಿನಲ್ಲಿ ಫಲಮೂಲಗಳನ್ನು ಹುಡುಕುತ್ತಿದ್ದಾಗ ನನಗೆ ದುಃಖದ ಪೂರ್ವಸೂಚನೆ ದೊರಕಿತು. ಕೈಯಿಂದ ಮುಮ್ಮಟಿ ಜಾರಿಜಾರಿ ಬಿತ್ತು, ಹೆಗಲಿನಿಂದ ಸೆರಗು ಜಾರಿತು. ಆಗ ನಾನು ಭಯಭೀತಳಾಗಿ ಕೈಜೋಡಿಸಿ ಎಲ್ಲರಿಗೂ ಕಲ್ಯಾಣವಾಗಲಿ ಎಂದು ಎಲ್ಲ ದಿಕ್ಕುಗಳಿಗೂ ನಮಸ್ಕಾರ ಮಾಡಿದೆ. ಯಾವ ಕಾಡುಮೃಗಗಳೂ ತಮಗೆ ಹಾಗೂ ಮಕ್ಕಳಿಗೆ ತೊಂದರೆಮಾಡದಿರಲಿ ಎಂದು ಬೇಡಿಕೊಂಡೆ. ಜಟಾಧಾರಿಣಿ, ಬ್ರಹ್ಮಚಾರಿಣಿಯಾದ ನಾನು ಹಗಲು-ರಾತ್ರಿ ಗಂಡ-ಮಕ್ಕಳ ಸೇವೆಯನ್ನು, ಶಿಷ್ಯ ತನ್ನ ಗುರುವಿಗೆ ಮಾಡಿದಂತೆ ಮಾಡುತ್ತಿದ್ದೇನೆ. ಎಲ್ಲರ ಹಿತಕ್ಕಾಗಿ ಜಿಂಕೆಯ ಚರ್ಮವನ್ನು ಸುತ್ತಿಕೊಂಡು ಕಾಡು ಕಾಡು ಅಲೆಯುತ್ತೇನೆ. ಇಂದು ಕೂಡ ಅತ್ಯಂತ ರುಚಿರುಚಿಯಾದ ಹಣ್ಣುಗಳನ್ನು ತಂದಿದ್ದೇನೆ. ಆದರೆ ನಿಮ್ಮ ಮೌನ ನನ್ನನ್ನು ಕೊರೆಯುತ್ತಿದೆ'. ಎಲ್ಲಕ್ಕೂ ಬೋಧಿಸತ್ವನ ಮೌನವೇ ಉತ್ತರವಾಯಿತು. ❖

ದಿನ ಭವಿಷ್ಯ

ಸೋಮವಾರ ಆಗಸ್ಟ್ 16, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ಅಷ್ಟಮೀ ಗಂ. 2-33 (ಬೆ. 7-16) ಉಪರಿ ನವಮೀ ಗಂ. 53-28 (ರಾ. 4-39) ಸೋಮವಾರ ನಿತ್ಯ ನಕ್ಷತ್ರ ಅನೂರಾಧಾ ಗಂ. 52-25 (ರಾ. 3-13) ಬ್ರಹ್ಮ ನಾಮ ಯೋಗ ಗಂ. 2-52 ಉಪರಿ ಐಂದ್ರ ನಾಮ ಯೋಗ ಗಂ. 52-0 ಬವ ಕರಣ ಗಂ. 2-33 ಉಪರಿ ಬಾಲವ ಕರಣ ಗಂ. 26-44 ವಿಷ ಗಂ. 5-10 ಅಮೃತ ಗಂ. 27-22 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-11 ಸೂರ್ಯಾಸ್ತ: 6-36 ಅದೃಷ್ಟ ಸಂಖ್ಯೆ 1

ಮೇಷ: ವಾಹನ ಮಾರಾಟದಲ್ಲಿ ತೊಡಗಿದವರಿಗೆ ಉತ್ತಮ ಲಾಭ ದೊರಕಲಿದೆ. ಕಳೆದುಕೊಂಡ ವಸ್ತುವೊಂದು ಪುನಃ ಕೈ ಸೇರುವ ಸಾಧ್ಯತೆ ಕಂಡುಬರುವುದು. ವಿವಾಹ ಸಂಬಂಧ ಒತ್ತಡಕ್ಕೆ ಮಣಿಯಬೇಕಾದೀತು.

ವೃಷಭ: ಪ್ರತಿಷ್ಠಿತ ವ್ಯಕ್ತಿಯೊಬ್ಬರ ಸಹಾಯದಿಂದ ಸರ್ಕಾರದಿಂದ ಆಗಬೇಕಾದ ಕೆಲಸಗಳು ಸುಸೂತ್ರವಾಗಿ ನೆರವೇರುವವು. ಶತ್ರುಗಳ ಬಾಧೆ. ಸಹೋದರರಿಂದ ಉತ್ತಮ ಸಹಾಯ ಪಡೆದುಕೊಳ್ಳಲಿದ್ದೀರಿ.

ಮಿಥುನ: ಆರ್ಥಿಕ ಸದೃಢತೆಯಿಂದಾಗಿ ಆಸ್ತಿ ಖರೀದಿ ಮಾಡುವ ಸಾಧ್ಯತೆ ಕಂಡುಬರುವುದು. ಸಂಶೋಧನಾ ಕೇಂದ್ರಗಳಲ್ಲಿ ಕೆಲಸ ಮಾಡುವವರಿಗೆ ಹೊಸದೊಂದು ಆಶಾಕಿರಣ ಮೂಡಿಬರಲಿದೆ.

ಕರ್ಕಾಟಕ: ಸಗಟು ವ್ಯಾಪಾರಗಳಲ್ಲಿ ಗಣನೀಯ ಪ್ರಗತಿಯು ಕಂಡುಬರಲಿದ್ದು ಆದಾಯದಲ್ಲಿ ಹೆಚ್ಚಳ ಕಂಡುಬಂದರೂ ಆದಾಯಕ್ಕೆ ಮೀರಿದ ವೆಚ್ಚ ಭರಿಸಬೇಕಾದೀತು. ನೌಕರಿಯಲ್ಲಿ ಇರುವವರಿಗೆ ಬಿಡುವು ದೊರಕುವ ಸಾಧ್ಯತೆ.

ಸಿಂಹ: ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಹಾಗೂ ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಅವಕಾಶಗಳು ಕಂಡುಬರುವವು. ಬರಹಗಾರರಿಗೆ ಸ್ಪರ್ಧೆಯಲ್ಲಿ ಬಹುಮಾನ ಗೆಲ್ಲುವ ಅವಕಾಶ.

ಕನ್ಯಾ: ಉದ್ಯೋಗದ ನಿಮಿತ್ತ ದೂರದ ಪ್ರಯಾಣ ಮಾಡಬೇಕಾದೀತು. ಆದಾಯದಲ್ಲಿ ಹೆಚ್ಚಳದಿಂದಾಗಿ ನೆಮ್ಮದಿ. ನೇತ್ರ ಸಂಬಂಧಿ ಕಾಯಿಲೆಗಳು ದೂರವಾಗುವವು. ಹಿರಿಯರಿಗೆ ವಿಶ್ರಾಂತಿಯ ಅವಶ್ಯಕತೆ ತೋರಿಬರುವುದು.

ತುಲಾ: ಸಾಮಾಜಿಕ ಉನ್ನತೀಕರಣಕ್ಕಾಗಿ ಹಿರಿಯರೊಂದಿಗೆ ಚರ್ಚಿಸಲಿದ್ದೀರಿ. ಹೆಚ್ಚಿನ ಪರಿಶ್ರಮದಿಂದ ಕೆಲಸಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ಮಹಿಳಾ ಉದ್ಯೋಗಿಗಳಿಗೆ ಭಡ್ತಿ ಸಾಧ್ಯತೆ ಕಂಡುಬರುವುದು.

ವೃಶ್ಚಿಕ: ಉದ್ಯೋಗಸ್ಥ ಮಹಿಳೆಯರಿಗೆ ಕಾರ್ಯಕ್ಷೇತ್ರದಲ್ಲಿ ಗೊಂದಲ ಕಿರಿಕಿರಿ ಉಂಟಾದೀತು. ಗುರುಹಿರಿಯರ ಆಶೀರ್ವಾದ ಪಡೆಯುವಿರಿ. ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ಮಾರಾಟಗಾರರಿಗೆ ಆದಾಯದಲ್ಲಿ ಹೆಚ್ಚಳ.

ಧನು: ಕುಟುಂಬದಲ್ಲಿ ಸುಖ ಸಂತೋಷದೊಂದಿಗೆ ಆರ್ಥಿಕ ಅಭಿವೃದ್ಧಿಯನ್ನು ಕಾಣಲಿದ್ದೀರಿ. ಹಿತೈಷಿಗಳೊಂದಿಗೆ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗಿ. ಸ್ವಯಂ ಉದ್ಯೋಗಿಗಳು ಹೆಚ್ಚಿನ ಪರಿಶ್ರಮ ವಹಿಸಬೇಕಾದೀತು.

ಮಕರ: ಸರ್ಕಾರಿ ನೌಕರರಿಗೆ ಒಳ್ಳೆಯ ದಿನ. ರಾಜಕಾರಣಿಗಳು, ಸರ್ಕಾರಿ ಅಧಿಕಾರಿ ವರ್ಗದವರಿಗೆ ಉತ್ತಮ ದಿನ. ಸಂಗಾತಿಯ ಆಲೋಚನೆಗಳಿಗೆ ಪುರಸ್ಕಾರ ನೀಡುವುದು ಒಳ್ಳೆಯದು.

ಕುಂಭ: ಚಿನ್ನ– ಬೆಳ್ಳಿ ಮುಂತಾದ ಆಭರಣ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರ ಕುದುರುವುದು. ಕೃಷಿ ಕಾರ್ಯಗಳಿಗಾಗಿ ಧನ ವಿನಿಯೋಗ ಮಾಡಬೇಕಾದೀತು. ದವಸ ಧಾನ್ಯಗಳ ವ್ಯವಹಾರದಲ್ಲಿ ಹೆಚ್ಚಿನ ಪ್ರಗತಿ ಕಾಣುವಿರಿ.

ಮೀನ: ಉದ್ಯೋಗದಲ್ಲಿ ಬದಲಾವಣೆಗಾಗಿ ಚಿಂತಿಸಲಿದ್ದೀರಿ. ಹಿತೈಷಿಗಳ ಸಲಹೆಗಾಗಿ ಚರ್ಚೆ. ದುಡುಕುತನ ತೋರಿಸದಿರುವುದು ಉತ್ತಮ. ಹಣಕಾಸಿನ ವಿಚಾರದಲ್ಲಿ ಸ್ಥಿರತೆ ಕಾಪಾಡುವಿರಿ.

ನಿಮ್ಮ ಜನ್ಮದಿನ 16-ಆಗಸ್ಟ್: ಇಂದು ಅತ್ಯಂತ ಶುಭದಾಯಕವಾಗಿದ್ದು, ಆರೋಗ್ಯದ ಬಗ್ಗೆ ಚಿಂತಿಸುವ ಅವಶ್ಯಕತೆ ಕಂಡುಬರುವುದಿಲ್ಲ. ಪಿತ್ರಾರ್ಜಿತ ಆಸ್ತಿಗಳು ನಿಮ್ಮ ಕೈ ಸೇರುವ ಸಾಧ್ಯತೆ ಕಂಡುಬರುತ್ತಿದೆ. ನಿಮ್ಮ ಜೀವನದ ಬಹು ಮುಖ್ಯವಾದ ಹೊಸ ಯೋಜನೆಗಳನ್ನು ಈ ವರ್ಷದ ಆರಂಭದಲ್ಲಿಯೇ ಕೈಗೊಳ್ಳಲಿದ್ದೀರಿ.

ಪದಬಂಧ 4690 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮನಸ್ಸನ್ನು ಸಂತೋಷಗೊಳಿಸುವುದು (5)
3.ತುಂಬಾ ಹದಗೆಟ್ಟ ಸ್ಥಿತಿ (3)
5.ಸಾಲದ ಹಣದ ಮೇಲೆ ಕೊಡುವ ಹೆಚ್ಚಿನ ಹಣ (2)
6.ಒಡೆಯ ಇಲ್ಲಿದ್ದಾನೆ (4)
9.ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವುದು (5)
12.ಮರದ ಹತ್ತಿರವಿರುವ ಪಚ್ಚೆ (4)
14.ಪದ್ಯದ ನಿಯತ ಸ್ಥಳಗಳಲ್ಲಿ ಬರುವ ನಿಯತಾಕ್ಷರ (2)
15.ಸ್ವಾರಸ್ಯವಾಗಿರುವ ಗುಟ್ಟು (3)
16.ಲೈಬ್ರರಿಯನ್ನು ಕನ್ನಡೀಕರಿಸಿ (5)

ಮೇಲಿಂದ ಕೆಳಕ್ಕೆ
1.ಮನಸ್ಸಿನ ಕೆಚ್ಚು (4)
2.ಗತಿಸಿದ ಹಿರಿಯರ ಹುಟ್ಟುಹಬ್ಬ (3)
4.ಹೊಸದಾಗಿ ಅಭಿನಯಿಸುತ್ತಿರುವವನು (4)
7.ಜನರ ನಡುವಿರುವ ಸೇವಕ (3)
8.ಕೊತ್ತಂಬರಿಬೀಜವನ್ನು ಹೀಗೆನ್ನುವರು (3)
9.ಪದ ಹೇಳಿದಾಗ ದೊರೆತ ಬಿಲ್ಲೆ (3)
10.ನಮನವನ್ನು ಹೀಗೆನ್ನಿ (4)
11.ಒಳ್ಳೆಯ ಕಾಲವಿದು (4)
13.ಎಡಗೈಯನ್ನೇ ಉಪಯೋಗಿಸಿ ಕೆಲಸ ಮಾಡುವವನು (3)



4689ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮನಸ್ತಾಪ 3.ಗುಣಗಾನ 5.ರಸನ 6.ವಿವಾದ 8.ನರಕ 9.ನವೀನ 10.ಕಮರಿ 12.ಮಜೂರಿ 14.ಕಳೇಬರ 15.ಹರಿದಾರಿ

ಮೇಲಿಂದ ಕೆಳಕ್ಕೆ: 1.ಮರಾವಿ 2.ಪರ 3.ಗುನ 4.ನಡುಕ 7.ಹಯವದನ 8.ನಯವಂಚಕ 9.ನರ್ತಕ 11.ರಿಪೇರಿ 12.ಮರ 13.ರಿಹ

ಸುಡೊಕು 5076

				2		3		5
3		6	5		8		1	
	4			7	3	2		6
	6						7	9
9		1		8				
						1		8
		2	3		7		5	
7	1					6		3
		3	4		2		9	1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5075 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಇ.ವಿ. ಸ್ಕೂಟರ್ ಅನಾವರಣ ಮಾಡಿದ ಓಲಾ ಕಂಪನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ ಎಲೆಕ್ಟ್ರಿಕ್ ಕಂಪನಿಯು ವಿದ್ಯುತ್ ಚಾಲಿತ ಎರಡು ದ್ವಿಚಕ್ರ ವಾಹನಗಳನ್ನು ಭಾನುವಾರ ಅನಾವರಣ ಮಾಡಿದೆ. ಎಸ್1 ಹೆಸರಿನ ಸ್ಕೂಟರ್ ಬೆಲೆ ₹ 99,999. ಎಸ್1 ಪ್ರೊ ಹೆಸರಿನ ಸ್ಕೂಟರ್ ಬೆಲೆಯು ₹ 1,29,999 ಎಂದು ಕಂಪನಿ ತಿಳಿಸಿದೆ.

ಎಸ್1 ಸ್ಕೂಟರ್‌ನಲ್ಲಿ ಒಂದು ಬಾರಿ ಚಾರ್ಜ್ ಮಾಡಿ 121 ಕಿ.ಮೀ. ಪ್ರಯಾಣಿಸಬಹುದು. ಇದರ ಗರಿಷ್ಠ ವೇಗ ಗಂಟೆಗೆ 90 ಕಿ.ಮೀ. ಎಸ್1 ಪ್ರೊ ಸ್ಕೂಟರ್ ಒಂದು ಬಾರಿ ಪೂರ್ತಿಯಾಗಿ ಚಾರ್ಜ್ ಆದರೆ 181 ಕಿ.ಮೀ. ಪ್ರಯಾಣ ಮಾಡಬಹುದು. ಇದರ ಗರಿಷ್ಠ ವೇಗ ಗಂಟೆಗೆ 115 ಕಿ.ಮೀ ಎಂದು ಕಂಪನಿ ಹೇಳಿದೆ. ಎಸ್1 ಪ್ರೊ ಸ್ಕೂಟರ್ ನಿಂತ ಸ್ಥಿತಿಯಿಂದ ಪ್ರತಿ ಗಂಟೆಗೆ 40 ಕಿ.ಮೀ. ವೇಗವನ್ನು ಕೇವಲ ಮೂರು ಸೆಕೆಂಡ್‌ಗಳಲ್ಲಿ ತಲುಪುತ್ತದೆ ಎಂದು ಕೂಡ ಓಲಾ ಹೇಳಿದೆ.

ಈ ದ್ವಿಚಕ್ರ ವಾಹನಗಳನ್ನು ಸೆಪ್ಟೆಂಬರ್ 8ರಿಂದ ಖರೀದಿಸಬಹುದು, ಈ ಮಾದರಿಯನ್ನು ಅಕ್ಟೋಬರ್‌ನಲ್ಲಿ ಗ್ರಾಹಕರಿಗೆ ವಿತರಿಸಲಾಗುತ್ತದೆ ಎಂದು ಓಲಾ ಕಂಪನಿಯ ಸಹ ಸಂಸ್ಥಾಪಕ ಭವೀಶ್ ಅಗರ್ವಾಲ್ ಹೇಳಿದ್ದಾರೆ. ₹ 499 ಪಾವತಿಸಿ ಎಸ್1 ಸ್ಕೂಟರ್ ಬುಕ್ ಮಾಡಲು ಅವಕಾಶ ಇದೆ.

ಎಸ್1 ಸ್ಕೂಟರ್ 4 ಗಂಟೆ 48 ನಿಮಿಷಗಳಲ್ಲಿ, ಎಸ್1 ಪ್ರೊ 6 ಗಂಟೆ 30 ನಿಮಿಷಗಳಲ್ಲಿ ಪೂರ್ತಿಯಾಗಿ ಚಾರ್ಜ್ ಆಗುತ್ತದೆ. 18 ನಿಮಿಷಗಳ ಕಾಲ ಫಾಸ್ಟ್ ಚಾರ್ಜ್ ಮಾಡಿದಲ್ಲಿ 75 ಕಿ.ಮೀ. ಪ್ರಯಾಣ ಮಾಡಲು ಸಾಧ್ಯವಾಗುತ್ತದೆ. 7 ಇಂಚುಗಳ ಟಚ್‌ಸ್ಕ್ರೀನ್ ಡಿಸ್‌ಪ್ಲೇ ಇದೆ. ನಾರ್ಮಲ್, ಸ್ಪೋರ್ಟ್ ಮತ್ತು ಹೈಪರ್ ಡ್ರೈವ್ ಮೋಡ್‌ಗಳು ಇದರಲ್ಲಿ ಲಭ್ಯವಿರಲಿವೆ ಎಂದು ಕಂಪನಿ ಹೇಳಿದೆ.

ಎಸ್1 ಮಾದರಿಯ ಸ್ಕೂಟರ್ ಸಬ್ಸಿಡಿಯ ಕಾರಣದಿಂದಾಗಿ ಗುಜರಾತ್‌ನಲ್ಲಿ ಕೇವಲ ₹ 79 ಸಾವಿರಕ್ಕೆ ಲಭ್ಯವಾಗಲಿದೆ.

'5 ಲಕ್ಷ ಕೋಟಿ ಡಾಲರ್ ಅರ್ಥ ವ್ಯವಸ್ಥೆ ಅನುಮಾನ'

ನವದೆಹಲಿ (ಪಿಟಿಐ): 2024–25ರೊಳಗೆ ಭಾರತವು 5 ಲಕ್ಷ ಕೋಟಿ ಡಾಲರ್ ಮೌಲ್ಯದ ಅರ್ಥ ವ್ಯವಸ್ಥೆಯಾಗಿ ಬೆಳೆಯುವ ಸಾಧ್ಯತೆ ತೀರಾ ಕಡಿಮೆ ಎಂದು ಮೆಸ್ಯಾಚುಸೆಟ್ಸ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರಜ್ಞ ಪ್ರೊ. ವಂಶಿ ವಕುಲಾಭರಣಂ ಹೇಳಿದ್ದಾರೆ. ಕೋವಿಡ್–19ರಿಂದಾಗಿ ಉಂಟಾದ ಹಿಂಜರಿತ ಇದಕ್ಕೆ ಕಾರಣ ಎಂದು ಅವರು ಹೇಳಿದ್ದಾರೆ.

'ಈಗ ದೇಶದ ಅರ್ಥ ವ್ಯವಸ್ಥೆಯ ಗಾತ್ರವು 3 ಲಕ್ಷ ಕೋಟಿ ಡಾಲರ್‌ಗಿಂತ ಕಡಿಮೆ ಇದೆ. ಇದು ನಾಲ್ಕು ವರ್ಷಗಳಲ್ಲಿ 5 ಲಕ್ಷ ಕೋಟಿ ಡಾಲರ್ ಮೌಲ್ಯದ್ದಾಗಿ ಬೆಳೆಯಬೇಕು ಎಂದಾದರೆ ಪ್ರತಿ ವರ್ಷ ಶೇಕಡ 13ಕ್ಕಿಂತ ಹೆಚ್ಚಿನ ಪ್ರಮಾಣದ ಏರಿಕೆ ದಾಖಲಿಸಬೇಕು' ಎಂದು ಅವರು ಹೇಳಿದ್ದಾರೆ. ಎಲ್ಲವೂ ನಿರೀಕ್ಷೆಯಂತೆ ನಡೆದರೂ ಈ ಪ್ರಮಾಣದ ಬೆಳವಣಿಗೆ ಸಾಧಿಸಲು ಆಗಲಿಕ್ಕಿಲ್ಲ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಣದುಬ್ಬರ ಪ್ರಮಾಣದ ಹೆಚ್ಚಳದಿಂದ ಬಡವರನ್ನು ರಕ್ಷಿಸಬೇಕು. ಅಲ್ಪಾವಧಿಯಲ್ಲಿ ಬಡವರಿಗೆ ತೊಂದರೆ ಆಗದಂತೆ ಸರ್ಕಾರವು ಕ್ರಮ ಕೈಗೊಳ್ಳಬೇಕು ಎಂದು ಅವರು ಸಲಹೆ ಮಾಡಿದ್ದಾರೆ.

ಎಂಎಫ್: ವಿಧಗಳನ್ನು ತಿಳಿಯದೆ ಹೂಡಿಕೆ ಬೇಡ

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಎಕ್ಸಿಸ್ ಮ್ಯೂಚುವಲ್ ಫಂಡ್, ಐಸಿಐಸಿಐ ಮ್ಯೂಚುವಲ್ ಫಂಡ್, ಡಿಎಸ್‌ಪಿ ಮಿಡ್ ಕ್ಯಾಪ್ ಫಂಡ್, ಮಿರಾಯ್ ಅಸೆಟ್ ಫಂಡ್, ಪರಾಗ್ ಪರೀಕ್ ಫಂಡ್... ಅಬ್ಬಬ್ಬಾ ಒಂದಾ ಎರಡಾ? ಭಾರತದಲ್ಲಿರುವ ಸುಮಾರು 44 ಮ್ಯೂಚುಯಲ್ ಫಂಡ್ ಹೌಸ್‌ಗಳು ನೂರಾರು ಮ್ಯೂಚುವಲ್ ಫಂಡ್ ಯೋಜನೆಗಳನ್ನು ಹುಟ್ಟುಹಾಕಿವೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಫಂಡ್‌ಗಳಿರುವಾಗ ಹೂಡಿಕೆ ಮಾಡುವುದು ಎಲ್ಲಿ ಎನ್ನುವುದೇ ಹೂಡಿಕೆದಾರನಲ್ಲಿ ಇರುವ ಗೊಂದಲ.

ಈ ಗೊಂದಲಕ್ಕೆ ಸಿಲುಕಿದ ಎಷ್ಟೋ ಮಂದಿ ತಮಗೆ ಸೂಕ್ತವಲ್ಲದ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುವ ಉದಾಹರಣೆಗಳು ಇವೆ. ಇದನ್ನು ತಪ್ಪಿಸುವ ಸಲುವಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮ್ಯೂಚುವಲ್ ಫಂಡ್‌ಗಳನ್ನು ಪ್ರಮುಖವಾಗಿ ಮೂರು ಬಗೆಗಳಲ್ಲಿ ವರ್ಗೀಕರಿಸಿದೆ. ಈ ವಿಂಗಡಣೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಹೂಡಿಕೆಯ ಹಾದಿ ಸುಗಮ.

1. ಈಕ್ವಿಟಿ ಮ್ಯೂಚುವಲ್ ಫಂಡ್: ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರಿಂದ ಸಂಗ್ರಹಿಸಿದ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತವೆ. ಈ ಹೂಡಿಕೆಯಲ್ಲಿ ರಿಸ್ಕ್ ಜಾಸ್ತಿ ಇದ್ದು, ಲಾಭಗಳಿಸುವ ಅವಕಾಶವೂ ಹೆಚ್ಚಿಗೆ ಇರುತ್ತದೆ. ದೀರ್ಘಾವಧಿ, ಅಂದರೆ 5ರಿಂದ 10 ವರ್ಷಗಳ ಅವಧಿಯ ಹೂಡಿಕೆ ಆಗಿದ್ದರೆ ಈಕ್ವಿಟಿ ಮ್ಯೂಚುವಲ್ ಫಂಡ್ ಸೂಕ್ತ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಶೇಕಡ 12ರಿಂದ ಶೇ 13ರಷ್ಟು ಲಾಭ ನಿರೀಕ್ಷಿಸಬಹುದು. ಆದರೆ ಈ ಹೂಡಿಕೆಯಲ್ಲಿ ನಿಶ್ಚಿತ ಠೇವಣಿಗಳಲ್ಲಿ ಇರುವಂತೆ ಇಂತಿಷ್ಟೇ ಬಡ್ಡಿ ಲಾಭ ಸಿಗುತ್ತದೆ ಎನ್ನುವ ಖಾತರಿ ಇರುವುದಿಲ್ಲ. ಈಕ್ವಿಟಿ ಮ್ಯೂಚುವಲ್ ಫಂಡ್ ಅಡಿಯಲ್ಲಿ ಪ್ರಮುಖವಾಗಿ ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳು ಇವೆ. ಲಾರ್ಜ್ ಕ್ಯಾಪ್ ಫಂಡ್‌ಗಳು ದೊಡ್ಡ ಪ್ರಮಾಣದ ಕಂಪನಿಗಳಲ್ಲಿ ಹೂಡಿಕೆ ಮಾಡಿದರೆ, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳು ಕ್ರಮವಾಗಿ ಮಧ್ಯಮ ಮತ್ತು ಸಣ್ಣ ಪ್ರಮಾಣದ ಕಂಪನಿಗಳಲ್ಲಿ ಹಣವನ್ನು ತೊಡಗಿಸುತ್ತವೆ.

2. ಡೆಟ್ ಮ್ಯೂಚುವಲ್ ಫಂಡ್: ಡೆಟ್ (ಸಾಲಪತ್ರ) ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆದಾರರಿಂದ ಸಂಗ್ರಹಿಸುವ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದಿಲ್ಲ. ಸರ್ಕಾರಿ ಬಾಂಡ್‌ಗಳು, ಡಿಬೆಂಚರ್‌ಗಳು, ಕಾರ್ಪೊರೇಟ್ ಎಫ್.ಡಿ.ಗಳು, ಟ್ರೆಷರಿ ಬಿಲ್‌ಗಳಲ್ಲಿ ಹಣ ಹೂಡಿಕೆ ಮಾಡಲಾಗುತ್ತದೆ. ಇಲ್ಲಿ ಹೂಡಿಕೆದಾರನ ಹಣಕ್ಕೆ ಹೆಚ್ಚು ರಿಸ್ಕ್ ಇರುವುದಿಲ್ಲ. ಹೂಡಿಕೆ ಮೊತ್ತದ ಮೇಲೆ ಸಿಗುವ ಲಾಭದ ಪ್ರಮಾಣವೂ ಇಲ್ಲಿ ಈಕ್ವಿಟಿಗಿಂತ ಕಡಿಮೆ. ಹೂಡಿಕೆಯಲ್ಲಿ ಹೆಚ್ಚು ರಿಸ್ಕ್ ಬೇಡ ಎನ್ನುವವರು ಮತ್ತು ಅಲ್ಪಾವಧಿಯ ಹೂಡಿಕೆ ಮಾಡಬೇಕು ಎನ್ನುವವರು ಡೆಟ್ ಫಂಡ್ ಪರಿಗಣಿಸಬಹುದು.

ಡೆಟ್ ಫಂಡ್‌ಗಳಲ್ಲಿ ಹೂಡಿಕೆ ಅವಧಿ ಆಧರಿಸಿ ಲಿಕ್ವಿಡ್ ಫಂಡ್, ಮನಿ ಮಾರ್ಕೆಟ್ ಫಂಡ್, ಡೈನಾಮಿಕ್ ಬಾಂಡ್ ಫಂಡ್, ಕಾರ್ಪೊರೇಟ್ ಬಾಂಡ್ ಫಂಡ್, ಬ್ಯಾಂಕಿಂಗ್ ಆ್ಯಂಡ್ ಪಿಎಸ್‌ಯು ಫಂಡ್, ಗಿಲ್ಟ್ ಫಂಡ್, ಕ್ರೆಡಿಟ್ ರಿಸ್ಕ್ ಫಂಡ್, ಫ್ಲೋಟರ್ ಫಂಡ್, ಓವರ್ ನೈಟ್ ಫಂಡ್, ಅಲ್ಟ್ರಾ ಶಾರ್ಟ್ ಟರ್ಮ್ ಡ್ಯುರೇಷನ್ ಫಂಡ್, ಲೋ ಡ್ಯುರೇಷನ್ ಫಂಡ್, ಮೀಡಿಯಂ ಡ್ಯುರೇಷನ್ ಫಂಡ್, ಮೀಡಿಯಂ ಟು ಲಾಂಗ್ ಡ್ಯುರೇಷನ್ ಫಂಡ್, ಲಾಂಗ್ ಡ್ಯುರೇಷನ್ ಫಂಡ್ ಆಯ್ಕೆಗಳಿವೆ.

3. ಹೈಬ್ರಿಡ್ ಮ್ಯೂಚುವಲ್ ಫಂಡ್: ಈಕ್ವಿಟಿ ಮತ್ತು ಡೆಟ್ ಮ್ಯೂಚುವಲ್ ಫಂಡ್‌ಗಳ ಮಿಶ್ರಣವೇ ಹೈಬ್ರಿಡ್ ಮ್ಯೂಚುವಲ್ ಫಂಡ್. ಅಂದರೆ ಹೆಚ್ಚು ರಿಸ್ಕ್ ಇರುವ ಕಂಪನಿ ಷೇರುಗಳು ಮತ್ತು ಕಡಿಮೆ ರಿಸ್ಕ್ ಇರುವ ಬಾಂಡ್, ಡಿಬೆಂಚರ್, ಕಾರ್ಪೊರೇಟ್ ಎಫ್.ಡಿ, ಗವರ್ನಮೆಂಟ್ ಸೆಕ್ಯೂರಿಟೀಸ್‌ಗಳಲ್ಲಿ ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳು ಹೂಡಿಕೆ ಮಾಡುತ್ತವೆ. ಇಲ್ಲಿ ರಿಸ್ಕ್ ಮತ್ತು ಲಾಭಾಂಶ ಎರಡೂ ಕೂಡ ಮಧ್ಯಮ ಪ್ರಮಾಣದಲ್ಲಿರುತ್ತವೆ. ಹೈಬ್ರಿಡ್ ಫಂಡ್‌ಗಳ ಅಡಿಯಲ್ಲಿ ಈಕ್ವಿಟಿ ಓರಿಯಂಟೆಡ್ ಹೈಬ್ರಿಡ್ ಫಂಡ್, ಡೆಟ್ ಓರಿಯಂಟೆಡ್ ಹೈಬ್ರಿಡ್ ಫಂಡ್, ಬ್ಯಾಲೆನ್ಸ್ಡ್ ಫಂಡ್, ಮಂತ್ಲಿ ಇನ್‌ಕಂ ಪ್ಲಾನ್ಸ್ ಮತ್ತು ಆರ್ಬಿಟ್ರೇಜ್ ಫಂಡ್‌ಗಳಿವೆ.

ನೆನಪಿಡಿ: ಯಾವ ಉದ್ದೇಶಕ್ಕೆ ಹೂಡಿಕೆ ಮಾಡುತ್ತಿದ್ದೀರಿ, ಎಷ್ಟು ರಿಸ್ಕ್ ತೆಗೆದುಕೊಳ್ಳಬಹುದು ಮತ್ತು ಎಷ್ಟು ಸಮಯದವರೆಗೆ ನೀವು ಹೂಡಿಕೆ ಮಾಡಬಹುದು ಎನ್ನುವ ಅಂಶಗಳನ್ನು ಪರಿಗಣಿಸಿ ಯಾವ ಫಂಡ್ ಸೂಕ್ತ ಎಂಬುದನ್ನು ನಿರ್ಧರಿಸುವುದು ಸೂಕ್ತ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಹೊಸ ದಾಖಲೆ ಬರೆದ ಷೇರುಪೇಟೆ

ಷೇರುಪೇಟೆ

ಆಗಸ್ಟ್ 13ಕ್ಕೆ ಕೊನೆಯಾದ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಸಾರ್ವಕಾಲಿಕ ಏರಿಕೆ ಕಂಡು ಹೊಸ ದಾಖಲೆ ಬರೆದಿವೆ. 55,437 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಮತ್ತು 16,529 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ತಲಾ ಶೇ 1.8ರಷ್ಟು ಏರಿಕೆ ದಾಖಲಿಸಿವೆ. ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.24ರಷ್ಟು ಕುಸಿತ ಕಂಡಿದ್ದರೆ ಸ್ಮಾಲ್ ಕ್ಯಾಪ್ ಶೇ 1.68ರಷ್ಟು ತಗ್ಗಿದೆ.

ಮುಂಬರುವ ತ್ರೈಮಾಸಿಕಗಳಲ್ಲಿ ಕಂಪನಿಗಳು ಉತ್ತಮ ಫಲಿತಾಂಶ ದಾಖಲಿಸಬಹುದು ಎನ್ನುವ ಆಶಾವಾದದ ಜತೆಗೆ ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಯಥಾಸ್ಥಿತಿಯಲ್ಲಿಟ್ಟು ಅರ್ಥ ವ್ಯವಸ್ಥೆಯಲ್ಲಿ ನಗದು ಹರಿವಿಗೆ ಅವಕಾಶ ಮಾಡಿಕೊಟ್ಟಿರುವುದನ್ನು ಮಾರುಕಟ್ಟೆ ಸಕಾರಾತ್ಮಕವಾಗಿ ಸ್ವೀಕರಿಸಿದೆ. ಕೋವಿಡ್ ನಡುವೆಯೂ ಆರ್ಥಿಕ ಚಟುವಟಿಕೆಗಳು ನಡೆಯುತ್ತಿರುವುದು ಷೇರುಪೇಟೆಗೆ ಪೂರಕವಾಗಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ವಲಯ ಶೇ 4.4ರಷ್ಟು, ಎಫ್‌ಎಂಸಿಜಿ ಶೇ 1.8ರಷ್ಟು ಜಿಗಿದಿವೆ. ಮಾಧ್ಯಮ ವಲಯ ಶೇ 0.6ರಷ್ಟು, ಫಾರ್ಮಾ ವಲಯ ಶೇ 3.2ರಷ್ಟು ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ವಲಯ ಶೇ 2.2ರಷ್ಟು ಇಳಿಕೆ ಕಂಡಿವೆ.

ಗಳಿಕೆ–ಇಳಿಕೆ: ನಿಫ್ಟಿಯಲ್ಲಿ ಟೆಕ್ ಮಹೀಂದ್ರ ಶೇ 9.4ರಷ್ಟು, ಎಚ್‌ಸಿಎಲ್ ಟೆಕ್ ಶೇ 6.7ರಷ್ಟು, ಪವರ್ ಗ್ರಿಡ್ ಶೇ 5.6ರಷ್ಟು, ಟಿಸಿಎಸ್ ಶೇ 5ರಷ್ಟು, ಇನ್ಫೊಸಿಸ್ ಶೇ 4ರಷ್ಟು, ಏರ್‌ಟೆಲ್ ಶೇ 5ರಷ್ಟು ಏರಿಕೆಯಾಗಿವೆ. ಐಷರ್ ಮೋಟರ್ಸ್ ಶೇ 8ರಷ್ಟು, ಶ್ರೀ ಸಿಮೆಂಟ್ ಶೇ 6.4ರಷ್ಟು, ಡಿಆರ್‌ಎಲ್ ಶೇ 3ರಷ್ಟು, ಹೀರೊ ಮೋಟೊಕಾರ್ಪ್ ಶೇ 2.3ರಷ್ಟು ಇಳಿಕೆಯಾಗಿವೆ.

ಮುನ್ನೋಟ: ಷೇರುಪೇಟೆಯಲ್ಲಿ ದೊಡ್ಡ (ಲಾರ್ಜ್ ಕ್ಯಾಪ್) ಕಂಪನಿಗಳು ಉತ್ತಮ ಪ್ರಗತಿ ಸಾಧಿಸಿರುವುದನ್ನು ಕಳೆದ ವಾರ ನೋಡಿದ್ದೇವೆ. ಮಿಡ್ ಕ್ಯಾಪ್ ಅಂದರೆ, ಮಧ್ಯಮ ಪ್ರಮಾಣದ ಕಂಪನಿಗಳು ಮತ್ತು ಸ್ಮಾಲ್ ಕ್ಯಾಪ್ ಅಂದರೆ, ಸಣ್ಣ ಪ್ರಮಾಣದ ಕಂಪನಿಗಳು ಕುಸಿತ ದಾಖಲಿಸಿರುವುದು ಕಂಡುಬಂದಿದೆ. ಒಟ್ಟಾರೆ ಚಿತ್ರಣ ನೋಡಿದಾಗ ಲಾರ್ಜ್, ಮಿಡ್ ಅಥವಾ ಸ್ಮಾಲ್ ಕ್ಯಾಪ್ ಎನ್ನುವುದಕ್ಕಿಂದ ನೀವು ಹೂಡಿಕೆ ಮಾಡಿರುವ ಕಂಪನಿ ಮೂಲಭೂತವಾಗಿ ಎಷ್ಟು ಉತ್ತಮ ಸ್ಥಿತಿಯಲ್ಲಿದೆ ಎನ್ನುವುದರ ಆಧಾರದಲ್ಲಿ ಷೇರಿನ ಬೆಲೆ ಏರಿಕೆಯಾಗುತ್ತದೋ ಇಳಿಕೆಯಾಗುತ್ತದೋ ಎನ್ನುವುದು ನಿರ್ಧಾರವಾಗುತ್ತಿದೆ.

ಅಂದರೆ ಉತ್ತಮ ಕಂಪನಿಗಳನ್ನು ಆಯ್ಕೆ ಮಾಡಿ ದೀರ್ಘಾವಧಿಗೆ ಹೂಡಿಕೆ ಮಾಡುವವರು ಚಿಂತಿಸಬೇಕಿಲ್ಲ. ಆದರೆ ಅಲ್ಪಾವಧಿ ಹೂಡಿಕೆ ಮಾಡುವವರಿಗೆ ಏರಿಳಿತದ ರಿಸ್ಕ್ ಇದ್ದೇ ಇದೆ. ಈ ವಾರ ಶಾರ್ಪ್, ಕೆನ್ನಾಮೆಟಲ್ ಇಂಡಿಯಾ ಲಿ., ಶೈನ್ ಫ್ಯಾಷನ್ಸ್ ಇಂಡಿಯಾ, ಬಿಎಫ್ ಯುಟಿಲಿಟೀಸ್ ಲಿ. ಸೇರಿ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮೊಬೈಲ್ ರಫ್ತುದಾರ ದೇಶವಾದ ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನವು ಸ್ಮಾರ್ಟ್ ಫೋನ್‌ಗಳ ತಯಾರಿ ಮತ್ತು ರಫ್ತು ಆರಂಭಿಸಿದೆ. 'ಮ್ಯಾನಿಫ್ಯಾಕ್ಚರ್ ಇನ್ ಪಾಕಿಸ್ತಾನ್' ಎಂಬ ಗುರುತುಳ್ಳ ಫೋನ್‌ಗಳನ್ನು ಪಾಕಿಸ್ತಾನ ಯುನೈಟೆಡ್ ಅರಬ್ ಎಮಿರೆಟ್ಸ್‌ಗೆ (ಯುಎಇ) ರವಾನಿಸಿದೆ.

'ಇನೋವಿ ಟೆಲಿಕಾಂ' ಸಂಸ್ಥೆ ತಯಾರಿಸಿದ 5,500 4ಜಿ ಮೊಬೈಲ್ ಫೋನ್‌ಗಳನ್ನು ಮೊದಲ ಹಂತದಲ್ಲಿ ಶುಕ್ರವಾರ ಯುಎಇಗೆ ರಫ್ತು ಮಾಡಲಾಗಿದೆ ಎಂದು 'ಡಾನ್' ವರದಿ ಮಾಡಿದೆ.

ಪಾಕ್‌ನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ: ಪ್ರತಿಭಟನೆ

ವಾಷಿಂಗ್ಟನ್ (ಪಿಟಿಐ): ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂದು ಆರೋಪಿಸಿ ಅಮೆರಿಕದಲ್ಲಿರುವ ಬಲೂಚ್, ಸಿಂಧಿ ಮತ್ತು ಅಫ್ಗಾನ್ ಸಮುದಾಯದ ಸದಸ್ಯರು ಸೇರಿದಂತೆ ಹಲವು ವಲಸಿಗರು ಶಾಂತಿಯುತ ಪ್ರತಿಭಟನೆ ನಡೆಸಿದರು.

ಅಮೆರಿಕದಲ್ಲಿರುವ ಪಾಕಿಸ್ತಾನ ರಾಯಭಾರಿ ಕಚೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ ಬಾಂಗ್ಲಾದೇಶ ಮತ್ತು ಗಿಲ್ಗಿಟ್– ಬಾಲ್ಟಿಸ್ತಾನ ಪ್ರದೇಶದ ವಲಸೆ ಕಾರ್ಮಿಕರು ಕೂಡ ಭಾಗವಹಿಸಿದ್ದರು.

'ಪಾಕಿಸ್ತಾನದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಗುತ್ತಿದೆ. ಅಂತರರಾಷ್ಟ್ರೀಯ ಸಮುದಾಯ ಮತ್ತು ಅಮೆರಿಕ ಪಾಕಿಸ್ತಾನದ ಮೇಲೆ ನಿರ್ಬಂಧ ವಿಧಿಸುವಂತೆ ಒತ್ತಾಯಿಸುತ್ತೇವೆ' ಎಂದು ಬಲೂಚ್ ರಾಷ್ಟ್ರೀಯ ಆಂದೋಲನದ ಸದಸ್ಯ ನಬಿ ಬಕ್ಷಾ ಬಲೂಚ್ ತಿಳಿಸಿದ್ದಾರೆ.

ಈ ಪ್ರತಿಭಟನೆಯನ್ನು 'ಎಕ್ಸ್‌ಪೋಸ್–ಪಾಕಿಸ್ತಾನ್' ಅಭಿಯಾನ ಸಮಿತಿಯು ಆಯೋಜಿಸಿದ್ದು, ಪ್ರತಿಭಟನಕಾರರು ಕಾರು ರ‍್ಯಾಲಿ ಮೂಲಕ ಅಮೆರಿಕದಲ್ಲಿರುವ ಪಾಕಿಸ್ತಾನದ ರಾಯಭಾರ ಕಚೇರಿಗೆ ಆಗಮಿಸಿದರು.

ಆಗಸ್ಟ್ 14, ಆಜಾದಿಯ (ಸ್ವಾತಂತ್ರ್ಯ) ದಿನವಲ್ಲ, ಇದು ಪಾಕಿಸ್ತಾನವು ಬಲೂಚಿಸ್ತಾನ ಮತ್ತು ಗಿಲ್ಗಿಟ್– ಬಾಲ್ಟಿಸ್ತಾನವನ್ನು ಬಲವಂತವಾಗಿ ಆಕ್ರಮಣ ಮಾಡಿಕೊಂಡ ದಿನವಾಗಿದೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ವಿಶ್ವಸಂಸ್ಥೆಯ ನಿಷೇಧಿತ ಉಗ್ರ ಸಂಘಟನೆಯ ಪಟ್ಟಿಯಲ್ಲಿರುವ ತಾಲಿಬಾನ್‌ಗೆ ಪಾಕಿಸ್ತಾನ ಬಹಿರಂಗವಾಗಿ ಆರ್ಥಿಕ ನೆರವು ಒದಗಿಸುತ್ತಿದೆ. ಇದು ವಿಶ್ವಸಂಸ್ಥೆ ಮತ್ತು ಅಂತರರಾಷ್ಟ್ರೀಯ ಸಮುದಾಯಗಳ ನಿಯಮಗಳ ಉಲ್ಲಂಘನೆಯಾಗಿದೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಮತ್ತು ಮಿಲಿಟರಿ ಸಾಮಗ್ರಿಗಳ ಮಾರಾಟವನ್ನು ನಿಷೇಧಿಸಬೇಕು. ಜತೆಗೆ, ಪಾಕಿಸ್ತಾನವನ್ನು ಎಫ್‌ಎಟಿಎಫ್‌ಯು ಕಪ್ಪು ಪಟ್ಟಿಗೆ ಸೇರಿಸಬೇಕು' ಎಂದು ಒತ್ತಾಯಿಸಿದರು.

ಪ್ರವಾಸ

ಮಿರ್ಜಾಪುರದಲ್ಲಿನ ವಿಂಧ್ಯಾಚಲ್ ಜಲಪಾತವನ್ನು ನೋಡಲು ಮುಗಿಬಿದ್ದ ಜನರು – ಪಿಟಿಐ ಚಿತ್ರ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹427

ಮಲೇಷ್ಯಾ: ಬಹುಮತ ಕಳೆದುಕೊಂಡ ಪ್ರಧಾನಿ ರಾಜೀನಾಮೆಗೆ ನಿರ್ಧಾರ

ಕೌಲಾಲಂಪುರ್ (ಎಪಿ): ಬಹುಮತ ಸಾಬೀತಿಗೆ ಬೆಂಬಲ ಪಡೆಯುವಲ್ಲಿ ವಿಫಲವಾಗಿರುವ ಮಲೇಷ್ಯಾದ ಪ್ರಧಾನಿ ಮುಹಿದ್ದೀನ್ ಯಾಸೀನ್ ರಾಜೀನಾಮೆ ನೀಡಲು ಭಾನುವಾರ ನಿರ್ಧರಿಸಿದ್ದಾರೆ.

ಮುಹಿದ್ದೀನ್ ನೇತೃತ್ವದ ಮೈತ್ರಿಕೂಟದ ಆಡಳಿತದಲ್ಲಿ ಅತಿದೊಡ್ಡ ಪಕ್ಷವಾಗಿದ್ದ ಯುಎಂಎನ್‌ಒ ಪಕ್ಷ ಬೆಂಬಲವನ್ನು ಹಿಂದಕ್ಕೆ ಪಡೆದಿದೆ. ಈ ಪಕ್ಷದ ಇಬ್ಬರು ಸದಸ್ಯರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದರಿಂದ ಮುಹಿದ್ದೀನ್ ನೇತೃತ್ವದ ಸರ್ಕಾರ ಅಲ್ಪಮತಕ್ಕೆ ಕುಸಿದಿದೆ. ವಿರೋಧ ಪಕ್ಷಗಳ ಬೆಂಬಲ ಪಡೆಯುವ ಪ್ರಯತ್ನ ಸಹ ವಿಫಲವಾಗಿದ್ದರಿಂದ ಅವರು ರಾಜೀನಾಮೆಗೆ ಮುಂದಾಗಿದ್ದಾರೆ.

'ಸೋಮವಾರ ಸಚಿವ ಸಂಪುಟದ ವಿಶೇಷ ಸಭೆ ನಡೆಯಲಿದೆ. ಸಭೆಯ ನಂತರ ಮುಹಿದ್ದೀನ್ ಅವರು ಅರಮನೆಗೆ ತೆರಳಿ ಮಲೇಷ್ಯಾ ರಾಜನಿಗೆ ರಾಜೀನಾಮೆ ಪತ್ರ ಸಲ್ಲಿಸಲಿದ್ದಾರೆ' ಎಂದು ಪ್ರಧಾನಮಂತ್ರಿ ಕಚೇರಿಯ ಸಚಿವ ಮೊಹಮ್ಮದ್ ರೆಜುವಾನ್ ಮೊಹಮ್ಮದ್ ಯೂಸುಫ್ ತಿಳಿಸಿದ್ದಾರೆ.

ದೋಣಿ ಮಗುಚಿ 24 ಮಂದಿ ನಾಪತ್ತೆ

ಢಾಕಾ (ಎಪಿ): ಬಂಗಾಳಕೊಲ್ಲಿಯಲ್ಲಿ ದೊಡ್ಡದಾದ ದೋಣಿಯು ಮಗುಚಿದ್ದು, ಅದರಲ್ಲಿ ತೆರಳುತ್ತಿದ್ದ 24ಕ್ಕೂ ಅಧಿಕ ರೋಹಿಂಗ್ಯಾ ವಲಸಿಗರು ನಾಪತ್ತೆಯಾಗಿದ್ದಾರೆ. ಅವರು ಸಮುದ್ರದಲ್ಲಿ ಮುಳುಗಿರುವ ಭೀತಿ ಇದೆ ಎಂದು ವಿಶ್ವಸಂಸ್ಥೆ ಮತ್ತು ಬಾಂಗ್ಲಾದೇಶದ ಪೊಲೀಸರು ತಿಳಿಸಿದ್ದಾರೆ.

ಮ್ಯಾನ್ಮಾರ್ ಗಡಿಗೆ ಹೊಂದಿಕೊಂಡಿದ್ದ ಶಿಬಿರಗಳಲ್ಲಿದ್ದ ಸಾವಿರಾರು ವಲಸಿಗರನ್ನು ದ್ವೀಪ ಪ್ರದೇಶವೊಂದಕ್ಕೆ ಸ್ಥಳಾಂತರಿಸಲಾಗುತ್ತಿದೆ. ಈ ಪ್ರಕ್ರಿಯೆಯನ್ನು ವಿಶ್ವಸಂಸ್ಥೆ, ಮಾನವ ಹಕ್ಕುಗಳ ಸಂಘಟನೆಗಳು ಟೀಕಿಸಿದ್ದು, ದ್ವೀಪ ಪ್ರದೇಶವು ವಾಸಕ್ಕೆ ಯೋಗ್ಯಕರವಲ್ಲ ಎಂದು ಅಭಿಪ್ರಾಯಪಟ್ಟಿದ್ದವು.

ವಲಸಿಗರನ್ನು ಒಯ್ಯುತ್ತಿದ್ದ ದೋಣಿ ಆ. 14ರ ಬೆಳಿಗ್ಗೆ ಭಸನ್ ಚರ್ ದ್ವೀಪದ ಬಳಿ ಮುಗುಚಿದೆ ಎಂದು ಮಾಹಿತಿ ನೀಡಲಾಗಿದೆ. ಮಹಿಳೆಯರು, ಮಕ್ಕಳು ಸೇರಿದಂತೆ ಹಲವು ಮುಳುಗಿದ್ದಾರೆ. ಆದರೆ, ಎಷ್ಟು ಜನರಿದ್ದರು ಎಂಬ ಮಾಹಿತಿ ಇಲ್ಲ ಎಂದು ವಿಶ್ವಸಂಸ್ಥೆಯ ವಲಸಿಗರ ಸಂಸ್ಥೆಯು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದೆ.

ನೋಖಾಲಿ ಜಿಲ್ಲೆಯ ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ, 'ಮಹಿಳೆಯರು ಮತ್ತು ಮಕ್ಕಳು ಒಳಗೊಂಡಂತೆ ಸುಮಾರು 40 ಮಂದಿ ವಲಸಿಗರು ದೋಣಿಯಲ್ಲಿ ಪ್ರಯಾಣಿಸುತ್ತಿದ್ದರು, ಸುಮಾರು 14 ಜನರನ್ನು ಮೀನುಗಾರರು ರಕ್ಷಿಸಿದ್ದಾರೆ' ಎಂದು ಹೇಳಿದರು.

ಒಂದು ತಿಂಗಳ ಕಾಲ ತುರ್ತು ಪರಿಸ್ಥಿತಿ ಘೋಷಣೆ: 1800ಕ್ಕೂ ಹೆಚ್ಚು ಮಂದಿಗೆ ಗಾಯ

ಹೈಟಿಯಲ್ಲಿ ಭೂಕಂಪ: ಮೃತರ ಸಂಖ್ಯೆ 304ಕ್ಕೆ ಏರಿಕೆ

ಲೆಸ್ ಕೇಯ್ಸ್ (ಎಪಿ): ದ್ವೀಪ ರಾಷ್ಟ್ರ ಹೈಟಿಯ ಕರಾವಳಿ ಪ್ರದೇಶದಲ್ಲಿ ಶನಿವಾರ ಸಂಭವಿಸಿದ ಪ್ರಬಲ ಭೂಕಂಪದಲ್ಲಿ ಸಾವಿಗೀಡಾದವರ ಸಂಖ್ಯೆ 304ಕ್ಕೆ ಏರಿಕೆಯಾಗಿದ್ದು, ಕನಿಷ್ಠ 1,800 ಮಂದಿಗೆ ಗಾಯಗಳಾಗಿವೆ.

'ಇಲ್ಲಿನ ನೈರುತ್ಯ ಭಾಗದಲ್ಲಿ ಶನಿವಾರ 7.2ರಷ್ಟು ತೀವ್ರತೆಯಲ್ಲಿ ಭೂಕಂಪಿಸಿದ್ದು, ರಾಜಧಾನಿ ಪೋರ್ಟ್–ಔ–ಪ್ರಿನ್ಸ್‌ನಿಂದ ಪಶ್ಚಿಮಕ್ಕೆ 125 ಕಿ.ಮೀ ದೂರದಲ್ಲಿ ಕೇಂದ್ರ ಬಿಂದು ಪತ್ತೆಯಾಗಿದೆ' ಎಂದು ಅಮೆರಿಕದ ಭೂವೈಜ್ಞಾನಿಕ ಸಂಸ್ಥೆ ತಿಳಿಸಿದೆ.

ಈ ಭೂಕುಸಿತದಿಂದಾಗಿ ಕರಾವಳಿ ನಗರ ಲೆಸ್ ಕೇಯ್ಸ್‌ನಲ್ಲಿ ಭಾರಿ ಹಾನಿ ಉಂಟಾಗಿದೆ. ಇಲ್ಲಿ ಶನಿವಾರ ತಡರಾತ್ರಿ ಆರು ಬಾರಿ ಭೂಮಿ ಕಂಪಿಸಿದ ಅನುಭವವಾಗಿದ್ದು, ಭಯದಿಂದ ಹಲವರು ರಸ್ತೆಯಲ್ಲಿ ರಾತ್ರಿ ಕಳೆದಿದ್ದಾರೆ.

ಗಾಯಗೊಂಡವರನ್ನು ಲೆಸ್ ಕೇಯ್ಸ್‌ನಿಂದ ಪೋರ್ಟ್–ಔ–ಪ್ರಿನ್ಸ್‌ಗೆ ಸ್ಥಳಾಂತರಿಸಲು ಮಾಜಿ ಸೆನೆಟರ್‌ವೊಬ್ಬರು ಖಾಸಗಿ ವಿಮಾನವನ್ನು ಬಾಡಿಗೆ ಪಡೆದುಕೊಂಡಿದ್ದಾರೆ.

ಹೈಟಿಯ ಲೆಸ್ ಕೇಯ್ಸ್‌ನಲ್ಲಿ ಸಂಭವಿಸಿದ ಭೂಕಂಪನದಲ್ಲಿ ಹಾನಿಗೊಂಡ ಮನೆಗಳು —ರಾಯಿಟರ್ಸ್ ಚಿತ್ರ

'ಇಲ್ಲಿನ ಆಸ್ಪತ್ರೆಗಳು ಭರ್ತಿಯಾಗಿವೆ. ಗಾಯಾಳುಗಳ ಸಂಖ್ಯೆ ಹೆಚ್ಚುತ್ತಿದೆ. ಸಂತ್ರಸ್ತರಿಗೆ ನೆರವು ನೀಡಲು ಸರ್ಕಾರ ಧಾವಿಸಿದೆ' ಎಂದು ಹೈಟಿಯ ಪ್ರಧಾನಿ ಏರಿಯಲ್ ಹೆನ್ರಿ ಅವರು ಹೇಳಿದ್ದಾರೆ.

ಹೈಟಿಯಾದ್ಯಂತ ಒಂದು ತಿಂಗಳ ತುರ್ತು ಪರಿಸ್ಥಿತಿಯನ್ನು ಘೋಷಿಸಿರುವ ಪ್ರಧಾನಿ ಹೆನ್ರಿ ಅವರು, 'ಭೂಕಂಪದಿಂದ ಉಂಟಾದ ಹಾನಿಯ ಪ್ರಮಾಣದ ಸಂಪೂರ್ಣ ಮಾಹಿತಿ ಲಭ್ಯವಾಗುವವರೆಗೆ ಅಂತರರಾಷ್ಟ್ರೀಯ ನೆರವಿನ ಮೊರೆ ಹೋಗುವುದಿಲ್ಲ. ಅವಶೇಷಗಳಡಿ ಸಿಲುಕಿರುವವರನ್ನು ಆದಷ್ಟು ಬೇಗ ರಕ್ಷಿಸಬೇಕಾಗಿದೆ' ಎಂದರು.

ಶನಿವಾರ ರಾತ್ರಿ ವೇಳೆಗೆ 304 ಮಂದಿ ಮೃತಪಟ್ಟಿದ್ದು, ಹಲವರನ್ನು ರಕ್ಷಣಾ ಸಿಬ್ಬಂದಿ ಅವಶೇಷಗಳಡಿಯಿಂದ ಹೊರತೆಗೆದಿದ್ದಾರೆ. ಈ ಭೂಕಂಪದಲ್ಲಿ 860 ಮನೆಗಳು ಸಂಪೂರ್ಣವಾಗಿ ನಾಶಗೊಂಡಿದ್ದರೆ, 700 ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿವೆ.

'ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಹೈಟಿಗೆ ತಕ್ಷಣವೇ ನೆರವು ಒದಗಿಸುವಂತೆ ಆದೇಶಿಸಿದ್ದಾರೆ. ಇದಕ್ಕಾಗಿ ಯುಎಸ್‌ಎಐಡಿ ಆಡಳಿತಾಧಿಕಾರಿ ಸಮಂತಾ ಪವರ್ ಅವರನ್ನು ಹಿರಿಯ ಅಧಿಕಾರಿಯನ್ನಾಗಿ ನೇಮಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/- ದವರೆಗೆ.9538250222, 9538191333

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ, Office, Company Work ಗೆ ಯುವಕ-ಯುವತಿಯರು ಬೇಕಾಗಿದ್ದಾರೆ.5th,10th, PUC, ITI, Diploma, Any Degree, Pass/Fail, ನೇರನೇಮಕಾತಿ. 16,800-65,000/- ಊಟ ವಸತಿಯೊಂದಿಗೆ 7022366461, 7259673183

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

ಜಿಲ್ಲಾ ತಾಲ್ಲೂಕು,ಸರ್ಕಾರಿ ಕಛೇರಿಗಳಿಗೆ ಏಜೆನ್ಸಿ ಗುತ್ತಿಗೆ ಮುಖಾಂತರ ಶೀಘ್ರಲಿಪಿಗಾರರು/ ಬೆರಳಚ್ಚುಗಾರರು ಬೇಕಾಗಿದ್ದಾರೆ.ವಿದ್ಯಾರ್ಹತೆ ಪಿಯುಸಿ+ಕನ್ನಡ ಇಂಗ್ಲೀಷ ಶೀಘ್ರಲಿಪಿಗಾರ/ಬೆರಳಚ್ಚುಗಾರ, ಪ್ರಥಮ ದರ್ಜೆ ತೇರ್ಗಡೆ ಪ್ರಮಾಣ ಪತ್ರ ಹೊಂದಿರಬೇಕು.ರೋಹನ್ ಗೌಡ: 8073974842

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

Marketing & Sales

WANTED EXPERIENCED Sales Managers for Cement, Contact: 9916449766/ 9986696546, acecemex@gmail.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

Wanted

ಶ್ರೀ ಶಕ್ತಿ ಹೆಲ್ತ್ ಕೇರ್ ನಲ್ಲಿ ಕರ್ನಾಟಕದಾದ್ಯಂತ ಪ್ರಾರಂಭಗೊಳ್ಳುತ್ತಿರುವ ನಮ್ಮ 20ಬ್ರಾಂಚ್‌ಗಳಿಗೆ ಬ್ಯುಸಿನೆಸ್ ಪಾರ್ಟನರ್ ಗಳು ಮತ್ತು ಹೆಲ್ಪರ್ ಯುವಕ ಯವತಿಯರಿಗೆ ಕೆಲಸ ಖಾಲಿ ಇದೆ.ತಿಂಗಳಿಗೆ ವೇತನ: 25,000 ದಿಂದ 30,000 ರ ವರೆಗೆ ಶೇಷಾದ್ರಿಪುರಂ, ಬೆಂಗಳೂರು.ಮೊಬೈಲ್ ನಂ: 9019626612

ನೇರನೇಮಕಾತಿ ಎಲ್ಲಾಜಿಲ್ಲೆಗಳಲ್ಲಿ ಪ್ರಾರಂಭವಾಗಿರುವ ಕಂಪನಿಗಳಿಗೆ, ಆಫೀಸ್‌ಗಳಿಗೆ 7th,ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಗ್ರಿ B.Com (ವಿದ್ಯಾರ್ಹತೆಯಿಲದಲ್ಲದವರಿಗೂ) ವಸತಿಯೂಟದೊಂದಿಗೆ 16,700/-56,000/- 8884412622, 9986083666

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೇಲ್ಪಟ್ಟವರಿಗೆ ಉಚಿತ ಊಟವಸತಿಯೊಂದಿಗೆ 11000 ರಿಂದ 16000 ವರೆಗೆ ಸಂಬಳ. ಫೋ: 8139962883

ಭವಿಷ್ಯ

Astrology

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

★॥ಶ್ರೀಲಕ್ಷ್ಮಿ ನರಸಿಂಹಸ್ವಾಮಿ ಜ್ಯೋತಿಷ್ಯರು॥★ ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ,ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಶಾಶ್ವತ ಪರಿಹಾರ. ರಾಘವೇಂದ್ರ ಗುರೂಜಿ. 7337678002

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ_ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100%ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ವೈವಾಹಿಕ

Grooms Wanted

Hindu

ನಾಯಕ ಜಾತಿ ವಧು ಬೇಕಾಗಿದೆ. ಉತ್ತಮ ಶೈಕ್ಷಣಿಕ ಹಿನ್ನೆಲೆ ಇದೆ. 22 ರಿಂದ 27 ವರ್ಷ. ವರ M.Tech/28. ಸಂಪರ್ಕಿಸಿ: 9480887390

ವಾಹನ

Four Wheelers Selling

Others

ಸ್ವತಂತ್ರ ದಿನಾಚರಣೆಗೆ ಕೊಡುಗೆಗಳೊಂದಿಗೆ ವರಮಹಾಲಕ್ಷ್ಮಿಯನ್ನು ಬರಮಾಡಿಕೊಳ್ಳಿ
ಪ್ರಾರಂಭಿಕ ಬೆಲೆ ₹ 3.99* ಲಕ್ಷದಿಂದ

TATA ACE GOLD PETROL
4.99%* ಬಡ್ಡಿದರ 48 ತಿಂಗಳು
ಅಥವಾ
5.99%* ಬಡ್ಡಿದರ 60 ತಿಂಗಳು
ಕೊಡುಗೆಗಳು ₹40 000/-* ದವರೆಗೆ
ಎಕ್ಸ್‌ಚೇಂಜ್ ₹12 000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore -7259784441
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 98950 23373
Hubli/Haveri/Gadag/Bellary/ Raichur - 96209 55858
Bagalkot/Bijapur/Gulbarga/ Bidar - 780952 02223
Hubli/Belgaum 91088 64572
* ಷರತ್ತುಗಳು ಅನ್ವಯಿಸುತ್ತದೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ಟೆಸ್ಟ್: ಕುತೂಹಲ ಕೆರಳಿಸಿದ ಕೊನೆಯ ದಿನದಾಟ; ಸೋಲು ತಪ್ಪಿಸಿಕೊಳ್ಳುವ ಒತ್ತಡದಲ್ಲಿ ಭಾರತ

ರಹಾನೆ–ಪೂಜಾರ ತಾಳ್ಮೆಯ ಆಟ

ಲಂಡನ್ (ಪಿಟಿಐ): ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಲಾರ್ಡ್ಸ್ ಅಂಗಳದಲ್ಲಿ ಭಾನುವಾರ ಭಾರತ ತಂಡವನ್ನು ಆತಂಕದ ಸುಳಿಯಿಂದ ಪಾರು ಮಾಡಿದರು.

ಇದರಿಂದಾಗಿ ಭಾರತ ತಂಡವು ನಾಲ್ಕನೇ ದಿನದಾಟದ ಅಂತ್ಯಕ್ಕೆ ಎರಡನೇ ಇನಿಂಗ್ಸ್‌ನಲ್ಲಿ 82 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 181 ರನ್ ಗಳಿಸಿತು. 154 ರನ್‌ಗಳ ಮುನ್ನಡೆ ಸಾಧಿಸಿದೆ. ರಿಷಭ್ ಪಂತ್ (ಬ್ಯಾಟಿಂಗ್ 14) ಮತ್ತು ಇಶಾಂತ್ ಶರ್ಮಾ (ಬ್ಯಾಟಿಂಗ್ 4) ಕ್ರೀಸ್‌ನಲ್ಲಿದ್ದಾರೆ. ಆದರೆ ಭಾರತಕ್ಕೆ ಪಂದ್ಯದಲ್ಲಿ ಸೋಲು ತಪ್ಪಿಸಿಕೊಳ್ಳುವ ಒತ್ತಡವಿದೆ. ಕೊನೆಯ ದಿನವಾದ ಸೋಮವಾರದ ಆಟವು ಕುತೂಹಲ ಕೆರಳಿಸಿದೆ. ಬೆಳಗಿನ ಅವಧಿಯಲ್ಲಿ ಭಾರತವು ತನ್ನ ವಿಕೆಟ್‌ಗಳನ್ನು ಬೇಗ ಕಳೆದುಕೊಂಡರೆ, ಆತಿಥೇಯರಿಗೆ ಗುರಿ ತಲುಪಲು ಉತ್ತಮ ಅವಕಾಶ ಸಿಗುತ್ತದೆ.

ಆಗ ಭಾರತದ ಬೌಲರ್‌ಗಳ ಮೇಲೆ ತಂಡವನ್ನು ಸೋಲಿನಿಂದ ಪಾರು ಮಾಡುವ ಒತ್ತಡ ಬೀಳುವ ಸಾಧ್ಯತೆ ಇದೆ. ಒಂದೊಮ್ಮೆ ಪ್ರವಾಸಿ ಬಳಗದ ಬಾಲಂಗೋಚಿ ಬ್ಯಾಟ್ಸ್‌ಮನ್‌ಗಳು ಊಟದ ವಿರಾಮದವರೆಗೂ ಆಡಿದರೆ ಅಥವಾ 220ಕ್ಕೂ ಹೆಚ್ಚು ರನ್‌ಗಳ ಗೆಲುವಿನ ಗುರಿಯನ್ನು ನೀಡುವಲ್ಲಿ ಯಶಸ್ವಿಯಾದರೆ, ಆತಿಥೇಯ ತಂಡಕ್ಕೆ ಕಠಿಣ ಸವಾಲು ಎದುರಾಗಬಹುದು.

ಇಂಗ್ಲೆಂಡ್ ತಂಡವು ಜೋ ರೂಟ್ ಶತಕದ ಬಲದಿಂದ 27 ರನ್‌ಗಳ ಅಲ್ಪ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್ ಆರಂಭಿಸಿದ ಭಾರತಕ್ಕೆ ಆತಿಥೇಯ ಬೌಲರ್‌ಗಳು ಪೆಟ್ಟು ಕೊಟ್ಟರು.

ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದ ಕೆ.ಎಲ್. ರಾಹುಲ್ (5), ಅರ್ಧಶತಕ ಗಳಿಸಿದ್ದ ರೋಹಿತ್ ಶರ್ಮಾ (21) ಮತ್ತು ನಾಯಕ ವಿರಾಟ್ ಕೊಹ್ಲಿ (20 ರನ್) ಅವರು 55 ರನ್‌ಗಳಾಗುವಷ್ಟರಲ್ಲಿ ಔಟಾದರು. ಆರಂಭಿಕ ಜೋಡಿಯ ವಿಕೆಟ್‌ಗಳನ್ನು ಮಾರ್ಕ್ ವುಡ್ ಗಳಿಸಿದರು. ಕೊಹ್ಲಿ ಆಟಕ್ಕೆ ತಡೆಯೊಡ್ಡಿದ್ದ ಸ್ಯಾಮ್ ಕರನ್ ಸಂಭ್ರಮಿಸಿದರು.

ಈ ಹಂತದಲ್ಲಿ ಜೊತೆಗೂಡಿದ ಪೂಜಾರ (45; 206ಎಸೆತ) ಮತ್ತು ರಹಾನೆ (61, 146 ಎ) ಶತಕದ ಜೊತೆಯಾಟವಾಡಿದರು. ಕಳೆದ ಕೆಲವು ಪಂದ್ಯಗಳಿಂದ ದೊಡ್ಡ ಮೊತ್ತ ಗಳಿಸುವಲ್ಲಿ ವಿಫಲರಾಗಿರುವ ಪೂಜಾರ, ಇಲ್ಲಿ ತಮ್ಮ ಲಯ ಕಂಡುಕೊಳ್ಳುವ ಪ್ರಯತ್ನ ಮಾಡಿದರು.

ರಹಾನೆ ಆರಂಭದಲ್ಲಿ ಸ್ವಲ್ಪ ಎಚ್ಚರಿಕೆಯಿಂದ ಆಡಿದರೂ, ನಂತರ ರನ್ ಗಳಿಕೆಗೂ ಒತ್ತು ನೀಡಿದರು. ಐದು ಬೌಂಡರಿಗಳನ್ನು ಬಾರಿಸಿದ ಅರ್ಧಶತಕ ಗಳಿಸಿದರು. ಇವರಿಬ್ಬರ ಜೊತೆಯಾಟವನ್ನೂ ಮಾರ್ಕ್ ವುಡ್ ಮುರಿದರು. 73ನೇ ಓವರ್‌ನಲ್ಲಿ ವುಡ್ ಎಸೆತದಲ್ಲಿ ಔಟಾದರು.

ರೆಡ್ ಡ್ಯೂಕ್ಸ್ ಫುಟ್‌ಬಾಲ್?: ಭಾರತದ ಎರಡನೇ ಇನಿಂಗ್ಸ್‌ನಲ್ಲಿ ಬೌಲಿಂಗ್ ಮಾಡಲು ಬಳಸಲಾದ ರೆಡ್ ಡ್ಯೂಕ್ ಚೆಂಡನ್ನು 'ಫುಟ್‌ಬಾಲ್' ಆಡಿದ ಇಂಗ್ಲೆಂಡ್ ತಂಡದ ಇಬ್ಬರು ಆಟಗಾರರ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ.

ನಾಲ್ಕನೇ ದಿನದಾಟದ ಊಟದ ವಿರಾಮದ ನಂತರದ ಅವಧಿಯಲ್ಲಿ ಈ ಘಟನೆ ನಡೆದಿದೆ. ಎರಡನೇ ಇನಿಂಗ್ಸ್‌ನ 35ನೇ ಓವರ್ ಅನ್ನು ಒಲಿ ರಾಬಿನ್ಸನ್ ಬೌಲಿಂಗ್ ಮಾಡಿದ್ದರು. ಈ ಸಂದರ್ಭದಲ್ಲಿ ಇಬ್ಬರು ಫೀಲ್ಡರ್‌ಗಳು ಚೆಂಡನ್ನು ಫುಟ್‌ಬಾಲ್ ಆಡಿದ್ದಾರೆ.

ವಿಡಿಯೊದಲ್ಲಿ ಆಟಗಾರರ ಮುಖಗಳನ್ನು ತೋರಿಸಿಲ್ಲ. ಆದರೆ, ಸ್ಪೈಕ್ಸ್ (ಮೊಳೆಗಳು) ಇರುವ ಬೂಟುಗಳನ್ನು ಧರಿಸಿದ್ದ ಇಬ್ಬರು ಆಟಗಾರರು ಚೆಂಡನ್ನು ಕಾಲಿನಿಂದ ಪಾಸ್ ಮಾಡಿದರು. ಕಿಕ್ ಮಾಡಿದ್ದು ಕೂಡ ದೃಶ್ಯದಲ್ಲಿದೆ. ಪಂದ್ಯದ ಅಧಿಕೃತ ಪ್ರಸಾರಕರೇ ಈ ವಿಡಿಯೊವನ್ನು ಚಿತ್ರಿಕರಿಸಿದೆ.

'ಇದು ಚೆಂಡು ವಿರೂಪಗೊಳಿಸುವ ಕೃತ್ಯ' ಎಂದು ಕೆಲವರು ಟೀಕಿಸಿದ್ದಾರೆ. ಆದರೆ, ಭಾರತ ತಂಡವು ಇದುವರೆಗೆ ರೆಫರಿ ಕ್ರಿಸ್ ಬ್ರಾಡ್ ಅವರಿಗೆ ಯಾವುದೇ ದೂರು ಸಲ್ಲಿಸಿಲ್ಲವೆಂದು ತಿಳಿದುಬಂದಿದೆ. ಅಂಪೈರ್‌ಗಳು ಚೆಂಡನ್ನು ಕೂಡ ಬದಲಾವಣೆ ಮಾಡಿಲ್ಲ.

ಅರ್ಧಶತಕ ಬಾರಿಸಿದ ಅಜಿಂಕ್ಯ ರಹಾನೆ– ರಾಯಿಟರ್ಸ್ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 364
ಇಂಗ್ಲೆಂಡ್ (ಮೊದಲ ಇನಿಂಗ್ಸ್) 391
ಭಾರತ (ಎರಡನೇ ಇನಿಂಗ್ಸ್) 6ಕ್ಕೆ 181 (82 ಓವರ್)

ರಾಹುಲ್ ಸಿ ಬಟ್ಲರ್ ಬಿ ವುಡ್ 5 (30 ಎ), ರೋಹಿತ್ ಸಿ ಅಲಿ ಬಿ ವುಡ್ 21 (36 ಎ, 4x2, 6x1), ಪೂಜಾರ ಸಿ ರೂಟ್ ಬಿ ವುಡ್ 45 (206ಎ, 4X5), ಕೊಹ್ಲಿ ಸಿ ಬಟ್ಲರ್ ಬಿ ಕರನ್ 20 (31 ಎ 4x4), ರಹಾನೆ ಸಿ ಬಟ್ಲರ್ ಬಿ ಅಲಿ 61 (146ಎ, 4X5), ರಿಷಭ್ ಬ್ಯಾಟಿಂಗ್ 14 (29 ಎ) ಜಡೇಜ ಬಿ ಅಲಿ 3, ಇಶಾಂತ್ ಬ್ಯಾಟಿಂಗ್ 4(10ಎ)

ಇತರೆ: (ಬೈ 2 , ಲೆಗ್ ಬೈ 5, ನೋಬಾಲ್ 1) 8

ವಿಕೆಟ್ ಪತನ: 1-18 (ಕೆ.ಎಲ್. ರಾಹುಲ್, 9.2), 2-27 (ರೋಹಿತ್ ಶರ್ಮಾ, 11.6), 3-55 (ವಿರಾಟ್ ಕೊಹ್ಲಿ, 23.1), 4–155 (ಪೂಜಾರ, 72.4), 5–167 (ರಹಾನೆ, 75.6), 6–175 (ಜಡೇಜ, 79.1)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 18–6–23–0, ಒಲಿ ರಾಬಿನ್ಸನ್ 10–6–20–0 ಮಾರ್ಕ್ ವುಡ್ 14–3–40–3, ಸ್ಯಾಮ್ ಕರನ್ 15–3–30–1 ಮೋಯಿನ್ ಅಲಿ 20–1–52–2 ಜೋ ರೂಟ್ 5–0–9–0

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ನಾಲ್ಕನೇ ದಿನದಾಟಕ್ಕೂ ಮುನ್ನ ಭಾರತ ತಂಡದವರು ಧ್ವಜಾರೋಹಣ ನೆರವೇರಿಸಿದರು –ಬಿಸಿಸಿಐ ಟ್ವಿಟರ್ ಚಿತ್ರ



ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಕ್ರೀಡಾಪಟುಗಳು ನವದೆಹಲಿಯ ಕೆಂಪುಕೋಟೆಯಲ್ಲಿ ಭಾನುವಾರ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿದ್ದರು. –ಪಿಟಿಐ ಚಿತ್ರ

ಒಲಿಂಪಿಕ್ಸ್‌ಗೆ 'ಟಾಪ್' ಆದ್ಯತೆ

ನವದೆಹಲಿ (ಪಿಟಿಐ): ಮುಂದಿನ ಎರಡು ಒಲಿಂಪಿಕ್ಸ್‌ನಲ್ಲಿ ಹೆಚ್ಚು ಪದಕಗಳನ್ನು ಗೆಲ್ಲುವ ನಿರೀಕ್ಷೆಯೊಂದಿಗೆ ಟಾರ್ಗೆಟ್ ಒಲಿಂಪಿಕ್ ಪೋಡಿಯಂ (ಟಾಪ್) ಯೋಜನೆಗೆ ಆದ್ಯತೆ ನೀಡಲಾಗುವುದು ಮತ್ತು ಇನ್ನಷ್ಟು ವಿಸ್ತರಿಸಲಾಗುವುದು ಎಂದು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಭಾನುವಾರ ತಿಳಿಸಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದವರಿಗೆ ನಗದು ಬಹುಮಾನ ನೀಡಲು ಭಾರತ ಒಲಿಂಪಿಕ್ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಾವೆಲಿನ್ ಥ್ರೋದಲ್ಲಿ ಚಿನ್ನ ಗೆದ್ದ ನೀರಜ್ ಚೋಪ್ರಾ ಅವರಿಗೆ ₹ 75 ಲಕ್ಷ ಮೊತ್ತದ ಚೆಕ್ ಹಸ್ತಾಂರಿಸಲಾಯಿತು. ಬೆಳ್ಳಿ ಪದಕ ಗೆದ್ದ ಕುಸ್ತಿಪಟು ರವಿ ದಹಿಯಾ ಮತ್ತು ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರಿಗೆ ತಲಾ ₹ 50 ಲಕ್ಷ ಮೊತ್ತದ ಚೆಕ್ ನೀಡಲಾಯಿತು.

ಕಂಚಿನ ಪದಕ ಗಳಿಸಿದ ಬ್ಯಾಡ್ಮಿಂಟನ್ ಪಟು ಪಿ.ವಿ.ಸಿಂಧು, ಬಾಕ್ಸರ್ ಲವ್ಲಿನಾ ಬೋರ್ಗೊಹೈನ್ ಮತ್ತು ಕುಸ್ತಿಪಟು ಬಜರಂಗ್ ಪೂನಿಯಾ ಅವರಿಗೆ ತಲಾ ₹ 25 ಲಕ್ಷ ಮೊತ್ತದ ಚೆಕ್ ವಿತರಿಸಲಾಯಿತು. ಕಂಚಿನ ಪದಕ ಗೆದ್ದ ಹಾಕಿ ತಂಡದ ಆಟಗಾರರಿಗೆ ತಲಾ ₹ 10 ಲಕ್ಷ, ನೀರಜ್ ಚೋಪ್ರಾ ಕೋಚ್‌ಗೆ ₹ 12.5 ಲಕ್ಷ, ಬೆಳ್ಳಿ ಪದಕ ಗೆದ್ದವರ ಕೋಚ್‌ಗಳಿಗೆ ₹ 10 ಲಕ್ಷ ಮತ್ತು ಕಂಚಿನ ಪದಕ ಗಳಿಸಿದವರ ಕೋಚ್‌ಗಳಿಗೆ ₹ 7.5 ಲಕ್ಷ ಮತ್ತು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಪ್ರತಿಯೊಬ್ಬರಿಗೂ ತಲಾ ₹ ಒಂದು ಲಕ್ಷ ನೀಡಲು ನಿರ್ಧರಿಸಲಾಗಿದೆ.

ಕೆಂಪುಕೋಟೆಯಲ್ಲಿ ನಡೆದ ಧ್ವಜಾರೋಹಣ ಸಮಾರಂಭದಲ್ಲಿ ಒಲಿಂಪಿಯನ್ಸ್ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ನೀರಜ್ ಚೋಪ್ರಾ ಅವರಿಗೆ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಚೆಕ್ ಹಸ್ತಾಂತರಿಸಿದರು –ಪಿಟಿಐ ಚಿತ್ರ

ನಿಂತವರು (ಎಡದಿಂದ): ಜಗದೀಪ್ ಸಿಂಗ್ ಬೇನ್ಸ್, ಪ್ರತ್ಯಾಂಶು ತೋಮರ್, ಜೋಗಿಂದರ್ ಸಿಂಗ್, ಸಹೈಜ್ ಪ್ರತಾಪ್ ಸಿಂಗ್, ಪ್ರಶಾಂತ್ ಸಿಂಗ್ ರಾವತ್, ವಿಶೇಷ್ ಭೃಗುವಂಶಿ (ನಾಯಕ), ಅಮೃತ್‌ಪಾಲ್ ಸಿಂಗ್, ಪ್ರದೀಪ್ ತೋಮರ್ (ಸಹಾಯಕ ಕೋಚ್), ಪ್ರಣವ್ ಪ್ರಿನ್ಸ್, ಅರವಿಂದ ಅಣ್ಣಾದುರೈ, ಅಮ್ಜೋತ್ ಸಿಂಗ್, ಅರವಿಂದ ಕುಮಾರ್, ಮುಯಿನ್ ಬೆಕ್ ಹಫೀಜ್, ಮೋಹಿತ್ ಭಂಡಾರಿ (ಸಹಾಯಕ ಕೋಚ್), ಶಿವ ಷಣ್ಮುಖ (ಫಿಜಿಯೊಥೆರಪಿಸ್ಟ್). ಕುಳಿತವರು: ಆರ್.ರಾಜನ್ (ಮಾಜಿ ಆಟಗಾರ), ಜೊರಾನ್ ವಿಜಿಕ್ (ಮಹಿಳಾ ತಂಡದ ಕೋಚ್), ಅನಂತರಾಜು (ಕೆಬಿಎ ಪ್ರಧಾನ ಕಾರ್ಯದರ್ಶಿ), ಕೆ.ಗೋವಿಂದರಾಜ್ (ಬಿಎಫ್‌ಐ ಅಧ್ಯಕ್ಷ), ಶಕ್ತಿ ಸಿನ್ಹ (ಮ್ಯಾನೇಜರ್), ವೆಸೆಲಿನ್ ಮ್ಯಾಟಿಕ್ (ಕೋಚ್), ತಂಗಚ್ಚನ್ (ಸಹಾಯಕ ಕೋಚ್)

ಬ್ಯಾಸ್ಕೆಟ್‌ಬಾಲ್: 'ಎಚ್' ಗುಂಪಿನಲ್ಲಿ ಭಾರತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌದಿ ಅರೆಬಿಯಾದ ಜೆಡ್ಡಾದಲ್ಲಿ ಇದೇ 20ರಿಂದ ನಡೆಯಲಿರುವ ಫಿಬಾ ಏಷ್ಯಾಕಪ್ ಬ್ಯಾಸ್ಕೆಟ್‌ಬಾಲ್ ಅರ್ಹತಾ ಟೂರ್ನಿಯಲ್ಲಿ ಭಾರತ 'ಎಚ್' ಗುಂಪಿನಲ್ಲಿ ಸ್ಥಾನ ಗಳಿಸಿದೆ. ಪ್ಯಾಲೆಸ್ಟೀನ್ ಮತ್ತು ಆತಿಥೇಯ ಸೌದಿ ಅರೆಬಿಯಾ ತಂಡಗಳು ಇದೇ ಗುಂಪಿನಲ್ಲಿವೆ.

ಟೂರ್ನಿಯ ಮೊದಲ ದಿನ ಭಾರತ ಸೌದಿ ಅರೆಬಿಯಾವನ್ನು ಎದುರಿಸಲಿದೆ. ಮರುದಿನ ಭಾರತಕ್ಕೆ ಪ್ಯಾಲೆಸ್ಟೀನ್ ಎದುರಾಳಿ. ಎರಡೂ ಪಂದ್ಯಗಳು ಕಿಂಗ್ ಅಬ್ದುಲ್ಲ ಸ್ಪೋರ್ಟ್ಸ್ ಸಿಟಿ ಹಾಲ್‌ನಲ್ಲಿ ನಡೆಯಲಿವೆ.

ಭಾರತ ತಂಡ: ಮುಯಿನ್ ಬೆಕ್ ಹಫೀಜ್, ಅರವಿಂದ್ ಅಣ್ಣಾದುರೈ, ಮುತ್ತು ಕೃಷ್ಣನ್ (ಮೂವರೂ ತಮಿಳುನಾಡು), ಜಗದೀಪ್ ಸಿಂಗ್, ಅಮ್ಜೋತ್ ಸಿಂಗ್, ಅಮೃತ್‌ಪಾಲ್ ಸಿಂಗ್ (ಪಂಜಾಬ್), ವಿಶೇಷ್ ಭೃಗುವಂಶಿ (ನಾಯಕ–ಒಎನ್‌ಜಿಸಿ), ಪ್ರಶಾಂತ್ ಸಿಂಗ್ ರಾವತ್ (ಉತ್ತರಾಖಂಡ), ಜೋಗಿಂದರ್ ಸಿಂಗ್ (ಸರ್ವಿಸಸ್), ಸಹೈಜ್ ಪ್ರತಾಪ್ ಸಿಂಗ್ (ಚಂಡೀಗಢ), ಪ್ರತ್ಯಾಂಶು ತೋಮರ್ (ಕರ್ನಾಟಕ), ಪ್ರಣವ್ ಪ್ರಿನ್ಸ್ (ಕೇರಳ). ಮುಖ್ಯ ಕೋಚ್: ವೆಸೆಲಿನ್ ಮೆಟಿಚ್, ಮ್ಯಾನೇಜರ್: ಶಕ್ತಿಕುಮಾರ್ ಮಹಿಪತ್ ಸಿಂಗ್ ಗೋಹಿಲ್, ಕೋಚ್: ತಂಗಚ್ಚನ್ ಮುಳಯ್ಕಲ್, ಮೋಹಿತ್ ಭಂಡಾರಿ, ಪ್ರದೀಪ್ ತೋಮರ್.

ಲಾರ್ಡ್ಸ್‌ನಲ್ಲಿ ಗಂಟೆ ಮೊಳಗಿಸಿದ ದೀಪ್ತಿ

ಲಂಡನ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರಿಗೆ ಭಾರತ ಮತ್ತು ಇಂಗ್ಲೆಂಡ್ ನಡುವಿನ ಎರಡನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನದಾಟದ ಆರಂಭದಲ್ಲಿ ಗಂಟೆ ಮೊಳಗಿಸುವ ಗೌರವ ಭಾನುವಾರ ಲಭಿಸಿತು.

'ಐದು ನಿಮಿಷಗಳ ಗಂಟೆ ಮೊಳಗಿಸಲು ದೀಪ್ತಿ ಶರ್ಮಾ ಅವರನ್ನು ಸ್ವಾಗತಿಸಲು ಸಂತೋಷವಾಗುತ್ತಿದೆ' ಎಂದು ಲಾರ್ಡ್ಸ್ ಕ್ರಿಕೆಟ್ ಮೈದಾನದ ಅಧಿಕೃತ ಖಾತೆಯಲ್ಲಿ ಟ್ವೀಟ್ ಮಾಡಲಾಗಿದೆ. ದಿನದಾಟದ ಆರಂಭಕ್ಕೂ ಮೊದಲು ಗಂಟೆ ಮೊಳಗಿಸುವ ಪರಿಪಾಠವನ್ನು ಎಂಸಿಸಿ 2007ರಲ್ಲಿ ಆರಂಭಿಸಿತ್ತು.

ದೀಪ್ತಿ ಶರ್ಮಾ –ರಾಯಿಟರ್ಸ್ ಚಿತ್ರ

ಬಿಎಫ್‌ಸಿಗೆ ಜಯದ ಆರಂಭ

ಮಾಲೆ (ಪಿಟಿಐ): ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಎಎಫ್‌ಸಿ ಕಪ್ ಫುಟ್‌ಬಾಲ್ ಟೂರ್ನಿಯ ಪ್ಲೇ ಆಫ್‌ನಲ್ಲಿ ಶುಭಾರಂಭ ಮಾಡಿದೆ. ಭಾನುವಾರ ನಡೆದ ಹಣಾಹಣಿಯಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ತಂಡವು 1–0ಯಿಂದ ಮಾಲ್ಡೀವ್ಸ್‌ನ ಕ್ಲಬ್ ಈಗಲ್ಸ್ ಎದುರು ಜಯಿಸಿತು.

ಇಲ್ಲಿಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಪರ ಜಯೇಶ್ ರಾಣೆ 26ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಈ ಜಯದೊಂದಿಗೆ ತಂಡವು 'ಡಿ' ಗುಂಪಿನ ಸ್ಪರ್ಧೆಗೆ ಅರ್ಹತೆ ಗಳಿಸಿತು. 'ಡಿ' ಗುಂಪಿನಲ್ಲಿ ಎಟಿಕೆ ಮೋಹನ್ ಬಾಗನ್, ಬಶುಂಧರಾ ಕಿಂಗ್ಸ್ ಮತ್ತು ಮಜಿಯಾ ಸ್ಪೋರ್ಟ್ಸ್ ಆ್ಯಂಡ್ ರಿಕ್ರಿಯೇಷನ್ ತಂಡಗಳಿವೆ.

ಬುಧವಾರ ನಡೆಯುವ ಹಣಾಹಣಿಯಲ್ಲಿ ಚೆಟ್ರಿ ಪಡೆಯು ಎಟಿಕೆ ಮೋಹನ್ ಬಾಗನ್ ತಂಡವನ್ನು ಎದುರಿಸಲಿದೆ.

ಕುತೂಹಲ ಘಟ್ಟದಲ್ಲಿ ಮೊದಲ ಟೆಸ್ಟ್

ಕಿಂಗ್‌ಸ್ಟನ್, ಜಮೈಕಾ: ವೇಗದ ಬೌಲರ್ ಜೇಡನ್ ಸೀಲ್ಸ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಐದು ವಿಕೆಟ್ ಗಳಿಸಿದ ವೆಸ್ಟ್ ಇಂಡೀಸ್‌ನ ಅತಿ ಕಿರಿಯ ಬೌಲರ್ ಎನಿಸಿಕೊಂಡರು. ಸಬೀನಾ ಪಾರ್ಕ್‌ನಲ್ಲಿ ನಡೆಯುತ್ತಿರುವ ಪಾಕಿಸ್ತಾನ ಎದುರಿನ ಮೊದಲ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಭಾನುವಾರ 55 ರನ್‌ಗಳಿಗೆ ಅವರು ಐದು ವಿಕೆಟ್ ಉರುಳಿಸಿದರು.

ಅವರ ದಾಳಿಯ ಪರಿಣಾಮ ಪಾಕಿಸ್ತಾನ ಎರಡನೇ ಇನಿಂಗ್ಸ್‌ನಲ್ಲಿ 83.4 ಓವರ್‌ಗಳಲ್ಲಿ 203 ರನ್‌ಗಳಿಗೆ ಪತನ ಕಂಡಿತು. 168 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ 15 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿದೆ.

19 ವರ್ಷ ವಯಸ್ಸಿನ ಸೀಲ್ಸ್ ಮೊದಲ ಇನಿಂಗ್ಸ್‌ನಲ್ಲಿ 70 ರನ್‌ಗಳಿಗೆ ಮೂರು ವಿಕೆಟ್ ಗಳಿಸಿದ್ದರು.

ಎರಡನೇ ಇನಿಂಗ್ಸ್‌ನಲ್ಲಿ ಪಾಕಿಸ್ತಾನದ ಕೊನೆಯ ಐದು ವಿಕೆಟ್‌ಗಳು ಕೇವಲ 43 ರನ್‌ಗಳಿಗೆ ಉರುಳಿದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 217; ವೆಸ್ಟ್ ಇಂಡೀಸ್ 253; ಎರಡನೇ ಇನಿಂಗ್ಸ್: **ಪಾಕಿಸ್ತಾನ:** 203 (ಅಬಿದ್ ಅಲಿ 34, ಬಾಬರ್ ಆಜಂ 55, ಮೊಹಮ್ಮದ್ ರಿಜ್ವಾನ್ 30; ಕೆಮರ್ ರೋಚ್ 30ಕ್ಕೆ3, ಜೇಡನ್ ಸೀಲ್ಸ್ 55ಕ್ಕೆ5); **ವೆಸ್ಟ್ ಇಂಡೀಸ್:** 7 ಓವರ್‌ಗಳಲ್ಲಿ 2ಕ್ಕೆ 15 (ಶಹೀನ್ ಶಾ ಅಫ್ರಿದಿ 7ಕ್ಕೆ2). ವಿವರ ಅಪೂರ್ಣ

ವಿಕೆಟ್ ಕಬಳಿಸಿದ ಜೇಡನ್ ಸೀಲ್ಸ್ ಸಂಭ್ರಮಿಸಿದ ಪರಿ –ಎಎಫ್‌ಪಿ ಚಿತ್ರ

ಫುಟ್‌ಬಾಲ್:ಮರ್ಫಿ ಟೌನ್‌ಗೆ ಪ್ರಶಸ್ತಿ

ಬೆಂಗಳೂರು: ಮರ್ಫಿ ಟೌನ್ ತಂಡವು ರಾಜ್ಯ ಫುಟ್‌ಬಾಲ್ ಸಂಸ್ಥೆ ಮತ್ತು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಸ್ಥಳೀಯ ಅಂತರ ತಂಡಗಳ ಟೂರ್ನಿಯಲ್ಲಿ ಹಿರಿಯರ ಮತ್ತು ಯೂತ್ ವಿಭಾಗಗಳಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಭಾನುವಾರ ಇಲ್ಲಿ ನಡೆದ ಯೂತ್ ವಿಭಾಗದ ಫೈನಲ್‌ನಲ್ಲಿ ಮರ್ಫಿ ಟೌನ್ ಪೆನಾಲ್ಟಿ ಶೂಟೌಟ್ ಮೂಲಕ ಗೌತಮಪುರ ಎಫ್‌ಸಿಯನ್ನು ಮಣಿಸಿತು. ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಎರಡು ಗೋಲು ಹೊಡೆದಿದ್ದವು. ಮರ್ಫಿ ಪರ ಎಬನೆಜರ್ (26ನೇ ನಿಮಿಷ, 42ನಿ.) ತಂಡದ ಎರಡೂ ಗೋಲು ದಾಖಲಿಸಿದರು. ಗೌತಮಪುರ ತಂಡದ ವಿಘ್ನೇಶ್ (8ನೇ ನಿ.) ಮತ್ತು ಓಂಪ್ರಕಾಶ್ (19ನೇ ನಿ.) ಯಶಸ್ವಿಯಾದರು.

ಪೆನಾಲ್ಟಿ ಶೂಟೌಟ್‌ನಲ್ಲಿ ಮರ್ಫಿ ಮೂರು ಗೋಲು ಗಳಿಸಿದರೆ ಎದುರಾಳಿ ತಂಡವು ಒಂದರಲ್ಲಿ ಮಾತ್ರ ಯಶಸ್ಸು ಕಂಡಿತು.

ಹಿರಿಯರ ವಿಭಾಗದ ಫೈನಲ್‌ನಲ್ಲಿ ಮರ್ಫಿ ಟೌನ್, ಶಾಂತಿನಗರ ತಂಡವನ್ನು ಸೋಲಿಸಿತು. ಈ ಪಂದ್ಯವೂ ಕೂಡ ಪೆನಾಲ್ಟಿ ಶೂಟೌಟ್‌ನಲ್ಲಿ ಅಂತ್ಯವಾಯಿತು. ನಿಗದಿತ ಅವಧಿಯಲ್ಲಿ ಎರಡೂ ತಂಡಗಳು ತಲಾ ಎರಡು ಗೋಲು ದಾಖಲಿಸಿದ್ದವು.

ರೊನಾಲ್ಡೊ ಎಫ್‌ಸಿ ಚಾಂಪಿಯನ್: ಐಜಲ್ ಹಾಗೂ ಶರತ್ ಕುಮಾರ್ ಗಳಿಸಿದ ತಲಾ ಎರಡು ಗೋಲುಗಳ ನೆರವಿನಿಂದ ರೊನಾಲ್ಡೊ ಎಫ್‌ಸಿ ತಂಡವು 'ಸಿ' ಡಿವಿಷನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಫೈನಲ್‌ನಲ್ಲಿ ಆ ತಂಡವು 4–0ಯಿಂದ ಬೆಂಗಳೂರು ಪ್ಯಾಂಥರ್ಸ್ ತಂಡವನ್ನು ಸೋಲಿಸಿತು.

ಸಾಹಸ...

ಭಾರತದ 75ನೇ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಭಾನುವಾರ ಬಿಕಾನೇರ್‌ನ ಕರ್ಣಿ ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಹಸಿಯೊಬ್ಬರು ಬೈಕ್ ಸ್ಟಂಟ್ ಪ್ರದರ್ಶನ ನೀಡಿದರು. ಪಿಟಿಐ ಚಿತ್ರ

ಕಾಂಗ್ರೆಸ್ ಪಕ್ಷದ ಪುನಃಶ್ಚೇತನ ಕಪಿಲ್ ಸಿಬಲ್ ಪುನರುಚ್ಚಾರ

ನವದೆಹಲಿ (ಪಿಟಿಐ): ಸಮಾನ ಮನಸ್ಕ ಪಕ್ಷಗಳನ್ನು ಒಂದುಗೂಡಿಸುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾಗಾಂಧಿ ಅವರ ಯತ್ನವನ್ನು ಸ್ವಾಗತಿಸಿರುವ ಕಾಂಗ್ರೆಸ್‌ನ ಹಿರಿಯ ಮುಖಂಡ ಕಪಿಲ್ ಸಿಬಲ್, 'ಇದೇ ವೇಳೆ ಪಕ್ಷವನ್ನೂ ಬಲಪಡಿಸಬೇಕು. ಇದು ಸಾಧ್ಯವಾಗದೇ ಯಾವುದೇ ವಿರೋಧಪಕ್ಷಗಳ ಒಗ್ಗೂಡುವಿಕೆ ಅಸಾಧ್ಯ' ಎಂದು ಪ್ರತಿಪಾದಿಸಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ಸಾಂಸ್ಥಿಕವಾಗಿ ಆಮೂಲಾಗ್ರ ಬದಲಾವಣೆಗೆ ಆಗ್ರಹಿಸಿ ಪತ್ರಬರೆದಿದ್ದ ತಾವು ಸೇರಿ ಪಕ್ಷದ 23 ನಾಯಕರು, ಪಕ್ಷಕ್ಕೆ ಪುನಃಶ್ಚೇತನ ನೀಡಬೇಕು ಮತ್ತು ಬಲಪಡಿಸಬೇಕು ಎಂಬ ಹಕ್ಕೊತ್ತಾಯವನ್ನು ಮಂಡಿಸುತ್ತಲೇ ಇರುತ್ತೇವೆ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷವನ್ನು ಪುನಃಶ್ಚೇತನಗೊಳಿಸುವ ಯಾವುದೇ ಯತ್ನಗಳಿಗೆ ನಾನು ಮತ್ತು ಪಕ್ಷದ ನನ್ನ ಸಹೋದ್ಯೋಗಿಗಳು ಪೂರ್ಣ ಬೆಂಬಲ ನೀಡಲಿದ್ದೇವೆ. ಇದು ನನ್ನ ಪ್ರಶ್ನೆಯಲ್ಲ. ಕಾಂಗ್ರೆಸ್ ಪಕ್ಷವನ್ನು ಪುನಃಶ್ಚೇತನಗೊಳಿಸಿ, ವಿರೋಧಪಕ್ಷಗಳ ಒಕ್ಕೂಟದ ಮುಂಚೂಣಿಗೆ ಬರುವಂತೆ ಬಲಪಡಿಸುವುದು ಈಗಿನ ಅಗತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಪಕ್ಷವನ್ನು ಬಲಪಡಿಸದೇ ವಿರೋಧಪಕ್ಷಗಳ ಒಗ್ಗೂಡುವಿಕೆಯ ಯತ್ನ ಕೈಗೂಡುವುದಿಲ್ಲ. ಪಕ್ಷವು ಹೊಂದಿದ್ದ ನಾಯಕತ್ವ, ಉನ್ನತಿಯನ್ನು ಮುಖಂಡರು ಅರ್ಥೈಸಿಕೊಳ್ಳುತ್ತಾರೆ ಎಂದು ಭಾವಿಸಿದ್ದೇನೆ ಎಂದು ಹೇಳಿದ್ದಾರೆ.

ದೇಶದಲ್ಲಿ ವಿರೋಧಪಕ್ಷಗಳನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಆಗಸ್ಟ್ 20ರಂದು ವರ್ಚುವಲ್ ಸ್ವರೂಪದಲ್ಲಿ ಸಭೆ ನಡೆಸಲು ಸಿದ್ಧತೆ ನಡೆಸಿರುವ ಹೊತ್ತಿನಲ್ಲಿಯೇ ಸಿಬಲ್ ಈ ಹೇಳಿಕೆ ನೀಡಿದ್ದಾರೆ.



ಕಪಿಲ್ ಸಿಬಲ್

'ಸಂಸತ್ತಿನಲ್ಲಿ ಪ್ರತಿಪಕ್ಷಗಳಿಂದ ಅತಿ ಕೆಟ್ಟ ನಡವಳಿಕೆ'

ನವದೆಹಲಿ (ಪಿಟಿಐ): 'ವಿರೋಧಪಕ್ಷಗಳು ಸಂಸತ್ತಿನಲ್ಲಿ ಬಹುಶಃ ಎಷ್ಟು ಸಾಧ್ಯವೋ ಅಷ್ಟೂ ಕೆಟ್ಟದಾದ ನಡವಳಿಕೆಯನ್ನು ತೋರಿವೆ. ಪ್ರಜಾಪ್ರಭುತ್ವದ ಆಧಾರಸ್ತಂಭವನ್ನು ಹಾಳುಗೆಡವಲು ಬಹುಶಃ ಇನ್ನೇನನ್ನೂ ಉಳಿಸಿಲ್ಲ' ಎಂದು ಕೇಂದ್ರ ಸಚಿವ ಪೀಯೂಶ್ ಗೋಯಲ್ ಭಾನುವಾರ ಹರಿಹಾಯ್ದರು.

'ಉಭಯ ಸದನಗಳಲ್ಲಿ ನೂತನ ಸಚಿವರನ್ನು ಪ್ರಧಾನಮಂತ್ರಿ ಪರಿಚಯಿಸುವುದು 70 ವರ್ಷದಿಂದ ಪಾಲಿಸುತ್ತ ಬಂದಿರುವ ಸಂಪ್ರದಾಯ. ಇದೇ ಮೊದಲ ಬಾರಿ ಪ್ರತಿಪಕ್ಷಗಳು ಅದಕ್ಕೂ ಅವಕಾಶ ನೀಡಲಿಲ್ಲ' ಎಂದರು.

'ಪ್ರಜಾಪ್ರಭುತ್ವವು ತನ್ನದೇ ಆದ ಗೌರವ, ಶ್ರೀಮಂತಿಕೆ ಇದೆ. ವಿರೋಧಪಕ್ಷಗಳ ಸ್ಪರ್ಧೆ ಮತ್ತು ಸ್ಪರ್ಧಾತ್ಮಕ ರಾಜಕಾರಣಕ್ಕಾಗಿ ಅದು ಬಲಿಯಾಯಿತು. ವಿರೋಧಪಕ್ಷಗಳು ಸಹನೆಯ ಎಲ್ಲ ಮಿತಿಗಳನ್ನೂ ಮೀರಿದವು' ಎಂದು ಅವರು ಟೈಮ್ಸ್ ನೌ ವಾಹಿನಿ ಆಯೋಜಿಸಿದ್ದ '75: ಸ್ವಾತಂತ್ರ್ಯ ಶೃಂಗಸಭೆ'ಯಲ್ಲಿ ಮಾತನಾಡುತ್ತಾ ಹೇಳಿದರು.

'ವಿರೋಧ ಪಕ್ಷಗಳ ಇಂತಹ ಪ್ರವೃತ್ತಿಗೆ ಕಡಿವಾಣ ಅಗತ್ಯ. ಅದ ಕ್ಕಾಗಿಯೇ ನಾವು ಕ್ರಮಕ್ಕೆ ಒತ್ತಾಯಿಸಿದ್ದೇವೆ. ಕೇರಳ ವಿಧಾನಸಭೆಯ ಕಲಾ ಪಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಶಕ್ತಿಯುತ ತೀರ್ಪು ನೀಡಿದೆ. ಈ ಬಾರಿ ನಮ್ಮ ಕೆಲವು ಸದಸ್ಯರು ಕೋರ್ಟ್‌ನ ಕಟ್ಟುನಿಟ್ಟಿನ ಕ್ರಮ ಎದುರಿಸುವರು ಎಂದು ಭಾವಿಸುತ್ತೇನೆ' ಎಂದು ಗೋಯಲ್ ತಿಳಿಸಿದರು. ಆಗಸ್ಟ್ 13ರವರೆಗೆ ನಡೆಯಬೇಕಿದ್ದ ಲೋಕಸಭೆ ಕಲಾಪವನ್ನು ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿ ಪ್ರತಿಪಕ್ಷಗಳು ನಡೆಸಿದ ಧರಣೆ, ಪ್ರತಿಭಟನೆಯಿಂದಾಗಿ ಆ.11ರಂದೇ ಕೊನೆಗೊಳಿಸಲಾಗಿತ್ತು.

ಪೀಯೂಶ್ ಗೋಯಲ್

ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್ ನಿಷೇಧ: ಕರಡು ಅಧಿಸೂಚನೆ ಪ್ರಕಟ

ನವದೆಹಲಿ (ಪಿಟಿಐ): ಪಿವಿಸಿ ಒಳಗೊಂಡಂತೆ 100 ಮೈಕ್ರಾನ್‌ಗಿಂತಲೂ ಕಡಿಮೆ ಗಾತ್ರ ಮತ್ತು ಗುಣಮಟ್ಟದ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಕುರಿತು ಕರಡು ಅಧಿಸೂಚನೆ ಹೊರಡಿಸಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್ ಮತ್ತು ಅನಿರುದ್ಧ ಬೋಸ್ ಅವರಿದ್ದ ಪೀಠಕ್ಕೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು ಈ ಮಾಹಿತಿ ನೀಡಿದರು.

ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಕೇಂದ್ರ ಸರ್ಕಾರವು ಈ ಕುರಿತು ಸೂಕ್ತ ಆದೇಶ ಮತ್ತು ನಿರ್ದೇಶನವನ್ನು ನೀಡಲಿದೆ ಎಂದು ನಾವು ಭಾವಿಸುತ್ತೇವೆ ಎಂದು ಪೀಠ ಇದಕ್ಕೆ ಪ್ರತಿಕ್ರಿಯಿಸಿತು.

ಜೆಎನ್‌ಯು ಮೇಲೆ ದಾಳಿ ಬೆದರಿಕೆ: ಇಬ್ಬರ ಬಂಧನ

ನವದೆಹಲಿ (ಪಿಟಿಐ): ಫೇಸ್‌ಬುಕ್‌ನಲ್ಲಿ ವಿಡಿಯೊ ಪೋಸ್ಟ್ ಮಾಡಿ ಸ್ವಾತಂತ್ರ್ಯ ದಿನದಂದು ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಮೇಲೆ ದಾಳಿ ನಡೆಸುವ ಬೆದರಿಕೆಯೊಡ್ಡಿದ್ದ ಆರೋಪದಡಿ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಬಂಧಿತರನ್ನು ವಿಡಿಯೊದಲ್ಲಿ ಬೆದರಿಕೆ ಒಡ್ಡುತ್ತಿದ್ದ ವಿಕಾಸ್ ಸೆಹ್ರಾವತ್ (30) ಮತ್ತು ರಾಜಕುಮಾರ್ ಎಂದು ಗುರುತಿಸಲಾಗಿದೆ. ಇಬ್ಬರೂ ಉತ್ತಮ್ ನಗರ ನಿವಾಸಿಗಳು ಎಂದು ಪೊಲೀಸರು ತಿಳಿಸಿದ್ದಾರೆ.

'ವಿಡಿಯೊದಲ್ಲಿ ಮಾಜಿ ಶಾಸಕ, ದೆಹಲಿ ಕಾಂಗ್ರೆಸ್ ಮುಖಂಡ ಅಲ್ಕಾ ಲಂಬಾ ಅವರಿಗೆ ಅವಾಚ್ಯವಾಗಿ ನಿಂದಿಸಿದ ಆರೋಪದಡಿ ಬಂಧಿಸಲಾಗಿದೆ. ತಾನು 2018ರಿಂದ ವಿಶ್ವ ಹಿಂದೂ ಪರಿಷತ್ ಜೊತೆಗೆ ಗುರುತಿಸಿಕೊಂಡಿದ್ದೇನೆ ಎಂದೂ ಬಂಧಿತ ತಿಳಿಸಿದ್ದಾನೆ' ಎಂದೂ ಪೊಲೀಸರು ತಿಳಿಸಿದ್ದಾರೆ.

ರಿಯಲ್ ಮ್ಯಾಡ್ರಿಡ್ ತಂಡದ ಕರೀಂ ಬೆಂಜಮಾ(ಎಡ) ಮತ್ತು ಅಲಾವೇಸ್ ತಂಡದ ಪೆರೆ ಪೋನ್ಸ್ ನಡುವೆ ಚೆಂಡಿಗಾಗಿ ಪೈಪೋಟಿ– ಎಎಫ್‌ಪಿ ಚಿತ್ರ

ಲಾ ಲಿಗಾ ಫುಟ್‌ಬಾಲ್ ಟೂರ್ನಿ: ಅಲಾವೇಸ್‌ಗೆ ನಿರಾಸೆ

ಕರೀಂ ಬೆಂಜಮಾ ಮೋಡಿ: ರಿಯಲ್ ಮ್ಯಾಡ್ರಿಡ್‌ಗೆ ಜಯ

ಮ್ಯಾಡ್ರಿಡ್ (ಎಎಫ್‌ಪಿ): ಕರೀಂ ಬೆಂಜಮಾ ಗಳಿಸಿದ ಎರಡು ಗೋಲುಗಳ ಬಲದಿಂದ ರಿಯಲ್ ಮ್ಯಾಡ್ರಿಡ್ ತಂಡವು ಲಾಲಿಗಾ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಶನಿವಾರ ತಡರಾತ್ರಿ ನಡೆದ ಹಣಾಹಣಿಯಲ್ಲಿ ಆ ತಂಡವು 4–1ರಿಂದ ಡೆಪೋರ್ಟಿವೊ ಅಲಾವೇಸ್ ತಂಡವನ್ನು ಪರಾಭವಗೊಳಿಸಿತು.

ಜಿದ್ದಾಜಿದ್ದಿ ಪೈಪೋಟಿ ನಡೆದ ಪಂದ್ಯದ ಮೊದಲಾರ್ಧ ಗೋಲುರಹಿತವಾಗಿತ್ತು. 48ನೇ ನಿಮಿಷದಲ್ಲಿ ಈಡನ್ ಹಜಾರ್ಡ್ ನೆರವು ಪಡೆದ ಬೆಂಜಮಾ ತಮ್ಮ ತಂಡಕ್ಕೆ ಮೊದಲ ಗೋಲು ತಂದುಕೊಟ್ಟರು. ಎದುರಾಳಿ ತಂಡದ ಮೇಲೆ ದಾಳಿ ಮುಂದುವರಿಸಿದ ರಿಯಲ್ ಮ್ಯಾಡ್ರಿಡ್ ಆಟಗಾರರಿಗೆ 56ನೇ ನಿಮಿಷದಲ್ಲಿ ಮತ್ತೊಂದು ಯಶಸ್ಸು ಸಿಕ್ಕಿತು. ಲೂಕಾ ಮಾಡ್ರಿಚ್ ನೀಡಿದ ಪಾಸ್‌ನಲ್ಲಿ ನ್ಯಾಚೊ ಬಲಗಾಲಿನ ಮೂಲಕ ಕಿಕ್ ಮಾಡಿದ ಚೆಂಡು ಗೋಲು ಪೆಟ್ಟಿಗೆ ಸೇರಿತು.

62ನೇ ನಿಮಿಷದಲ್ಲಿ ಬೆಂಜಮಾ ಮತ್ತೊಮ್ಮೆ ಮೋಡಿ ಮಾಡಿದರು. ಬಲ ಭಾಗದಿಂದ ಚೆಂಡನ್ನು ಸೊಗಸಾಗಿ ಗೋಲುಪೆಟ್ಟಿಗೆಗೆ ಸೇರಿಸಿದ ಅವರು ತಂಡವು 3–0 ಮುನ್ನಡೆ ಸಾಧಿಸುವಂತೆ ಮಾಡಿದರು. 65ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶದಲ್ಲಿ ಜೋಸೆಲು ಅಲಾವೇಸ್ ತಂಡಕ್ಕೆ ಸಮಾಧಾನಕರ ಗೋಲು ದಾಖಲಿಸಿದರು.

ಇಂಜುರಿ ಅವಧಿಯಲ್ಲಿ ವಿನಿಸಿಯಸ್ ಹೆಡರ್ ಮೂಲಕ ರಿಯಲ್ ಮ್ಯಾಡ್ರಿಡ್ ತಂಡದ ನಾಲ್ಕನೇ ಗೋಲು ಗಳಿಸಿ ಸಂಭ್ರಮವನ್ನು ಹೆಚ್ಚಿಸಿದರು.

ಮತ್ತೊಂದು ಪಂದ್ಯದಲ್ಲಿ ಕ್ಯಾಡಿಜ್ ಮತ್ತು ಲೆವೆಂಟೆ ತಂಡಗಳು 1–1ರ ಡ್ರಾ ಸಾಧಿಸಿದವು.

ಮಾಂತ್ರಿಕ ಸ್ಟ್ರೈಕರ್ ಗೇರ್ಡ್ ಇನ್ನಿಲ್ಲ

ಬರ್ಲಿನ್ (ಎಎಫ್‌ಪಿ): ಜರ್ಮನಿಯ ಮಾಜಿ ಫುಟ್‌ಬಾಲ್ ಆಟಗಾರ ಗೇರ್ಡ್ ಮುಲ್ಲರ್ (75) ಭಾನುವಾರ ಮುಂಜಾನೆ ನಿಧನರಾದರು ಎಂದು ಅವರು ಈ ಹಿಂದೆ ಆಡಿದ್ದ ಬಯೇನ್ ಮ್ಯೂನಿಕ್ ಕ್ಲಬ್ ತಿಳಿಸಿದೆ. ಅವರಿಗೆ ಪತ್ನಿ ಮತ್ತು ಮಗಳು ಇದ್ದಾರೆ.

ವೆಸ್ಟ್ ಜರ್ಮನಿಗಾಗಿ 62 ಪಂದ್ಯಗಳಲ್ಲಿ 68 ಗೋಲು ಗಳಿಸಿರುವ ಅವರು 1960 ಮತ್ತು 70ರ ದಶಕಗಳಲ್ಲಿ ಬಂಡೆಸ್‌ಲೀಗಾದಲ್ಲಿ ಬಯೇನ್ ಮ್ಯೂನಿಕ್‌ಗಾಗಿ 365 ಗೋಲುಗಳನ್ನು ಗಳಿಸಿದ್ದರು.

ಗೇರ್ಡ್ ಕೆಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಬಯೇನ್ ಮ್ಯೂನಿಕ್‌ಗಾಗಿ ಒಟ್ಟಾರೆ 607 ಪಂದ್ಯಗಳಲ್ಲಿ 566 ಗೋಲು ಗಳಿಸಿದ್ದರು.

ಗೇರ್ಡ್ ಮುಲ್ಲರ್ –ಎಎಫ್‌ಪಿ ಚಿತ್ರ

ಬಂಡೆಸ್‌ಲೀಗಾ ಟೂರ್ನಿಯಲ್ಲಿ ಬಯೇನ್ ಮ್ಯೂನಿಕ್ ನಾಲ್ಕು ಬಾರಿ ಪ್ರಶಸ್ತಿ ಗೆದ್ದಾಗಲೂ ಗೇರ್ಡ್ ತಂಡದಲ್ಲಿದ್ದರು. 1974ರಿಂದ 1976ರ ವರೆಗೆ ಯುರೋಪಿಯನ್ ಕಪ್ (ಈಗಿನ ಚಾಂಪಿಯನ್ಸ್ ಲೀಗ್) ಪ್ರಶಸ್ತಿ ಗೆದ್ದಾಗಲೂ ಅವರು ತಂಡದಲ್ಲಿದ್ದರು. 1971ರ ಬುಂಡೆಸ್‌ಲೀಗಾ ಟೂರ್ನಿಯ ಒಂದೇ ಆವೃತ್ತಿಯಲ್ಲಿ 40 ಗೋಲು ಗಳಿಸಿ ನಿರ್ಮಿಸಿದ್ದ ದಾಖಲೆ ಈ ವರ್ಷದ ವರೆಗೂ ಮುರಿಯದೇ ಉಳಿದಿತ್ತು. ಕಳೆದ ಮೇ ತಿಂಗಳಲ್ಲಿ ಬಯೇಮ್ ಮ್ಯೂನಿಕ್ ಸ್ಟ್ರೈಕರ್ ರಾಬರ್ಟ್ ಲೆವಂಡೊವ್‌ಸ್ಕಿ 41 ಗೋಲು ಗಳಿಸಿದ್ದಾರೆ.

ವೆಸ್ಟ್ ಜರ್ಮನಿಗಾಗಿ 1972ರಲ್ಲಿ ಯುರೋಪಿಯನ್ ಚಾಂಪಿಯನ್‌ಷಿಪ್ ಮತ್ತು 1974ರಲ್ಲಿ ವಿಶ್ವಕಪ್ ಗೆಲ್ಲಿಸಿಕೊಟ್ಟಿದ್ದರು. ವಿಶ್ವಕಪ್‌ನಲ್ಲಿ ನೆದರ್ಲೆಂಡ್ಸ್ ವಿರುದ್ಧ ನಡೆದ ಫೈನಲ್‌ನಲ್ಲಿ ಜಯದ ಗೋಲು ಗಳಿಸಿ ಮಿಂಚಿದ್ದರು.

ಆರ್ಚರಿ: ಕೋಮಲಿಕಾ ಚಾಂಪಿಯನ್

ರಾಕ್ಲಾಫ್, ಪೋಲೆಂಡ್ (ಪಿಟಿಐ): ಭಾರತದ ಕೋಮಲಿಕಾ ಬಾರಿ ವಿಶ್ವ ಯೂತ್ ಆರ್ಚರಿ ಚಾಂಪಿಯನ್‌ಷಿಪ್‌ನ ಜೂನಿಯರ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಇದರೊಂದಿಗೆ ದೀಪಿಕಾ ಕುಮಾರಿ ಅವರ ಬಳಿಕ ಈ ಸಾಧನೆ ಮಾಡಿದ ಭಾರತದ ಮಹಿಳಾ ಆರ್ಚರಿಪಟು ಎನಿಸಿಕೊಂಡಿದ್ದಾರೆ.

18 ವರ್ಷದೊಳಗಿನವರ ವಿಭಾಗದಲ್ಲಿ (ಕೆಡೆಟ್) ಹಾಲಿ ವಿಶ್ವ ಚಾಂಪಿಯನ್ ಆಗಿರುವ ಕೋಮಲಿಕಾ ಅವರು ಜೂನಿಯರ್ (21 ವರ್ಷದೊಳಗಿನವರು) ಫೈನಲ್‌ನಲ್ಲಿ 7–3ರಿಂದ ಸ್ಪೇನ್‌ನ ಎಲಿಸಾ ಕೆನಾಲಿಸ್ ಅವರನ್ನು ಹಿಂದಿಕ್ಕಿದರು.

ಇದರೊಂದಿಗೆ ಕೋಮಲಿಕಾ ಈ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಚಿನ್ನ ಗೆದ್ದರು. ಜೂನಿಯರ್ ಮಿಶ್ರ ವಿಭಾಗದಲ್ಲಿ ಪಾರ್ಥ್ ಸಾಳುಂಕೆ ಜೊತೆಗೂಡಿ ಅವರು ಅಗ್ರಸ್ಥಾನ ಗಳಿಸಿದ್ದರು. ಭಾನುವಾರ ರಿಕರ್ವ್ ಆರ್ಚರ್‌ಗಳು ಒಟ್ಟು ಮೂರು ಚಿನ್ನ ಗೆದ್ದರು. ಮೂರು ಕಂಚಿನ ಪದಕಗಳೂ ಭಾರತದ ಮಡಿಲು ಸೇರಿದವು.

ಕೋಮಲಿಕಾ ಬಾರಿ

ಅಗ್ರಶ್ರೇಯಾಂಕದ ಪುರುಷರ ತಂಡವು ಫೈನಲ್‌ನಲ್ಲಿ 5–3ರಿಂದ ಫ್ರಾನ್ಸ್ ತಂಡದ ವಿರುದ್ಧ ಗೆದ್ದಿತು. ಬಿಶಾಲ್ ಚೆಂಗ್‌ಮೈ, ಅಮಿತ್ ಕುಮಾರ್ ಮತ್ತು ವಿಕಿ ರುಹಾಲ್ ಅವರಿದ್ದ ತಂಡವು ಪಾರಮ್ಯ ಮೆರೆಯಿತು.

ಮಿಶ್ರ ಪೇರ್‌ನಲ್ಲಿ ಭಾರತವು 6–2ರಿಂದ ಜಪಾನ್ ತಂಡವನ್ನು ಮಣಿಸಿ, ಚಿನ್ನದ ಪದಕ ಗೆದ್ದಿತು. ಬಿಶಾಲ್ ಚೆಂಗಮೈ ಅವರು ತಮನ್ನಾ ಅವರೊಂದಿಗೆ 36-33, 32-34, 35-31, 35-34 ರಿಂದ ಜಪಾನ್‌ಗೆ ಸೋಲುಣಿಸಿದರು. ಬಿಶಾಲ್ ಟೂರ್ನಿಯಲ್ಲಿ ಒಟ್ಟು ಎರಡು ಚಿನ್ನ ಗೆದ್ದರು. ಅವರು ವೈಯಕ್ತಿಕ ವಿಭಾಗದಲ್ಲಿ 6–4(29-28, 27-29, 29-26, 27-27, 27-27) ರಿಂದ ಕಜಕಸ್ತಾನದ ಝೂಂಗ್‌ಬೈರ್ಬೆ ಡಾಲ್ಟ್‌ಕೆಲ್ಡಿ ವಿರುದ್ಧ ಗೆದ್ದು ಕಂಚಿನ ಪದಕ ಪಡೆದರು

ಕಂಚು ಗೆದ್ದ ಮಹಿಳಾ ತಂಡದಲ್ಲಿ ತಮನ್ನಾ ಇದ್ದರು. ಅವರೊಂದಿಗೆ ಅವನಿ ಮತ್ತು ಮಂಜಿರಿ ಕೂಡ ಇದ್ದರು. ತಂಡ ವಿಭಾಗದಲ್ಲಿ 5–3ರಿಂದ ಜರ್ಮನಿಯನ್ನು ಸೋಲಿಸಿದರು. ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಮಂಜಿರಿ 6–4ರಿಂದ ನೆದರ್‌ಲೆಂಡ್ಸ್‌ನ ಕ್ವಿಂಟಿ ರೋಫೆನ್ ವಿರುದ್ಧ ಗೆದ್ದು ಕಂಚು ಗಳಿಸಿದರು.

ರಿಕರ್ವ್ ಮತ್ತು ಕಾಂಪೌಂಡ್ ವಿಭಾಗಗಳಲ್ಲಿ ಸೇರಿ ಭಾರತವು ಒಟ್ಟು 6 ಚಿನ್ನ, 2 ಬೆಳ್ಳಿ ಮತ್ತು 5 ಕಂಚು ಜಯಿಸಿತು.

ಈ ಟೂರ್ನಿಯ ಇತಿಹಾಸದಲ್ಲಿ ಭಾರತದ ಶ್ರೇಷ್ಠ ಸಾಧನೆ ಇದಾಗಿದೆ.

ಆನ್‌ಲೈನ್ ಚೆಸ್: ಶ್ರೀಹರಿಗೆ ಪ್ರಶಸ್ತಿ

ಬೆಂಗಳೂರು: ತಮಿಳುನಾಡಿನ ಶ್ರೀಹರಿ ಎಲ್.ಆರ್, ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿದ್ದ 'ಸ್ವಾತಂತ್ರ್ಯೋತ್ಸವ ಕಪ್' ಮೊದಲ ಆನ್‌ಲೈನ್ ಓಪನ್ ಟೂರ್ನಿಯ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಶ್ರೀಹರಿ ಎಲ್.ಆರ್

ಸೃಷ್ಟಿ ಪಾಂಡೆ 2ನೇ ಸ್ಥಾನ ಗಳಿಸಿದರೆ ಕರ್ತವ್ಯ ಮೂರನೇ ಸ್ಥಾನ ಗಳಿಸಿದರು. ಪ್ರಣವ್ ಎ.ಜೆ. ಮತ್ತು ನಮನ್ ಮೆಹ್ತಾ ಕ್ರಮವಾಗಿ ನಾಲ್ಕು ಹಾಗೂ ಐದನೇ ಸ್ಥಾನ ತಮ್ಮದಾಗಿಸಿಕೊಂಡರು. ಸುಶಾಂತ್ ವಾಮನ್ ಶೆಟ್ಟಿ, ಸುಜನ್ ಭಾರದ್ವಾಜ್, ಗೌತಮ್ ಎಸ್.ಜಿ, ಸೈಯದ್ ಅಬ್ದುಲ್ ಖಾದರ್ ಮತ್ತು ಅರವಿಂದ್ ಅಯ್ಯರ್ ಕ್ರಮವಾಗಿ ಆರರಿಂದ 10ರ ವರೆಗಿನ ಸ್ಥಾನಗಳಿಗೆ ಸಮಾಧಾನಪಟ್ಟರು.